ಕನ್ನಡ ಜಯ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸನ್ನಾವಿಷ್ಟವಾಗಿದೆ)

ಯತ್ರ ಧರ್ಮಃ ಕೃತೇ । ಯತ್ರಾತ್ಮವಶಂ ಕ್ಷಾಮ । — ಮನು

ಸಂಪಾದಕರು— ಮುಂಗಳವೇಢೇ ರಾಜೇಂದ್ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಫಲ್ಗುಣ ಶುದ್ಧ ೯ ಶಕವರ್ಷ ತಿಂಗಳು ೧೧ ೧೯೩೮. Date 1 1—1928 | ಸಂಚಿಕೆ ೩೭

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕಟ್ಟಪಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದ ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವವು ಆದ್ದರಿಂದಲೆ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಬಹಳ ಪ್ರಿಯವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನ ತೆಗೆಸಿಕೊಡಲಾಗುವುದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯ ಜಾಹೀರಾತಿದ್ದರೂ, ಮನಸಿಗೆ ಸೊಗಸುವಂತಹದು ಎತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದು ಕಡೆ ಎಲ್ಲಿಯೂ ಇಷ್ಟ ಕಡಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳು ! ಫೀ ಬಹಳ ಸ್ವಲ್ಪ! ಹೆಚ್ಚಿನ ವಾಸ್ತವಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ !

ನಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಲಕ್ಷ್ಮೀನಿವಾರ ಪೇಠ ಲಾಯಿಡ್ ಬ್ರಿಜ್ಜದ ಹತ್ತಿರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೊದಲಾಗಲಿಕ್ಕೆ ಮಾಡುವ ಅರ್ಜಿ ಪಾಲ ಬೇಡುವ ಅರ್ಜಿ ಮುಚ್ಚತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ

ವ್ಯವಸ್ಥಾಪಕಃ—ವಿದ್ಯಾರಣ್ಯ ಮುದ್ರಣಾಲಯ ಬಾಗಲಕೋಟೆ.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೊಲೆಗೆ ೧ ರು ಪೈಕ್ಕರಿಗೂ, ವ್ಯಾಪಾರಸ್ಥರಿಗೂ, ಅನೇಕ ಅಪರೂಪವಾದ ವನಸ್ಪತಿಗಳು ದೊರಕುವವು

ವೈದ್ಯಃ—ನಾಡಿಗಾರ ಜಹಗೀರದಾರ

ಮು ಮಲಕಲ್ಲ ವಿಜಾಪುರ)

ಭದ್ರವಾದ ಧನವಿನಿಯೋಗ ಮತ್ತೂ .

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ಏಸುಕ್ರಿಸ್ತ, ಶಂಕರ, ವಿಧ್ಯಾರಣ್ಯ, ಬಸವರೂಪ ಧರ್ಮಾಚಾರ್ಯರುಗಳ ಪಟ್ಟಾಭಿರಾಜರು ಮಹಾರಾಜರುಗಳ ಪಟ್ಟಾಭಿಷೇಕ, ಗೌತಮಬುದ್ಧ, ದಾದಾ ಗಾಂಧಿ ಮುಂತಾದ ಮಹಾ ವಿಭೂತಿಗಳ ಅಕ್ಷತ್ತೆಯವಾಗಿ ಒಳ್ಳೆ, ತೆಗೆದ ಕಾಗದ ಒಳ್ಳೆ ಲಲಿತವಾಗಿ ಕಣ್ಣು ಕಾಣಿಸಿದ ಕುದ್ದ ಬೆಳಿಯು ಎದ್ದು ಕಾಣುವ ಚಿತ್ರಗಳನ್ನು (Relief Pictures) ನಾವು ಸಿದ್ಧ ಪಡಿಸಿರುತ್ತೇವೆ ಪ್ರತಿಯೊಂದು ಕುಟುಂಬಕ್ಕೆ ಇವು ಸಿಜಾ[illegible] ಅಂಕಾಗಳೇ ಪರಿ. ಇದಲ್ಲದೆ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ಸಿದ್ಧ [illegible] ಳಾಗಿವೆ ಅಲ್ಲದೆ, ಕಾದ್ದವಾದ ಬೆಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಪ್ರತಿಮೆಗಳು ನಮ್ಮಲ್ಲಿ ದೊರೆಯುತ್ತವೆ ಮನೆಯ ಸಂಗತಿಗಳಿಗಾಗಿಯೂ, ಬೆಳೆಸುವುದಕ್ಕಾಗಿಯೂ ಬರೆದುಕೊಳ್ಳಿ!

ದಿ ಇಂಡಿಯನ್ ಜ್ಯೂವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರು ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ. ಬೀ. ಯವರ ಸುಲಭ ಕ್ರಯ!!

ಸುಗಂಧನಶ್ಯದ ಪುಡಿ.

Registerd Trads Mark.

ಪ್ರಸಿದ್ಧವಾದ ಈ ಪರಿಮಳ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ವಂದಿಗಳು ಇದನ್ನು ಉಪಯೋಗಿಸಿ ಸಾವಿರ ಅಂತರಗಳಾಗಿ, ಯೋಗ್ಯ ತಾಪತ್ರಯಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಪ್ರಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿಸಿಸಿ, ಒಂಟಿ ತಲೆ ನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕುಶಕ್ಕೆ ಬೇಕಾಬಿಟ್ಟಿ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮಾಮೂಲು ಬೆಟ್ಟ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ವಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವಿ. ಪಿ ೪ ಆಣೆ, ಡಜನ್ ಗಿರ ಕ್ರಯ ರೂ ೩—೮—೦, ವಿ. ಪಿ ಚಾರ್ಜು ೮ ಆಣೆ.

ವಿಳಾಸ:— ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,
ಪೋ. ಬಾ. ೫೧೦, ಪಾರ್ಕ್‌ಟೌನು, ಮದರಾಸು.

☞ ದಯವಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಕನ್ನಡಿಗ.

ಬಾಗಲಕೋಟೆ:- ಕನ್ನಡಿಗ ಪುಸ್ಕ ೯ ದ್ದ ೯ ೫ಕೆ ೧೮೮೯

ಸಂಪಾದಕರ ಭೂಮಿ

ನನ್ನ ಮನಸಿನ ಮೇಣವಾಡಿ ಕಟ್ಟುವೆನಾನು ।
ನಿನ್ನ ಬೆಸನಮಾಡಿದಂಥ ಮುಕ್ಕಳಿ ದೊಪ್ಪು।
ಚಿನ್ನದಾದರು ಚಿನ್ನವು ಮೇಣಬಸ್ತಿಯ ನೊಂದು ಚಿನ್ನಯಾಕಾಶದ
ನನ್ನ ದೇಹವ ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಕನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯಿ

—ಅಂದಿಕಾ ತನಯ ದತ್ತ

ಮದ್ರಾಸದ ಳಿ ನೇ ರಾಷ್ಟ್ರೀಯ ಮಹಾಸಭೆಯು

ಮಾಡಿದ ಮಹಾಕಾರ್ಯದ ವೃತ್ತಾಂತವನ್ನು ವಾಚಕರು ಈ ಸಂಚಿಕೆಯಲ್ಲಿ ಕಂಡುಕೊಳ್ಳಬೇಕು ಈಗ್ಗೆ ೨೫ ವರ್ಷಗಳಿಂದ ದೇಶದಲ್ಲಿ ರಾಜಕೀಯ ಜಾಗೃತೋಲನವು ಬಹು ಹೀನಸ್ಥಿತಿಗೆ ಒಂದಿದ್ದಿತು. ಎಲ್ಲಿ ನೋಡಿದಲ್ಲಿ ಬಡಿದಾಟ ಅಧಃಪತನ ಮತಭೇದ! ಇದರಿಂದ ಕಾರ್ಯಕ್ಕೆಲ್ಲೆಲ್ಲಿ ನೋಡಿದರೂ ವಿಘ್ನವೇ! ಹೀಗಾಗಿ ಕಾಂಗ್ರೆಸ್ಸಿನ ಬಗ್ಗೆ ಕೊಂಚ ಅನಾಸ್ಥೆಯೂ ಅಲ್ಲಲ್ಲಿ ಉಂಟಾಗಿತ್ತು! ಇಂಥ ನಿರುತ್ಸಾಹದ ಪರಿಸ್ಥಿತಿಯಲ್ಲಿ ಮದ್ರಾಸಿನ ಕಾಂಗ್ರೆಸವು ರಾಷ್ಟ್ರದಲ್ಲಿ ಹೊಸ ಕಳೆಯು ತುಂಬುವಂತೆ ಮಾಡಿದ್ದು ಸಾಮಾನ್ಯವಾದ ಕಾರ್ಯವಲ್ಲ! ಮೊದಲು ಬ್ರಾಹ್ಮಣ- ಬ್ರಾಹ್ಮಣೇತರ ವೆಂಬ ಜಳವಳಿಯು ಸಾರ್ವಜನಿಕವಾಗಿ ಹೊಮ್ಮಿದ್ದು, ಪ್ರಚಂಡವಾದ ಗೊಂದಲವನ್ನು ಮದ್ರಾಸದಲ್ಲಿಯೇ ಉದ್ಭವಿಸಿತು. ಈ ಉಗಮಸ್ಥಾನದಲ್ಲಿಯೇ ಹತ್ತೇ ವರ್ಷಗಳಲ್ಲಿ ಬ್ರಾಹ್ಮಣೇತರರು ಕಾಂಗ್ರೆಸ್ಸನ್ನು ಹೊಕ್ಕು, ಈ ಅಧಿವೇಶನವು ಯಶಸ್ವಿಯಾಗುವಂತೆ ತನುಮನಧನದಿಂದ ಪ್ರಯತ್ನಿಸಿದ್ದು ಪೊದಲನೇ ಶುಭಚಿಹ್ನವಾದ್ದಿತು. ಇದಕ್ಕನುಗುಣವಾಗಿ ಕಲಕತ್ತೆಯಲ್ಲಿ ಹಿಂದೂ-ಮುಸಲ್ಮಾನರ ಕಲಹದ ಪರಿಸಮಾಪ್ತಿಯ ವಿಚಾರವು ಹೊರಟು, ಅದಕ್ಕೆ ಈ ಸಲ ಮೂರ್ತಸ್ವರೂಪವೂ ಬಂದಿತು. ಇವೆಲ್ಲಕ್ಕೂ ಮುಕುಟಮಣಿಯಾಗುವಂತೆ ಬ್ರಿಟಿಶ್ ಪಾರ್ಲಮೆಂಟದವರಿಂದ ಸೈಮನ್ ಕಮಿಶನ್‌ದ ನೇಮಣಿಕೆ ಮುಖಾಂತರದ ಭಾರತೀಯರಿಗೆ ಸ್ವರಾಜ್ಯಕೊಡುವ ಫಾರ್ಸು ನಡೆಯಿತು! ನೈಸರಾಯರು ಹುಡುಗರಿಗೆ ಮಾಸ್ತರರು ಹೇಳುವಂತೆ ಏನೇನೋ ಹೇಳಿರಮಿಸಲು ಪ್ರಯತ್ನಿಸಿದರು! ಅದು ಸಾಧ್ಯವಾಗಲಿಲ್ಲ! ಈ ಫಾರ್ಸಿನಲ್ಲಿ ನಡೆಯಲು ಮೊದಲು ಮೌಜಿನ ಸಂಗತಿಗಳೇ ನಡೆದವು ಕಡೆಗೆ ಭಾರತೀಯರನ್ನು ಅವಮಾನಗೊಳಿಸುವಂಥ, ಭಾರತೀಯರೆಂದರೆ ಈಪದಾರ್ಥದವರೆಂದು ತಿಳಿದಂಥ,ಹಾಗೂ ಭಾರತೀಯರಉದ್ಧಾರವನ್ನು ಮಾಡುವ ಸಂಪೂರ್ಣ ಜವಾಬ್ದಾರಿಯು ಬ್ರಿಟಿಶ್ ಪಾರ್ಲಮೆಂಟದವರಲ್ಲಿಯೇ ಇರುವದೆಂದು ಡಂಭದಿಂದ ಉಸುರುವಂಥ ಸಾಯಮನ್ ಕಮೀಶನ್‌ವು ಪಡದೆಯೊಳಗಿಂದ ಹೊರಪಡಿದ್ದಿತು! ಬ್ರಿಟಿಷರು ತಾವೇ ಒಪ್ಪಿದ ಸ್ವಯಂನಿರ್ಣಾಯತತ್ವವನ್ನು ಲ್ಲಂಘಿಸಿ, ತಾವೇ ದೇವರೆಂದು ಭಾವಿಸಿ, ಮೇಲೆ ಜಗತ್ತಿನಲ್ಲಿ ತಮ್ಮ ಸೌಜನ್ಯದ ಹಾಗೂ ಉದಾರ ಮತದ ಡಂಗುರ ಹೊಡೆಯುತ್ತ, ಹಿಂದೀಯರೆಂದರೆ ಮನುಷ್ಯ ಧರ್ಮಕ್ಕೂ ಪಾತ್ರರಲ್ಲವೆಂದರಲ್ಲ; ಇದರಿಂದ ದುಷ್ಪ್ರತಿಗಳಿಂದ ಅಧಃಪತಿತಸಲ್ಪಟ್ಟ ಸಮಾಜದವರೆಂದು ಕುಮಾರಿನೇಯೋಳಗ್ರಂಥ ಮೊದಲಾದವುಗಳಿಂದ ಪಾರಾಷ್ಟ್ರಗಳಲ್ಲಿ ಇಲ್ಲದ ಸಲ್ಲದ ಸುಳ್ಳನ್ನು ಹಬ್ಬಿಸುತ್ತ, ತಮ್ಮ ಸ್ವಾರ್ಥಪರವಾದ ಸಾಮ್ರಾಜ್ಯತ್ವದ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ, ಬ್ರಿಟಿಶ ಕುಟಿಲರಾಜ್ಯತಂತ್ರಪ್ರವೀಣರಿಗೆ ಳಿ ನೇ ಕಾಂಗ್ರೆಸ್ಸು ಒಳ್ಳೇ ಧೈರ್ಯದ ಹಾಗೂ ಭಾರತೀಯ ರಾಷ್ಟ್ರಕ್ಕೆ ಶೋಭಿಸುವ ಉತ್ತರವನ್ನು ಕೊಟ್ಟಿದೆ! ಕಾಂಗ್ರೆಸ್ಸಿದ ಧ್ಯೇಯವು ಸ್ವತಂತ್ರವಾದ ಸುರಾಜ್ಯಮಯವಾದ ಸ್ವರಾಜ್ಯವನ್ನು ಸ್ಥಾಪಿಸುವದು ಎಂಬದಾಗಿದೆಂದು ನಿರ್ಧರಿಸಲ್ಪಟ್ಟಿದೆ! ಇದೇನು ಸಾಮಾನ್ಯವಾದ ಸಂಗತಿಯಲ್ಲ! ಬ್ರಿಟಿಶರ ಬಲಿಷ್ಠವಾದ ಸಾಮ್ರಾಜ್ಯಕ್ಕೆ ಈ ಬಗೆಯ ಉತ್ತೇಜನವನ್ನು ಬಹಿರಂಗವಾಗಿ ಕೇಳಿದ್ದು ನಮ್ಮಲ್ಲಿ ಒಡಮೂಡುತ್ತಿರುವ ಸಾವಧ್ಯತನ್ನು ಸಿದ್ಧಪಡಿಸುತ್ತದೆ. ಇದೇನು! ಬಾಯಿಬಡಕರಂತೆ ನಾಲ್ಕು ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿ, ಏನಾದರೊಂದು ನಿರ್ಣಯಿಸಿದರೆ ಅವರಿಂದ ಪ್ರಯೋಜನವಾಗುವದೇನೆಂದು ಕೆಲವರು ಕೇಳಬಹುದು. ಆದರೆ ಆಲಸಿಗರಿಗೂ, ಪುಕ್ಕರಿಗೂ, ಧ್ಯೇಯವಿರಹಿತರಿಗೂ ಜಾಯಮಾನದಲ್ಲಿ ತನದನಂದು ತೋರುವ ನಿರ್ಣಯಗಳಲ್ಲಿ ಯೂ ರಾಜಕಾರಣವು ಅಡಕವಾಗಿದೆ; ಹಿಂದುಸ್ಥಾನದಂಥ ನಿರ್ಬಲವಾದ ರಾಷ್ಟ್ರಕ್ಕೆ ಧೈರ್ಯದಿಂದ ಒಹಿರಂಗವಾಗಿ ಹೇಳುವ ಶಕ್ತಿಯು ಬರಬೇಕಾದರೆ ಇಂಥ ಸಮ್ಮೇಳನಗಳಿಂದಲೇ; ಸ್ವತಂತ್ರ್ಯದ ಆಕಾಂಕ್ಷೆಗಳು ತರುಣರಲ್ಲಿ ಒಡಮೂಡುವವು ಈ ನಿರ್ಣಯಗಳಿಂದಲೇ; ತಾವೂ ಜಗತ್ತಿನ ರಾಷ್ಟ್ರಗಳಲ್ಲಿ ಎಲ್ಲರಿಗೂ ಸಮಾನವಾದ ಹಾಗೂ ಪ್ರಾಮುಖ್ಯವಾದ ಭಾವನೆಯನ್ನು ತೆಗೆದ ಕೊಳ್ಳಲು ಸಿದ್ಧರಾಗಬೇಕೆಂಬ ಮಹತ್ವಾಕಾಂಕ್ಷೆಯು ಭಾವೀ ನಾಗರಿಕರಲ್ಲಿ ಉದ್ಭವಿಸುವದು ಈ ಠರಾವುಗಳಿಂದಲೇ!! ಇದರ ಹೊರತಾಗಿ ಕುಮಾರಿ ಮೆಯೋ ಇಂಥವಳು ಉಚ್ಚಿ ಬಿಚ್ಚಿ ಹುಚ್ಚನಾಯಿಗಳ ಕಡತದಿಂದ ತಲೆಗೆರೆದ ಹುಚ್ಚನ್ನು ಪರರಾಷ್ಟ್ರಗಳ ದೇಹದಿಂದ ಕಿತ್ತಿ ಹಾಕಲಿಕ್ಕೆ ಈ ತೀರ್ಮಾನಗಳು ಎಷ್ಟೋ ಅನುಕೂಲವಾಗುವವು. ಆದ್ದರಿಂದ ಈ ವರ್ಷ ಪ್ರಭವ ಸಂವತ್ಸರದ ಕಾಂಗ್ರೆಸ್ಸಿನದಲ್ಲಿ ಸಿದ್ಧಪಡಿಸಿದ ಕಾರ್ಯಕ್ರಮವು ಸಂಪೂರ್ಣವಾಗಿ ಕೃತಿಯಲ್ಲಿ ಬಂದು, ಭಾರತೀಯರ ಜಯಭೇರಿಯು ನಿನಾದವು ೭೦೦೦ ಮೈಲುಗಳಲ್ಲಿರುವ ಬ್ರಿಟಿಶ್ ಪಾರ್ಲಮೆಂಟದ ಕಿವಿಗೆ ಮುಟ್ಟಲಿ! ಪರರಾಷ್ಟ್ರಗಳಲ್ಲಿ ಭರತಖಂಡದ ಜಾಜ್ವಲ್ಯವಾದ ರಾಷ್ಟ್ರಭಕ್ತಿಯ ವಾರ್ತೆಯು ಪಸರಿಸಲಿ! ಪ್ರಭವ ಸಂವತ್ಸರವೆಂದರೆ ಹಳೆಯ ೬೦ ವರ್ಷದ ಶ್ರೇಣಿಯನ್ನು ಬದಿಗೊತ್ತಿ, ನವೀನವಾದ ಶುಭ ಲಕ್ಷಣಗಳಿಂದ ಮುಂದೆ ಬಂದುದು! ಈ ಹೊಸ ಸಂವತ್ಸರದಲ್ಲಿ ಹೊಸ ಧ್ಯೇಯವನ್ನು ನಾವು ಮುಂದಿಟ್ಟುಕೊಂಡದ್ದು ಯಥಾಯೋಗ್ಯವಾಗಿದೆ. ಈ ಉಚ್ಚತಮವಾದ ಧ್ಯೇಯವನ್ನು ಸಾಧಿಸಲು ಭಾರತಿಯ ಮುಖಂಡರೂ, ಮಹಾಜನರೂ ಒಮ್ಮನಸ್ಸಿನಿಂದ ಒಳ್ಳೇ ಜಿಗಟಿನಿಂದಲೂ ಟೊಂಕ ಕಟ್ಟಿ ನಿಲ್ಲುವಂತೆ ಭಾರತಮಾತೆಯು ಎಲ್ಲರನ್ನೂ ಪ್ರೇರಿಸಲಿ!

ಜಯ್ ಭಾರತ ಮಾತಾ! ಜಯ್ ಕರ್ನಾಟಕ ಮಾತಾ!

ಸೇನಾಧಿಪತಿ ಅವರಿಯವರು ತೀರಿಕೊಂಡಿರುವರೆಂಬ ಸುದ್ದಿ ನಾಗಪುರದಲ್ಲಿ ಹಬ್ಬಿ ೪ ದಿನಗಳಾದವು! ಜೇಲಧಿಕಾರಿಗಳು ಯಾವ ಸುದ್ದಿಯನ್ನೂ ಜೇಲಲೊಳ್ಳರು! ಜೇಲಿನಲ್ಲಿದ್ದ ದರವಡೇಪೋದನ ಬಗ್ಗೆ ಹೊರಗಿನ ಗ್ಯಾಂಗಿನವರಿಗೆ ಯಾವ ಸುದ್ದಿಯನ್ನೂ ಜೇಲಕ್ಕಳ್ಳದ್ದಲ್ಲವೆಂಬ ಉದ್ದಾವುತನದ ಉತ್ತರವನ್ನು ಜೇಲಧ ಅಧಿಕಾರಿಗಳು ಕೊಟ್ಟಿದ್ದಾರೆ!

ಹಕೀಮ ಅಜಮಲಖಾನರ
ಆಕಸ್ಮಿಕ ಮರಣವು!

ಹೃದಯರೋಗದಿಂದ ಹಕೀಮ ಅಜಮಲಖಾನರು ಆಕಸ್ಮಿಕವಾಗಿ ಒಂಧವಾರ ರಾತ್ರಿ ವಿಧಿವಶರೆಂದು ತಿಳಿಸಲು ನಮಗೆ ಅತ್ಯಂತ ದುಃಖವೆನಿಸುತ್ತದೆ ಇವರು ಹಿಂದೂ-ಮುಸಲ್ಮಾನರಿಗೆಲ್ಲ ಅತ್ಯಂತ ಪ್ರಿಯರಾಗಿದ್ದರು ಹಿಂದೂ-ಮುಸಲ್ಮಾನರಲ್ಲಿ ಈಗ್ಗೆ ಕಲಹವು ವಿಕೋಪಕ್ಕೆ ಹೋಗಿದ್ದರೂ ಅಜಮಲಖಾನರ ಮಾತನ್ನು ಎರಡೂ ಪಕ್ಷದವರೂ ಗೌರವಿಸುತ್ತಿದ್ದರು ಈಗ್ಗೆ ಈ ಕಲಹವನ್ನು ಮುರಿಬಿಡಿಯಲು ಕಾಂಗ್ರೆಸ್ಸಿನವರು ಉಪಕ್ರಮ ಮಾಡಿದ ಸಮಯದಲ್ಲಿ ಅಜಮಲ ಖಾನರಂಥ ರಾಷ್ಟ್ರ ಮುಂದಾಳುಗಳನ್ನು ಆ ಕಾಲನು ಎತ್ತಿಕೊಂಡು ಹೋದದು ಹಿಂದೀ ರಾಷ್ಟ್ರಕ್ಕೆ ದೊಡ ಆಘಾತವಾದಂತಾಗಿದೆ! ಈ ಸಲಗ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ ಅನಸಾರಿ ಹಾಗೂ ಹಕೀಮ ಅಜಮಲಖಾನರಿಬ್ಬರೂ ಒಳ್ಳೇ ಸ್ನೇಹಿತರು. ಹಿಂದೂ-ಮುಸಲ್ಮಾನರ ಐಕ್ಯ ಸಂಪಾದನೆಯ ಕಾರ್ಯದಲ್ಲಿ ಅನಸಾರಿಯವರಿಗೆ ಅವರು ಬಲಗೈಯಾಗಿದ್ದರು ಸರಕಾರದಲ್ಲಿ ಸಹ ಹಕೀಮರಿಗೆ ಆದರವಿದ್ದಿತು. ಲಾರ್ಡ ಹಾರ್ಡಿಂಜ ಹಾಗೂ ಲೇಡೀ ಹಾರ್ಡಿಂಜರು ಹಕೀಮರಲ್ಲಿ ಒಳ್ಳೇ ವಿಶ್ವಾಸವುಳ್ಳವರಾಗಿದ್ದರು. ಹಾರ್ಡಿಂಜರಿಗೆ ಬಾಂಬ ತಗಲಿ ಕುಬ್ಜವಾಗಿದ್ದ ವಾತಾವರಣವಲ್ಲಿ ಸಹ ಶಸ್ತ್ರೋಪಚಾರ ಮಾಡಿದವರಲ್ಲಿ ಅಜಮಲಖಾನರ ಸಹಾಯವು ಕೋಲ್ಪಟ್ಟಿತ್ತು ಮೊಗಲ ಖಾದಶಾಹಿ ಬಾಬರನ ನಂತರ ತುರ್ಕಸ್ತಾನದಿಂದ ಬಂದು, ಸಾಮಾನ್ಯ ಕುದುರೆಗಳ ಸೇನಾನಾಯಕನಾಗಿದ್ದ ಓರ್ವ ವೀರನ ವಂಶಜರೆ ಅಜಮಲಖಾನರು. ಹಕೀಮರ ವ್ಯವಸಾಯವು ಇವರ ವಂಶದಲ್ಲಿ ಬಹು ದಿನಗಳಿಂದ ನಡೆದು ಬಂದಿದೆ. ಉತ್ತರ ಹಿಂದುಸ್ತಾನದ ರಾಜರು, ನವಾಬರು, ಶ್ರೀಮಂತರು, ಬಡವರು ಎಲ್ಲರೂ ಅಜಮಲಖಾನರಲ್ಲಿ ಔಷಧಿಯನ್ನು ವಿಶ್ವಾಸದಿಂದ ತಗೆದುಕೊಳ್ಳುತ್ತಿದ್ದರು. ಇವರ ವಂಶದಲ್ಲಿಯ ವೈದ್ಯರು ತಮ್ಮ ಪ್ರೌಢಿಮ್ಯತೆಯಿಂದ ಮೊಗಲ ಬಾದಶಹರಿಂದ ಅನೇಕ ಜಹಗೀರುಗಳನ್ನು ಸಂಪಾದಿಸಿದ್ದಾರೆ. ಗಯೋನೇ ಇಶ್ವಿಯು ಬಂಡಾಯದಲ್ಲಿ ಭಾಗ ತಗೆದುಕೊಂಡರೆಂದು ಇವರ ತಂದೆಯ ಕಾಲಕ್ಕೆ ಬ್ರಿಟಿಶರು ಕೆಲವು ಜಹಗೀರುಗಳನ್ನು ಕಸಿದುಕೊಂಡರು! ಅಂತೂ ರಾಷ್ಟ್ರಪ್ರೇಮವು ಈ ವಂಶದಲ್ಲಿ ಇದ್ದು, ಅದು ಅಜಮಲಖಾನರಲ್ಲಿಯೂ ಚನ್ನಾಗಿ ನೆಲೆಗೊಂಡಿತ್ತು. ಇವರು 'ಮುಸ್ಲಿಮ ಲೀಗ'ದ ಅಧ್ಯಕ್ಷರಾಗಿದ್ದರು; ೧೯೨೧ರ ದಿಲ್ಲೀ ಕಾಂಗ್ರೆಸ್ಸಿನ ಸ್ವಾಗತ ಅಧ್ಯಕ್ಷರಿದ್ದರು; ೧೯೨೧ ರ ಅಹಮ್ಮದಾಬಾದಿನ ಸ.ಪ್ರಸಿದ್ಧ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಮುಸ್ಲೀಮ ರಾಷ್ಟ್ರೀಯ ಕಾಲೇಜಿನ ಮುಖ್ಯಸ್ಥಪಕರೂ ಆಗಿದ್ದರು. ಅಲ್ಲದೇ ಯುನಾನೀ ಪದ್ಧತಿಯನ್ನು ಕಲಿಸಲಿಕ್ಕಾಗಿ ಪ್ರಚಾರ ಮಾಡಲಿಕ್ಕಾಗಿ ಕಾಲೇಜನ್ನೂ, ಔಷಧಾಲಯವನ್ನೂ ಸ್ಥಾಪಿಸಿದ್ದಾರೆ. ಹೀಗೆ ರಾಷ್ಟ್ರಕಾರ್ಯದಲ್ಲಿ ಸದಾ ನಿರತರಾಗಿದ್ದ, ಹಾಗೂ ಹಿಂದೂ-ಮುಸಲ್ಮಾನರ ಐಕ್ಯದ ಮೂರ್ತಿಯೇ ಆಗಿದ್ದ ಮಹಾಪುರುಷನನ್ನು ಇಂಥ ಸಮಯದಲ್ಲಿ ಕಳೆದುಕೊಂಡದ್ದು ಭಾರತ ರಾಷ್ಟ್ರದ ಮಹಾ ದುರ್ದೈವವೆಂದೇ ಹೇಳಬೇಕು. ದಿಲ್ಲಿಯಲ್ಲಿ ಹಿಂದುಗಳು ಸಹ ಇವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿದ್ದಾರೆ. ಹೇವರು ಇವರ ಆತ್ಮಕ್ಕೆ ಶಾಂತಿಯನ್ನು ನೀಯಲಿ!

ಮದ್ರಾಸ ಕಾಂಗ್ರೆಸವಲ್ಲಿ
ಕರ್ನಾಟಕ ಏಕೀಕರಣ!

ಕಾಂಗ್ರೆಸ್ಸಿನವರು ಭಾಷಾವಾರ್ಯು ಪ್ರಾಂತ ರಚನೆಗೆ ಒಪ್ಪಿ ಬಹು ದಿನಗಳಾದವಷ್ಟೇ? ಸರಕಾರದವರೂ ಈ ತತ್ವಕ್ಕೆ ಸಂಪೂರ್ಣವಾಗಿ ಆದರ ತೋರಿಸಬೇಕೆಂದೂ, ಈ ತತ್ವವನ್ನು ಕೃತಿಯಲ್ಲಿ ತರಲು ಪ್ರಾರಂಭಿಸುವ ನೊದಲನೇ ಹೆಜ್ಜೆಯೆಂದೂ, ಕರ್ನಾಟಕ, ಆಂಧ್ರ, ಉತ್ಕಲಗಳಿಗೆ ಗವ್ಮನೇ ಪ್ರತ್ಯೇಕ ಪ್ರಾಂತಗಳನ್ನು ಕೊಡಬೇಕೆಂದೂ ಈ ಸಲದ ಕಾಂಗ್ರೆಸ್ಸು ಸರಕಾರಕ್ಕೆ ಆಗ್ರಹ ಪಡಿಸಿದೆ!

ಪ್ರಾಗತಿಕರ ಪರಿಷತ್ತು.

ಕೆಳಗಿನ ಠರಾವಾಗಳಿಗಿವೆ-

(೧) ಸಾಯಮನ್ ಕಮೀಶನ್‌ಕ್ಕೆ ಬಹಿಷ್ಕಾರ. (೨) ರಾಷ್ಟ್ರ ಸಂಘಗಳಂಥ ಎಲ್ಲ ಪರರ ಪ್ರಭುಗಳ ಸಭೆಗಳಿಗೆ ಹೋಗುವ ಹಿಂದುಸ್ತಾನದ ಪ್ರತಿನಿಧಿಗಳು ಅವಶ್ಯವಾಗಿ ಹಿಂದುಸ್ತಾನದವರೇ ಇರಬೇಕು (೩) ಸ್ವರಾಜ್ಯದ ಯೋಜನೆಯನ್ನು ಸಿದ್ಧಪಡಿಸಲು, ಇತರ ರಾಜಕೀಯ ಸಂಸ್ಥೆಗಳ ಸಂಗಡ ಸಹಕಾರದಿಂದ ನಡೆಯಲು ಒಂದು ಉಪಮಂಡಲದ ಯೋಜನೆ. (೪) ಜಾತಿಜಾತಿಗಳಲ್ಲಿ ಐಕ್ಯವು ಸೆಲೆಗೊಳ್ಳುವಂತೆ ಪ್ರಯತ್ನವಾಗಬೇಕು ಇತ್ಯಾದಿ.

ಮಹತ್ವದ ಸುದ್ದಿಗಳು.

ಡಾ॥ ಅನಸಾರಿಯವರಿಗೂ, ಕಲಕತ್ತೆಯ ಮುನಸೀಪಾಲ್ಟಿಯ ಅಧ್ಯಕ್ಷರಾದ (ಇವರಿಗೆ 'ಮೇಯರ' ಎಂಬ ಹೆಸರಿದೆ) ಶ್ರೀ ಸೇನಗುಪ್ತರಿಗೂ ಮದ್ರಾಸ ಮುನಸಿಪಾಲ್ಟಿಯವರು ಮಾನಪತ್ರಗಳನ್ನು ಅರ್ಪಿಸಿದರು,

ಕಾಂಗ್ರೆಸ್ಸಿನವರೂ, ಪ್ರಾಗತಿಕರೂ, ಮತ್ತು ಉಳಿದ ರಾಜಕೀಯ ಪಂಗಡಗಳೂ, ಹಿಂದುಸ್ತಾನದ ಸ್ವರಾಜ್ಯ ಯೋಜನೆಯನ್ನು ನಿರ್ಣಯಿಸಲು, ತಮ್ಮಲ್ಲಿಗೆ ಬರಬೇಕೆಂದು, ಕಲಕತ್ತೆಯ 'ಇಂಡಿಯನ್ ಅಸೋಸಿಯೇಶನ್' ದವರು ಎಲ್ಲರಿಗೂ ಆಮಂತ್ರಿಸಿದ್ದಾರೆ

ಸತ್ಯಮೂರ್ತಿಯವರ ವೀಲೆ ೧೩೪ (೮) ರಾಜದ್ರೋಹಿಯು ಕಲಮಿನಂತೆ ಕಟ್ಟಿಬೀಳಾಗುವದೆಂದು ವದಂತಿಯಿದೆ.

ವಿಶ್ರಾಂತಿಗಾಗಿ ಶ್ರೀ ಕೇಳಕರರು ಒಂದು ವರ್ಷ ರಜೆಕೇಗೆದು ಕೊಂಡಿದ್ದಾರೆ. ಈ ಅವಧಿಯಲ್ಲಿ ಕೇಸರಿಯ ಸಂಪಾದಕತ್ವವು ಶ್ರೀ ಕೇತಕರ ಇವರಿಗೆ ಒಪ್ಪಿಸಲ್ಪಟ್ಟಿದೆ.

ಇಸವೃತ್ತ.

ಮುನಸಿಪಾಲ್ಟಿಯ ಕಚೇರಿಯು ಹತ್ತರ ಬೀದಿಯಲ್ಲಿ ಒಂದು ದೊಡ್ಡ ಕೇಲಿಕ್ಕೆ ಬಿದ್ದಿತ್ತು ಅದನ್ನು ಶ್ರೀ ಪರಸಿ ಮಧ್ವರಾಯರು ನಮ್ಮ ಕಡೆಗೆ ತಂದು ಕೊಟ್ಟಿದ್ದಾರೆ ಅದನ್ನು ಕಳೆದು ಕೊಂಡವರು 'ಕನ್ನಡಿಗನ' ಕಾರ್ಯಾಲಯಕ್ಕೆ ಬಂದು, ಕೆಗೆದುಕೊಂಡು ಹೋಗಬೇಕು

ಹಕೀಮ ಅಜಮಲ್ಲಖಾನರವರು ಅಕಸ್ಮಾತ್ತಾಗಿ ಮೃತರಾದ ಸುದ್ದಿಯು ಬಾಗಲಕೋಟೆಗೆ ಶುಕ್ರವಾರ ಸಾಯಂಕಾಲಕ್ಕೆ ತಿಳಿಯಿತು, ಶನಿವಾರ ಮಂಜಾನೆ ಊರ್ಧ್ವಯ ಪ್ರಮುಖರು ಹಿಂದೂ ಮಹಮ್ಮದೀಯರೆಲ್ಲರೂ ಸೇರಿದ್ದು ಅರ್ಧ ರಾಷ್ಟ್ರೀಯ ಧ್ವಜವನ್ನು ಏರಿಸಿದರು. ಸಾಯಂಕಾಲ ಆಫೀಸೇ ಸಾರ್ವಜನಿಕ ನಾಗರಿಕರ ಸಭೆ ಸೇರಿ ದುಃಖಪ್ರದರ್ಶನೆ ಮಾಡಲ್ಪಟ್ಟಿತು. ಶ್ರೀ ನರಗುಂದ ಜಯರಾಯರು ಅಧ್ಯಕ್ಷರಿದ್ದರು.

ಸೂಚನೆ.

ಕಾಂಗ್ರೆಸ್ಸಿನ ಮಹತ್ವದ ಸುದ್ದಿಗಳನ್ನು ಈ ವಾರದಲ್ಲಿ [illegible] ಚಾಜ್ಜಾಗಿ ಕೆ-ಟ್ಟಿದ್ದರಿಂದ ನಮ್ಮ ಕಡೆಗೆ ಬಂದ ಪತ್ರ, ಸುದ್ದಿ, ಜಡ ಪುಗಳಿಗೆ ಈ ಸಲ ಸ್ಥಳ ಕೊಡಲು ಅನುಕೂಲವಾಗಲಿಲ್ಲ.

—ಸಂಪಾದಕ ಕನ್ನಡಿಗ

೪೨ನೇ ರಾಷ್ಟ್ರೀಯ ಮಹಾಸಭೆ!

ಮಹತ್ವದ ಅಧಿವೇಶನವು ಕೊನೆಗಂಡಿತು!

ಹಿಂದೂ- ಮುಸಲ್ಮಾನರ ಐಕ್ಯದ ಹೆಜ್ಜೆ!

ಸ್ವಾತುತ್ಪ್ರೇಕ್ಷೆಯ ನಿರ್ಣಯವು ಸ್ವೀಕೃತವಾಯಿತು!

(ನಮ್ಮ ಸ್ವಂತ ಪ್ರೇಷಿತ ಪ್ರತಿನಿಧಿಯಿಂದ)

ಮದ್ರಾಸ, ಕಾಂಗ್ರೆಸ ನಗರ ತಾ ೨೯--೧೨-- ೨೭

ಭರತಖಂಡದ ಇತಿಹಾಸದಲ್ಲಿ ಮದ್ರಾಸದ ಕಾಂಗ್ರೆಸ್ಸು ಒಳ್ಳೇ ಮಹತ್ವದ್ದಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ. ಈ ಸಲ ನೆರೆದ ಜನಗಳ ಉತ್ಸಾಹ, ಪ್ರತಿನಿಧಿಗಳ ಸಂಖ್ಯೆ, ಮುಖಂಡರ ಜಾಣತನದ ನಿರ್ಣಯ ಇವೆಲ್ಲ ಒಳ್ಳೇ ಮಹತ್ವದ್ದಾಗಿವೆ.

ಸೋಮವಾರ ತಾ|| ೨೬ ರಂದಲ್ಲಿ ೨ ಘಂಟೆಗೆ ಕಾಂಗ್ರೆಸ್ಸು ಪ್ರಾರಂಭವಾಯಿತು. ಅತ್ಯಂತ ಭವ್ಯವಾಗಿರುವ ಟಿಳಕ ಮಂಡಪದ ಬಾಗಿಲುಗಳನ್ನು ೧೬ ಗಂಟೆಗೆ ತೆರೆಯಲು, ೧ ಗಂಟೆಯೊಳಗಾಗಿ ಮಂಡಪದಲ್ಲಿಯ ಪ್ರತಿಸ್ಥಳವೂ ಜನರಿಂದ ತುಂಬಿಹೋಯಿತು. ಜನರ ಉತ್ಸಾಹಕ್ಕ ಮಿತಿಯೇ ಇರಲಿಲ್ಲ, ೧೫ ಸಾವಿರ ಜನರು ಹಿಡಿಯುವಷ್ಟು ಮಂಡಪವಿದ್ದರೂ, ೨೦ ಸಾವಿರದ ವರೆಗೆ ಜನರು ಅಲ್ಲಿ ನೆರೆದು, ತಮಗಾದ ತೊಂದರೆಗಳನ್ನು ಲೆಕ್ಕಿಸದೇ ಕುಳಿತುಕೊಂಡಿದ್ದರು. ಧ್ವನಿವಾಹಕ ಯಂತ್ರಗಳು ಉಪಯೋಗಿಸಲ್ಪಟ್ಟದ್ದರಿಂದ, ೨೦ ಸಾವಿರ ಜನರಿಗೆ ಸಹ ಎಲ್ಲವೂ ಕೇಳಬರುತ್ತಲಿದ್ದಿತು. ಗಾಡೆಯ ಮಾತುಗಳೂ, ಸಮಯೋಚಿತವಾದ ನುಡಿಗಳೂ ಮಂಡಪದಲ್ಲಿ ತೂಗು ಹಾಕಲ್ಪಟ್ಟಿದ್ದವು. "ನನ್ನನ್ನು ಪರೀಕ್ಷಿಸುವರಂತೆ! ನಾವೇನು ಶಾಲೆಯ ಹುಡುಗರೋ" ಎಂಬ ವಾಕ್ಯವೇ ಮಹಾದ್ವಾರದಲ್ಲಿ ಬಂದಕೂಡಲೇ ಮೊದಲು ಕಣ್ಣಿಗೆ ಬೀಳುವಂತೆ ಇಡಲ್ಪಟ್ಟಿತ್ತು! ಅಧ್ಯಕ್ಷರ ಜಗಲಿಯು ಸುಶೋಭಿತವಾಗಿದ್ದಿತು. ಭಾಷಣದ ಕಟ್ಟಿಗೆ ಮಹಾತ್ಮರ ಭವ್ಯವಾದ ಭಾವಪಟವು ಹಾಕಲ್ಪಟ್ಟಿತ್ತು.

ಅಧ್ಯಕ್ಷರ ಮೆರವಣಿಗೆಯು ಮಂಡಪವನ್ನು ಪ್ರವೇಶಿಸಿದ ಕೂಡಲೇ, ಜಯಜಯಕಾರದ ಭಯಂಕಾರವಾದ ನಿನಾದವು ಉತ್ಪನ್ನವಾಯಿತು. ಮೊದಲು ಸ್ತ್ರೀ ಸ್ವಯಂಸೇವಿಕೆಯರೂ, ಆ ಮೇಲೆ ಸ್ವಯಂಸೇವಕರ ದಸ್ತುಗಳೂ ಬಂದವು. ಸ್ವಯಂಸೇವಕರ ವಾದ್ಯದೊಂದಿಗೆ ಹಾಗೂ ಅವರು ಎರಡೂ ಬದಿಯಲ್ಲಿ ನಿಂತು ನಿರ್ಪಡಿಸಿದ ಕಮಾನುಗಳಿಂದ ಹಾಯ್ದು ಮುಖಂಡರು ಇಬ್ಬಿಬ್ಬರು ಜೊತೆಯಿಂದ ಬರಲಾರಂಭಿಸಿದರು. ಅಧ್ಯಕ್ಷರೂ-ಸ್ವಾಗತಾಧ್ಯಕ್ಷರೂ, ಮಹಾತ್ಮರೂ, ಮಹಮ್ಮದ ಅಲ್ಲಿಯವರೂ, ಶ್ರೀನಿವಾಸಯ್ಯಂಗಾರ-ಸರೋಜನೀದೇವಿಯವರೂ ಹೀಗೆ ಕೂಡಿ ಬಂದರು ಜಗಲಿಯ ಮೇಲೆ ಅಧ್ಯಕ್ಷರೂ, ಅದರ ಸುತ್ತಲೂ ಉಳಿದ ಮುಖಂಡರೂ ವಿರಾಜಮಾನರಾದ ಮೇಲೆ, ಸ್ವಾಗತ ಶೌರೂ ರಾಷ್ಟ್ರೀಯ ಪದಗಳು ಹಾಡಲ್ಪಟ್ಟವು. ಮದ್ರಾಸ ಇಲಾಖೆಯ ಮೂರೂ ಜನ ಮಂತ್ರಿಗಳೂ, ಮಧ್ಯಪ್ರಾಂತದ ಮಂತ್ರಿಗಳೂ, ಅನೇಕ ವರ್ಷಗಳಿಂದ ಕಾಂಗ್ರೆಸ್ಸಿಕ್ಕೆ ಬಾರದ ಡಾ. ಅನೀಬಿಸೆಂಟ ಅಮ್ಮನವರೂ, ಸರ ಇಬ್ರಾಹಿಮ ರಹಿಮತುಲ್ಲಾ ಇವರೂ ಅಲ್ಲಿ ವಿರಾಜಮಾನರಾಗಿದ್ದುದು ವಿಶೇಷ.

ಸ್ವಾಗತಾಧ್ಯಕ್ಷರೂ, ಅಧ್ಯಕ್ಷರೂ ತಮ್ಮ ತಮ್ಮ ಭಾಷಣಗಳನ್ನು ಆ ಮೇಲೆ ಓದಿದರು. (ಇವು ಬೇರೆ ಕಡೆಗೆ ಪ್ರಕಟವಾಗಿವೆ)

ಈ ವರ್ಷದ ಕಾಂಗ್ರೆಸಕ್ಕೆ ವಿಶೇಷ ಮಹತ್ವ ಬಂದದ್ದು ೩ ಕಾರಣಗಳಿಂದ:-(೧) ಕಾಂಗ್ರೆಸ್ಸವ (ಬ್ರಿಟಿಶ್‌ರಿಗೆ ಸಂಬಂಧವಿಲ್ಲದಂಥ) ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನಿಟ್ಟುಕೊಳ್ಳಬೇಕೆಂದು ನಿರ್ಣಯಿಸಿದ್ದು. (೨) ಸಾಯೆಮನ್ನ ಕಮೀಶನ್ನೆಂದರೆ ಕಣಪದಾರ್ಥವೆಂದು ತೀರ್ಮಾನಿಸಿದ್ದು. ಹಾಗೂ (೩) ಹಿಂದೂ- ಮುಸಲ್ಮಾನರ ಒಡಂಬಡಿಕೆಯ ಭೀಕರವಾದ ಪ್ರವಾಹಕ್ಕೆ ಕಡೆಹಾಕುವಂತೆ ಯೋಜನೆಮಾಡಿದ್ದು. ಭರತಖಂಡದ ಮುಖಂಡರೆಲ್ಲ ಚೀತಿಸಿ ಚಿಂತಿಸಿ, ಕಡೆಗೆ ಈ ಮಹತ್ವದ ಮೂರೂ ನಿರ್ಣಯಗಳಿಗೆ ಸರ್ವಾನುಮತದಿಂದ ತಮ್ಮ ಒಪ್ಪಿಗೆಯನ್ನಿತ್ತುದು, ಈ ಮದ್ರಾಸದ ಕಾಂಗ್ರೆಸ್ಸದಲ್ಲಾದ ವಿಶೇಷ ಕಾರ್ಯವು.

ಕಾಂಗ್ರೆಸ್ಸದ ತೀರ್ಮಾನಗಳು.

(೧) ಅವಾರಿಯರ ಅಭಿನಂದನೆ.

(೨) ಕಾಕೋರೀ ಪ್ರಕರ್ಣದಲ್ಲಿ ಸರಕಾರವು ತೋರಿಸಿದ ಭೇದಬುದ್ಧಿಯ ನಿಷೇಧ. ಇದರಲ್ಲಿ ಜೀವಕಳೆದು ಕೊಂಡವರ ಕುಟುಂಬಕ್ಕೆ ಸಹಾನುಭೂತಿ ಪ್ರದರ್ಶನ.

(೩) ೧೯೩೭ನೇ ಫೆಬ್ರುವರಿಯಲ್ಲಿ ಬ್ರುಸೆಲ್ಸದಲ್ಲಿ ಕೂಡಿದ ಸಾಮ್ರಾಜ್ಯತ್ವ ನಿಷೇಧಕ- ಪರಿಷತ್ತಿಗೆ ಈ ಕಾಂಗ್ರೆಸ್ಸು ಸ್ವಾಗತವನ್ನಿತ್ತು ಸ್ನೇಯುತ್ತದೆ. ಮತ್ತು ಆ ಪರಿಷತ್ತಿನ ಸಭ್ಯವನ್ನೂ ಒಯಿಸುತ್ತದೆ.

(೪) ಚೀನರ ಸ್ವಾತಂತ್ರ್ಯಸಂಗ್ರಾಮಕ್ಕಾಗಿ ಈ ಕಾಂಗ್ರೆಸ್ಸು ತನ್ನ ಸಂಪೂರ್ಣ ಅನಂದವನ್ನೂ ಸಹಾನುಭೂತಿಯನ್ನೂ ಪ್ರಕಟಿಸುತ್ತದೆ; ಚೀನಕ್ಕೆ ಸುಶ್ರೂಷಾಪಥಕವನ್ನು ಕಳುಹಿಸಲು ಸರಕಾರವು ಅಪ್ಪಣೆ ಕೊಡದಿರುವದನ್ನು ನಿಷೇಧಿಸುತ್ತದೆ. ಹಿಂದೀ ಸೈನಿಕರನ್ನು ನಮ್ಮ ಮತದ ವಿರುದ್ಧವಾಗಿ ಚೀನಕ್ಕೆ ಕಳಿಸಿದ್ದಕ್ಕಾಗಿ ಅತ್ಯಂತ ವಿಷಾದವನ್ನು ವ್ಯಕ್ತಗೊಳಿಸುತ್ತದೆ. ಚೀನದಲ್ಲಿ ಈಗಿದ್ದ ಹಿಂದೀ ಸೈನಿಕರನ್ನು ಮರಳಿ ತರಬೇಕೆಂದು ಆಗ್ರಹಪಡಿಸುತ್ತದೆ.

(೫) ಹಿಂದೀಯರು ಪರರಾಷ್ಟ್ರಗಳಿಗೆ ಹೋಗಲಿಕ್ಕೂ ಪರರಾಷ್ಟ್ರಗಳಲ್ಲಿದ್ದ ಹಿಂದೀಯರೂ, ಉಳಿದ ನಿವಾಸಿಗಳೂ ಹಿಂದೆ

ಸ್ಥಾನಕ್ಕೆ ಬರಲಿಕ್ಕೂ ಇರುವ ಅನಾವಶ್ಯಕವಾದ ನಿರ್ಬಂಧನೆಗಳ ನ್ನೆಲ್ಲ ಸರಕಾರವು ಕಿತ್ತಿ ಒಗೆಯ ಬೇಕು.

(೬) ಹಿಂದುಸ್ಥಾನದಲ್ಲಿಯೂ ಪೂರ್ವ ಸಮುದ್ರಗಳಲ್ಲಿಯೂ, ವಿಶೇಷತಃ ವಾಯವ್ಯ ಸರಹದ್ದಿನಲ್ಲಿ ಬ್ರಿಟಿಶರು ನಡೆಸಿದ ಯುದ್ಧ ಸಿದ್ಧತೆಯನ್ನು ಈ ಕಾಂಗ್ರೆಸ್ಸು ಒಹು ವ್ಯಾಕುಲ ಹೃದಯದಿಂದ ನೋಡುತ್ತಲಿದೆ. ಹಿಂದೀಯರು ತಮ್ಮ ನೆರೆಹೊರೆಯ ರಾಷ್ಟ್ರಗಳ ಸಂಗಡ ಕಲಹ ಮಾಡಲೊಲ್ಲರು. ಆದ್ದರಿಂದ ಈ ಸಿದ್ಧತೆಗಳನ್ನೆ ಲ್ಲ ಸರಕಾರವು ಬಿಂಡಿಡಬೇಕು ಮತ್ತು ಈ ಯುದ್ಧ ಪ್ರಸಕ್ತಿ ಯಲ್ಲಿ ಹಿಂದೀಯರು ಭಾಗತೆಗೆದುಕೊಳ್ಳಲಾರರೆಂಬದನ್ನು ಈಗಲೇ ನಾವು ಪ್ರಕಟಿಸುತ್ತೇವೆ

(೭) ಸ್ವಯಂ ನಿರ್ಣಯತತ್ವದ ವಿರುದ್ಧವಾಗಿ ಸೈಮನ್ನ ಳ ಮೀಶನ್ನು ನೇಮಿಸಲ್ಪಟ್ಟಿದ್ದರಿಂದ, ಇದಕ್ಕೆ ಸಂಪೂರ್ಣ ಬಹಿ ಷ್ಕಾರ ಹಾಕಬೇಕು.

(೮) ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುವದೇ ಕಾಂಗ್ರೆಸದ ಧ್ಯೇಯವಿರಬೇಕು.

(೯) ಬ್ರಿಟಿಶ್ ಸರಕುಗಳಲ್ಲಿ ಅರಿಸಿ ತೆಗೆದ ಕೆಲವು ವಿಶಿಷ್ಟ ಸರಕುಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕು.

ಬ್ರಿಟಿಶರು ಹೊರಬಿದ್ದು ಹೋಗಲಿ !

ನಮಗವಘ ಬೇಕೇ ಆಗಿಲ್ಲ ! ಅವರು ಹೋದರೆಂದು, ಶಾಂತ ತೆಯ ಬದಲು ಅರಾಜಕತೆ, ದಂಗೆ, ಸುಲಿಗೆಗಳು ನಡೆದರೂ ಏನೂ ಅಡ್ಡಿಯಿಲ್ಲ ! ಯಾಕಂದರೆ ಇಂಥ ಗೊಂದಲದೊಳಗಿಂದಲೇ ಹೊಸ ರಾಜ್ಯ ಯೋಜನೆಯು ಹುಟ್ಟಿ, ಅದು ಮಾನವೀ ಕುಟುಂಬಕ್ಕೆ ಅರ್ಪಣಭೂತವಾಗಿ ನಿಲ್ಲುವದು — (ಸ್ವಾತಂತ್ರ್ಯದ ನಿರ್ಣಯದ ಬಗ್ಗೆ ಮಾತನಾಡುವಾಗ್ಗೆ ಶ್ರೀ ಸಾಂಬಮೂರ್ತಿಯವರು ಮಾಡಿದ ಭಾಷಣದಿಂದ ಎತ್ತಿದ್ದು.)

(೧೦) (ಅ) ಹಿಂದೂ— ಮುಸಲ್ಮಾನರ ಕಲಹವು ಮುರಿದು ಹೋಗುವಂತೆ ಎಲ್ಲರೂ ಪ್ರಯತ್ನಿಸಕಕ್ಕದ್ದು; ಮುಸಲ್ಮಾನರು ಗೋ-ಹತ್ಯೆಯನ್ನು ಕೂಡಲೇ ನಿಲ್ಲಿಸಬೇಕು; ಹಿಂದೂ ಜನರು ಮಸೀದಿಯ ಮುಂದೆ ವಾದ್ಯಬಾರಿಸಕೂಡದು; (ಆ) ಸಂಯುಕ್ತ ಮತದಾರ ಪದ್ಧತಿಯನ್ನು ಎಲ್ಲರೂ ಮನ್ನಿಸತಕ್ಕದ್ದು. (ಇ) ವಾಯವ್ಯ ಸರಹದ್ದಿಗೂ, ಬ್ರಿಟಿಶ್ ಬಲುಚಿಸ್ಥಾನಕ್ಕೂ ಸುಧಾರಣಾ ಕಾಯದೆಯನ್ನು ಅನ್ವಯಿಸತಕ್ಕದ್ದು. (ಈ) ಸಿಂಧ, ಕರ್ನಾಟಕ ಆಂಧ್ರ, ಹಾಗೂ ಉತ್ಕಲದವರಿಗೆ ಭಾಷಾನುವಾರ ಪ್ರಾಂತಗಳನ್ನು ಬೇಗನೆ ಕೊಡಬೇಕು. (ಉ) ಧಾರ್ಮಿಕ ಸಂಗಡಗಳ ಬಗ್ಗೆ ಕಾಯದೇ ಮಂಡಲಗಳಲ್ಲಿ ಕಾಯದೇ ಮಾಡುವಾಗ್ಗೆ ೩/೪ ಜನರು ವಿರುದ್ಧವಿದ್ದರೆ, ಅಂಥ ಕಾಯದೇ ಮಾಡಕಕ್ಕದ್ದಲ್ಲ.

(೧೧) ಬ್ರಹ್ಮದೇಶವು ಕಾಯಂವಾಗಿ ಹಿಂದುಸ್ಥಾನದ ಭಾಗವೇ ಆಗಿರಬೇಕು; ಈಶಾನ್ಯ ಸರಹದ್ದಿನ ಪ್ರಾಂತವೆಂಬದಾಗಿ ಹೊಸದಾಗಿ ಪ್ರಾಂತವನ್ನೊಂದು ಮಾಡಬೇಕೆಂದು ಸರಕಾರವು ಯೋಚಿಸಿದ್ದನ್ನು ಈ ಕಾಂಗ್ರೆಸ್ಸವು ವಿರೋಧಿಸುತ್ತದೆ.

(೧೨) ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರಿಗೆ ನಾಗರಿಕರ ಎಲ್ಲ ಹಕ್ಕುಗಳು ಇರತಕ್ಕದ್ದಾದ್ದರಿಂದ ೧೯೨೬ ಹಾಗೂ ೧೯೩೩ ನೇ ಇಸ್ವಿಗಳಲ್ಲಿಯ ಕಾಯದೇಗಳನ್ನು ರದ್ದು ಪಡಿಸಬೇಕು; "ಫೆಡರೇಶನ್ ಕಮೀಶನ್ನ"ದಲ್ಲಿ ಹಿಂದೀಯರ ನೇಮಕವಾಗಬೇಕು.

(೧೩) ಬಂಗಾಲದಲ್ಲಿಯ ಕೈದಿಗಳನ್ನು ಕೂಡಲೇ ಬಂಧ ಮುಕ್ತ ಮಾಡಬೇಕು.

(೧೪) ದೇಶೀಯ ಸಂಸ್ಥಾನಗಳು ಬೇಗನೇ ತಮ್ಮ ತಮ್ಮ ಸಂಸ್ಥಾನಗಳಲ್ಲಿ ಪ್ರಜೆಗಳಿಗೆ ರಾಜ್ಯ ತಂತ್ರಗಳ ಹಕ್ಕುಗಳನ್ನು ಕೊಡಬೇಕು; ಸುಧಾರಣೆಯನ್ನು ಕ್ರಿಯೆಯಲ್ಲಿ ಕೂಡಲೇ ತರಬೇಕು.

(೧೫) ಮದ್ರಾಸದ ನೀಲ ಪ್ರತಿಮೆಯ ಸತ್ಯಾಗ್ರಹಕ್ಕೆ ಆ ಹಾನುಭೂತಿಯನ್ನು ಈ ಕಾಂಗ್ರೆಸ್ಸು ತೋರಿಸುತ್ತದೆ; ಮತ್ತು ಆ ಪ್ರತಿಮೆಯು ಹಿಂದೀಯರಿಗೆ ಅಪಮಾನ ಗೊಳಿಸತಕ್ಕಂಥದ್ದಾಗಿದ್ದರಿಂದ ಅದನ್ನು ನಿಷೇಧಿಸುತ್ತದೆ.

(೧೬) ಕಾರ್ಯಕಾರೀ ವ ಂಡಲದಲ್ಲಿ ಕೆಳಗಿನವರಿರಬೇಕು:- (೧) ಮೋತಿಲಾಲ ನೆಹರೂ. (೨) ಗಾಂಧೀ. (೩) ಮಾಲವಿಯಾ. (೪) ಅಬ್ದುಲ್ ಕಲಮ್ ಆಝಾದ್. (೫) ಸರೋಜನೀ ದೇವಿ. (೬) ನೇನಗುಪ್ತ (೭) ಶ್ರೀನಿವಾಸ ಆಯ್ಯಂಗಾರ. (೮) ಸರದಾರ ಸರದೂಲ (೯) ಮಹಮ್ಮದ ಅಲ್ಲಿ. ಮತ್ತು ಕಾರ್ಯದರ್ಶಿಗಳು:- (೧) ಜವಾಹರಲಾಲ ನೆಹರೂ (೨) ಸಾಹೇಬ ಕ್ವೇಸ್ (೩) ಸುಬಾಸ ಚಂದ್ರ ಬೋಸ.

(೧೭) ಮುಂದಿನ ವರ್ಷ ಕಾಂಗ್ರೆಸ್ಸು ಕಲಕತ್ತೆಯಲ್ಲಿ ಕೂಡ್ರಬೇಕು.

ಪ್ರಾಗತಿಕರ ಪರಿಷತ್ತು.

ಪ್ರಾಗತಿಕರ ೧೫ ನೇ ಪರಿಷತ್ತು ಮುಂಬೈಯಲ್ಲಿ ಸರ ತೇಜ ಬಹದ್ದೂರ ಸಪ್ರೂ ಇವರ ಅಧ್ಯಕ್ಷತೆಯಲ್ಲಿ ಕೂಡಿಗಂಡಿತು. ಅಧ್ಯಕ್ಷರ ಭಾಷಣದಲ್ಲಿ ಸಾಯಮನ್ನ ಕಮೀಶನ್ನದ ವಿಚೇಜನೆಯೇ ಹೆಚ್ಚಾಗಿದ್ದಿತು. ಬ್ರಿಟಿಶರು ಈ ವಿಷಯದಲ್ಲಿ ತೋರಿಸಿದ ಸಂಕುಚಿತ

ಸ್ವಾತಂತ್ರ್ಯವೇ ನಮ್ಮ ಧರ್ಮ !

" ಗುಲಾಮತನದಿಂದ ಪಾರಾಗುವದೇ ನಮ್ಮ ಧರ್ಮವಾಗಿರಬೇಕು. ಇದರ ಹೊರತಾಗಿ ಹೆಚ್ಚಾದ ಧರ್ಮವು ಈಗ್ಗೆ ಭಾರತೀಯರಿಗೆ ಇರಲಾರದು."

— ಸರೋಜನಿದೇವಿ.

ಭಾವವನ್ನು ಅವರು ತಳಿದರು; ಹಿಂದೀಯರನ್ನ ಕಮೀಶನದಲ್ಲಿ ಸೇರಿಸಿರದ್ದಕ್ಕಾಗಿ ಸರಕಾರವನ್ನು ಬಲವಾಗಿ ಟೀಕಿಸಿದರು; ಸಾಯಮನ್ನ ಸಾಹೇಬರ ಹೊರ್ತಾಗಿ ಉಳಿದ ಸಭಾಸದರ ಯೋಗ್ಯತೆಯು ಅಷ್ಟಕ್ಕಷ್ಟೇ ಇದೇ ಎಂದು ಸಾರಿದರು; ಮತ್ತು ಈ ಕಮೀಶನ್ನದ ನಿಯೋಜನೆಯಲ್ಲಿ ಹಿಂದೀಯರಿಗೆ ಇಷ್ಟೊಂದು ಅವಮಾನವಾಗುವಂತೆ ನಟಿಸಿದ್ದು ಅನ್ಯಾಯವಾದುದೆಂದೂ ಒತ್ತಿ ಹೇಳಿದರು. ಸ್ವಾಗತಾಧ್ಯಕ್ಷರಾದ ಸರ ತೇಜ್ ಬಹದ್ದೂರ್ ಸಪ್ರು ತಮ್ಮ ಭಾಷಣದಲ್ಲಿ ಈ ಕಮೀಶನ್ನದ ನಿಯೋಜನೆಯನ್ನು ಜನ್ಮಾಗಿ ಟೀಕಿಸಿದರು. ಸರಕಾರವು ಈಗಾದರೂ ಬುದ್ಧಿಗಲಿಯ ಬೇಕೆಂದೂ, ಇಲ್ಲದಿದರೆ ಸರಕಾರವೇ ಚಳವಳಿಯನ್ನು ಬಲಿಸಿದಂತಾಗುವದೆಂದೂ ಹೇಳಿದರು.

ಬ್ರಿಟಿಶ್ ಹಿಂದುಸ್ಥಾನವು

ಇಚ್ಛಿಸ್ಲವೇ ಇಲ್ಲ !!!

" ಸ್ವಾತಂತ್ರ್ಯ ತೀರ್ಮಾನವು ಕಾಂಗ್ರೆಸ್ಸಿನಲ್ಲಿ ಸ್ವೀಕೃತವಾಗಿದ್ದರಿಂದ " ಬ್ರಿಟಿಶ್ ಹಿಂದುಸ್ಥಾನ " ವು ಈ ದಿನದಿಂದಲೂ ಪ್ರವಾದಾಸ್ಪದವಾಯಿತು! ಇನ್ನುಮೇಲೆ ನಾವು ಬರೀ " ಹಿಂದುಸ್ಥಾನವೆ "ಂದೇ ನಮ್ಮ ದೇಶವನ್ನು ಕರೆಯಬೇಕು!! " —ಶ್ರೀನಿವಾಸ ಆಯ್ಯಂಗಾರ.

ಪಂಡಿತ ಮಾಲವಿಯರವರು ಪತ್ರನಾಡುವಾಗ್ಗೆ " ಬ್ರಿಟಿಶ್ ಹಿಂದುಸ್ಥಾನ " ವೆಂದು ಬಾಯಿಗೆಬಂದಿತು! ಕೂಡಲೇ ಓರ್ವ ಪತ್ರಿಕೆಗಳು " ಬ್ರಿಟಿಶ್ ಹಿಂದುಸ್ಥಾನವು ಅಸ್ತಿತ್ವದಲ್ಲಿಯೇ ಇರದಿರುವಾಗ ನೀವು ಹೀಗೇಕೆ ನುಡಿದಿರಿ" ಎಂದು ಕೇಳಲು, " ತಪ್ಪು ಹಾಗೆ ಬಾಯಿಗೆ ಬಂದದ್ದೇನೋ ನಿಜ! ನಾನು ಕ್ಷಮೆ ಬೇಡುತೇನೆ. ಇನ್ನು " ಬ್ರಿಟಿಶ್ ಹಿಂದುಸ್ಥಾನ "ವು ನಮ್ಮ ಕಲ್ಪನೆಯಿಂದ ಸಿಡಿದು ಹೋಗಬೇಕು." ಎಂದು ಮಾಲವೀಯಾಜಿಯವರು ಉತ್ತರ ಕೊಟ್ಟರು.

ಅಧ್ಯಕ್ಷರಾದ ಡಾ. ಅನಸಾರಿಯವರ ಭಾಷಣದ ಸಾರಾಂಶ.

ಹಿಂದುಸ್ಥಾನವು ಸ್ವತಂತ್ರವಾಗಲೇಬೇಕು.

ಹಿಂದೀಯರ ಭವಿತವ್ಯತೆಯನ್ನು ನಿಶ್ಚಯಿಸುವ ಅಧಿಕಾರವು ಇಂಗ್ಲಂಡಿನವರಿಗೆ ಇಲ್ಲವೇಇಲ್ಲ!!

ಡಾ. ಅನಸಾರಿಯವರ ಭಾಷಣದ ಮುಖ್ಯಾಂಶಗಳು:—

ಏಷಿಯಾಖಂಡದ ಸ್ವಾತಂತ್ರ್ಯಕ್ಕೂ, ಜಗತ್ತಿನ ಶಾಂತತೆಗೂ, ಭರತಖಂಡದ ಸ್ವಾತಂತ್ರ್ಯವೇ ತಾರಣೋಪಾಯವು! ಏಷಿಯಾಖಂಡದ ರಾಷ್ಟ್ರಗಳೆಲ್ಲವೂ ಒಂದಾಗದಹೊರ್ತು, ಯುರೋಪಿಯರ ಸಾಮ್ರಾಜ್ಯ ಕಲ್ಪನೆಯೂ ಸಂಪತ್ತಿನ ಸೊಕ್ಕೂ ಮಾಯವಾಗಲಾರವು.

ಹಿಂದೂ- ಮುಸಲ್ಮಾನರ ಕಲಹವು ವಿಲಂಬವಿಲ್ಲದೇ ಬಂದಾಗ ತಕ್ಕದ್ದು. ಉನ್ಮತ್ತವಾಗಿರುವ ನಾಕಂಠಶಾಹಿಗೆ ಧರ್ಮ ಕಲಹದಿಂದ ಲಾಭವನ್ನೆಂಟುಮಾಡಿಕೊಡಕೂಡದು. ಎಲ್ಲರೂ ಒಪ್ಪಿಕೊಳ್ಳುವಂಥ ಸಂಗತಿಗಳು ಹಚ್ಚಾಗಿದ್ದು, ಮತಭೇದದ ಕಾರಣಗಳು ತೀರ ಕಡಿಮೆಯಾಗಿರುವದರಿಂದ, ಈ ಅಲ್ಪ ಕಾರಣಗಳನ್ನು ಮರೆತು, ಮತೈಕ್ಯದ ವಿಚಾರಗಳಿಗೇ ಮಹತ್ವಕೊಟ್ಟು, ನಾವು ಐಕ್ಯವನ್ನು ಸಂಪಾದಿಸಿಕೊಳ್ಳುವುದು. ಹಿಂದೂ ಮುಸಲ್ಮಾನರ ಒಡಂಬಡಿಕೆಯನ್ನು ಮುಂದಿಟ್ಟು ಹೊರಟಾಗ ಕಾಂಗ್ರೆಸ್ಸಿಗಿಂತಲೂ ಹೆಚ್ಚಿನ ಜನಬಲವುಳ್ಳವರಾದ ಸಂಸ್ಥೆಯು ಹಿಂದುಸ್ಥಾನದಲ್ಲಿ ಮತ್ತೊಂದೂ ಇಲ್ಲ.

ಎಲ್ಲ ಹಿಂದು ಪುತ್ರರ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವ ಸ್ವರಾಜ್ಯವೇ ನಮಗೆ ಬೇಕಾದದ್ದು. ಹಿಂದೂ ರಾಜ್ಯ, ಅಥವಾ ಮುಸ್ಲಿಮ್ ರಾಜ್ಯವು ನಮಗೆ ಬೇಕಿಲ್ಲ.

ಎಲ್ಲ ವಿಚಾರದ ಹಾಗೂ ಪಂಗಡಗಳ ಜನರು ಬಂದು ಸೇರಲು ಅನುಕೂಲವಾಗುವಂತೆ ಕಾಂಗ್ರೆಸ್ಸಿನ ಬಾಗಿಲುಗಳನ್ನು ತೆರೆದಿಡಲಕ್ಕದ್ದು. ಐಕ್ಯವು ಅತ್ಯವಶ್ಯವಾಗಿದ್ದುದರಿಂದ ನಾವು ಕಪ್ಪಲ್ಲಕ್ಕೆ ವಿಚಾರಗಳ ಬಡಿದಾಟದಲ್ಲಿ ಬೀಳುವ ಸಮಯವಿದಲ್ಲ.

ಕೌನ್ಸಿಲ್ಲ ಕಾರ್ಯಕ್ರಮದಲ್ಲಿ ನನ್ನ ವಿಶ್ವಾಸವಿಲ್ಲ. ಆದರೆ ಕೌನ್ಸಿಲ್ಲಿಗಳಿಗೆ ಹೋಗುವದೇ ಅವಶ್ಯವಿದ್ದರೆ, ಎಲ್ಲ ರಾಜಕೀಯ ಪಂಗಡಗಳಲ್ಲಿ ಒಂದೇ ಬಗೆಯ ಕಾರ್ಯಕ್ರಮವಿರುವಂತೆ ವಿವಾದಾತೀತಕ್ಕದ್ದು. ಆಂತರ ಮಾತ್ರ ನಾಕಂಠಶಾಹಿಗೆ ಖೋ ಹಾಕಿಲು ಅನುವಾಗುತ್ತದೆ.

ಸ್ವತಃ ತಾವೇ ಒಪ್ಪಿದ ಸಿದ್ಧಾಂತಗಳನ್ನು ಲೆಕ್ಕಿಸದೇ, ತಾವೇ ಸಿದ್ಧಪಡಿಸಿದ ಕಟ್ಟಳೆಗಳನ್ನು ಮೂಲೆಗೊತ್ತಿ, ರಾಜಕೀಯ ಕೈದಿಗಳ ವಿಚಾರಣೆಯನ್ನು ಬಹಿರಂಗವಾಗಿ ಕೋರ್ಟಿನಲ್ಲಿ ನಡೆಯದಿರುವದು. ಸರಕಾರದ ಪುಕ್ಕಟತನವನ್ನೂ ನೀತಿ ಬಾಹಿರವಾದ ಧ್ಯೇಯವನ್ನೂ ಹೊರಗಡವುಕ್ತದ.

ಭಾರತೀಯರ ಯೋಗ್ಯತೆಯನ್ನು ನಿಶ್ಚಯಿಸುವ ಅಧಿಕಾರವು ಬ್ರಿಟಿಶ್ ಜನಾಂಗಕ್ಕೆ ಸದ್ವಿಚಾರದ ಹಾಗೂ ಸದಭಿಮಾನ ಪೂರಿತವಾದ ಯಾವ ಭಾರತೀಯನೂ ಒಪ್ಪಲಾರನು. ಹಿಂದೀ ಜನತೆಯು ಅಕಾಂಕ್ಷೆಗಳನ್ನು ಲೆಕ್ಕಿಸದೇ, ಅವರನ್ನು ಅಪಮಾನಗೊಳಿಸಲು ಮಾತ್ರ ನಿಯೋಜಿತವಾದ ಸಾಯಮನ್ ಕಮೀಶನ್ನಕ್ಕೆ ಯಾವ ರೀತಿಯಿಂದಲೂ ನಾವು ಸಹಾಯಮಾಡಕೂಡದು.

ಭಾರತೀಯರ ಭವಿತವ್ಯತೆಯನ್ನು ನಾವು ಕೂಡಲೇ ನಿಶ್ಚಯಿಸುಬೇಕು. ನಮ್ಮ ರಾಜಕೀಯ ಧ್ಯೇಯವನ್ನೂ, ಸರಕಾರದ ಪದ್ಧತಿಯನ್ನೂ ನಿಶ್ಚಯಿಸಲು ಎಲ್ಲ ರಾಜಕೀಯ ಪಂಗಡಗಳನ್ನೊಳಗೊಂಡ ಒಂದು ರಾಷ್ಟ್ರಪುರುಷರ ನಿಧಿಕರೆಯಬೇಕು. ಏಶಿಯಾಖಂಡದವರಿಗೂ, ಉಳಿದ ಅಂತರ ರಾಷ್ಟ್ರೀಯರಿಗೂ ಭಾರತೀಯರಿಗೂ ಇರುವ ಸಂಬಂಧವನ್ನು ಗಣನೆಗೆ ತಂದು, ಆ ಆ ರಾಷ್ಟ್ರಗಳ ಸಂಗಡ ಸಾಂಸ್ಕೃತಿಕ ಹಾಗೂ ಸ್ನೇಹಸಂವರ್ಧಕ ಸಂಬಂಧವನ್ನು ಬೆಳಿಸಿಕೊಳ್ಳಬೇಕು.

ಭಾರತೀಯರು ಈಗ್ಗೆ ಅತ್ಯಂತ ದುರ್ಬಲರಾಗಿದ್ದಾರೆ. ದೇಹಸಾಮರ್ಥ್ಯವನ್ನು ನಾವು ಬೆಳಿಸಿಕೊಳ್ಳಬೇಕು ದೇಹದ ಆರೋಗ್ಯವಿಲ್ಲದೇ, ನಾಗರಿಕರಾಗುವದು ಅಶಕ್ಯ. ದುಡ್ಡಿನಿಂದ ರಣಭೂಮಿಯನ್ನು ಸಿದ್ಧಪಡಿಸಬಹುದು ಆದರೆ ರಣಭೂಮಿಯನ್ನು ಸಂರಕ್ಷಿಸುವ ಕೆಲಸವು ಮನುಷ್ಯರದೇ ಎಂಬದನ್ನು ಮರೆಯಲಾಗದು. ಆದ್ದರಿಂದ ನಮ್ಮ ರಾಷ್ಟ್ರೀಯ ಆರೋಗ್ಯತೆಗಾಗಿ ರಾಷ್ಟ್ರೀಯ ಪುರುಷರೆಲ್ಲ ಒಂದು ಯೋಜನೆಯನ್ನು ಸಿದ್ಧಪಡಿಸಬೇಕು. ಮತ್ತೂ ಅದನ್ನೇ ಬೇಗನೇ ಕೃತಿಯಲ್ಲಿ ತರುವ ಜಳವಳಿ ಹೂಡಬೇಕು.

ಸ್ವಾಗತಾಧ್ಯಕ್ಷರಾದ ಶ್ರೀ ಮುಧುರಂಗ ಮುದ್ಲಿಯಾರರ ಭಾಷಣ.

ಇವರ ಭಾಷಣದ ಮುಖ್ಯಾಂಶಗಳು:— (೧) ಸಾಯಮನ್ ಕಮೀಶನ್ನಕ್ಕೆ ಸಂಪೂರ್ಣ ಬಹಿಷ್ಕಾರ ಹಾಕಲೇಬೇಕು. (೨) ಹಿಂದುಸ್ಥಾನಕ್ಕೆ ಸ್ವರಾಜ್ಯಕೊಡತಕ್ಕ ದೇವತೆಯೆಂದರೆ ಬ್ರಿಟಿಶ್ ಪಾರ್ಲಮೆಂಟ ಎಂಬ ಕಲ್ಪನೆಯನ್ನು ಕಿತ್ತಿಹಾಕಬೇಕು (೩) ನಮ್ಮ ಹಕ್ಕು ಬಾಧ್ಯತೆಗಳ ಪ್ರಕಟನೆಯನ್ನು ಬೇಗನೇ ಹೊರಡಿಸಬೇಕು. (೪) ಸ್ವರಾಜ್ಯ ಯೋಜನೆಯನ್ನು ಸಿದ್ಧಪಡಿಸಬೇಕು. (೫) ಸಮ್ಮೆಲ್ಲ ಐಕ್ಯವನ್ನು ಸಂಪಾದಿಸಿಕೊಳ್ಳಬೇಕು. (೬) ವಿಧಾಯುಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಅಂದರೆ ಮಾತ್ರ ನಮ್ಮ ಸಂಪತ್ತು ವೃದ್ಧಿಹೊಂದಿ, ನಮ್ಮ ರೈತರು ಸುಖಪಡುವರು. (೭) ನೂಲುವ ಸಂಘದವರು ತಮ್ಮ ಖಾದಿಯ ಪ್ರಚಾರದ ಕಾರ್ಯದ ಸಂಗಡ, ಉಳಿದ ಸ್ವದೇಶೀ ವಸ್ತುಗಳ ಪ್ರಚಾರವನ್ನು ಸಹ ಮಾಡಬೇಕು. (೮) ಕಾಂಗ್ರೆಸ್ಸಿನ ಸಂದೇಶವು ಪ್ರತಿಯೊಂದು ಮೂಲೆ-ಕೊಂಪೆಯಲ್ಲಿಯೂ ಕೇಳಬರುವಂತೆ ನಮ್ಮ ಸಂಘಟನೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. (೯) ಕೌನ್ಸಿಲ್ಲನ್ನು ಪ್ರವೇಶಿಸಿ, ಅಲ್ಲಿ ಮತೈಕ್ಯದಿಂದ ಸರಕಾರವನ್ನು ಹಣ್ಣಿಗೆ ತಂದಬೇಕು.

ಆಚಾರ್ಯರ ಉನಿವಾಸವೃತ!

ನಾಗಪುರದಲ್ಲಿ ನಡೆದ ಶಸ್ತ್ರಗಳ ಕಾಯಿದೆ ಭಂಗದಲ್ಲಿ ಪ್ರಮುಖ ಭಾಗತೆಗೆದುಕೊಂಡ ಸೇನಾಧಿಪತಿ ಆಚಾರಿಯರು ಈವರೆಗೂ ಶುರಂಗನಲ್ಲಿರುವರಷ್ಟೇ? ಅಲ್ಲಿಗೆ ಹೋದಾಗಿನಿಂದ ಅವರು ಉಪವಾಸವೃತವನ್ನು ಕೈಕೊಂಡಿದ್ದು, ಈಗ್ಗೆ ೫॥ ತಿಂಗಳು ಉಪವಾಸದಲ್ಲಿಯೇ ಇದ್ದಾರೆ. ಇವರನ್ನು ಕಾಣಲಿಕ್ಕೆಂದು ಮುಂಬೈಯಿಯ ಶ್ರೀ ಭೂಚಾರವರು ನಾಗಪುರಕ್ಕೆ ಹೋಗಿದ್ದರು. ಆದರೆ ಆವರಿಗೆ ಭೆಟ್ಟಿಯಾಗಲು ಅಪ್ಪಣೆ ದೊರೆಯಲಿಲ್ಲ. ಆಚಾರಿಯವರ ಜೀವಕ್ಕೆ ಯಾವ ಬಗೆಯಿಂದಲೂ ಅಪಾಯವಾಗುವಂತಿಲ್ಲವೆಂದು

ಜೇಲ ಅಧಿಕಾರಿಗಳು ಹೇಳಿದಂತೆ! ಪರರಾಷ್ಟ್ರಗಳಲ್ಲಿ ಹೀಗೆ ಉಪವಾಸ ವೃತದಲ್ಲಿ ಕೈದಿಗಳಿದ್ದಾಗ್ಗೆ ಅವನ್ನು ಒಂಧಮುಕ್ತಮಾಡಲು ಭೀಕರವಾದ ಜಳವಳಗಳಾಗಿ ಕೆಲವರೆ ಹಿಂದುಸ್ಥಾನದಲ್ಲಿ ಎಲ್ಲಪೂ ಸ್ಥಬ್ದವೆ! ಅಂತೆಯೇ ಹಿಂದುಸ್ಥಾನವು ಶಾಂತಮಯವಾಗಿರುವದೆಂದು ನಾಕಾಂವು ಹೇಳುವದು! ಮತ್ತೂ ತನ್ನ ಬೇಳೆ ಬೇಯಿಸಿಕೊಳ್ಳುವದು!

ಸಂಪೂರ್ಣ ಸ್ವಾತಂತ್ರ್ಯತೆ!

ಶ್ರೀನಿವಾಸಯ್ಯಂಗಾರರ ಪ್ರಥಮ ಚಿಕಿತ್ಸೆ!

ಸಂಪೂರ್ಣ ಸ್ವಾತಂತ್ರ್ಯತೆಯನ್ನು ಸಂಪಾದಿಸುವದೇ ಹಿಂದ ಸ್ಥಾನದ ಧ್ಯೇಯವಾಗಬೇಕೆಂದು ಪಂಡಿತ ಜವಾಹರಲಾಲ ನೆಹರೂ ಇವರು ವಿಷಯನಿಯಾಮಕ ಸಭೆಯಲ್ಲಿ ತಂದ ತೀರ್ಮಾನದ ವೇಳೆ ಮಾತನಾಡುವಾಗ "ನಾನು ನವ್ಯ ದಿಲ್ಲಿಯಲ್ಲಿ ಬೆಕಾಗಿಲ್ಲ" ವೆಂದು ಇಂಗ್ಲೀಷ ಮನುಷ್ಯನಿಗೆ ಸ್ಪಷ್ಟವಾಗಿ ನಾವು ಹೇಳಬೇಕಾಗಿದೆ ಎಂದು ಶ್ರೀನಿವಾಸ ಅಯ್ಯಂಗಾರರು ನುಡಿದರು. "ಹಾಗೆ ಕೇಳುವದಕ್ಕಿಂತ ಇಂಗ್ಲೀಷ ಮನುಷ್ಯನಿಗೆ ಕಪಾಳವೇಟ್ಟಿಂದ ನೆಲಕ್ಕೆ ಕೆಡುವದೇ ಅವಶ್ಯವಾಗಿದೆ" ಎಂದು ಡಾ ಪಟ್ಟಾಭಿ ಸೀತಾರಾಮಯ್ಯನವರು ಉದ್ಗಾರ ತೆಗೆಯಲು, "ನೀವು ಮೊದಲು ಹೀಗೆ ನೋಡಿ, ನಾನು ಪ್ರಥಮ ಚಿಕಿತ್ಸೆಗಾಗಿ ಸಿದ್ಧನಾಗಿಯೇ ಇರುವೆನೆಂ"ದು ಶ್ರೀನಿವಾಸ ಅಯ್ಯಂಗಾರರು ಉತ್ತರಕೊಟ್ಟರು.

ಮದ್ರಾಸದಲ್ಲಿ ಇತರ ಪರಿಷತ್ತುಗಳು.

ಭಾರತೀಯ ತರುಣರ ಪರಿಷತ್ತಿನ ತೀರ್ಮಾನಗಳು:- (೧) ತರುಣರು ರಾಷ್ಟ್ರಾಭ್ಯುದಯವನ್ನೇ ಧ್ಯೇಯವನ್ನಾಗಿ ಯಾವಾಗಲೂ ಇಟ್ಟುಕೊಂಡಿರಬೇಕು. (೨) ಗ್ರಾಮಗಳ ಸಂಘಟನೆಗಾಗಿ ಪ್ರಯತ್ನಿಸಬೇಕು. (೩) ಸಾಧು ವಾಸ್ವಾನಿಯವರ ಸಂಪಾದಕತ್ವದಲ್ಲಿ "ಎಂಥ್ರಾಲಾಜಿ ಆಫ ಯೂಥ" ಎಂಬ ಮಾಸಿಕಪತ್ರವನ್ನು ಹೊರಡಿಸಬೇಕು. (೪) ಏಸಿಯಾ ಖಂಡದಲ್ಲಿ ಭಾರತೀಯರ ಪ್ರಾಚೀನ ಸಂಸ್ಕೃತಿಯು ಹುಟ್ಟಿದ್ದನ್ನು ಲಕ್ಷಿಸಿ ಅದು ಮತ್ತೆ ವೃದ್ಧಿ ಹೊಂದುವಂತೆ ಪ್ರಯತ್ನಿಸುವ ಧ್ಯೇಯವನ್ನು ಭಾರತೀಯ ತರುಣರಿಟ್ಟುಕೊಳ್ಳಬೇಕು.

ಹಿಂದೀ ಪರಿಷತ್ತು ಸರೋಜನೀ ದೇವಿಯರ ಅಧ್ಯಕ್ಷತೆಯಲ್ಲಿ ನಡೆಯಿತು ಭರತಖಂಡದಲ್ಲೆಲ್ಲ ಒಂದೇ ರಾಷ್ಟ್ರಭಾಷೆಯಿರಬೇಕೆಂದೂ, ಹಿಂದೀಯೇ ಅಂಥ ರಾಷ್ಟ್ರಭಾಷೆಯಾಗಿದೆಯೆಂದೂ, ಎಲ್ಲರೂ ಇದರ ಪ್ರಚಾರದ ಕಾರ್ಯಮಾಡಬೇಕೆಂದೂ ಅಧ್ಯಕ್ಷರು ಒಳ್ಳೇ ಕಳವಳದಿಂದ ನುಡಿದರು. ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಚಾರ ಕಾರ್ಯವನ್ನು ಹೆಚ್ಚು ರಭಸದಿಂದ ಸಾಗಿಸುವ, ಹಾಗೂ ಮಹಾತ್ಮರನ್ನು ಅಭಿನಂದಿಸುವ ಇವೇ ಮೊದಲಾದ ನಿರಾಪುಗಳು ಪಾಸಾದವು.

ಗಾಯನ ಪರಿಷತ್ತಿನ ಅಧ್ಯಕ್ಷರಾದ ಸೂರ್ಯನಾರಾಯಣ ಮೂರ್ತಿಯವರು "ಗಾಯನವ ಲಲಿತಕಲೆಯೂ, ಪಾರಮಾರ್ಥಿಕ ಸಾಧನದ ಪವಿತ್ರತಮವಾದ ವಿದ್ಯೆಯೂ ಆಗಿದೆ" ದು ಹೇಳಿ, ಗಾಯನ ಪದವಿಯನ್ನು ಮದ್ರಾಸ ವಿಶ್ವವಿದ್ಯಾಲಯದಲ್ಲಿಡಬೇಕಾಗಿ ಸೂಚಿಸಿದರು. ಸ್ವಾಗತಾಧ್ಯಕ್ಷರಾದ ಡಾ. ಯೂ. ರಾಮರಾಯರು "ಕರ್ನಾಟಕ ಸಂಗೀತ ಪದ್ಧತಿಯು ಹಿಂದುಸ್ಥಾನೀಯಂತೆ ಅನ್ಯ ಪದ್ಧತಿಗಳನ್ನು ಸ್ವೀಕರಿಸದೇ ಪವಿತ್ರವಾಗಿರೆಯೆಂದೂ, ಬೇಗನ್ನು ನಾಶಪಡಿಸಲಿಕ್ಕೆ ಗಾಯನವೆ, ಮಿಗಿಲಾದ ಸಾಧನವಾಗಿರುವದೆಂದೂ, ಗಾಯನದಿಂದ ಘುಮ್ಮಸ ಹಾಗೂ ಸ್ವಾಯುಗಳು ಸಧೃಢವಾಗುವದೆಂದೂ ವಿವೇಚಿಸಿದರು

ಹಿಂದುಸ್ಥಾನೀ ಸೇವಾದಲದ ವತಿಯಿಂದ ಸ್ವಯಂಸೇವಕ ಪರಿಷತ್ತು ನೆರವೇರಿತು. ಮದ್ರಾಸ ಕಾಂಗ್ರೆಸಕ್ಕಾಗಿ ಸ್ವಯಂ ಸೇವಕರ ತಿಕ್ಷಣ ಶಿಬಿರವನ್ನು ತೆರೆಯಲು ಈ ಸಲ ಕಾಂಗ್ರೆಸ್ಸಿನ ಸ್ವಾಗತ ಸಭೆಯವರು ಅವಕಾಶ ಕೊಡಲಿಲ್ಲ. ಶ್ರೀನಿವಾಸ ಅಯ್ಯಂಗಾರರು ದಂದ ಪತ್ರಗಳಿಗೆ ಉತ್ತರ ಸಹ ಕೊಡಲಿಲ್ಲ. ಈ ಸಲ ಇಷ್ಟೊಂದು ಅನಾನೆಯು ತೋರಿಸಲ್ಪಟ್ಟಿದ್ದಕ್ಕಾಗಿ ಕಾರ್ಯದರ್ಶಿಗಳು ವಿಷಾದವನ್ನು ವ್ಯಕ್ತಗೊಳಿಸಿದರು. ಅಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರೂ ಇವರು ವಾಯುವ್ಯ ಸರಹದ್ದಿನಲ್ಲಿ ಬೇಗನೇ ಯುದ್ಧ ಪ್ರಾರಂಭವಾಗುವದೆಂದು ಹೇಳಿದರು.

ಖಿಲಾಫತ್ತು ಪರಿಷತ್ತು ಶೀಘ್ರ ನೇ ತಾ॥ ಕೂಡಿತ್ತು. ಶಾಫಿ ಮಹಮ್ಮದ ದಾವುದರು ಅಧ್ಯಕ್ಷರಿದ್ದರು.

ಡಾ ಮುಂಜೇಯನರ ಅಧ್ಯಕ್ಷತೆಯಲ್ಲಿ ಗೋಖಲೇ ಮಂದಿರದೊಳಗೆ ಆರ್ಯ ಸಮಾಜ ಪರಿಷತ್ತು ಆಯಿತು.

ಹಿಂದೀ ಸಂಸ್ಥಾನಗಳ ಪರಿಷತ್ತು ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. "ಆಡಳಿತದಲ್ಲಿಯೂ ಸಹಕಾರದಲ್ಲಿಯೂ ಎಷ್ಟೋ ವಿಧವಾಗಿ ಹಿಂದೂ ಸಂಸ್ಥಾನಗಳೆ ವಿಭಾಗಿಸಲ್ಪಟ್ಟಿರೂ, ಆ ಪ್ರಜೆಗಳೂ ಹಿಂದ ನಿವಾಸಿಗಳೆ; ಬ್ರಿಟಿ ಹಿಂದುಸ್ಥಾನದವರನ್ನು ಇವರನ್ನೂ ವಿಂಗಡಿಸುವದೇ ಶಕ್ಯವೇ ಇಲ್ಲ ಈಗಿನ ಪರಿಸ್ಥಿತಿಯು ಕಠಿಣವಿದ್ದರೂ, ಸಂಸ್ಥಾನಗಳು ಜಳವ ಮಾಡದೇ ಸುಮ್ಮನಿದ್ದದ್ದು ಶೋಚನೀಯವಾಗಿದೆ; ನಾಳಿನ ದಲೇ ಅಂಜಿಕೆಯಲ್ಲದೇ ಸಂಸ್ಥಾನಿಕರು ಕಾಂಗ್ರೆಸ್ಸಿಗೆ ಬಂದು ಸೇರಬೇಕು" ಎಂಬದಾಗಿ ಅಧ್ಯಕ್ಷರು ಹೇಳಿದರು. ಸ್ವಾಗತಾಧ್ಯಕ್ಷರಾದ ಶ್ರೀ. ಸತ್ಯಮೂರ್ತಿಗಳಂದದ್ದು:- "ಕಾಂಗ್ರೆಸ್ಸಿನಿಂದ ತಮಗೆ ಅಪಾಯವಾಗುವದೆಂದು ಹಿಂದೀ ರಾಜರುಗಳು ಸರ್ವಥಾ ತಿಳಿಯಕೂಡದು ಅವರು ಕಾಂಗ್ರೆಸ್ಸದಲ್ಲಿ ಭಾಗತೆಗೆದು ಕೊಂಡರೆ, ಅವರ ಹಕ್ಕು ಬಾಧ್ಯತೆಗಳಿಗೆ ಬಾಧೆ ತಟ್ಟುವದೆಂದು ತಿಳಿದುಕೊಂಡಿರುವದು ತೀರ ತಪ್ಪಾಗಿದೆ. ಭಾರತೀಯ ಮುಖಂಡರು, ಹಿಂದುಸ್ಥಾನ ಸರಕಾರದವರಿಗಿಂತ ಹೆಚ್ಚಿನ ಮಿತ್ರರಾಗರೆಂದು ರಾಜರುಗಳು ತಿಳಿದಿದ್ದಾರೆ. ಸರಕಾರದಕ್ಕಿಂತ ಕಡಮೆ ಒಗೆಯ ಮಿತ್ರರಾಗರೆಂದನ್ನು ನಾನು ಎದೆಕಟ್ಟಿ ಹೇಳಬಲ್ಲೆ. ರಾಜರುಗಳಿಗೆ ನಿಜವಾದ ರಾಜಾಧಿಕಾರಗಳು ಈಗಿಲ್ಲವೇಯಿಲ್ಲ. ಮತ್ತು ಸ್ವರಾಜ್ಯದೊರೆತ ಮೇಲೆ ಈ ಅಧಿಕಾರಗಳು ಕಸಿದುಕೊಳ್ಳಲ್ಪಡುವವೆಂಬ ಕಳವಳವನ್ನು ರಾಜರು ಕಿತ್ತಿಹಾಕಬೇಕು ವೈಯಕ್ತಿಕ ರಾಜ್ಯದ ತೀರ್ಮಾನದಲು ಪ್ರಜಾಪತ್ತಾತ್ಮಕ ಪದ್ಧತಿಯು ನೆಲೆಗೊಳ್ಳಬೇಕು ಮಾತ್ರ"

ಸಾಮಾಜಿಕ ಪರಿಷತ್ತು ಶ್ರೀ. ಕೇ. ನಟರಾಜನ್ನ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಯಂಗ್ ಇಸ್ಲಾಮ ವಿದ್ಯಾಪರಿಷತ್ತು, ಶೇಖ ಸರ ಅಬ್ದುಲ ಖಾದರ ಇವರ ಅಧ್ಯಕ್ಷತೆಯಲ್ಲಿ ಕೂಡಿತು.

ಕ್ಷತ್ರಿಯ ಪರಿಷತ್ತಿನ ಅಧ್ಯಕ್ಷರಾದ ತಿರುಮಲ ಪಿಳ್ಳೈಯವರು ಸಾಯಮನ್ ಕಮೀಶನ್‌ದ ಬಹಿಷ್ಕಾರವು ಪರಿಣಾಮಕಾರಕವಾಗದೆಂದು ನುಡಿದರು!

ಮದ್ರಾಸದಲ್ಲಿ ಪ್ರದರ್ಶನಗಳು.

ಖಾದೀ ಪ್ರದರ್ಶನವು ಮಹಾತ್ಮಾ ಗಾಂಧಿಯುವಂದ ತೆರೆಯಲ್ಪಟ್ಟಿತು ಖಾದಿಯ ಪ್ರಚಾರವನ್ನೇ ನಾವು ಹೆಚ್ಚಾಗಿ ಮಾಡಬೇಕಲ್ಲದೇ, ಇನ್ನು ಮೇಲೆ ಹಚ್ಚಿಚ್ಚು ಮಾತನಾಡುವದರಲ್ಲಿ ಅರ್ಥವಿಲ್ಲೆಂದು ಅಪ್ಪಣೆಕೊಡಸಿದರು. ಹಿಂದುಸ್ಥಾನದಲ್ಲಿ ಈಗ್ಗೆ ಒಟ್ಟು ೭೫ ಸಾವಿರ ನೂಲವವರೂ, ೬ ಸಾವಿರ ನೇಕಾರರೂ, ಈ ಖಾದಿಯ ಕಾರ್ಯದಲ್ಲಿ ತೊಡಗಿದ್ದಾರೆ.

ಔದ್ಯೋಗಿಕ ಶಾಲೆಯಲ್ಲಿ ಕೆಲ ಜನ ಆಂಗ್ಲೀಷ ವರ್ತಕರೂ ಅಂಗಡಿಗಳನ್ನು ಹೂಡಿದ್ದರು. ಅವರು ತಮ್ಮ ಅಂಗಡಿಗಳ ಮೇಲೆ ಯೂನಿಯನ್ ಜಾಕಪತಾಕೆಗಳನ್ನಿರಿಸಿದ್ದರು. ಅವನ್ನೆಲ್ಲ ತೆಗೆಯಬೇಕೆಂದು ಜನರು ಆಗ್ರಹಪಟ್ಟಕೂಡಲೇ ವರ್ತಕರು ಅವನ್ನು ತೆಗೆದು ಹಾಕಿದರು. ಮದ್ರಾಸ ಸರಕಾರದವರು ಈ ಪ್ರದರ್ಶನಕ್ಕೆ ಹೆಚ್ಚಾಗಿ ಸಹಾಯಮಾಡಿದ್ದಾರೆ. ಪ್ರದರ್ಶನದಲ್ಲಿ ಜಲಪ್ರಳಯವನ್ನೊಂದು ಸಿದ್ಧಪಡಿಸಿ, ಅದರಿಂದಾಗುವ ಲಾಭಗಳನ್ನು ಜನರಿಗೆ ಸುಲಭವಾಗಿ ತಿಳಿಯುವಂತೆ ಏರ್ಪಾಡುಮಾಡಿದ್ದಾರೆ.

ಗಾಯನ ಪರಿಷತ್ತಿನವರು ಸಿದ್ಧಪಡಿಸಿದ ವಾದನದ ಸಾಧನಗಳ ಪ್ರದರ್ಶನವು ಬಹು ಬೋಧಕವಾಗಿದೆ ಹಿಂದುಸ್ಥಾನದ ಪ್ರಾಚೀನ ವಾದನದ ಸಾಧನಗಳೂ, ಅಪರೂಪವಾದ ಹಸ್ತಲಿಖಿತ ಗ್ರಂಥಗಳೂ ಪ್ರದರ್ಶನದಲ್ಲಿವೆ. ಇವು ಅತ್ಯಂತ ಆಲ್ಹಾದಕವಾಗಿವೆ. ಹಿಂದುಸ್ಥಾನದಲ್ಲಿ ಈ ವರೆಗೆ ಇಂಥ ಪ್ರದರ್ಶನವೇ ಆಗಿರಲಿಕ್ಕಿಲ್ಲ.

ಪತ್ರವ್ಯವಹಾರ.

ಮೋಟಾರಗಳ ಮೇಲಾಟವೂ
ಪ್ರವಾಸಿಕರ ಪ್ರಾಣಿಹರಣವೂ!

ಕಳೆದ ಸಂಚಿಕೆಯಿಂದ ಮುಂದಕ್ಕೆ ಸಾಗಿದ್ದು.

ಈ ಮೋಟಾರಗಳ ವ್ಯವಸ್ಥೆಯ ಬಗ್ಗೆ ಸರಕಾರದವರು ಪೋಲೀಸ ಖಾತೆಯವರಿಗೆ ಒಪ್ಪಿಸಿದ್ದು, ಅವರು ಪ್ರತಿ ವರ್ಷ ಅವುಗಳನ್ನು ಪರೀಕ್ಷಿಸಿ, ಲೈಸನ್ಸ ಕೊಡುವರು. ಮತ್ತು ಕೆಲಕೆಲವು ಮೋಟಾರ್‌ಸ್ಟೇಶನ್‌ಗಳಮೇಲೆ ಒಬ್ಬ ಪೋಲೀಸನನ್ನು ನೇಮಿಸಿ, ಅವನಿಂದ ತಪಾಸ ಮಾಡಿಸುವರು. ಲಾಯಸೆನ್ಸಿನ ಮೇಲೆ ಪ್ಯಾಸಿಂಜರ ಹೆಚ್ಚು ಇದ್ದರೆ "ಓವರ್‌ಲೋಡ್" ದ ಬಗ್ಗೆ ಪಂಚನಾಮೆ ಮಾಡಿ, ಮ್ಯಾಜಿಸ್ಟ್ರೇಟರ

ಬಹಿಷ್ಕಾರದ ಪದ್ಧತಿ.

ಸೈಮನ್ ಕಮೀಶನ್‌ಕ್ಕೆ ಬಹಿಷ್ಕಾರಹಾಕುವ ಪದ್ಧತಿಯು ಹೀಗಿರಬೇಕೆಂದು ಕಾಂಗ್ರೆಸ್ಸಿನಿಂದ ನಿರ್ಧರಿಸಲ್ಪಟ್ಟಿದೆ:—

(೧) ಕಮೀಶನ್‌ದವರು ಹಿಂದುಸ್ಥಾನಕ್ಕೆ ಬಂದ ದಿನ, ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ನಿಷೇಧಪ್ರದರ್ಶಕ ಜಳವಳಿಯುಂಟಾಗುವಂತೆ ಏರ್ಪಾಡಾಗಬೇಕು; ಹರ್ತಾಳಗಳಾಗಬೇಕು; ಸಭೆ ವಾಖ್ಯಾನಗಳಾಗಬೇಕು!

(೨) ಈ ಕಮೀಶನ್ನು ಯಾವ ಯಾವ ಊರಿಗೆ ಹೋಗುವದೋ ಆ ಆ ದಿನ ಆ ಆ ಪಟ್ಟಣಗಳಲ್ಲಿಯೂ ಇದೇ ಬಗೆಯ ಬಹಿಷ್ಕಾರದ ಏರ್ಪಾಡಾಗಬೇಕು.

(೩) ಎಲ್ಲ ರಾಜಕೀಯ ಪಂಗಡದವರು ಕಮೀಶನ್ನಿಗೆ ಬಹಿಷ್ಕಾರವನ್ನು ಹಾಕುವಂತೆ ಜನರ ಅಭಿಪ್ರಾಯವನ್ನುಂಟು ಮಾಡಬೇಕು.

(೪) ಬಿನ್ ಸರ್ಕಾರೀ ಹಿಂದುಸ್ಥಾನದ ಶಾಸನ ಸಭಾಸದರೂ, ಎಲ್ಲ ರಾಜಕೀಯ ಪಂಗಡಗಳ ಮುಖಂಡರೂ ಕಮೀಶನ್ನಿನ ಎದುರಿಗೆ ಸಾಕ್ಷ್ಯಕೊಡಕೂಡದು. ಅಲ್ಲದೇ ಯಾವರೀತಿಯಿಂದಲೂ ಕಮಿಶನ್ನಿಗೆ ಸಹಾಯಮಾಡಬಾರದು ಮತ್ತು ಆವರಿಗೆ ಕೊಡುವ ಔತನಗಳಿಗೆ ಹೋಗಬಾರದು.

(೫) ಕಮೀಶನ್ನಿಗೆ ಸಂಬಂಧ ಪಟ್ಟ ಯಾವ ಕಮಿಟಿಯನ್ನು ಏರ್ಪಡಿಸುವುದಕ್ಕೂ ಬಿನ್ ಸರ್ಕಾರೀ ಶಾಸನಸಭೆಯ ಮೆಂಬರುಗಳು ತಮ್ಮ ಒಪ್ಪಿಗೆಯನ್ನ ಕೊಡಬಾರದು ಮತ್ತು ಆ ಕಮೀಟಿಗಳಲ್ಲಿ ಕೆಲಸಮಾಡಬಾರದು ಇಷ್ಟೇ ಅಲ್ಲದೆ ಕಮೀಶನ್ನಿನ ಕಾರ್ಯ ನಿರ್ವಾಹಕ್ಕೆ ದ್ರವ್ಯಸಹಾಯಕ್ಕಾಗಿ ಬರುವ ಸಂಸ್ಥೆಗಳನ್ನು ತಿರಸ್ಕರಿಸತಕ್ಕದ್ದು.

(೬) ಸೈಮನ್ ಕಮೀಶನ್ ಹಿಂದುಸ್ಥಾನದಲ್ಲಿರುವಾಗ ಶಾಸನಸಭೆಗಳಲ್ಲಿರುವ ಕಾಂಗ್ರೆಸ್ಸ ಪಕ್ಷದವರು ತಮ್ಮ ಸ್ಥಾನಗಳು ಖಾಲಿಯಾಗದಂತೆ ನೋಡಿಕೊಳ್ಳುವದಕ್ಕೆ, ಮಂತ್ರಿಗಳನ್ನು ಹೊರಗಟ್ಟಲಿಕ್ಕೂ, ದೇಶಕ್ಕೆ ಹಾನಿಕರವಾಗಿರುವ ಠರಾವುಗಳನ್ನು ತಿರಸ್ಕರಿಸುವುದಕ್ಕೂ, ಮತ್ತು ಬಹಿಷ್ಕಾರ ಕಾರ್ಯವನ್ನು ಬಲಪಡಿಸುವುದಕ್ಕೂ ಅಲ್ಲದೆ ಇತರ ಯಾವ ಉದ್ದಿಶ್ಯದಿಂದಲೂ ಮಂಡಲಗಳ ಅಧಿವೇಶನಗಳಿಗೆ ಹೋಗಬಾರದು.

(೭) ಬಹಿಷ್ಕಾರದ ಕೆಲಸವನ್ನು ಜೋರಿನಿಂದ ನಡೆಸುವುದಕ್ಕಾಗಿ ಕಾಂಗ್ರೆಸ ಕಾರ್ಯಕಾರಿಮಂಡಲದವರು ಸಾಧ್ಯವಾದರೆ ಇತರ ರಾಜಕೀಯ ಪಂಗಡದವರೊಂದಿಗೆ ಕಲೆತು ಅವರ ಸಹಾಯವನ್ನು ಹೊಂದಲು ಅಡ್ಡಿಯಿಲ್ಲ.

ಕಡೆಗೆ ಖಟ್ಲೆ ಹಾಕಿಕೊಡುವರು. ಇವೆಲ್ಲ ಅನುಕೂಲತೆಗಳನ್ನು ಸರಕಾರದವರು, ಪ್ರವಾಸಿಕರಿಗೆ ತೊಂದರೆಯಾಗಬಾರದೆಂತಲೇ ಮಾಡಿರುವರು.

ಆದರೆ ಪರಸ್ಪರರಿಗಿರುವ ಮೇಲಾಟದಲ್ಲಿ ಮೋಟಾರನ ಎಜಂಟರು, ಪೋಲೀಸರ ಕಣ್ಣುತಪ್ಪಿಸಿ, ಕೆಲವರನ್ನು ಸ್ಟ್ಯಾಂಡಿನಿಂದ ಕೆಲವು ಅಂತರ ದೂರಕಳಿಸುವರು. ಅವರು ಹೋಗಲಿಕ್ಕೆ ನಾಳಬೂಲ ನಾಡಿದರೆ ಟಾಂಗಾವಾಡಿಯಾದರೂ ಕಳಿಸುವರು. ಎಜಂಟರು ಅಲ್ಲಿಗ್ಗೆ ಬರೆಗೆ ಬಂದು, ಇಲ್ಲವೇ ಡ್ರಾಯಿವ್ವರನಿಗೆ ಮೊದಲೇತಿಳಿಸಿ ಮುಂದೆ ಹೋದ ಪ್ಯಾಸಿಂಜರರು, ಮೋಟಾರಿನಲ್ಲಿ ಕೊಡುವಂತೆ ವ್ಯವಸ್ಥೆಮಾಡುವರು. ಅಂದರೆ ಕೊಂಡವಾಡೆಯಲ್ಲಿ ದನಗಳನ್ನು ಒಳಸುಗ್ಗುವಂತೆ ನುಗ್ಗುವರು. ಆಗಂತೂ, ಒಬ್ಬರ ತೊಡಗಳಮೇಲೊಬ್ಬರಂತೆ, ೩-೪

ಜನರು ಕೂಡುವ ಸೀಟಿನಲ್ಲಿ ೬-೮ ಜನರನ್ನು ಹಾಳುವರು. ಇದರಿಂದ ಪ್ರವಾಸಿಕರು ರೊಕ್ಕಕೊಟ್ಟು ತೊಂದರೆಯನ್ನು ಕೊಂಡಂತಾಗುವದು. ಮತ್ತು ಹೆಚ್ಚಿನ ಜನರು ನಡುವೆ ಇಳಿದಾಗ ಅವರಿಗೆ ಡ್ರಾಯ್ವರನು, ನಿಮ್ಮನ್ನು ಪೋಲೀಸರು ಕೇಳಿದರೆ, "ನಾವು ಮೋಟಾರಿನಿಂದ ಬಂದಿದ್ದುವಿಲ್ಲ" ಎಂದು ಹೇಳಿ ಎಂಬದಾಗಿ ಕಲಿಸುವರು. ಇದೊಂದು ರೀತಿಯಿಂದ ಸುಳ್ಳು ಕೂಡಿಂತೆಯೇ ಆಗುವದು.

ಮತ್ತು ಒಂದು ಮೋಟಾರ ಡ್ರಾಯ್ವರನು ತನ್ನ ಮೋಟಾರವನ್ನು ಮಂಡಿದಿಟ್ಟು ಹಿಂದಿನ ಮೋಟಾರವನಿಗೆ ತೊಂದರೆಯಾಗ ಬೇಕೆಂಬ ಮತ್ಸರದಿಂದ ತನ್ನ ಮೋಟಾರದ ಹಿಂಬದಿಗೆ ತಗಡು ಇಲ್ಲವೆ ಕಟ್ಟು ಇಳಿಬಿಟ್ಟು ಭಯಂಕರ ಧೂಳವನ್ನು ಎಬ್ಬಿಸುವನು. ಇದರಿಂದ ಹಿಂದಿನ ಮೋಟಾರದಲ್ಲಿ ಕುಳಿತ ಪ್ರವಾಸಿಕರಿಗೆ ಜೋರಿನಿಂದ ಮೋಟಾರ ಹೋಗುವದರಿಂದ ಹೆಚ್ಚು ಧೂಳು, ಕಣ್ಣು ಮೂಗು ಹಾಗು ಎಲ್ಲ ಅರಿವೆಗಳಮೇಲೂ ಸೇರಿಕೊಂಡು ಕೂಡ್ರುವದು. ಆರೋಗ್ಯ ದೃಷ್ಟಿಯಿಂದ ಪ್ರವಾಸಿಕರಿಗೂ ಹಿಂದಿನ ಮೋಟಾರಗಳ ಡ್ರಾಯ್ವರರಿಂ ಅನಿಷ್ಟವಾಗುವದು ಅವರವರ ಮೇಲಾಟದಲ್ಲಿ ಪ್ರವಾಸಿಗಳು ಏನ್ನು ಕಷ್ಟವನಾಡಿರುವರೋ ದೇವರಿಗೇ ಗೊತ್ತು. ಉದಾಹರಣಾರ್ಥ:—

ಮೊನ್ನೆ ಮೊನ್ನೆ ಅಂದರೆ ೧೨-೧೨-೩೭ನೇ ದಿವಸ ನಾನು ಇಲಕಲ್ ದಿಂದ ೧ ಘಂಟೆಗೆ ಹೂರಟು ಮೊಟಾರಿನಿಂದ ಬರುವಾಗ್ಗೆ ಬಾಗಲಕೋಟೆಯ ಮಿ. ವೀರಭದ್ರಯ್ಯನವರು ಎಂಬವರ ಸರ್ವೀಸ ಮೋಟಾರದ ಮುಂದಿನ ಸೀಟಿನಲ್ಲಿ ಕುಳಿತಿದ್ದೆನು. ನಾವು ಕುಳಿತ ಮೋಟಾರಿನಮುಂದೆ ಆರ್. ಬಿ. ಚವ್ಹಾಣ ಎಂಬವರ ೧೫೯೭ ನಂಬರಿನ ಸರ್ವೀಸ ಮೋಟಾರವು ಸಾಗಿತ್ತು. ಅವು ವಾಯುವೇಗದಿಂದ ೫೫-೬೦ ಮಿನೀಟುಗಳಲ್ಲಿ ಹುನಗುಂದಕ್ಕ ಬಂದು ಸ್ಟ್ಯಾಂಡಿನಮೇಲೆ ನಿಂತವು ಅಷ್ಟರಲ್ಲಿಯೇ ನಾನು ಕುಳಿತ ಮೋಟಾರಿನವನು ಹಳ್ಳದ ಹತ್ತರವೇ ಹಚ್ಚಿನ ಪ್ಯಾಸಿಂಜರನ್ನು ಇಳಿಸಿದ್ದನು ಆಗ ಪೋಲೀಸ ಪಹರಾದವರಾರು ತಪಾಸಮಾಡಲು ಲಾಯಿ. ಪಸ್ಸನಕಾಶಿಲೂ ಕಡಮೆ ಪ್ಯಾಸಿಂಜರಿದ್ದಿವ್ವರು. ಮುಂದ ಎಂಡೂ ಮೋಟಾರಗಳ ನಡುವ ಮೇಲಾಟವು ಚೂರಿನಿಂದ ನಡಿಯಿತು. ಜುಲುಮಿಯಿಂದಹುಡದಳದು ಎಷ್ಟಮಟ್ಟು ಪ್ರವಾಸಿಕರನ್ನು ತುಂಬಿದರು! ಹಚ್ಚಿನ ಜನರನ್ನು ಮುಂದಕ್ಕಳಿಸುವರು. ಹುನಗುಂದ ಬಿಟ್ಟು ಸ್ವಲ್ಪ ಮುಂದ ಬಂದನಂತರ ಮೇಲಾಟದ ಮತ್ಸರಿಂದ ಎಮೂಲಕ ಮುಂದಿನ ಮೋಟಾರಿನವನು ೧೫೯೭ ನಂಬರಿನ ಗಾಡಿಯುನ್ನು, ನಲಕ್ಕಿಹತ್ತುವಂತೆ ಹಿಂದು ತಟ್ಟು ಇಳಿಬಿಟ್ಟನು. ಮೊದಲೇ ಧೂಳ ಇದ್ದ ಜಾಡು, ಇದರಲ್ಲಿ ಮೋಟಾರಿಂದ ಎದ್ದ ಧೂಳು ಮೇಲಾಗಿ ತಬ್ಬಿನ ಎಳೆಯುವಾಗ! ಇನ್ನೆತ್ತುಗಿಳ ಹೊಡತದಿಂದ ಎದ್ದ ಅಪರಿಮಿತವಾದ ಧೂಳಿಯು ಹಿಂದಿಬರುವ ಆ ದಿನ ನಾವು ಕೂತ ಮೋಟಾರವನ್ನು ಮುಂಚ್ಚಿಬಿಟ್ಟಿತು! ನಾವು ಕೂತ ಮೋಟಾರವಾದರೂ ೧-೩ ಮೈಲಿಗಳ ಅಂತರದಿಂದ ಹೋಗಿದ ಪ್ಯಾಸಿಂಜರ ಅತೆಗಾಗಿ ಅದರ ಹಿಂದೆಯೇ ಅದೇ ವೇಗದಿಂದ ಸಾಗಿತ್ತು! ಅಷ್ಟುನಗ ಜೀವ ಬರುವಷ್ಟರಲ್ಲಿ ನಮ್ಮ ಮೈಮೇಲಿನ ಕರೆ ಒಣ್ಣದ ಕೂಟೂಕೂಡ ಹುಡಿಕೂತು ಮಣ್ಣಾಂತೆ ಬೂದಿಬಣ್ಣದ್ದಾಗಿತ್ತು! ಪ್ರವಾಸಿಕರು ಉಪಾಯವಿಲ್ಲವೆ ಎಲ್ಲವನ್ನು ಸಹನಮಾಡಿಕೊಳ್ಳುವ ಭಾಗವತ್ತು!!

ಕಾರಣ ಸರಕಾರದವರು ಈಗ ಪ್ರವಾಸಿಕರಿಗೆ ಆಗತಕ್ಕ ತೊಂದರೆಗಳನ್ನು ತೀವ್ರ ತಪ್ಪಿಸುವದಕ್ಕಾಗಿ ಅವರಲ್ಲಿದ್ದ ಕುಂದು ಕೊಂತಿಗಳನ್ನು ಬಯಲಿಗೆಳೆದಿದ್ದೇನೆ.

—ಓರ್ವ ಪ್ರವಾಸಿ.

ಕನ್ನಡಮ್ಮಾ!

(ಲೇಖಕರು—ದಿನಕರ ದೇಸಾಯಿ; ಅಂಕೋಲಾ.)

ಕನ್ನಡಮ್ಮಾ! ಕನ್ನಡಮ್ಮಾ!! ಹಸಿವೆಯಿಂ ನಾ ಬಳಲುವೆ
ನಿನ್ನ ಕಂದಗೆ ಮೊಲೆಯನುಣಿಸಲು ಬೇಗನೇಳೆ! ಬೇಡುವೆ ॥ ಪಲ್ಲ ॥

ಮುಗಿಲ ಮುಟ್ಟಿದ ವಿಜಯ ಕೇತನ ತಾಳಿಕೋಟೆಯೊಳಿಯಿತೇ?
ಜಗದೊಳಚ್ಚರಿ! ಇದನು ಕೇಳೀ ಮೂರ್ಛೆ ನಿನ್ನನು ತಬ್ಬಿತೇ?

ವಿಜಯನಗರದ ನಾಶವೂ
ವಿಜಯಿ.ಗಳ ಜಯಘೋಷವೂ
ಮುಗಿಲೊಳೇರಲು ದಿವ್ಯ ಮಾತೇ! ಮೂರ್ಛೆ ನಿನ್ನನು ಕೆಡವಿತೇ?

೨.

ನಿನ್ನನೆಚ್ಚರಿಸದೆಯೆ ಮಲಗಿಸಿ ಲೆಕ್ಕಿಸದೆಯವರಾದವ್ವ;
ನಿನ್ನ ಸೇವೆಯ ಮಾಡಲರಿಯದೆ ಪರರ ನಂಬಲು ಪೋದೆವ್ವ,
ನಮ್ಮ ರವಿ ಮರೆಯಾದನು
ಬೊಮ್ಮ ತಿಮಿರವ ಕರೆದನು
ಕಣ್ಣು ಕಾಣದೆ ನಿನ್ನ ದೇಹವ ತುಳಿದು ಪಾಪಿಗಳಾದೆವ್ವ.

೩.

ಮೇರೆಗಾಣದೆ ನಮ್ಮನನ್ಯೊಳು ಹೋರಿ ಸೋತವರಾದೆವ್ವ;
ಹೋರುವಾಗಲೆ ಹೆರರು ಸೇರಲು ನಿನ್ನ ತುಂಡುಗಳಾದವ್ವ,
ನಿನ್ನ ನಡಿಯಂ ಬಿಟ್ಟೆವ್ವ
ಅನ್ಯ ನುಡಿಯಂ ಕಟ್ಟೆವ್ವ
ಘೋರ ಪಾಪವನಂತು ಗೈದೆವ್ವ! ಕ್ಷಮಿಸು!! ಬೇಡುತಲಿರುವೆವ್ವ.

೪

ಅಳಿವುದಿಂದಿಗೆ ನಿನ್ನ ಮೂರ್ಛೆಯು! ರವಿಯು ಮೂಡಿಹ ಮಾತೆಯೇ!
ಎಳೆಯ ಕನ್ನಡ ಕೋಗಿಮರಿಗಳು ಹಾಡತೊಡಗಿವೆ ದೇವಿಯೇ!

ನೋಡು ಶೈಷ್ಣನ ರಾಜ್ಯವ
ನೋಡು ನಮ್ಮೀ ಭಾಗ್ಯವ
ಬೆಳಕು ಹರಿಯಿತು ತಿಮಿರವಡಗಿತು ಬೇಗನೇಳೆ ತಾಯಿಯೇ!

—ಜಯಕರ್ನಾಟಕ.

ನಮ್ಮ ನಿಝಾಮ ಕರ್ನಾಟಕದ ಪತ್ರ.

'ನಿಝಾಮ ಕರ್ನಾಟಕದೊಳಗಿನ ಕನ್ನಡನುಡಿಯ ದುರ್ದಶೆ'

ಈ ತಲೆಕಟ್ಟಿನ ಬರಹವು ಹೈದರಾಬಾದದ 'ನಿಜಾಮ ವಿಜಯ' ಎಂಬ ಮಂತ್ರಿ ಪತ್ರಿಕೆಯಲ್ಲಿ ಕ್ರಮಶ: ಪ್ರಕಟಿತವಾಗಿದೆಯಷ್ಟೇ? ಮೂರು ವರ್ಷಗಳಹಿಂದೆ 'ಕರ್ನಾಟವೀರ' ಪತ್ರಿಕೆಯಲ್ಲಿ ಕಲ್ಬುರ್ಗಿಯ ಕನ್ನಡಾಭಿಮಾನಿಗಳಾದ ಶ್ರೀ ಕಟಿರಾಳ ಕೃಷ್ಣರಾಯರಿಂದ ಪ್ರಕಟಿಸಲ್ಪಟ್ಟ ಲೇಖನವಾಲಿಯೇ ಈ ನಮ್ಮ ಲೇಖನವು. ಈ ಲೇಖನದ ಪೂರ್ವಾಭಿ ಐತಿಹಾಸಿಕ ಅವಲೋಕನಕ್ಕೆ ಅಧಿಕಾರವಾಗಿದೆ. ಮೊನ್ನಿನ ಬೆನಕನ ಹಬ್ಬದಲ್ಲಿ ಕಲ್ಬುರ್ಗಿಯಲ್ಲಿ ಬೀಸಿದ ಕನ್ನಡ ಗಾಳಿಯಿಂದ ಎಚ್ಚೆತ್ತು ಇಡ್ಡಿಯ ಮಂಠಾಪಮಯ ಕನ್ನಡಿಗರ ಕಣ್ತೆರೆಸಬೇಕೆಂದು ಆ ಲೇಖನವನ್ನು 'ನಿಝಾಮ ವಿಜಯ'ದ ಕಡಗೆ ಕಳುಹಿಸಿತು ಆದರೆ ಇಂಥ ಸಾಮ್ಯವೂ ಸತ್ಯವೂ ನಿಷ್ಪಕ್ಷಪಾತವೂ ಆದ ಕನ್ನಡದ ವಿಷಯವು ನಿಝಾಟಿಗರಿಗೆ ರುಚಿಸಲಿಲ್ಲ. ಲೇಖನದ ಸಂಗಡ ಉತ್ತರಕ್ಕಾಗಿ ಕಿತೀಟುಗಳನ್ನು ಇಟ್ಟಿದ್ದರೂ ಎರಡು ಮೂರುಸಲ ನೆನಪುಕೊಟ್ಟರೂ ಸಂಪಾದಕರಿಂದ ಉತ್ತರವೇ ಬರಲಿಲ್ಲ. ಆ ಮೇಲೆ ಸ್ವಂತ ಹೋಗಿ ಕೇಳಿದುದಕ್ಕೆ 'ಮುದ್ರಿಸುವೆವು' ಎಂದು ಹೇಗೋ ಒಂದು ಸಲ ಮಾತುಕೊಟ್ಟರು

ವಿಚಾರಪ್ರವಾಹಕ್ಕೆ ಭಂಗವಾಗದಂತೆ ಯೋಗ್ಯವಾಗಿ ಮೂರು ಸಾಲ್ಯುಕಡಗೆ ಭಾಗಗ್ಯವು ಲೇಖನವನ್ನು ಪ್ರಕಟಿಸಿದ್ದರೆ, ಅದು ಪರಿಣಾಮಕರವಾಗುತ್ತಿತ್ತಲ್ಲವೆ? ೬-೭ ತಿಂಡಾಗಳಲ್ಲಿ ಹರಕು ಮುರುಕಾಗಿ ನಡುವೆ ಸಿಕ್ಕಲ್ಲಿ ಸಿಲ್ಲಿಸಿ ಅದನ್ನು ಮುಗ್ರಿಸಿದುದಲ್ಲದೆ ಅನಾವಶ್ಯಕ ಹಕ್ಕೆ ಮೋರೆ ಕಿವುಚಿಕೊಂಡು ಎದೆ ಕೊಡಬೇಕಾಗಿ ಬಂದ ಈ ಲೇಖನಕ್ಕೆ ಬರೆದ ತಮ್ಮ ಸಂಬಾದಕೀಯ ಮುನ್ನುಡಿಯಲ್ಲಿ 'ಈ ಹಾಳು ಕನ್ನಡಿಗರಿಗೆ ಈ ನಮ್ಮ ಪತ್ರದಲ್ಲಿಯೂ ಏಕೆ?' ಎಂದು ಹುಬ್ಬುಗಂಟಿಕ್ಕಿ ಮಂಠಾಪರನ್ನು ರವಿಸಿ, 'ಇದರ ವಿರುದ್ಧವಾಗಿ ಖಂಡನ ಲೇಖನವನ್ನು ಅರಚಿದಂತೂ ಕೊಡುವದಾದರೆ ಅದಕ್ಕೆ ಅವಶ್ಯವಾಗಿ ಎಡೆ ಕೊಡುವೆವ್ವ' ಎಂಬದಾಗಿ ಮೊದಲೇ ಬೆನ್ನುಚಪ್ಪರಿಸಿ ಎಚ್ಚರಿಸಿದವರು. ಇದಕ್ಕಿದೆ 'ಈಗ ಇಲ್ಲಿ ಕನ್ನಡ ಮಂಠಾಪ ವಾದಕ್ಕೆ ಅವಕಾಶವಿಲ್ಲ. ಎಲ್ಲರ ತಲೆಯು ಮೇಲೆ ಉರ್ದು ಭಾಷೆಯು ಕುಣಿಯುತ್ತಿದೆ' ಎಂದು ಬರೆದಿದ್ದಾರೆ. ಒಪ್ಪಿಗೆ. ಉರ್ದುವು ಎಲ್ಲ ಭಾಷೆಗಳನ್ನು ತುಳಿಯುತ್ತಿತ್ತಿದ್ದರೂ ಕನ್ನಡವು ಮಂಠಾಪಯ ಜುಲುಮಿಗೆ ಒದ್ದಾಡುತ್ತ ಸಾಯಲಾಗಿದ ಇದರ ವಿಚಾರ ಕೊಂಚವೂ ಬೇಡವೋ?

ಪಾಂಗಾರಕರರ ಪಲಾಹಾರವೇ ಮುಂತಾದ ಸಾರ್ವಜನಿಕ ಹಿತದ ವಿಷಯಗಳಿಗೂ, ಮೂಲೆ ಮುಂಗೋಟೆಯೊಳಗಿನ ಹಳ್ಳಗಳ ಸ್ಥಳಿಕ ವಿಷಯಗಳನ್ನು ವಿವರಿಸುವ ಸವಿಸ್ತರವಾದ ಸುದ್ದಿಯೋಲೆಗಳಿಗೂ ಧಾರಾಳವಾಗಿ ಇಂಬುಕೊಡುವ ಈ "ನಿಝಾಮ ವಿಜಯ" ಪತ್ರಿಕಾಕರ್ತರಿಗೆ ತಮ್ಮ ಪತ್ರಿಕೆಗೆ ಕಲವರ್ಷದಿಂದಲಾದರೂ ಯಾರಿಂದ ಜೀವನವು ದೊರೆಯುತ್ತದೋ ಅಂಥ ನಿಝಾಮ ಕರ್ನಾಟಕದ ಗಂಟಲಕ್ಕೆ ಕನ್ನಡಿಗರ ಜೀವಾಳದ ಮಾತೆಂದರೆ ವಿಶೇಷವೇನು ಅನಿಸಲಿಲ್ಲ! ಕನ್ನಡಿಗರೇ, ಇದರ ಕಾರಣವೇನು? ಇದರಿಂದ ಕನ್ನಡಿಗರು ಎಚ್ಚತ್ತು ಬಲಗೊಳ್ಳುವರೊ? ಇದೀಗ ಮಂಠಾಪರ ಔದಾರ್ಯದ ಬುದ್ಧಿ! ಸಹಿಸ್ಣುತೆ! ಕನ್ನಡಿಗರ ಹೋರಾಟದ ಹಾದಿಯಲ್ಲಿಯು ಎಡರುಗಳೆಂಥವಿಂವೆಬದನ್ನು ಈಗಲಾದರೂ ಕನ್ನಡಿಗರು ತಿಳಿದುಕೊಳ್ಳಬೇಕು.

ಕಾಂಗ್ರೆಸ್ಸಿಗಾಗಿ ಈಸಲ ಮದ್ರಾಸಕ್ಕೆ ಹೆಚ್ಚು ಜನರು ಹೋಗಿದ್ದಾರೆ

ಗುಣ ಬರದಿದ್ದರೆ ಹಣ ಪರತ!

ರಕ್ತಶುದ್ಧಿ ವತ್ತು ಧಾತುವೃದ್ಧಿಕಾರಕ

ಬಲವಂತ ಗುಟಕಾ

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣಿ, ಬೇಣಾಜ್ವರಿ, ಅಗ್ನಿ ಮಾಂದ್ಯ, ಕೃಶತ್ವ, ನಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ದಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನವುಂ ಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ವೈಯುಕ್ತಿಕ ವಗರಮಿಯ ಎಶ್ಟಾ ಕರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೆ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇತಿಳಿಯುವದು.

೧ ಡಬ್ಬಿಗೆ ಕಿಮತ್ತು ೦-೧೦-೦ ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗೆ ೩-೪-೦, [illegible] ೭-೦-೦, ಇದಲ್ಲದೆ ೧ ಡಬ್ಬಿ ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ೩ ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ— ಎಸ್ ಬಿ ಕದಮ್ ಮತ್ತು ಸನ್ಸ್.
ಮು. ಪೊಷ್ಟ ನಿಪ್ಪಾಣಿ (ಜಿ ಬೆಳಗಾವ)

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲ ಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರಬಿ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಶ್ರೀ॥ ಲಕ್ಷ್ಮೀ ಬಾಯಿ ಕುಂಭೆಕೋಣ,
ವ್ಯವಸ್ಥಾಪಕರು, ಕ ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಾಣಿಸಿದ ಪೌಂಟೆನ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದ ದು ಇದಕ್ಕೆ ಗಳ ಕೆರೆಕೆ ನ ಭುಗಾರದಂಥ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅ ಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ನೀಲ್ಕುಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೨-೮-೦

ವಿಳಾಸ- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟಿ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟಿಯಿಂದ ೩॥ ರೂ. ಹಾಸಲು ಮಂದ್ರಾಂ ಮಾಡಲ್ಪಟ್ಟಿದೆ.

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಜಾಸಗಿ ವ ಸರ್ವೀಸಿನ ಮೋಟಾರ ಮಾಲಕರ ಸೈರೋಯ ದೊರೆವಾಗಬೇಕೆಂದು ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು ತಾ॥ ೧೦ ಸಪ್ಟೆಂಬರ ೧೯೨೨ನೇ ಇಸ್ವಿಯಿಂದ ಬಾಗಲಕೋಟಿಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ವೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾವಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕರು— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

☞ ಬಾಗಲಕೋಟಿ-ಬೆಳಗಾವ, ಬಾಗಲಕೋಟಿ-ಇಲಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

GRAMAPHONE COMPLETE Rs. 10.

ಗ್ರಾಮೊಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ ರೂ. ೫೫—೦—೦. ಈಗಿನ ಕ್ರಯ ರೂ. ೧೦—೦—೦.

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗ್ಲೀಷು, ಕನ್ನಡ, ಹಿಂದುಸ್ಥಾನಿ, ಇಂಗ್ಲೀಷು ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹು ಚನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಹಾರನ್ ಎಂಬ ಪದ ಹೇಳುವ ಕೊಳವೆ ಇದೆ ನಿಧಾನವಾಗಿಯೂ ಜಾಗ್ರತೆಯಾಗಿಯೂ, ಪದ ಹೇಳಿಸಲು ಕೀಲು ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟಿವೆ.

ಡಬಲ್ ಸೈಡ್ ಎರಡು ಕಡೆಯೂ ಪದವಿರುವ

೧ ರೆಕಾರ್ಡ್ ಸಹಿತ ಗ್ರಾಮೋಫೋನ್ ಯಂತ್ರದ ಪೆಟ್ಟಿಗೆ ಕ್ರಯ ರೂ. ೧೦—೦—೦

ಹೆಚ್ಚಿಗೆ ರೆಕಾರ್ಡ್ ಬೇಕಾದರೆ, ಪ್ರತ್ಯೇಕ ರೆಕಾರ್ಡ್ ೧ಕ್ಕೆ ರೂ. ೧—೪—೦.

ಈ ತಿಂಗಳೊಳಗಾಗಿ ಕರೀಸಿಕೊಳ್ಳುವವರಿಗೆ ಪ್ಯಾಕಿಂಗ್ ಮತ್ತು ಟಪಾಲು ವಿರ್ಜು ಮುಫತ್ತಾಗಿ ಕಳುಹಿಸುವೆವು.

ವಿಳಾಸ— ಬ್ರಿಟಿಷ್ ಟ್ರೆಡಿಂಗ್ ಕಂಪನಿ,

ಪೋಸ್ಟ್ ಬಾಕ್ಸ ನಂ. ೧೨೨೩, ಮದರಾಸು

ಸ್ಟಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದ **ಸ್ಟಾಂಡರ್ಡ್ ಕಾಫಿಪುಡಿಯು** ಅತ್ಯಂತ ಮನೋಹರವೂ, ಚಿಕ್ಕದೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದ ಮಾಂಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮೋಹಕವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೮-೦.

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಸ್ವಾ ಜಾಲವಾದಿ.
ಸ್ಟೇಶನರ್ಸ, ಬಾಗಲಕೋಟೆ.
ರಾಜವೈದ್ಯ ನಾರಾಯಣಜಿ ಕೇತವಜಿ.
೫೬, ಚೀನಾಬಜಾರ್, ಮದ್ರಾಸು

ಬನಾರಸ್ ರೇಶ್ಮೀ ಸೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮ್ಹಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬೀೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದಮೊಳ ೧೫ ಅಗಲಿಮೊಳ ೩. ಧಾನು ೧೫ಕ್ಕೆ ೧೫ ರಿಂದ ೫೦ ಜರಿ ಸೀರೆಗಳು ೧೬ ೧೮ ಮೊಳ ಉದ್ದ ೧೫ಕ್ಕೆ ರೂ. ೨೫ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಸೀರೆ ೧೬-೧೮ ಉದ ಮೊಳ ೭ ೧೫ಕ್ಕೆ ರೂ. ೫೯ ರಿಂದ ೩೦೦ ರ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧೫ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದ ೬-೮ ಮೊಳ ಉದ್ದ ೧೫ಕ್ಕೆ ರೂ ೧೧ ರಿಂದ ೪೦ ರ ವರೆಗೆ. ಬಿಲ್ ರೇಶೆ ಜರೀಂದ ಪ್ಪಟಿ ಮೊಳ ಉದ್ದ ೧೫ಕ್ಕೆ ರೂ ೧೧ ರಿಂದ ೩೦ ರವರೆಗೆ ಸಾದಾ ಬಂಗಾಳಿ ರೇಶಿ ಶಾಲು ೬ ವೆಡಿಳ ಉದ ೩ ಮೊಳ ಅಗಲು ೧೫ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಪರ ೧೫ಕ್ಕೆ ರೂ ೧೦ ರಿಂದ ೧೦೦ ರ ವರೆಗೆ ಸುದರ್ಶನ ೧೫ಕ್ಕೆ ಅಚೆ ಲಂಡಿಂದ ರೂಪಾಯಿ ೧½ ರವರೆಗೆ ಜಗನ್ನಾಥಶಾಗಂಬಿ ೧೫ಕ್ಕೆ ರೂ ೨½ರಿಂದ 15 ರವರೆಗೆ ಮತ್ತು ಬೇರೆ ಬೇರೆ ದರ್ಜಾ ಎಗಳ ಕೆಟಲಾಗಇನಾಂ

ವಿಳಾಸ—ಸಿರೋಮಣಿ ನಾರಾಯಣಾಚಾರ್ಯ
ಕಂಪನಿ ಚಾಕೇಬಾ ಕಾತಿ ಬನಾರಸ್

For Ladies' and Gents' Insurance
in
The Gener l and Bharat Insurance Societies, Ltd.
and for
Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgical Instruments, and Drugs
(6) His Master's Voice Phonos, and Records
(7) Cycles, Stoves and Gas Lights
and
(8) Up-to-date Books

Apply to:—

B. S. Tantry. B A.
BAGALKOT.

ವರರು ಬೇಕಾಗಿರುವರು!

ವೇಸ್ಯಾ ಪಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಯಿಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲಕಿಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯರು—ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕಾರ್ಯಕ C/o- **ಕನ್ನಡಿಗ.**

ಶ್ರೀ ಗುರುಬಸವೇಶ್ವರ ನಾಟಕ ಕಂಪನಿ

೧೯೩೨ನೇ ಜನವರಿ ಒಂದನೇ ವಾರ ಹಾವನೂರದಲ್ಲಿ ನಡೆಯುವ "ದನಗಳ ಪ್ರದರ್ಶನ" ಕಾಲದಲ್ಲಿ, ಮೆಲ್ಕಂಡ ನಾಟಕ ಕಂಪನಿಯವರು ಮತ್ತು ಇದರ ಶಾಖೆಯಾದ ಬಾಲಕರ ಸಂಘವೂ ಸಹಾ, ಹಾವನೂರ ಮುನಿಸಾಫರ್‌ಖಾನೆ ಪಕ್ಕದಲ್ಲಿ ವಿದ್ಯುಚ್ಛಕ್ತಿ ದೀಪಗಳಿಂದ ಶೃಂಗಾರವಾಗಿ ಅಲಂಕರಿಸಲ್ಪಟ್ಟ ಎರಡು ನಾಟಕ ಮಂದಿರಗಳಲ್ಲಿ, ಅದ್ಭುತ ಟ್ರಾನ್ಸ್‌ಫರ್, ಮತ್ತು ಹೊಸಸೀನರಿಗಳಿಂದಲೂ, ಹೊಸ ಉಡುಪುಗಳಿಂದಲೂ, ಅವೇಷಭೂಷಣಗಳಿಂದಲೂ, ಅವೇಷಭೂಷಣಗಳಿಂದಲೂ ನಾಟಕಗಳನ್ನಾಡುವರು. ಇಂಥಾ ಸುಸಂಧಿ ಮತ್ತು ಅಪೂರ್ವ ಸಮಯವನ್ನು ಕಳೆದುಕೊಳ್ಳದೇ, ಸರ್ವರೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಶ್ರೀ ದತ್ತರಾಜ ಸಮರ್ಥ
ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ
ಗದಗ ಶ್ರೀದತ್ತಾತ್ರೇಯ ನಾಟಕ ಮಂಡಳಿಯವರು
ಬರುವ ಬನದ ಹುಣ್ಣಿಮೆಗೆ ಜರುಗತಕ್ಕ ಶ್ರೀಬನಶಂಕರಿಯಜಾತ್ರೆಗೆ

ಬರುವರು.

ಮತ್ತೂ ತಮ್ಮ ಚಿತ್ತಾಕರ್ಷಕವಾಗಿ ಜವತಿಯ ಜಂಗ್ಲಿ, ಪಾದಕಾಪಟ್ಟಾಭಿಷೇಕ, ಲಂಕಾದಹನ, ಸಂಪೂರ್ಣ ಕೃಷ್ಣಲೀಲೆ ಹೀಗೆ ನಾಲ್ಕು ನಾಟಕಗಳನ್ನಾಡುವರು. ದೇಶಬಂಧುಗಳು ಪ್ರೋತ್ಸಾಹಿಸಬೇಕೆಂದು ಕೋರಿಕೆ. ಸಂಘದೊಡೆಯ

ಸದಾಶಿವರಾವ ಗರೂಡ ಕರ್ನಾಟಕ
ನಾಟಕಾಲಂಕಾರ
ಅಭಿನಯ ಕೇಸರಿ.

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ } ೧ ರೂ. ಇಲ್ಲವೇ ೧೫ ನಂಬರಿಗೆ ಕಡಿಮೆ ಯಾಗದಂಥ ೪೦೦ ಯಾರ್ಡ ಕೈನೂಲು

ಪರಸ್ಥಳದವರಿಗೆ } ಮನಿಯಾರ್ಡರದಿಂದ ೧-೧೫-೦
ವಿ. ಪಿ. ಯಿಂದ ೨-೧-೦
ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦ ಯಾರ್ಡ ಕೈನೂಲು

ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ— } ಸ್ಥಳದವರಿಗೆ ೨-೦-೦
ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೫-೦
,, ವಿ. ಪಿ ಯಿಂದ ೩-೧-೦

ಸರಕಾರ, ಮುನಸೀ ಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ. } ಸ್ಥಳದವರಿಗೆ ೪-೦-೦
ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೫-೦
ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ



ಉಚಿತ! ಉಚಿತ!!! ಕೇವಲ ಪುಗಸಟ್ಟೆ!!

೧೯೨೬ನೇ ಜನವರಿ ೧೫ರಿಂದ ಪ್ರಾರಂಭ.

ನಾವು ನಿಮಗೆ ೫ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರವಾಗಿಯೂ, ರಮ್ಯವಾಗಿಯೂ, ಇಮವ ಹೊಸ ನಮೂನೆಯ "ರೋಲ್ಡ್ ಗೋಲ್ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬ ಮಾನವಾಗಿಯೂ ಕೊಡುತ್ತೇವೆ. ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂ

೧. ನೀವು ನಮಗೆ ರೂ. ೧-೯-೦ ಕೊಟ್ಟಲ್ಲಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ. ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು.

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಗಳನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್ನ ನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇವೆಂದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಳ್ಳೆಯ ರವ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಜರ್ಮನ್ ಅಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡುತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ಮೇಲೆ ಹೇಳಿದ ರೀತಿ ಕೆಲಸಮಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಒಕರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು. ಅಥವಾ ವಿ. ಪಿ ಮೂಲಕ ಕಳಿಸಿಕೊಳ್ಳಬಹುದು.

ಅನುಮಾನಿಸಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಳೆದುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನ ನೀವು ಪಡೆಯಬಹುದು

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಜರ್ಮನ್ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ. ೬-೪-೦ ಗಾಗಲಿ ಅಥವಾ ವಿ. ಪಿ. ಮೂಲಕವಾಗಲಿ ಪಡೆಯಬಹುದು.

ಟಿ. ರಾಮರಾವ್, ವಾಚ್. ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರ ಸಿಟಿ.

ಅಚ್ಚಾಗಿವೆ! ತರಿಸಿರಿ!!

ವಾಸುದೇವನ

ಕಾಸ್ತುಭಗಳು.

೧. ಇಂದಿರಾ. ೨-೮-೦

(ಸಚಿತ್ರ ಸಾಮಾಜಿಕ ಕಾದಂಬರಿ.)

೨. ಯದು ಮಹಾರಾಜ. ೧-೦-೦

(ಎಂಬ ವಿನೂತನ ಐತಿಹಾಸಿಕ ಕಾದಂಬರಿ.)

೩. ನೀಳ್ಕತೆಗಳು ಭಾಗ ೧ ೧-೪-೦

"ವಸಂತಯಾಮಿನಿ ಸ್ವಪ್ನಚಮತ್ಕಾರ" ನಾಟಕದ ಪ್ರತಿಗಳೆಲ್ಲವೂ ತೀರಿಹೋಗಿವೆ. ಉಳಿದವುಗಳು ಅಚ್ಚಿನಲ್ಲಿವೆ. ತ್ವರೆಮಾಡಿರಿ! ಬೇಕಾದವುಗಳನ್ನು ಬೇಗನೇ ತರಿಸಿಕೊಳ್ಳಿರಿ.

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್. ಅಂಚೇವಿಚಾರಿ.

ಸ್ವಾಮಿ, ರಾ, ಕೆರೂರ.

ಬಾಗಲಕೋಟೆ (ಜಿ| ವಿಜಾಪೂರ)

ಅತ್ಯಲ್ಪವಿವೆ ಉಚಿತ

ಕೇವಲ ಉಚಿತ ಕೇವಲ ಉಚಿ



"ತಾರಾ" ಲೀವರ್ ರಿಜಿಸ್ಟರ್ಡ್ ಪೊಕೆಟ್ ವೊಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತೃರು ಅಜ್ಞಾಪತ್ರ ಕೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟ್ರಿಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗೂ "ತಾರಾ" ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ೨೬೫ ಮದ್ರಾಸ

Three Successive Valuation Results Unsurpassed

The General Assurance Society Ltd.

AJMER.

Assets Exceed Rs 20,00,000 **BONUS** Claims Paid Over Rs. 10,00,000

Equal to the Highest ever Declared by any Indian Life Office.

31st March 1924 Whole Life (Deferred) Rs. 12 % per year.

31st December 1925 Whole Life (Immediate) Rs. 20 % per year.

31st December 1926 Whole Life (Immediate) Rs. 2/8/- % per year.

OFFICES AT

Agra,	Benares,	Lucknow,
Ajmer,	Colombo,	Lahore,
Allahabad,	Calcutta,	Madras,
Beawar,	Gujranwala,	Madura,
Bangalore,	Hubli	Patna,
Baroda	Hyderabad, Sind,	Rangoon.
Bellary,	Indore,	Rawalpindi.
Bombay,	Jullunder,	

Place your Assurance with this sound and progressive Office To-day You will be benefitted by the low premiums and the exceptionally high bonus additions.

WANTED AGENTS ON MOST LIBERAL TERMS.

Please Apply to:—P D SHARGOVA, F. S. S. Local Manager Ajmer.

OR

L. V RAMDURG Chief Agent, Hubli

ದಿ ಏಶಿಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಿಗೆ ಬಿ.

ಹ್ಯಾಬಿಟೆಸಿ

ಈ ಕಂಪನಿಯ ಬಾಂಡು ಹೊಂದಿದ ಗುಗಳ ಪಿಂಟಿ ಎತ್ತುವ ಕಮಮವರ್ಗಿಲ ನೆ ಇತಿಯ ಜಾಂಗರಿ ಕಾ ನೆ ಕಾಲಿ ಪಿನವ ಇಡಿಗಿ ಗಂಟೆಗೆ ಈ ಕಂಪನಿಗೆ ಹೆಸರ ಆಪಿಂ ಸಿನಲಿ ನಡೆದು ಕೆಳಗೆ ಕಾಣಿಸಿದ ಪರ ಪಪಡಿಸಿ ಒಪ್ಪಿ ನುತ್ತು ವತಿ ಇಲ್ಲದೆ ೧೦೦೦ ರೂ. ಪಾಲಸಿ ಕೊಡಿಸು ಬೇಕೆಂದು ನಿರ್ಣಯವಾಗಿರುತ್ತೆ.—

(೧) ಎಲ್. ಬಿ ಪಿ ನಂ ೨೬೬೬ ಪಲ್ಲು ಆಯಿ ಆಲ್ ಗರ ಬೆಲ್ಗಾಮಿ ಸುಪರೆಂಟಿಂಡೆಂಟ್ ಪೆಕೆ ಟಾನಿಸ್ ಹೈದರಾಬಾದ ಡೆಕ್ಕನ್, ರೂ ೧೦೧೦

(೨) ಎಲ್. ಬಿ ಪಿ ನಂ ೧೯೬೬ ವಾರಾಣಿ ವಿತ್ ಲೆಫ್ಟಿನಿಸರ ಹೆಚ್ ಆಸ್ ಡಿ ಈ ಪರಾನಿಕ ೧೧೬ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಪಿ ನಂ ೩೪೧೧ ರಾಮಚಂದ್ರಗೌಡ ಜನಿಂಡ ಶಿಂಧೋಳಿ. ಸಿವಿಜನಲ್ ಪಾರೆಪ ಆಫೀಸರ ಧಡೂ ರಾ. ಪಶ್ಚಿಮ ಮುಖಾನದೇಶ ರೂ ೬೦೦

(೪) ಬಾಂಡ ನಂಬರು ೭೫೧೦೬ ಕೆಂ ಜಿ ಪರಾಂ ಡೋ ವ್ಯಾಪಾರಪ ಬ್ಯುಕ್ಸಾಯಿಡ ಲಿಮೋನ, ಕೊಂ ಕಣಿಬೈಲ್. ರೂ ೧೦೦೦

(೫) ಬಾಂಡ ನಂಬರು ೧೫೩೬೫೫ ಎಸ್. ಜಿ ಚನ್ನರೆ ಅಸಿಸ್ಟಂಟ ಸೇಶನ್ಸ್ ಮಾಸ್ತರ ತೆಲಗಿ ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ವಿ ಆರಾದ, ಚೀಫ ಏಜಂಟ ಹುಬಳಿ (ಮುಂಬಯಿ ಇಲಾಖಾ)

ಉಬ್ಬಸ ಸಂಹಾರಿ

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ ಶುರುವಾದರೆ ಸೌಖ್ಯಪಡಿಸುವುದು ಒಳ್ಳೇಷ್ಟ ಇದು ಹೆಚ್ಚಾಗಿ ತಂದೆತಾಯಿಗಳಿಂದ ಮಕ್ಕಳಿಗೆ ಬರುವುದು ಸಹಜ. ಶುರುವಾದಾಗ ಬಹಳ ಭಯಂಕರವಾಗಿ ಕಾಣಿಸುವುದು ಶ್ವಾಸ ಪರಿಯಾಗಿ ಬಿಡಲಿಕ್ಕೆ ಆಗದೆ ಗಂಟ್ಲು ಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು ಯಿದೆಯಲ್ಲಿ ಬೆಕ್ಕುಕೂಗಿದಂತೆ ಗೊಯಿ ಗೊಯಿ ಯೆಂಬಶಬ್ದವು ಕೇಳಿಸುವುದು. ಹಾಸಿಗೆಯಮೇಲೆ ವೈಚಾಚಿಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು. ನಮ್ಮ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವದು. ಸಂದೇಹವೇ ಇಲ್ಲ ಅನುಪಾನಕ್ರಮ ಕನ್ನಡದಲ್ಲಿ ಔಷಧದಕೂಡೆ ಕಳಹಿಸಲ್ಪಡುವದು.

ಬಾಟ್ಲಿಗೆ ರೂ ೨-೮-೦ ವಿ- ಪಿ ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣನ್ ಬ್ರದರ್ಸ್ ಪೋಸ್ಟು ಬಾಕ್ಸ ನಂ. ೧೬೬ ಮದರಾಸು.

ಕಿರ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯಾವುದೇ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೆಗೆಯುವ ಭೂಮಿಗೂ ಇದರ ಉಪಯೋಗ ಬಹಳ. ಇದು ನಮ್ಮ ನೇಗಿಲು ನಂ ೧೮೦ ನೆಯದಂತೆ ಮಿಕ್ಕ ಉಪಯೋಗಕ್ಕೂ ಒದುವದು. **ರಚನೆಃ**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯುದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟಿ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಕವಣಿ ಇರುತ್ತವೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿ**— ೬ ಎಂದಲ ೮ ಎತ್ತುಗಳು ಬೇಕು. **ಸಾಲಿನ ಆಳಗಲಃ**— ೮ ರಿಂದ ೧೦ ಇಂಚ ಆಳ; ೧೨ ರಿಂದ ೧೪ ಇಂಚು ಅಗಲ. **ತೂಕಃ**—ಸರಾಸರಿ ೨೦೦ ಪೌಂಡು ಸಪ್ತುರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೫೫ ರೂಪಾಯಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

ಲಿಟ್ಲರ ಓರಿಯಂಟ್ಲ ಬಾಮ.

ನೋವು ಬಾಧೆಗಳ ನಿವಾರಣಾರ್ಥ!

೪೨ ವರ್ಷಗಳಿಂದ ಜಗತ್ತಿನ ತುಂಬ ಪ್ರಖ್ಯಾತಿಯನ್ನು ಪಡೆದ ಉಪಾಯವೆಂದರೆ ಇದೆ.

ಹಿಂದುಸ್ಥಾನದ ಅದ್ಭುತವಾದ
ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ, ಇದನ್ನೇ ಉಪಯೋಗಿಸಿರಿಃ—

ತಲೆಶೂಲಿ, ಸಂಧಿವಾತ, ಎಲ್ಲ ತರದ ಕಫ, ನರ ಕೊಡಕು, ಹರಿವಾತ, ಟೊಂಕನೋವು, ಅರ್ಧಾಂಗವಾಯು ಉಳುಕು ಬಳದದ್ದು

ಸ್ವಲ್ಪೇ ಮಟ್ಟಿನಿಂದ ಬಹಳೇ ಗುಣ. ಉರುಪು ಇಲ್ಲವೇಯಿಲ್ಲ. ಗುಳ್ಳೆಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ!

ಈ ದಿವಸವೇ
ಒಂದು ಬಾಟ್ಲಿ ಕೊಳ್ಳಿ!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡ ಜಗತ್ತು

ಪ್ರಯಕನಾಟಕ

(ಇಲ್ಲಿ ಕನ್ನಡ ನವಜೀವನವು ಸವಾವಿಷ್ಟವಾಗಿದೆ)

ಯಚ್ಚ ಪರವಶಂ ದುಃಖಂ । ಯಚ್ಚಾತ್ಮವಶಂ ಸುಖಂ ।। — ಮನು

ಸಂಪಾದಕರು— ಮುಂಗಳವೇಢೇ ರಾಜೇರಾಯರ ಮುಕ್ಕುಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಫಾಲ್ಗುಣ ಶುಕ್ಲ ೧೫ ಶಕೆ ೧೮೪೯ ತಾ॥ ೮-೧-೧೯೨೮. | Date 8 1—1928 | ಸಂಚಿಕೆ ೩೮

ಕನ್ನಡ ಬಂಧುಗಳೇ ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಲಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮುಕ್ತು ಜೋಡಿಸುವುದು ಅವುಗಳೊಳಗಿನ ಕಟ್ಟಪಟ್ಟ ಮುರಿದು-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ.ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯವದಿಲ್ಲೆಂಬವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದ ಹೊಳ್ಳಿರಿ !

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ : ಲಕ್ಷ್ಮಿನಿವಾರ ಪೇಠ ಲಾಯಿಡ್‌ಬ್ರಿಜ್ಜಿನ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೆಕಾಗುವ ಸಮಸ್ತ ಸೌಕರ್ಯಗಳನ್ನು ಅತಿ ಸ್ವಲ್ಪಾಕ್ಷಿಸಿ ನಮ್ಮಲ್ಲಿ ಮಾಗಲಿಕ್ಕೆ ಇಟ್ಟಿರುವೆವು- ಖಾತಾ ಪೆಂಸಿಲ್ಲಿಗೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುಕ್ತಾತ ಕೇಡುವ ಅರ್ಜಿ ಮೊದಲಾದ ಎಲ್ಲ ಸಮಸ್ತಗಳೂ ಇವೆ

ವ್ಯವಸ್ಥಾಪಕಃ—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಲೆ ೧ ರು ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಅಪರೂಪವಾದ ವನಸ್ಪತಿಗಳು ದೊರಕುವವು

ವೈದ್ಯಃ—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಸಾಧಾರಣವಾಗಿ ಕಂಗ್ರಾಮಗಳಲ್ಲಿ ಜನರಿಗೆ ಗಾಯವೂ, ಮೂರ್ಛೆಯೊದಲಾದ ಅಪಾಯಗಳೂ ಸಂಭವಿಸಿದಾಗ, ಜಲಗಂಡ, ಅಗ್ನಿಗಂಡ, ವಿಷಭಕ್ಷಣ ರಕ್ತಸ್ರಾವ, ಹಾವು, ಹುಚ್ಚುನಾಯಿ, ಚೇಳು ಮುಂತಾದವುಗಳು ಕಚ್ಚಿದಾಗ, ಅಕಸ್ಮಾತ್ತಾಗಿ ಬೇಹೆದಲ್ಲಿ ಅಸ್ವಸ್ಥತೆಯು ಸಂಭವಿಸಿದಾಗಲೂ, ಸಮೀಪದ ವೈದ್ಯರ ಸಹಾಯವು ದೊರೆಯುವುದು ಕಷ್ಟವಾಗಿದೆ. ಹಾಗೆ ಒದಗದೆ ಹೋದಾಗ, ರೋಗಿಯನ್ನು ವೈದ್ಯರಿರುವಲ್ಲಿಗೆ ಕೊಂಡುಹೋಗುವವರಿಗೆ ಯಾ ವೈದ್ಯರನ್ನು ಕರೆತರುವವರಿಗೆ ಯಾವತರದ ಚಿಕಿತ್ಸೆ ಮಾಡಬೇಕೆಂದು ತಿಳಿಯದೆ, ಅನೇಕ ಜನರು ಅಪಾಯಗಳಿಗೆ ಗುರಿಯಾಗುವದು ಬಹಳ ಸಾಧಾರಣ, ಅಲವ ಸಾರಿ ಮರಣವನ್ನುಕೂಡ ಹೊಂದುವುದುಂಟು. ಇಂಥಾ ಕಷ್ಟಗಳಿಗೆ ಒಳಪಡದಹಾಗೆ ಮದ್ರಾಸು ಪಟ್ಟಣದಲ್ಲಿರುವ ರಾವ್ ಸಾಹೇಬ ಡಾಕ್ಟರ್, ಯು. ರಾಮರಾವ್ ಇವರು ಪ್ರಥಮ ಚಿಕಿತ್ಸೆ ಯೆಂಬ ಪುಸ್ತಕವನ್ನು ರಚಿಸಿದ್ದಾರೆ. ಈ ಪುಸ್ತಕದಲ್ಲಿ ಮೇಲೆ ಹೇಳಿದ ಅಕಸ್ಮಾತ್ತಾಗಿ ಸಂಭವಿಸುವ ಅಸ್ವಸ್ಥತೆಗೆ ಮಾಡಬೇಕಾದ ಚಿಕಿತ್ಸೆಯನ್ನು ಬಹಳ ಸುಲಭವಾದ ಕನ್ನಡದಲ್ಲಿ ೧೨೫ ಚಿತ್ರಪಟಗಳೊಡನೆ ಬರೆದಿರುವರು. ಈ ಪುಸ್ತಕವನ್ನು ಓದಿ ತಿಳಿಕೊಂಡರೆ ಅನೇಕ ತರದ ಅಕಾಲಮೃತ್ಯುಗಳನ್ನು ಪರಿಹರಿಸಬಹುದಲ್ಲದೆ ವ್ಯರ್ಥವಾಗಿ ಮರಣಹೊಂದುವ ಜನರ ಜೀವವನ್ನು ಕೂಡ ಉಳಿಸಿ ಪುಣ್ಯಸಂಪಾದಿಸಬಹುದು.

ಪುಸ್ತಕದ ಬೆಲೆ ಆಣೆ ೧೫ ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ—ಶ್ರೀಕೃಷ್ಣನ್ ಬ್ರದರ್ಸ ೩೫೩ ತಂಬುಚೆಟ್ಟಿ ಬೀದಿ, ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗಃ— ನಮ್ಮ ಯಾವಕ್ಕೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯರಿಯ ಭೂಮಿ, ಪಡಿ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದ ನಮ್ಮ ನೇಗಿಲು ನಂ೪೧೦ ನಿಯಂತೆ ವಿ.ಕ್ಕ ಉಪಯೋಗಕ್ಕೂ ಒರುವದು. **ರಚನೆಃ**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯುದಂತೆ 'ಟಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟಿ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಇರುತ ನೆ. ಇದಕ್ಕೆ ತಿರುಗುವ ಕುಳವಿರುತ್ತದೆ. **ಎಳೆಯುವ ಶಕ್ತಿಃ**— ೬ ಎಂದಲ ಎತ್ತುಗಳು ಬೇಕು. **ಸಾಲಿನ ಆಳಗಲಃ**— ೮ರಿಂದ ೧೦ ಇಂಚು ಆಳ; ೧೦ರಿಂದ ೧೪ ಇಂಚು ಅಗಲ. **ತೂಕಃ**—ಸಂತಾಸರಿ ೨೦೦ ಪೌಂಡು ಸವಿಸ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೫೫ ರೂಪಾಯಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷದಲ್ಲಿ ಇಡಿರಿ.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಸೂಲಿ, ಸಂಧಿವಾತ, ಎಲ್ಲತರದ ಕಸ. ನರ ತೊಡಕು, ಹಿಮವಾತ ಪೊಂಕನೋವು, ಅರ್ಧಾಂಗವಾಯು ಉಳುಕು (ಪಳದದ್ದು)

೪೦ ವರ್ಷಗಳಿಂದ ಈ ಔಷಧವು ಜಗಪ್ರಸಿದ್ಧವಾಗಿದೆ.

ಸ್ವಲ್ಪದಂದಲೇ ಗುಣ ಬರುವದು.- ಒಂದೇ ಕಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳಿ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮತ್ತು ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಠ ನಂ ಬಿ ೧೯೪೭೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡ ಜಯಕರ್ನಾಟಕ.

(ಇದರಲ್ಲಿ ಕನ್ನಡ ಸರಜೀವನವು ಸಮಾವಿಷ್ಟವಾಗಿದೆ)

ಯಥಾ ಧರ್ಮಾಃ ಕೃತಾ ಪೂರ್ವೈಃ ಪ್ರಜಾಸಾಸಕಾಃ ತಥಾ ಸಮ್ಯ — ಮನು

ಸಂಪಾದಕರು— ಮಂಗಳವೆ ಧೋ ಬಂಜೆ ರಾಯರ ಮುಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ಭಾನುವಾರ ಮಿತಿ ೩೫ ಜನವರಿ ೧೯೨೮ ಕ್ರಿ ಶಕ ಗುರುವಾರ ತಾರೀಖು ೧೭ ಮಾರ್ಚ. ೧೮—೧—1928 | ಸಂಚಿಕೆ ೫೯

ಕನ್ನಡ ಬಂಧುಗಳೇ ಈ ಸಂಬಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ಮುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ. ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ, ಪಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯುಕ್ತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕಟ್ಟಳೆಗಟ್ಟಿ ಮುರಿದು-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದ ಇತ್ಯಾದಿವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವವು ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಳಿಯು ಇದಿಲ್ಲ.ನಾವಿಕ ರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಕಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯ ಏರ್ಪಾಡು ಸಂಭವಿಸಿದ್ದು, ಮನಸಿಗೆ ಸೊಗಸುವಂತಿರುವದು ಖಚಿತವಿದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದು.ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪು ! ಹೆಚ್ಚಿನ ವಿವರಕ್ಕಾಗಿ ತಿಳಿಸುವ ಬರೆದ ಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಲಕ್ಷ್ಮೀನಿವಾರ ಪೇರ ಲಾಯಿಡ್ಸ್ರಿಜ್ಜದ ಹತ್ತಿರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಖಾತೆ ಪೇಂಠೇರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಕೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ:—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಮಾಯುರ ತೈಲ

ದುರ್ಲಭವಾದ ವನಸ್ಪತಿಯು. ಇದು ಹೋಲೆ ಗಾರುಡಿ ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಅಪೂರ್ವವಾದ ವನಸ್ಪತಿಗಳು ದೊರಕುವವು

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ವಳ್ಳಿ, ನಾರಾಯಣಜ್ಜಾ, ಜಸವರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ವಸ್ತ್ರ, ಬಿಳಿಕಲ್ಲು, ಗೌರಿಬಿದನೂರು, ದಾನ ಗಾಂಧಿಯವರಂಥ ವಿಭೂತಿಗಳ ಅತ್ಯುತ್ತಮವಾದ ಒತ್ತಿ ತೆಗೆದ ಹಾಗೂ ಒಳ್ಳೆ ಲಲಿತಭಾವ ಕಟ್ಟು ಕಾತಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧ ಪಡಿಸಿರುತ್ತೇವೆ. ಪ್ರತಿಯೊಂದು ಕಟ್ಟೂ ಒಕ್ಕೆ ಇವ ನಿಜವಾಗಿಯೂ ಅಂಕಾರಗಳೇ ಸರಿ. ಅದರಂತೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವ ತಕ್ಕ ವಸ್ತುಗಳಾಗವೆ. ಅಲ್ಲದೆ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಒರೆದುಕೊಳ್ಳಿ!

ದಿ ಇಂಡಿಯನ್ ಜ್ಯಾವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ ಬೀ. ಯವರ ಸುಲಭ ಕ್ರಯ!!

ಸುಗಂಧನಶ್ಯದ ಪುಡಿ.

Registerd Trads mark

ಪ್ರಸಿದ್ಧವಾದ ಈ ಸುಗಂಧನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ವಂದಿಗಳು ಇದನ್ನು ಉಪಯೋಗಿಸಿ ಸಾವಿರ ಕಂಠಗಳಿಂದ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿಸಿಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗುವಕ್ಕ ಸರ್ವ ವಾಧಿಗಳು, ಜಿಲ್ಲಡಿಷ, ಮಂಡಾಗಾ ವಾಧಿಗಳು ಪರಿಹಾರವಾಗುವದಲ್ಲದೆ ಕಾಲಕ್ಕೆ ತೀಲ್ಲ ಟ್ಟಿಕ್ ವಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುವಾಡುತ್ತದೆ. ವೂರು ಬೆಲ್ಲ ನ ಧಾರಣ ನಶ್ಯದ ಸಂಗತ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ವಿಶೇಷತೆಯನ್ನು ಪಡಿಸಿದರೆ ಎಲ್ಲೂ ಸಮಾನವಾಗುವದು. ಇವನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬಾಟ್ಲಿ ಒಂದಕ್ಕೆ ಕೈಮುಳ ಆಣೆ, ವ್ಹಿ. ಪಿ ಳ ಆಣೆ. ಡಜನ್ ೧೮ ಕ್ರಯ ರೂ ೨—೮—೦, ವ್ಹಿ. ಪಿ ಚಾರ್ಜು ಳ ಆಣೆ.

ಏಳಸಃ— ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,

ಪೋ. ಬಾ. ೫೧೧೦, ಪಾರ್ಕ್‌ಟೌನು, ಮದರಾಸು.

☞ ದಯವಾಡಿ ನಮ್ಮ ಹೆಸರನ್ನು, ಆಕ್ಷೇಪನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ಕನ್ನಡಿಗ.

ಬಾಗಲಕೋಟೆ- ಕನ್ನಡಿಗ ಪುಷ್ಪ ಬಹುಳ ೮ ಶಕೆ ೧೮೮೯

ಸಂಪಾದಕರ ಭೂವಿ

ನಿನ್ನ ಮನಸಿನ ಮೇಣವಾಡಿ ಕಟ್ಟುವೆನಾನು।
ನಿನ್ನ ಚಿಸನವಮಾಡಿದಂಥ ಮುಳ್ಳಿದೊಮ್ಮೆ।
ಚಿನ್ನದಾದರು ನಿನ್ನ ಮೇಣಬಸ್ತಿಯ ನೊಂದು ಚಿನ್ನಯಃಕಾಶದಲ್ಲಿ॥
ನಿನ್ನ ದೇಹವ ನಿನ್ನ ವೀರಕಾಸನಕಾಗಿ।
ಕನ್ನಸನ್ನು ಕಲಿಸಾಗಿ ನಿಲ್ಲಿಸಲು ನಿಷ್ಠವಿದೆ।
ಕನ್ನಪ್ರಾಣವು ನಿನ್ನ ಗಂಧವನು ವೀರಬಹ ಗಂಧವಹನೆಂದು ತಿಳಿಯೇ
—ಅಂದಕಾಶನಯ ದತ್ತ

ರಾಷ್ಟ್ರೀಯ ಸಭೆಯಾಯಿತು ಮುಂದೆ? ಮದ್ರಾಸದ ರಾಷ್ಟ್ರೀಯ ಸಭೆಯಾಗಿ, ಎರಡುವಾರಗಳು ಕಳೆದುಹೋದವು. ರಾಷ್ಟ್ರೀಯಸಭೆಯನಿರ್ಣಯಗಳಿಗೆ, ಬೆಂಬಲವನ್ನಿತ್ತ ನಮ್ಮ ಪ್ರತಿನಿಧಿಗಳು ತಿರುಗಿಬಂದೂ ೮-೧೦ ದಿನಗಳಾದರೂ, ನಮ್ಮನಾಡಿನಲ್ಲಿ ಯಾವಕಾರ್ಯಕ್ರಮದ ಸುಳಿವೂ ಕಾಣಲಿಲ್ಲವು. ರಾಷ್ಟ್ರೀಯ ಸಭೆಯ ಧೋರಣವೇ ನಮ್ಮ ಧೋರಣವು ಎಂದು ಸಾರಿದ, ಕನ್ನಡಿಗರು ಆ ನಿರ್ಣಯಗಳಿಗೆ ನಮ್ಮ ಪ್ರಾಂತದಲ್ಲಿ ಮೂರ್ತಸ್ವರೂಪವನ್ನು ಕೊಡುವದು ಅನಿವಾರ್ಯವಲ್ಲವೆ?

ರಾಷ್ಟ್ರೀಯಸಭೆಯ ನಿರ್ಣಯಗಳು, ನಮ್ಮ ಪ್ರಾಂತದಲ್ಲಿ ಹೇಗೆ, ಪ್ರಚಾರ ಮಾಡಬೇಕೆಂಬುದನ್ನು ತೀವ್ರವಾಗಿ ವಿಚಾರಿಸಿ, ಈವರ್ಷದ ಕಾರ್ಯಕ್ರಮವನ್ನು ಗೊತ್ತುಮಾಡುವದು, ಅವಶ್ಯವಿದೆ. ಯಾಕೆಂದರೆ- ಸಾಯಮನ್ ಕಮೀಶನವು ತೀವ್ರವಾಗಿಯೇ ಬರತಕ್ಕದ್ದದೆ ಅದಕಂಬಳಗಾಗಿಯೇ ನಾವು ನಮ್ಮ ಒಡಕುಗಳನ್ನೆಲ್ಲ ಕಳೆದು ಕೊಂಡು, ಅವರ ಸಂಗಡ ಹೋರಾಡಲು ಸಜ್ಜಾಗಬೇಕಾಗಿದೆ. ಆದುದರಿಂದ ಕನ್ನಡಿಗರು ತೀವ್ರವಾಗಿಯೇ ಕಾರ್ಯೋನ್ಮುಖರಾಗಬೇಕೆಂದು ನಮ್ಮ ಆಗ್ರಹದವಿನಂತಿಯದೆ

ರಾಷ್ಟ್ರೀಯಸಭೆಯ ಕಾರ್ಯಕ್ರಮವನ್ನು ಅಮಲಿನಲ್ಲಿ ತರುವಾಗ ನಮ್ಮ ಪ್ರಾಂತದ ಮುಖಂಡರು ಇಲ್ಲಿಯ ಪರಿಸ್ಥಿತಿಯ ಕಡೆಗೆ ಸಂಪೂರ್ಣವಾಗಿ ಲಕ್ಷ ಕೊಡಬೇಕು. ಆ ನಿರ್ಣಯಗಳನ್ನು ನಮ್ಮ ಪ್ರಾಂತಕ್ಕೆ ಹೇಗೆ ಅನ್ವಯಿಸಿಕೊಳ್ಳಬೇಕೆಂಬುದನ್ನೂ ಸೂಕ್ಷ್ಮವಾಗಿ ವಿಚಾರಿಸಿಕೊಳ್ಳಬೇಕು.

(೧) ನಮ್ಮ ದೃಷ್ಟಿಯಿಂದ, ಹಿಂದೂ ಮುಸಲ್ಮಾನರ ಪ್ರಶ್ನೆಯು ನಮ್ಮ ಪ್ರಾಂತಕ್ಕೆ ಅಷ್ಟುಮಹತ್ವದ್ದಿಲ್ಲ ಅಲ್ಪ ಸ್ವಲ್ಪ ಕಡೆಗೆ ಜಾಕ ಮಕಿಗಳಾಗಿದ್ದರೂ, ಉತ್ತರ ಹಿಂದುಸ್ತಾನದಷ್ಟು ಇಲ್ಲಿ ಭೀಕರವಾಗಿಲ್ಲ ಅದರೆ ಈ ತೀರ್ಮಾನದ ಮುಖ್ಯ ಉದ್ದೇಶವು ನಮ್ಮ ನಮ್ಮಲ್ಲಿಯ ಒಡಕುಗಳನ್ನು ಹೋಗಲಾಡಿಸಿ, ರಾಷ್ಟ್ರೀಯ ಯುದ್ಧಕ್ಕೆ ಸಿದ್ಧವಾಗುವದೇ ಇರುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದರೆ, ನಮ್ಮ ಮುಖ್ಯಾಂತರ್ಗ ಈ ತೆರನಾದನ್ನು ನಮ್ಮ ಪ್ರಾಂತದಲ್ಲಿ ಅಮಲಿಸಲ್ಲಿ ತರಬೇಕಾದರೆ, ಇಲ್ಲಿಯ ಬ್ರಾಹ್ಮಣ ಬ್ರಾಹ್ಮಣೇತರ ಲಿಂಗಾಯತಬ್ರಾಹ್ಮಣ, ಮೊದಲಾದ ಒಡಕುಗಳನ್ನು ದೂರಮಾಡುವದೇ ನಮ್ಮ ಆಧ್ಯಕರ್ತವ್ಯ

(೨) ಜೆನ್ನು ಎಂಡಯೇ ಮುಖ್ಯವಾದ ಕಾರಣವೆಂದರೆ, ಸಾಯಮನ್ ಕಮೀಶನ್ನಿಗೆ ಬಹಿಷ್ಕಾರವು ಈ ಕಾರ್ಯದ ಸಲುವಾಗಿ ಕರ್ನಾಟಕ ಪ್ರಾಂತದ ಕಾಂಗ್ರೆಸ್ ಕಾರ್ಯಕರ್ತರಲ್ಲಿಯ ಕರ್ನಾಟಕದ ದೊಡ್ಡಗಿನ ಎಲ್ಲವಕ್ಷದ ಜನರು, ಹಾಗು, ಕೌನ್ಸಿಲ ಮುಖಂಡರ ಸಭೆಕರೆದು, ಮದ್ರಾಸಿನಲ್ಲಿ ಶ್ರೀನಿವಾಸ ಅಯಂಗಾರರು ಮಾಡಿದಂತೆ ಎಲ್ಲರೂಕೂಡಿ ಬಹಿಷ್ಕಾರದ ಕಾರ್ಯಕ್ರಮವನ್ನು ಹೇಗೆ ಕೊನೆಗಾಣಿಸಬೇಕೆಂಬುದನ್ನು ನಿರ್ಣಯಿಸಿ, ತೀವ್ರವಾಗಿ ಕಾರ್ಯೋನ್ಮುಖರಾಗಬೇಕು. ಅಂದರೆ ಕಾರ್ಯಕ್ರಮವು ಯಶಸ್ವಿಯಾಗುವದೆಂದು ನವಗೆ ವಿಶ್ವಾಸಕ್ಕದೆ

ಆ ಮೇಲೆ ಮಹತ್ವದ ವಿಷಯವೆಂದರೆ, ಬ್ರಿಟಿಶ ಮಾಲಿನ ಬಹಿಷ್ಕಾರ, ನಮ್ಮ ಪ್ರಾಂತದಲ್ಲಿ, ಬರುವ ಸಂಕಟಗಳನ್ನು ನೋಡಿಕೊಂಡು, ಯಾವ ಯಾವ ಸಾಮಾನುಗಳ ಮೇಲೆ ಬಹಿಷ್ಕಾರ ಹಾಕಬೇಕೆಂಬುದನ್ನು ನಿರ್ಣಯಮಾಡಬೇಕು, ಮತ್ತು ಈ ಬಹಿಷ್ಕಾರವು ಯಶಸ್ವಿಯಾಗುವಂತೆ, ಪ್ರಚಾರಕಾರ್ಯವನ್ನು ಒಳ್ಳೇ ಜೋರಿನಿಂದ ನಡೆಸಬೇಕು. ಕರ್ನಾಟಕದ ಸಂಗಡಕೊಂಡಿಗಳಲ್ಲಿಕೂಡ ಈ ಬಹಿಷ್ಕಾರದ ಧ್ವನಿಯು ಕೇಳಬರಬೇಕು-

ಈ ಎಲ್ಲ ಕಾರ್ಯಕ್ಕಾಗಿ, ಪ್ರಾಂತಿಕ ಕಾಂಗ್ರೆಸ ಕಮೀಟಿಯವರು, ಒಂದು ಪ್ರಚಾರಕ ಮಂಡಲವನ್ನು ನೇಮಿಸಿ, ಈ ಬಹಿಷ್ಕಾರ್ಯಗಳನ್ನು ಯಶಸ್ವಿಯಾಗಿ ಮಾಡಬೇಕೆಂದು ನಮ್ಮ ಆಗ್ರಹದ ಸೂಚನೆಯದೆ. ಈ ಕಾರ್ಯಕ್ರಮವನ್ನು ಸೇವಾದಲವು ಕೈಕೊಂಡರೆ, ಒಳಿತಾಗುವದೆಂದು ನಮಗನಿಸುತ್ತದೆ 'ಎನೇ ಆಗಲಿ' ಕರ್ನಾಟಕದ ಎಲ್ಲ ಮುಖಂಡರು ಒಟ್ಟಿಗಳಿತು, ಈ ಎಲ್ಲ ಕಾರ್ಯಕ್ರಮಗಳನ್ನು ತೀವ್ರವಾಗಿಯೇ ಕೈಕೊಂಡು, ಕರ್ನಾಟಕವು ನಿಜವಾಗಿಯೂ, ರಾಷ್ಟ್ರೀಯ ಧೋರಣವನ್ನೇ ಯಾವಾಗಲೂ ಅನುಸರಿಸುತ್ತದೆ. ಎಂಬುದನ್ನು ಕೃತಿಯಿಂದ ತೋರಿಸಬೇಕೆಂದು ಪ್ರಾರ್ಥನೆ

ಇದು ರಾಷ್ಟ್ರೀಯ ರಾಜಕೀಯ ಪರಿಷತ್ತುಗಳ ಮಾತಾಯಿತು ....ಎಂಟನೆಯ ದಕ್ಷಿಣ ಬ್ರಾಹ್ಮಣ ಪರಿಷತ್ತಿನಲ್ಲಿಯೂ ಇಷ್ಟೇ ಮಳತ್ವದ್ದಾಗಿರುವದುನಿಸದ್ಯದ ನವ ಬ್ರಾಹ್ಮಣ ಸಮಾಜವು ಅನೇಕ ಮತಪಂಗಡಗಳಿಂದ ಹರುದು ಹಂಚಿ ಹೋಗಿದೆ. ಬ್ರಾಹ್ಮಣ ಸಮಾಜವನ್ನು, ಒಟ್ಟು ಸಮಾಜದ ಹಿತದ ಕೆಲಸಗಳಿಗಾದರೂ ಒಂದು ಗೂಡಿಸುವ ಪರಿಷತ್ತಿನ ಪ್ರಚಾರವು ಸ್ತುತ್ಯವಾಗಿದೆ. ಇದರಂತೆ ವಿದ್ಯೆಯ ಹೆಸರಿನಿಂದ ಕೊಡುವ ಈಗಿನ ಗಿಳಿ ಓದನ್ನು ನವ ನಿಷ್ಪಲವೇ ಬಿ.ಕು. ಇದರಿಂದ ನಮ್ಮ ಸಂಸ್ಕೃತಿಗೂ ಧರ್ಮಕ್ಕೂ ಹಾನಿ ಒರುವದೆಂಬುದು ಎಲ್ಲರಿಗೂ ತಿಳಿದ ಮಾತು. ಪೂರ್ವ ಕಾಲದಲ್ಲಿ ವಿದ್ಯೆ—ಆಶ್ರಮೋನ್ನತಿಗಳಲ್ಲಿ ನಿರತರಾದ ನಮ್ಮ ಪೂರ್ವಜರು ಆರ್ಥಿಕ ಉನ್ನತಿಯ ಕಡೆಗೆ ಲಕ್ಷ್ಯ ಕೊಡದಿದ್ದರು ಅಷ್ಟು ತಪ್ಪಲ್ಲ. ಅವರಿಗೆ ರಾಜಾಶ್ರಯದ ಬೆಂಬಲವಿತ್ತು ಈಗ ಅದರ ನಿರ್ವಾಹದ ಮಟ್ಟಿಗಾದರೂ ಬ್ರಾಹ್ಮಣ ಸಮಾಜದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದು ಅವಶ್ಯವಿದೆ. ನವಕರಿಗಾಗಿ ಪರಕೀಯರ ದಾಸರಾಗಬೆ ಆಸಕ್ತರು ಎಂದು ಒಕ್ಕಲಕ ನ-ವ್ಯವಸಾಯಗಳನ್ನು ಬ್ರಾಹ್ಮಣ ವರ್ಗದವರು ಕೈಕೊಳ್ಳಬೇಕೆಂಬ ಪರಿಷತ್ತಿನ ಉದ್ದೇಶವಾದರೂ ಸ್ತುತ್ಯವಾಗಿದೆ; ಈ ಉದ್ದೇಶಗಳನ್ನೆಲ್ಲ ವೆರಿಸುವದಕ್ಕಾಗಿ ಕಮೀಟಿಯೊಂದನ್ನು ನೇವಿಸವದಲ್ಲದೆ ಒಂದು ಮಾಸಿಕವನ್ನಾದರೂ ಹೊರಡಿಸುವ ಆಲೋಚನೆ ಮಾಡಿರುವರು. ಈ ಕಾರ್ಯಕ್ಕಾಗಿ ಪರಿಷತ್ತಿನ ಕಾರ್ಯದರ್ಶಿಗಳನ್ನು ನಾವು ಅಭಿನಂದಿಸುವಿವು. ಹಾಗೂ ಬೆರೆಬೆರೆ ಕಡೆಗೆ ಸ್ಥಾಪಿಸವಾದ ಬ್ರಾಹ್ಮಣ ವಿದ್ಯಾರ್ಥಿಗಳೊಜನೆ ಸಕಾರದಿಂದ ನಡೆದು ಸಮಾಜದ ಉದ್ಧಾರಕ ಕರ್ಮವನ್ನು ಯಶಸ್ವಿಯಾಗಿ ಮಾಡಬೇಕೆಂದು ನಮ್ಮ ಸೂಚನೆಯು.

ಪ್ರೊ॥ ಕೇಶವಯ್ಯಂಗಾರರು ಮೈಸೂರ ವಿಶ್ವವಿದ್ಯಾಲಯದ ಸಭಾಸದರಿಗೆ ಒರೆದ ಕೊಂಡ ಸೂಚನಾ ಪತ್ರಿಕೆಯನ್ನು ಹಿಂದಿನ ಸಂಚಿಕೆಯಲ್ಲಿ ಮುದ್ರಿಸಿರುವೆ. ಅವರು ಕೇಳಿದಂತೆ ವಿಶ್ವವಿದ್ಯಾಲಯದಲ್ಲಿ ಮಾತೃಭಾಷೆಗೆ- ಕನ್ನಡಕ್ಕೆ ಪ್ರಧಾನಸ್ಥಾನವು ದೊರೆಯಬೇಕೆಂಬ ವಾ ಅವಶ್ಯವೆ ದು ಸೂಜ್ಞ ರಾದ ವಾಚಕರಿಗೆ ಹೊಳೆಯದಿರದು. ಇತ್ತೀಚೆಗೆ ಜಾಗೃತವಾದ ಕರ್ನಾಟಕದ ದೃಶ್ಯಫಲಗಳಲ್ಲಿ- ಮಾತೃಭಾಷೆಗೆ- ಕನ್ನಡಕ್ಕೆ- ವಿಶ್ವವಿದ್ಯಾಲಯದಲ್ಲಿ ಆಶ್ರಯ ದೊರಕಿಸುವ ವಾ ಒಂದಾಗಿರುವದು ಆದರೆ ಈ ಆಶ್ರಯವು ಅಷ್ಟೊಂದು ತೃಪ್ತಿ ರವಾಗಿರುವದಿಲ್ಲವೆಂಬದು ಖೇದದ ಆದರೆ- ನಿಜವಾ ಸಂಗತಿಯಾಗಿರುವದು ಸದ್ಯದ ಆಶ್ರಯವು ಮಲತಾಯಿಯು ತುಲಾಮಕ್ಕಳ ವೇಲೆ ಮಾಡುವ ಮಮತೆಯಂತಿರುವದು. ಈಗಿನ ಬಿ ಎ ಪರೀಕ್ಷೆಯೊಂದನೇ ನಾವಿದರು ಯಾಗಿ ತೆಗೆದುಕೊಳ್ಳುವಾ ಕನ್ನಡವು ಇದರಲ್ಲಿ ಪ್ರಧಾನ ವಿಷಯವಾಗದ. ಆರೆಂಟು ನೂರು ಗುಣಗಳಲ್ಲಿ ಇನ್ನೂರು ಗುಣಗಳು ಮಾತ್ರ ಮಾತೃಭಾಷೆಯ ಸಲುವಾಗಿ ಪಾವಾಗಬೆ ಕೆಂಬ ನಿರ್ಬಂಧವೂ ಕೂಡಾ ಇರುವದಿಲ್ಲ ಮಾತೃಭಾಷೆ ಎನ್ನುವ ಅರ್ಥಕ್ಕೆ ಸಲು ಇವೆರಡು ಸಂಗತಿಗಳು ಸಾಕು ಹೀಗಾದ ಮೇಲೆ ಅಸ್ಥೆಯಿಂದ ಅದರ ಅಭ್ಯಾಸವನ್ನು ಮಾಡುವವರಾರು?

ಪ್ರೊ॥ ಕೇಶವಯ್ಯಂಗಾರರು ಕೇಳಿರುವ ಯಿರಡನೇ ಬೇಡಿಕೆಯಂದರೆ-- ವಿಶ್ವವಿದ್ಯಾಲಯದಲ್ಲಿ ಕನ್ನಡ ಸಂಘವೊಂದನ್ನು ಕೂಡಲೆ ಸ್ಥಾಪಿಸುವದು. ಇಂಥ ಸಂಘಗಳ ಅವಶ್ಯಕತೆಯು ಅವರು ತೋರಿಸುವ ಕಾರಣಗಳಿಂದ ಸ್ಪಷ್ಟವಾಗುವಂತಿದೆ ಈಗ್ಗೆ ಶಾಲೆ ಕಾಲೇಜುಗಳಲ್ಲಿ ಕೊಡುವ ಶಿಕ್ಷಣದಲ್ಲಿ ಹೆಚ್ಚು ಭಾಗವು ಪರಭಾಷೆಯಾದ ಇಂಗ್ಲೀಷದಲ್ಲಿ ಕನ್ನಡವನ್ನು ಕೂಡ ಇಂಗ್ಲೀಷ ಭಾಷೆಯಲ್ಲಿ ಕಲಿಸುವ ವೈಚಿತ್ರ್ಯವು ಇನ್ನೂ ಅಪರೂಪವಾಗಿಲ್ಲ ಹೀಗೇಕೆ?- ಎಂದು ಕೇಳಿದರೆ ಏನೇನೂ ನೆವವನ್ನು ಮುಂದೆ ನೂಡುವರು ಗಣಿತ, ಭೂಗೋಲ ಮೊದಲಾದ ಶಾಸ್ತ್ರೀಯವಾದ ವಿಷಯಗಳನ್ನು ಕನ್ನಡದಲ್ಲಿ ಕಲಿಸಲು ಅನುರೂಪವಾದ ಗ್ರಂಥಗಳ ಕೊರತೆಯಿರುವದೆಂದು ಹೇಳುವರು. ಸಾಧ್ಯವಿದ್ದಕ್ಕೆ ಇದು ನಿಜವೆಂದು ತೋರಿದರೂ- ಶ್ರೀ ಕೇಶವಯ್ಯಂಗಾರರು ಸ್ಥಾಪಿಸಬೇಕೆನ್ನುವ ಕನ್ನಡ ಸಂಘಗಳಿಂದ ಈ ಕೊರತೆಯು ಸುಲಭವಾಗಿ ಅಲ್ಪಕಾಲದಲ್ಲಿ ದೂರವಾಗುವದೆಂಬದನ್ನು ಅವರು ಸ್ವತಂತ್ರವಾಗಿ ತಿಳಿಸಿ ಹೇಳಿದುವರು ಜಪಾನದ ಉದಾಹರಣೆಯೂ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಉದಾಹರಣೆಯೂ ಇದಕ್ಕೆ ಸಾರಿ ಹೇಳುವವು ಸಾಬರಮತಿಯಲ್ಲಿಯ ಮಹಾತ್ಮಾಜಿಯವರ ಆಶ್ರಮದಲ್ಲಿ, 'Calculus' ಮೊದಲಾದ ಬಿಕ್ಕಟ್ಟಿನ ವಿಷಯಗಳನ್ನೂ ಕೂಡ ಸಮಾನವಾದ ಹಿಂದೀ ಪಾರಿಭಾಷಿಕ ಶಬ್ದಗಳಲ್ಲಿ ಕಲಿಸುವರೆಂದು ನಾವು ಕೇಳಿರುವೆವು. ಇದಿಲ್ಲವೇ ಸಂಘದ ಸದಸ್ಯರ ಸ್ವಧಿನದಲ್ಲಯೇ ವಿದ್ಯಾಬೋಧೆಯು ಧೋರಣವಿಂಬೇಕೆಂಬ ಸೂಚನೆಯೂ ಸರಿಯಾಗಿರುವದು. ಯಾಕೆಂದರೆ, ಭಾಷೆ-ದೇಶಾಭಿಮಾನಿಗಳಿಲ್ಲದ ಪರಕೀಯರ ಹಿಡಿತದಲ್ಲಿ ಸಿಕ್ಕು ನಡ್ಡಿ ವಿದ್ಯಾಖಾತೆಯು ಹೇಗೆ ತೊಳಲಾಡುತ್ತಿರುವದೆಂಬದು ಪ್ರತಿಯೊಬ್ಬ ವಿದ್ಯಾಭಿಮಾನಿಯ ಹೃದಯಕ್ಕೆ ತಗಲಿದ ಮಾತಾಗಿರುವದು.

ಇವೆರಡು ಸ್ತುತ್ಯವಾದ ಸೂಚನೆಗಳನ್ನು ಮಹಿಶೂರ ವಿಶ್ವವಿದ್ಯಾಲಯದ ಸದಸ್ಯರು ಸಾದರದಿಂದ ವಿವೇಚಿಸಿ ಗ್ರಹಿಸಬೇಕು ಹಾಗೂ ಹೊಸದಾಗಿ ಹುಟ್ಟಬೇಕನ್ನುವ ಕರ್ನಾಟಕದ ಸ್ವತಂತ್ರ ವಿಶ್ವವಿದ್ಯಾಲಯಕ್ಕೆ ಆದರ್ಶಪ್ರಾಯವಾಗುವಂತೆ ಮಾಡುವರೆಂದು ನಮ್ಮ ಕೋರಿಕೆ. ಇದರಂತೆ ಉದರೂ ಕನ್ನಡಾಭಿಮಾನಿಗಳೂ ಆದ ನಮ್ಮ ಮಹಾರಾಜರು ಈ ಕಾರ್ಯದಲ್ಲಿ ಅವಶ್ಯವಾದ ಧನಸಹಾಯ ಮಾಡುವರೆಂದು ನಮ್ಮ ಪೂರ್ಣ ನಂಬಿಗೆಯುಂಟು.

ಕರ್ನಾಟಕ ಏಕೀಕರಣವೂ ಹಿಂ. ಸೇ. ದಲದ ಕಾರ್ಯಕ್ರಮವೂ

(ನಮ್ಮ ಸುದ್ದಿಗಾರರಿಂದ)

ಹಿಂ ಸೇ. ದಲದ ಕರ್ನಾಟಕಶಾಖೆಯ ಕಾರ್ಯದರ್ಶಿಗಳಾದ ಶ್ರೀ ಬುರ್ಲಿಯವರು ಮೊನ್ನೆ ಗಾನೇತಾರೀಖಿನ ದಿವಸ ಹುನಗುಂದಕ್ಕೆ ಬಂದರು. ಅಂದೇ ವಿದ್ಯಾರ್ಥಿಗಳ ಎದುರಿಗೆ, ಬ್ರಹ್ಮಚರ್ಯದ ವಿಷಯದ ಮೇಲೆ ಅವರ ವ್ಯಾಖ್ಯಾನವಾಯಿತು- ಮರುದಿನ ಬೆಳಿಗ್ಗೆ ವೀರಶೈವ ತರುಣ ಸಂಘದವರು ನಡಿಸಿದ, ಪದರ್ಥನಿಲಯವನ್ನು ನೋಡಲಿಕ್ಕೆ ಹೋಗಿದ್ದರು. ಆಲ್ಲಿ ಅವರ ಸಂಗಡ ಅನೇಕ ವಿಚಾರಗಳ ದವು. ಸಾಯಂಕಾಲಕ್ಕೆ ವೀರಶೈವ ತರುಣ ಸಂಘದ ವತಿಯಿಂದ ಈ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ, ಶ್ರೀ ಶಂಕರಗೌಡಾ ಪಾಟೀಲ, ಇವರ ಅಧ್ಯಕ್ಷತೆಯ ಕೆಳಗೆ ಏಕೀಕರಣದ ವಿಷಯವಾಗಿಯೂ, ಸೇವಾದಲದ ವಿಷಯವಾಗಿಯೂ ಬುರ್ಲಿಯವರ ವಾ ಖ್ಯಾನಗಳಾದವು. ಏಕೀಕರಣವೆಂದರೇನೆಂಬದನ್ನು ಜನ್ನಾಗಿ ವಿವರಿಸಿ; ಬಾಗಲಕೋಟೆಯಲ್ಲಿ ನೆರೆಯುವ ಏಕೀಕರಣ ಪರಿಷತ್ತಿಗೆ, ಎಲ್ಲರೂ ಬರಬೇಕೆಂದೂ, ಸೇವಾದಲದ ಶಿಕ್ಷಣವನ್ನು ಪ್ರತಿಯೊಬ್ಬರೂ ಪಡೆಯುವಿ ಕೆಂದೂ. ಈ ಕಾರ್ಯಗಳಲ್ಲಿ, ಡಾ॥ ಹರ್ಡೀಕರರಿಗೆ ಸಂಪೂರ್ಣ ಸಹಾಯಮಾಡಬೇಕೆಂದೂ, ಹೇಳಿದರು. ಅಧ್ಯಕ್ಷರು ನುಮಂಬೈ ಇಲಾಖೆಯಲ್ಲಿ ತಾವು ಇರುವದರಿಂದ ತಮಗೆ ಆಗುವ ತೊಂದರೆಗಳನ್ನು ವಿವರಿಸಿ, ಏಕೀಕರಣವು ಅವಶ್ಯವು ಕೂಡಲೇ ಈ ಕಾರ್ಯವನ್ನು ಕೈಕೆಗಳ್ಳುವದು ಅತ್ಯಂತ ಅವಶ್ಯವು ಎಂದು ಹೇಳಿದರು

ಮರುದಿನ ಬೆಳಿಗ್ಗೆ ವೀರಶೈವ ತರುಣ ಸಂಘದ ಸಭೆಯೂ ಶಂಕರಗೌಡರ ಅಧ್ಯಕ್ಷತೆಯಲ್ಲಯೇ ನಡೆಯಿತು ಅಧ್ಯಕ್ಷರು ಜಾತಿ ಪಂಥ ಪಂಥಗಳನ್ನು ಬಿಟ್ಟು ರಾಷ್ಟ್ರಸೇವೆಗೆ ಸಜ್ಜಾಗಬೇಕೆಂದು ಹೇಳಿದರು. ಬುರ್ಲಿಯವರು ಸ್ಫೂರ್ತಿಯೊಬ್ಬರು ತಮ್ಮ ಧರ್ಮದ ಅತಿರೇಕಗಳನ್ನು ಬಿಟ್ಟು ರಾಷ್ಟ್ರಕಾರ್ಯದಲ್ಲಿ ಮಗ್ನವಾದರೆ ಜಾತಿಗೆ ಏನು ರಾಷ್ಟ್ರಕಾರ್ಯಕ್ಕೆ ವಿಘ್ನವಾಗುವದಿಲ್ಲೆಂದೂ, ರಾಷ್ಟ್ರಕಾರ್ಯ ಬಂದಾಗ ಎಲ್ಲವನ್ನು ಅರ್ಪಣವಾಡಲು ಸಿದ್ಧರಾಗಬೇಕೆಂದೂ, ವೀರಶೈವ ತರುಣಸಂಘಗಳು ಬೇಗನೇ ಭಾರತೀಯ ತರುಣ ಸಂಘಗಳಾಗಲೆಂದೂ ಹೇಳಿದರು. ಮತ್ತು ಉಳಿದ ಅನೇಕ ಜನರ ಭಾಷಣಗಳಾದವು ಈ ಸಂಘದ ಕಾರ್ಯದರ್ಶಿಗಳಾಗಿ, ಶ್ರೀ ಬಳಿಗಟ್ಟಿ ಬಸಪ್ಪನವರು, ತರುಣಸಂಘಕ್ಕೆ ತಮ್ಮ ಮಾತಾ-ಪಿತೃಗಳ ಸ್ಮರಣಾರ್ಥವಾಗಿ, ೩ ಎಕರೆ ಭೂಮಿಯನ್ನು ದಾನಕೊಟ್ಟರು. ಅಧ್ಯಕ್ಷರು ೧೫೧ ರೂಪಾಯಿಗಳನ್ನು ಕೊಟ್ಟರು ಮಂಗಲಾರತಿಯಾದನಂತರ ಸಭೆಯು ವಿಸರ್ಜನೆಯಾಯಿತು. ಊರಲ್ಲೆಲ್ಲ ಸೇವಾದಲದ ವರ್ಗದ ವಿಷಯವನ್ನೆ ಸುದ್ದಿಯೇಸುದ್ದಿ- × ×

ಕನುತಿಗೆಯಲ್ಲಿ ಕರ್ನಾಟಕ ಏಕೀಕರಣ, ಹಾಗು ಸೇವಾದಲದ ಕಾರ್ಯಕ್ರಮಗಳ ಬಗ್ಗೆ ವ್ಯಾಖ್ಯಾನಗಳಾದವು. ಊರಲ್ಲಿದ್ದ ಗದಡೀವನೆಗೆ ಹೊಗಿ, ಗರಡೀಮನೆಗಳು ಹೇಗಿರಬೇಕೆಂಬದನ್ನು ಹೇಳಿ ಸೇವಾದಲದಲ್ಲಿ ಶಿಕ್ಷಣಪಡೆಯಲು ಹೇಳಿದರು. ×

ಇಲಕಲ್ಲಿನಲ್ಲಿ ಕರ್ನಾಟಕ ಏಕೀಕರಣ, ಹಾಗು, ಸೇವಾದಲದ ಕಾರ್ಯಕ್ರಮಗಳ ಬಗ್ಗೆ ಶ್ರೀ ಬುರ್ಲಿಯವರ ವ್ಯಾಖ್ಯಾನಗಳಾದವು ವಿದ್ಯಾರ್ಥಿಗಳ ಎದುರಿನಲ್ಲಿ, ಬ್ರಹ್ಮಚರ್ಯದ ವಿಷಯದ ಬಗ್ಗೆ ವ್ಯಾಖ್ಯಾನವಾಯಿತು. ಮತ್ತು ಅಲ್ಮಟ್ಟಿಯ ಶಾಸ್ತ್ರಿಗಳ ಉಪನ್ಯಾಸವೂ ಆಯಿತು. ಮಹಾಂತಸ್ವಾಮಿಗಳ ಮಠಕ್ಕೆ ತರುಣ ಸಂಘದ ವಾಚನಾಲಯಕ್ಕೆ ಹೋಗಿ ನೋಡಿಕೊಂಡು, ಅವರ ಸಂಗಡ ಮಾತುಗಳನ್ನಾಡಿ ಹೋದರು-

ಅಂತೂ ಇತ್ತೆಲ್ಲ ಸೇವಾದಲದ ವಿಷಯಕ್ಕೆ ಜನರ ಆದರವು ಹೆಚ್ಚಾಗತೊಡಗಿದೆ.

ವಾಚ್ಯಾಯ ಪರಿಚಯಃ.

ಮಹಾರಾಣೀ- ಲಕ್ಷ್ಮೀಬಾಯಿಃ- ಸತಿಪಿತೃಋಣೇ ಗ್ರಂಥ ಮಾಲೆಯ ಸಂಪಾದಕರಾದ ಶ್ರೀ. ನಾ. ವೆ. ಕುರಡಿಯವರು ಬರೆದುದು. ಈ ಸಚಿತ್ರ ಐತಿಹಾಸಿಕ ಕಾದಂಬರಿಯ ಎರಡನೇ ಆವೃತ್ತಿಯು ನಮ್ಮ ಕಡೆಗೆ ಬಂದಿದೆ. ಶ್ರೀ. ಕುರಡಿಯವರು ಕನ್ನಡಿಗರಿಗೆ ಹೊಸಬರಲ್ಲ. " ಈ ವ್ಯಾಂತದೊಳಗೆ ನಿಶ್ಶಬ್ದವಾಗಿ ಸಾಹಿತ್ಯ ಸೇವೆಯನ್ನು ಮಾಡುವವರಲ್ಲಿ ಈ ಗ್ರಂಥಕರ್ತರು ಒಬ್ಬರು " ಇವರು ಬರೆದಿರುವ ಸಾವಿತ್ರಿ, ಪದ್ಮಿನಿ, ಮೊದಲಾದ ಕಾದಂಬರಿಗಳು ಮನೆ ಮನೆಗಳಲ್ಲಿಯೂ ಕಂಡುಬರುವವು ಮುಂಬಯಿ ವೈಸರಾಯ ಸರಕಾರಗಳ ಶಾಲೆಗಳಲ್ಲಿ ಅವುಗಳನ್ನು ಪಠ್ಯಪುಸ್ತಕಗಳನ್ನಾಗಿಯೂ ಮಾಡಿರುವರು. ಕನ್ನಡ ಗ್ರಂಥಗಳ ಪುನರಾವೃತ್ತಿಯನ್ನು ಕಾಣುವದೆಂದರೆ ಅದೊಂದು ಅಪರೂಪವಾದ ಪರ್ವಕಾಲದಂತೆಯೇ ಸರಿ. ಇವರ ಎಲ್ಲ ಗ್ರಂಥಗಳು ಪುನರಾವೃತ್ತಿಯನ್ನು ಹೊಂದಿರುವದು. ಅವುಗಳ ಲೋಕಪ್ರಿಯತೆಯ ಒಲವಾಪ ಸಾಕ್ಷಿಯಾಗಿದೆ. ಇನ್ನೊಂದು ವಿಶೇಷ ಸಂಗತಿಯೇನೆಂದರೆ- ಇವರ ಕೃತಿಗಳು ಕೇವಲ ಪರ್ಣನಾತರವಾದ ಕಟ್ಟುಕಥೆಗಳಾಗಿರದೆ, ಪ್ರತಿಯೊಂದರಲ್ಲಿಯೂ ಉಪಾಕ್ತಕತ್ವನೊಂದು ಅಡಕವಾಗಿರುವದು. ಉತ್ತ ವಿಚಾರಗಳು ಕಂಡು ಬರುವವು.

ಪ್ರಸ್ತುತ ಗ್ರಂಥದ ಪುನರಾವೃತ್ತಿಗೆ ಕರ್ನಾಟಕ ಕಾಲೇಜಿನ ಕನ್ನಡ ಪ್ರೊಫೆಸರರಾದ ವಿದ್ವಾನ್ ಎಜ್. ಚೆನ್ನಕೇಶವ ಅಯ್ಯಂಗಾರರು ಅಮೂಲ್ಯವಾದ ಪ್ರಸ್ತಾವನೆಯನ್ನು ಬರೆದಿರುವರು ಈ ಕಾದಂಬರಿಯ ಗುಣಾನುವಾದವನ್ನು ಅವರ ಶಬ್ದಗಳಲ್ಲಿಯೇ ಕೊಡುವೆವುಃ-

" ಶ್ರೀ ಕುರಡಿಯವರು.....ಐತಿಹಾಸಿಕ ವಿಷಯಗಳ ಜೊತೆಗೆ ಕಥೆಯನ್ನು ರಮಣೀಯವಾಗಿ ಹೆಣೆದು ಒಂದರಿಂದೊಂದು ಬೆಳಗುವಂತೆ ಮಾಡಿದ ಚಾತುರ್ಯವು ವರ್ಣನೀಯವಾಗಿದೆ..... ವಾಚಕರ ಬುದ್ಧಿಜ್ಞಾನವಿಕಾಸಗಳಿಗೂ ವಿಚಾರ ಸರಣಿಗೂ ಯೋಗ್ಯವಾದ ಹಲವು ವಿಷಯಗಳು ಈ ಗ್ರಂಥದಲ್ಲಿ ಪ್ರತಿಪಾದಿತವಾಗಿವೆ. ಇಂದ್ರಿಯ ನಿಗ್ರಹ, ಅರಿಷಡ್ವರ್ಗ ನಿರೋಧ, ನಿಷ್ಕಾಮಕರ್ಮದ ಮಹತ್ವಗಳೂ; ಕರ್ಮದಿಂದ ವಿಚಾರಸರಣಿ; ವಿಚಾರದಿಂದ ಜ್ಞಾನೋದಯ; ಜ್ಞಾನ ಜ್ಯೋತಿಯಿಂದ ಜೀವನ್ಮುಕ್ತಿಯೆಂಬ ತತ್ವವೂ.....ನಮ್ಮ ರಾಜರುಗಳ ಗ್ರಂಥಸಂಗ್ರಹ ಭರುಚಿಯೂ ಮನೋಜ್ಞವಾಗಿ ವರ್ಣಿತವಾಗಿವೆ.....ಅಪ್ರತಿಮತೆಯಾದ ವೀರಮಣಿಯೆಂದು ತಿಳಿದಿದ್ದರೂ ಹೆಂಗಸಿಗೆ ಹೆಚ್ಚಿನ ಅಡಳಿತವನ್ನು ಕೊಡಕೂಡದೆಂಬ ದುರಭಿಮಾನದಿಂದ ಪೇಶ್ವೇಯೂ ಅವನ ಅನುಯಾಯಿಗಳೂ ರಾಜ್ಯವನ್ನೂ ಸೈನ್ಯವನ್ನೂ ಸೂರೆಗೊಟ್ಟರೆಂಬ ಸಂಗತಿಯನ್ನು ಮರ್ಮಭೇದಕವಾಗಿ ವರ್ಣಿಸಿದೆ. " ಕನ್ನಡಿಗರಿಂದಲೇ ಚಿತ್ರಿತವಾದ ಪುಸ್ತಕದಲ್ಲಿಯ ಚಿತ್ರಗಳು ಅನುಪಮವೂ ಮನೋಜ್ಞವೂ ಆಗಿರುವವು.

" ಶ್ರೀ ಕುರಡಿಯವರ ಕನ್ನಡ ಶೈಲಿಯಲ್ಲಿ ಪರಿಜಯವುಳ್ಳವರಿಗೆ ಅದು ಎಷ್ಟು ಲಲಿತವೂ ಸುಲಭಬೋಧವೂ ಆಗಿರುವದೆಂಬುದನ್ನು ಹೇಳಬೇಕಾಗಿಲ್ಲ ಕನ್ನಡ ನಾಡಿನ ಭಿನ್ನ ಭಿನ್ನ ವ್ಯಾಂತಗಳ ಸಮೀಕರಣ ದೃಷ್ಟಿಯಿಂದ ಇವರು ಲೇಖನ ವ್ಯವಸಾಯವನ್ನು ನಡೆಸಿದುದು " ಸ್ತುತ್ಯವಾಗಿರುವದು.

ಇಂಥ ಮನೋಜ್ಞವಾದ ಗ್ರಂಥಗಳಿಗೆ ಕನ್ನಡಿಗರು ಆಶ್ರಯ ಕೊಡಬೇಕೆಂದು ಬೇರೆ ಹೇಳಬೇಕಾಗಿಲ್ಲವಷ್ಟೇ ? —ಸಾಪು

ವಿನಾಶಕಾಲೆ ವಿಪರೀತಬುದ್ಧಿಃ

ಧನ ರಾಜ್ಯ, ಮತ್ತು ಅಧಿಕಾರ- ಇವುಗಳ ಮೋಹವು ಎಷ್ಟು ಪ್ರಾಬಲ್ಯವಾಗಿರುವದೆಂಬದರ ಚಿತ್ರವು ನಮ್ಮೆದುರಿನಲ್ಲಿ ಪ್ರತ್ಯಕ್ಷವಿದೆ. ಸತ್ಯಧಾರಿಯು ಮೋಹಪರವಶನಾಗಿ ಇದ್ದರಲ್ಲಿ ತೃಪ್ತನಾಗದೆ, ಮತ್ತಿಷ್ಟು ಮೋಹದಲ್ಲಿ ಬೀಳುವನು. ಆದಕೆ ಈ ಅತಿಲೋಕವ ಪರಿಣಾಮವೇನಾದೀತೆಂಬದರ ಅರಿವುಕೂಡ ಆಗದು ಸತ್ಯಾಧಾರಿಯು, ಧನ ರಾಜ್ಯಮದದಿಂದ, ಅಪಾರ ಅತ್ಯಾಚಾರ ಕೃತಿಗಳಿಂದ ಜಗತ್ತನ್ನು ತಲ್ಲಣಿತಲ್ಲಾಡಿ ಮಾಡಿಬಿಡುವನು. ಆಗ ಅವನಿಗೆ ಆಗುವ ಆನಂದಕ್ಕೆ ಸೀಮೆಯೇಸಿಗದ ! ಹಿಂಸಾಮಯವಾದ ಸಾಮ್ರಾಜ್ಯದ ವಿಜಯೀ ಪತಾಕೆಯನ್ನು ಧರಿಸಿ, ಜರಿಗುವಾಗ, ನಾನೇ ಜಗದ್ವಂದ್ಯನು ನನ್ನ ಸರಿಗಟ್ಟುವದು ಯಾವ ನಿಂದಲೂ ಆಗದು. ಎಂಬ ಭೀಭಾವನೆಯೇ ಅವನವಿನಾಶಕ್ಕೆ ಕಾರಣವಾಗುವದು.

ಮಥುರೆಯ ಕಂಸಮಹಾರಾಜನ ಭಾವನೆಯಾದರೂ ಹೀಗೇ ಇತ್ತು. ಮಗಧ ದೇಶದ ಅರಸನಾದ ಜರಾಸಂಧನೂ ಇದೇ ಪ್ರಕಾರ ಯೋಚಿಸುತ್ತಿದ್ದನು ರಾಜಾ ಶಿಶುಪಾಲನ ಮನೋದಯವಾದರೂ ಹೀಗೆ ಆಗಿತ್ತು. ದಿಲ್ಲಿಯ ಪರಾಕ್ರಮಿಯಾದ ಪೌರವೇಶ್ವರನೂ ಇದೇ ಅಹಂಕಾರದಿಂದ ಉಬ್ಬಿದ್ದನು. ಈ ಎಲ್ಲ ಮಹಾಪರಾಕ್ರಮಿಯಾದ ಅರಸರು, ಆಜ್ಞಾನಿಗಳಿದ್ದಿದ್ದಿಲ್ಲ ಇವರ ಆಸ್ಥಾನದಲ್ಲಿ ರಾಜಕಾರ್ಯ ಧುರಂಧರರೂ, ಅರ್ಥ ಶಾಸ್ತ್ರ ನ್ಯಾಯ ನೀತಿ ವಿಶಾರದರೂ ಆದ ಅನೇಕ ವಿದ್ವಾನರು ಇರುತ್ತಿದ್ದರು. ಅವರು ಈ ಎಲ್ಲ ಶಾಸ್ತ್ರದ ಮರ್ಮಗಳನ್ನು ತಮ್ಮ ಅರಸರಿಗೆ ಶ್ರುತಪಡಿಸಿ, ಎಚ್ಚರಗೊಳಿಸುತ್ತಿದ್ದರೂ, ಮದಾಂಧರಾದ ಅರಸರು ಅದಕ್ಕೆ ಕಿಂಬುಗೊಡುತ್ತಿರಲಿಲ್ಲ. ಅವರು " ನಿನ್ನ ಶಾಸ್ತ್ರ ಇತಿಹಾಸ, ಸಿದ್ಧಾಂತಗಳು ಹಾಗಿರಲಿ, ನಾವು ನಮ್ಮ ಪುರುಷಾರ್ಥ ಬುದ್ಧಿ, ಮತ್ತು ಬಾಹುಬಲದಿಂದ ನಿನ್ನ ಸಿದ್ಧಾಂತಗಳನ್ನು ಅಸತ್ಯವೆಂದು ಸಿದ್ಧವಮಾಡುವೆವು ದೇಶದ ಸರ್ವಸ್ವವನ್ನು ಹಿರಿ ನಾವು ಪುಷ್ಟರಾಗಿರುವದೇ ನಮ್ಮ ಅರ್ಥಶಾಸ್ತ್ರವು! ನ್ಯಾಯಾನ್ಯಾಯ ವಿಚಾರವು ಪ್ರಜೆಗಳಿಗಾಗಿ! ನಾವು ಸಮ್ರಾಟರು. ನಾವು ಸತ್ಯಾಧಾರಿಗಳು. ನಮ್ಮ ನ್ಯಾಯವೇ ಬೇರೆ. ನಮ್ಮ ಧರ್ಮ, ನಮ್ಮ ಜಾತಿಯೇ ಬೇರೆ ರಾಜ್ಯ ಪ್ರತಿಷ್ಠೆ, ಸಾಮ್ರಾಜ್ಯಾಧಿಕಾರದ ದರ್ಪವೇ ನಮ್ಮ ನೀತಿ-ಸಂಸಾರದಲ್ಲಿಯ ಎಲ್ಲ ಸಂಪತ್ತಿನ ಅಂತಲೂ ನಮ್ಮ ಸಂಪತ್ತು ಮಿಗಿಲಾಗಿರಬೇಕು. ನಾವು ಮಹಾಬಲಾಢ್ಯರು. ಜಗತ್ತಿನ ಯಾವ ಶಕ್ತಿಯೂ ನಮ್ಮನ್ನು ಮಣಿಸದು. ಕೃತ್ರಿಮತನವೇ! ನಮ್ಮ ಮುಖ್ಯಲೀಲೆ."

ಈ ಅವರ ಮದಾಂಧವಾದ ವಿಚಾರಗಳೂ ಅನ್ಯಾಯ ಬುದ್ಧಿಗಳೂ ಅವರ ನಾಶಕ್ಕೆ ಕಾರಣವಾದವು. ಈ ತಮ್ಮ ಅವಿವೇಕತನವನ್ನು ಬಿಟ್ಟು, ಹಿತಬಂಧಕರ ಉಪದೇಶಕ್ಕೆ ಇಂಬುಗೊಟ್ಟಿದ್ದಲ್ಲಿ ಸ್ವಪ್ರಜಾನುರಾಗ ಉಳ್ಳವರಾಗಿಯೂ, ಲೋಕಸ್ತುತ್ಯ ಕೀರ್ತಿ ಶೇಷರಾಗಿಯೂ ಉಳಿಯುತ್ತಿದ್ದರು. ಆದರೆ- ವಿನಾಶಕಾಲೇ- - -

ಆಯಕಟ್ಟಿನ ಮೆಟ್ಟಿಲು.

ಈ ಮೇರೆಗೆ ಆಗಿನ ಕಾಲಮಾನ ಪರಿಸ್ಥಿತಿಗನುಸಾರವಾಗಿ ನಮ್ಮ ಭರತಖಂಡಕ್ಕೆ ಒಂದಿದ್ದ ಆಪತ್ತಿನು ಈಗಲೂ ಬಂದಿದೆ. ಈಗಿನ ಸ್ವರೂಪವು ಬೇರೆ. ಇದರ ಪ್ರಕಾರವೂ ಬೇರೆ. ಇದರ ಮರ್ಮವನ್ನೇ ಕಂಡುಹಿಡಿಯುವದಕ್ಕಾಗಿ ಭಾರತೀಯ ಮುಖಂಡರು ಅನೇಕಕಾಲ ಅವಿಶ್ರಾಂತ ಶ್ರಮಪಟ್ಟು ಕಡೆಗೆ ಅತಿನೇ ಸಂಗ ಮದಾಸಾದಲ್ಲಿ ಸಮ್ಮಿಲಿತರಾಗಿ ನಿರ್ಣಯಮಾಡಿದ ಮೇರೆಗೆ ಅಖಿಲ ಭಾರತದ ಮುಖಂಡರು ಜನತೆಯಲ್ಲಿ ಜಾಗ್ರತೆಯುಟ್ಟಿಸಿ, ಪ್ರತಿಕಾರಕ್ಕೆ ಆಯಕಟ್ಟಿನೆಟ್ಟಿಗಳನ್ನು ತೋರಿಸಿಕೊಡುವದಕ್ಕೆ ಒಮ್ಮನಸ್ಸಿನಿಂದಲೂ ಒಗ್ಗಟ್ಟಿನಿಂದಲೂ ಪ್ರಾರಂಭ ಮಾಡಬೇಕಾದುದು ಅವಶ್ಯವು. ರಾಷ್ಟ್ರಕ್ಕೆ ಅಂಟಿಕೊಂಡಿದ್ದ ಅವಿಚ್ಛಿನ್ನ ಬಡತನ ದಾರಿದ್ರ್ಯವೂ, ಸಂಪಾವಲಂಬನವೂ, ಜಾರಅಂತ್ಯವೂ ಪ್ರಕೃತಿಯರ ದುಬ್ಬಳಿಕೆಯೂ, ಮುಂತಾದ ದುರ್ಧರವಾದ ವ್ಯಾಧಿಗಳನ್ನು ಹೋಗಲಾಡಿಸುವದಕ್ಕೆ ಅವುಗಳಿಗೆ ತಕ್ಕಂತಹ ಔಷಧಿಯನ್ನೇ ಮಾಡೋಜಿಸಬೇಕಾಗುವದು.

ದಾರಿದ್ರ್ಯಮೋಚನ

ನಮ್ಮ ದೇಶಕ್ಕೆ ದಾರಿದ್ರ್ಯವು, ನಮ್ಮ ವ್ಯವಹಾರ ಉದ್ಯಮ, ಕಲಾಕೌಶಲ್ಯಗಳ ನಾಶದಿಂದಲೂ, ವ್ಯಾಕ್ಷಪಾರಾವುದು. ಅದುದರಿಂದ ನಮ್ಮ ಕಲಾಕೌಶಲ್ಯ, ವ್ಯಾಪಾರ ಉದ್ಯಮಗಳಿಗೂ ಪುನರು ಜೀವನವಾಗುವಂತೆ ಅಖಂಡಾಕ್ಷಾಂತರ ಮುಖಂಡರೂ, ಪ್ರಜಾ ಜನರೂ ಅದಮ್ಯ ತ್ಪರೆಯಿಂದ ಈ ಕಾರ್ಯವನ್ನು ಕೈಕೊಳ್ಳುವದು ಅವಶ್ಯವು. ನಮ್ಮ ವ್ಯಾಪಾರ ಉದ್ಯಮಗಳನ್ನು ಪರಕೀಯರು ಕಪಟತಂತ್ರದಿಂದಲೂ, ಅಧಿಕಾರದ ಅನುಕೂಲತೆಯಿಂದಲೂ ತಮ್ಮ ಸ್ವಾಧೀನಪಡಿಸಿಕೊಂಡು ನಮ್ಮನ್ನು ಕಂಗಾಲರನ್ನಾಗಿಮಾಡಿದ್ದಾರೆ ಇದರಿಂದ ನಮ್ಮ ವ್ಯಾಪಾರ ಉದ್ಯಮ ಕಲಾಕೌಶಲ್ಯಗಳ ಪುನರುಜ್ಜೀವನವಾಗಿ ಅಖಂಡವಾಗಿ ಸುಲಿಯುತ್ತಿದ್ದಾನೆ ನಮ್ಮ ಸೌಭಾಗ್ಯಕ್ಕೆ ಅತ್ಯಾಗಟ್ಟವದರಿಂದಲೇ ನಮ್ಮ ದಾರಿದ್ರಮೋಚನವಾಗುವದು.

"ಮನ್ವಂತರ."

ಹಿಂದುಸ್ಥಾನ.

ಶ್ರೀಮತಿ ಸರೋಜಿನಿ ದೇವಿಯವರು ಅಮೇರಿಕೆಯಲ್ಲಿ ವ್ಯಾಖ್ಯಾನಕ್ಕೊಸ್ಕರ ಏರ್ಪಡಿಸಲ್ಪಟ್ಟಿದ್ದಾರೆ. ಮಿಸ್ ಮೇಯೋ ಇವಳು ಬರೆದ "ಮದರ ಇಂಡಿಯಾ" ದಲ್ಲಿಯ ವಿಧಾನಗಳನ್ನು ಖಂಡಿಸುವದೇ ವ್ಯಾಖ್ಯಾನದ ಉದ್ದೇಶ.

ಪೂರ್ಣ ಸ್ವಾತಂತ್ರವು ಈಗ ಅನವಶ್ಯವಾದದ್ದೆಂದು ಡಾ. ಪಟ್ಟಾಭಿ ಸೀತಮ್ಮನವರು ಮತಪಟ್ಟಿದ್ದಾರೆ.

ಮುಂಬಯಿಯಲ್ಲಿಯ ಅನೇಕ ಗಿರಣಿಗಳಲ್ಲಿಯ ಕೂಲಿಕಾರರು ಕಟ್ಟಾ ಮಾಡಿದ್ದಾರೆ.

- ನಿಝಾಮ್ ಕರ್ನಾಟಕ

ದಕ್ಷಿಣ ಹೈದರಾಬಾದ ಸಂಸ್ಥಾನದ ಮಂತ್ರಿಗಳಾದ ಮಹಾರಾಜಾ ಕಿಶನಪ್ರಸಾದರವರು ತಮ್ಮ ಪ್ರಜರ ಸುಖದುಃಖಗಳನ್ನು ವಿಚಾರಿಸಲುಹೊರಟು ರಾಯಚೂರಿಗೆ ಬಂದಿದ್ದು, ಪ್ರಜರು ಅವರನ್ನು ಆನಂದದಿಂದ ಸ್ವಾಗತಮಾಡಿದರು. ಮಂತ್ರಿವರ್ಯರು ಇಲ್ಲಿಗೆ ಸಾರ್ವಜನಿಕ ಸಂಸ್ಥೆಗಳನ್ನೂ ಶಾಲೆಗಳನ್ನೂ ಸಂದರ್ಶಿಸಿ, ಬಾಲಕರಿಗೆ ೧೫೦ ರೂ. ಬಕ್ಷಾನಾವನ್ನು ಕೊಟ್ಟಿದ್ದಲ್ಲದೆ, ದಾರಿಯಲ್ಲಿ ಕಂಡ ಭಿಕ್ಷುಕರಿಗೂ ದಾನಕೊಟ್ಟರು. ಸ್ತುತ್ಯ!

ಸಿದ್ಧಾರೂಢ ಸ್ವಾಮಿಗಳ ಮೇಲೆ ದಾನೆಯು

ಹುಬ್ಬಳ್ಳಿಯ ಸಿದ್ಧಾರೂಢರ ಮತಕ್ಕೂ, ಮಠದ ಸ್ಥಾವರ ಜಂಗಮದ ಆಸ್ತಿಗೂ, ಸಿದ್ಧಾರೂಢರು ಬಾಧ ಸ್ತರಲ್ಲದೆ ಕೇವಲ ವ್ಯವಸ್ಥಾಪಕರಿದ್ದಾರೆಂತಲೂ, ಪೂರ್ವದಲ್ಲಿ ಈ ಸ್ಥಳದಲ್ಲಿ ದ್ದ ಮಠವೂ, ಮಠದ ಸ್ಥಾನವೂ, ಒಬ್ಬ ಬ್ರಾಹ್ಮಣ ಸನ್ಯಾಸಿಯ ಸಮಾಧಿಯ ಸ್ಥಾನವೂ, ಸಾರ್ವಜನಿಕ ಸ್ವರೂಪದ್ದು ಇದ್ದು, ಭಕ್ತ ಜನರಿಂದ ನೀಡಲ್ಪಟ್ಟು ಇರುತ್ತದೆಂತಲೂ ಸಿದ್ಧಾರೂಢರ ಭಕ್ತರಲ್ಲಿ ಬ್ಯರಾದ "ಸಿದ್ಧಾವಧೂತ" ರೆಂಬುವನವರು ಹುಬ್ಬಳ್ಳಿಯ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ ಪ್ರತಿವಾದಿ ಸಿದ್ಧಾರೂಢ ಸ್ವಾಮಿಗಳು ತಮ್ಮ ಜವಾಬಿನಲ್ಲಿ "ಬ್ರಾಹ್ಮಣ ಸನ್ಯಾಸಿಯು ಸಮಾಧಿಯು ಹೊಗಲು ಇತ್ತು, ಇದರೂ ಭಕ್ತಜನರು ತಮಗೆ ದಾನವಾಗಿ ಇತ್ತ ಯಾವತ್ತು ಆಸ್ತಿಯೂ ಸ್ವತಃ ತಮ್ಮದೇ ಇದ್ದು ಸಾರ್ವಜನಿಕವಲ್ಲವೆಂತಲೂ, ಉಲ್ಲೇಖಿಸಿದ್ದಾರೆ ಇನ್ನು ಮುಂದೆ ಈ ಕಟ್ಟಿನ ಕೆಲಸವು ಧಾರವಾಡದ ಕೋರ್ಟಿನಲ್ಲಿ ನಡೆಯುವದು ಈ ಪ್ರಕರಣವು ಯಾವಗತಿಗೆ ಮುಟ್ಟುವದೆಂಬದು ಕಡೆಗೆ ಜನತೆಯು ಚಿತ್ರವೆ ನೋಡಬೇಕಾಗಿದೆ.

ಇಹಸ್ಮರತ್ತ.

ಜಳಿಗಾಲವಾದ ಈ ಜಳಿಯು ಅತಾದೆ ನಸುನೋಡಗಿಯುತ್ತಿದೆಯಲ್ಲದು ಹಿಂಗಾರಿಯು ಬೆಳೆಗಳ ಕೆಡುಸುತ್ತಲಿವೆ. ಅನಿವಾಯವನ್ನು ಮಾಡುವ ಅಧಿಕಾರಿಗಳು ಎಚ್ಚರಪಡಬೇಕು.

ಕನ್ನಡಿಗನ ಸಂಪಾದಕರಾದ ಶ್ರೀ ಮಂಗಳವೇಢೆ ಶ್ರೀನಿವಾಸರಾಯರು ಕರ್ನಾಟಕ ಏಕೀಕರಣದ ಚಳವಳಿಗಾಗಿ ಕಾರವಾರ ಜೈಲ್ಲೆಯನ್ನು ಸುತ್ತುತ್ತಿರುವರು

ಮದ್ರಾಸಾ ಕಾಂಗ್ರೆಸಕ್ಕೆ ಹೋಗಿ ಮರಳಿ ಬಂದಿದ್ದ ಇಲ್ಲಿಯ ದೇಶಭಕ್ತರು ಮೌನಾವಲಂಬನವನ್ನು ಮಾಡಿರುವರು. ಯಾವಾಗ ಮಾತನಾಡುವರೋ ನೋಡಬೇಕು

ಕುಮತೆಯಲ್ಲಿ ತಾ॥ ೧೫ನೇ ದಿನ ಕರ್ನಾಟಕ ಏಕೀಕರಣದ ಆವಶ್ಯಕತೆಯೂ, ಏಕೀಕರಣದಿಂದ ಉತ್ತರ ಕನ್ನಡ ಜಿಲ್ಲೆಗೆ ಆಗುವ ಲಾಭಗಳೂ, ಇದರ ಮೇಲೆ, ಬಾಗಲಕೋಟೆಯ ಏಕೀಕರಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಮಂಗಳವೇಢೆ ಶ್ರೀನಿವಾಸರಾಯರ ಪಾಖ್ಯಾನವಾಯಿತು. ಸ್ವಾಗತ ಕಮಿಟಿಯವರ ವತಿಯಿಂದ ಉತ್ತರ ಕನ್ನಡದವರನ್ನು ಆಮಂತ್ರಿಸಲು ತಾವು ಒಂದಿರುವೆನೆಂದು ವ್ಯಾಖ್ಯಾತರು ಹೇಳಿದರು ರಾವಬಹದ್ದೂರ ಕಲ್ಯಾಣಪ್ಪರವರು ಅಧ್ಯಕ್ಷರಾಗಿದ್ದರು. ಪರಿಷತ್ತಿನ ಆಮಂತ್ರಣ ಸ್ವೀಕರಿಸಿದ ಬಗ್ಗೆಯೂ, ಪ್ರತಿನಿಧಿಗಳನ್ನು ಹೆಚ್ಚಾಗಿ ಕಳುಹಿಸುವ ಬಗ್ಗೆಯೂ ತಮ್ಮ ವುಗಳಾದವು. ನಾಟಕ ಕರ್ತೃಗಳಾದ ಶ್ರೀ ಕಂಠೀ, ಯಾದೇ, ಕಲ್ಯಾಣಪುರ ವಕೀಲ ಇವರ ಭಾಷಣಗಳಾದವು.

ವಿಜಾಪೂರ ಜಿಲ್ಲೆಯ ಕಲೇಕ್ಟರಸಾ॥ರ ಪ್ರವಾಸ ಕ್ರಮ ೧೨ — ೧ — ೩೪ ರಿಂದ ೧೫ ಹೊನವಾಡ. ೧೪ — ೧೫ ತಿಕೋಟಿ, ೧೯-೩೭ ವಿಜಾಪೂರ, ೩೮-೩೧ ಕೊಲ್ಹಾರ, ೧-೨-೩೪ ರಿಂದ ೬ ಬೀಳಗಿ, ೭-೧೨ ಕಲಾದಗಿ, ೧೩-೧೬ ಅಮೀನಗಡ, ೧೭-೨೧ ಇಲಕಲ್ಲ, ೨೨-೨೯ ಹುನಗುಂದ.

ಮುಂಬಯಿ ಕಾಯ್ದೆ ಕೌನ್ಸಿಲ್ಲೂ ಕರ್ನಾಟಕವೂ

ಶ್ರೀ. ಎಮ್. ಡಿ. ಕರ್ಕಿ (ಕಾನರಾವತಿಯಿಂದ) ಯವರು "ಕರ್ನಾಟಕದ ವೃತ್ತಪತ್ರಗಳಲ್ಲಿಯೂ ಸಾರ್ವಜನಿಕ ಸಭೆಗಳಲ್ಲಿಯೂ ಭಾಷಾವಾರ ತತ್ವದ ಮೇಲೆ ಕರ್ನಾಟಕಕ್ಕೆ ಬೇರೊಂದು ಪ್ರಾಂತವು ಬೇಕೆಂಬ ಚಳವಳಿಯು ನಡೆದಿರುವದು. ಸರಕಾರದ ಸಿದ್ಧಾಂತವೆ ಬಂದಿರುವದೊ - ಬಾರದಿದ್ದರೆ ಅದರ ಬಗ್ಗೆ ಅವರೇನು ವಿಚಾರಣೆಯಿ ಡುವರ; ಹಾಗೂ ಈ ಸಂದರ್ಭದಲ್ಲಿ ಮಧ್ಯವರ್ತಿ ಸರಕಾರವು ಕೈಸನಡೆಸು ಂತೆ ಕೆ ಕೆಕೊಂಡಿರುವರೋ ಹೇಗೆ"-- ಎಂಬವಾಗಿ ಕೇಳಿದರು. ಅದಕ್ಕೆ ಸರಕಾರದ ಉತ್ತರವು ಹೀಗೆ:— ಈ ಬಗೆಯ ಚಳವಳಿಯು ನಡೆದಿರುವದು ಸರಕಾರದ ಕಿವಿಗೆ ಮುಟ್ಟಿದೆ. ಆದರೆ ಅದು ಸಾಕಷ್ಟು ಜೋರಿನಿಂದ (Strong) ನಡೆದಿರುವದಿಲ್ಲವೆಂತಲೂ ಮೇಲಿನ ಸರಕಾರಕ್ಕೆ ವಿಚಾರಮಾಡಲು ಬರೆದುತಿಳಿಸಿಲ್ಲವೆಂತಲೂ ಉತ್ತರ ಬಂದಿತು.

ಸೊಲ್ಲಾಪೂರದ ಶ್ರೀ. ಮುಜುಮದಾರರವರಿಂದ ಶ್ರೀ. ಪಾಟ್ಟಸ್ಕರ ಎಂಬವರು ಸರಕಾರಕ್ಕೆ ಕೇಳಿದ ಪ್ರಶ್ನೆವು:- "ವಿಜಾಪೂರದಲ್ಲಾಗಲೀ ಸೊಲ್ಲಾಪೂರದಲ್ಲಿಯಾಗಲಿ ಅಥವಾ ಎರಡೂ ಸ್ಥಳಗಳಲ್ಲಿಯಾಗಲಿ ಸರಕಾರದವರು ಸ್ಥಾಪಿಸಬೇಕೆಂದು ಮಾಡಿದ ಔದ್ಯೋಗಿಕ ಶಾಲೆಗಳ ಅಂದಾಜು ಪತ್ರಿಕೆಯು ಸಿದ್ಧವಿರುವದೋ ಹೇಗೆ? ಈ ಶಾಲೆಗಳ ಸ್ಥಾಪನೆಯು ಎಷ್ಟಾದವು ನಡೆದು ಎಷ್ಟು ವರ್ಷಗಳಾದವು?"

ಈ ಪ್ರಶ್ನೆಕ್ಕೆ ಸರಕಾರದವರ ಉತ್ತರವು ಹೀಗೆ? "ಇಳಿ ವರ್ಷಗಳತೊಟ್ಟು ಈ ವಿಚಾರವು ನಡೆದಿದೆಯೆಂದೂ ಅಂದಾಜು ಪತ್ರಿಕೆಗಳು ತಯಾರಾಗುತ್ತಲಿದ್ದು ಸದ್ಯಕ್ಕೆ ಸಿದ್ಧವಾಗಿರುವದಿಲ್ಲ."

"ಧಾರವಾಡ ಹಾಗೂ ಅಮ್ಮದಾಬಾದಗಳಲ್ಲಿಯ ಟ್ರೇನಿಂಗ ಕಾಲೇಜಗಳನ್ನು ತೆರುವಿ ಸುರ್ಧವು ಮಾಡಿರುವರೋ ಹೇಗೆ?" ಎಂಬ ರಾ. ಬ. ಕಂಬಳಿಯವರ ಪ್ರಶ್ನೆಕ್ಕೆ "ಈ ಸಂಸ್ಥೆಗಳನ್ನು ಎಮೂ ಬಂದು ಮಾಡಿಲ್ಲ" ವೆಂದು ಸರಕಾರದವರು ಉತ್ತರಕೊಟ್ಟರು.

ಸೋಜಿಗದ ಸುದ್ದಿಗಳು.

"ಕಾಲಾಯುರ್ವೈ ಮನುಷಃ" ಎಂದು ಮಾನವನ ಆಯುರ್ಮರ್ಯಾದೆಯು ನೂರು ವರುಷಗಳೆಂದು ಗೊತ್ತುಮಾಡಿದ್ದರೂ ಅಧಿವ್ಯಾಧಿಗಳ ಮೂಲಕ ಆ ಮರ್ಯಾದೆಯನ್ನು ಮುಟ್ಟುವವರೆಷ್ಟು? ಇದೇ ಪ್ರಕಾರ ಪಶು-ಪಕ್ಷಿಗಳಿದರೂ ಆಧಿವ್ಯಾಧಿಗಳಿಂದಲೂ ನಿಯಮದ ಪರಿಸ್ಥಿತಿಯ ಮೂಲಕವಾಗಿಯೂ ತಮಗಿರುವ ಆಯುರ್ಮರ್ಯಾದೆಯನ್ನು ತೀರಕಡಿಮೆ ಪ್ರಮಾಣದಿಂದ ಮುಟ್ಟುತ್ತವೆ ದು ಕಂಡು ಬರುವದು. ನ್ಯೂಮನ್ ಎಂಬ ಇರ್ಮನ್ ಶಾಸ್ತ್ರಜ್ಞನು ಕೆಳಗೆ ಕೊಟ್ಟ ಪಶುಪಕ್ಷಿಗಳ ಆಯುರ್ಮರ್ಯಾದೆ ಯನ್ನು ಪರಿಶೀಲಿಸಿ ಹೀಗೆ ಹೇಳುವನು:- ಆನೆ- ೧೫೦-೨೦೦ ವರುಷಗಳು ತಿಮಿಂಗಿಲ- ೧೫೦; ಹದ್ದು- ೧೦೮; ಹಂಸ- ೧೦೦; ಗಿಳಿ, ಕೂರ್ಮಗಳು- ೨೦೦-೩೦೦; ಕುದುರೆ, ಕತ್ತೆ, ಒಂಟೆ, ಕರಡಿಗಳು ೪೦-೫೦; ಗೂಗೆ- ೬೦; ಕುರಿ ೧೦-೧೫; ನಾಯಿ- ಪೋಳ- ೧೦-೧೫; ನರಿ- ೧೦; ಸಿಂಹ- ೨೦-೨೫, ಹುಲಿ- ೨೦; ಬೆಕ್ಕು- ೯-೧೦; ಇಣಚಿ- ೧೦-೧೨; ಕೀಟಗಳು ಹಾಗೂ ಬೆಡ ಹುಳಗಳು ಅಲ್ಪಜೀವಿಗಳಾದಾಗ್ಯೂ, ಕೆಲವು ಜಾತಿಯ ಇರುವೆಗಳು ಹಿಡಿರಿಟ್ಟರೆ ೧೫ ವರ್ಷ ವರುಷಗಳ ವರೆಗೆ ಬಾಳಬಲ್ಲವು.

× × ×

ಮಿಸ್ ಮೇಯೋಳು ನಮ್ಮ ಸ್ತ್ರೀಯರ ಬಗ್ಗೆ ಅಲ್ಲದ ಸಲ್ಲದ ಪಧಾನಗಳನ್ನು ಮಾಡಿರುವಳಷ್ಟೇ! ಇಲ್ಲಿ ನೋಡಿ! ಅವಂ ಸಮಾಜದ ಚಿತ್ರವನ್ನು ಸಾರಾ ಕೋಲನ್ಸ್ ಯಂಬುವವಳು ಇಂಗ್ಲಂಡದ ಮುದುಕಿಯರಳ್ಳಿ ಹಿರಿಯಳು. ಅವಳಿಗೆ ೧೦೬ ವರುಷಗಳು ಸೊನ್ನೆ. ತನ್ನ ಹುಟ್ಟಿದ ದಿನದ ಸಮಾರಂಭದಲ್ಲಿ ಅವಳು ತೆರೆದ ಉದ್ಗಾರಗಳಿವು:- "ಮೋಟಕಾರಿನಲ್ಲಿ ರೈಗಳನ್ನು ಬಿಟ್ಟಕೊಂಡು ಗಂಡಸರ ಹಾಗೆ ಕೂದಲು ಕತ್ತರಿಸಿಕೊಂಡು ಬಾಯಲ್ಲಿ ಸಿಗರೇಟು ಹೊತ್ತಿಸಿ ತಿರುಗಾಡುವ ಈಗಿನ ಕುಮಾರಿಕೆ (?) ಯರನ್ನು ತಲೆಯೊಡಿದು ಹಾಸಿಗೆಗೆ ಬಿಗಿ ಎಳೆ ಈ ಹುಚ್ಚಾಟವನ್ನು ನಿಲ್ಲಿಸಿಬೇಕೆಂದು ಅವರಿಗೆ ತಿಳಿಸಿಹೇಳಿರಿ" ಇತ್ಯಾದಿ ಸುಧಾರಿಸಿದವರಿರುವರು! ತಮ್ಮೆಲೆಯಲ್ಲಿ ಕತ್ತೆ ಸತ್ತುಬಿದಿರಲು ಮಂದಿಯ ಯೋಚನೆಯಲ್ಲಿಯೆ ಸೊಣರುಹಾಡಿಸಲು ಬರುವರು.

× × ×

ಪತ್ರಿವ್ಯವಹಾರ

"ಹೊಳೆಯಲ್ಲಿ ಹುಳಿಯನ್ನು ತೊಳೆದಂತೆ!"

ಸ್ವಾರ್ಥೈಕದೃಷ್ಟಿಯಿಂದಲೋ, ಪರದಾಸ್ಯವೃತ್ತಿಯಿಂದಲೋ ಅಥವಾ ರಾಜಕುಲ್ಕೂರ ಕಾಲೇಜಿನ ಶಿಕ್ಷಣದ ಪ್ರಭಾವದಿಂದಲೋ ಸ್ವಾಭಿಮಾನಶೂನ್ಯರಾದ ನಮ್ಮ ದೇಶದ ಸಂಸ್ಥಾನಿಕರನೇಕರಿಗೆ ಅಂಗ್ಲಾಧಿಕಾರಿಗಳ ಸಮಾಗಮ ಸುಖವನ್ನು ಮೇಲೆ ಮೇಲೆ ಬಯಸಿ, ಅವರ ಪಾದಧೂಳಿಯನ್ನು 'ತಿರ್ಥ' ವಹಿಸುವ 'ಹುಚ್ಚು' ಅಂಟಿಕೊಂಡಿರುತ್ತದೆಂದು ಹೇಳಬಹುದು. ಈ ಹುಚ್ಚು ನೆಲೆಗೊಂಡ ಸಂಸ್ಥಾನಿಕರಿಂದ ವರಿಷ್ಠಾಧಿಕಾರಿಗಳ ಸಂಭಾವನೆಗೋಸುಗ, ಎಷ್ಟಯಿಲ್ಲದೆ ಹಣವು ವೆಚ್ಚವಾಗುತ್ತಿರುವದರಿಂದ, ಇಂಥವರಿಂದ ಲೋಕೋಪಕಾರದ ಕಾರ್ಯಗಳು ಆಗುವದು ತೀರ ಅಸಂಭವವು. ಮೊದಲೇ ಕರಳು ಕುಂದಾ ಅನ್ನವನ್ನು ಕಾಣದ ಕಂಗಾಲ ಪ್ರಜೆಗಳಿಂದ ಸೆಳೆದುಕೊಂಡ ದುಡ್ಡನ್ನು ತನ್ನ ಚಕ್ಕಂದಕ್ಕೊಳ್ಳಿಕ್ಕರ ಹೀಗೆ ಆಯೋಗ್ಯವಾಗಿ ಸಂಸ್ಥಾನಿಕರು ವೆಚ್ಚಮಾಡಹತ್ತಿದರೆ, ಮುಂಕ ಪ್ರಜೆಯು ಪಾತಾಳದಲ್ಲಿಯೇ ತಳವಾಲಿಸುವದೇನಾಶ್ಚರ್ಯವು? ಇರಲಿ.

ಕಳೆದ ದಿಸೆಂಬರ ತಿಂಗಳಲ್ಲಿ ವ್ಹಾಯಿಸರಾಯರಾದ ಲಾರ್ಡ ಆಯರ್ವಿನ್ ಸಾವೇಬರು ಸಾಂಗಲಿ, ಕೊಲ್ಹಾಪುರಗಳಿಗೆ ಬರತಕ್ಕವರಿದ್ದರು. ಭರತಖಂಡದ ಮುಖ್ಯಾಧಿಕಾರಿಗಳಾದ ವ್ಹಾಯಿಸರಾಯರ ಆಗಮನವೆಂದರೆ, ಕಪಿಲಾ ಷಷ್ಠಿಯಯೋಗವೇಸರಿ. ಈ ಆಗಮನೋತ್ಸವದ ಕೂರ್ಮಸಿದ್ಧತೆಯು ಕಳೆದ ನಾಲ್ಕಾರು ತಿಂಗಳುಗಳಿಂದ ಎಡೆಬಿಡದೆ ನಡೆದಿತ್ತು. ಸಂಸ್ಥಾನದ ಮುಖ್ಯ ಮುಖ್ಯ ಅಧಿಕಾರಿಗಳೂ, ತೀಮಂತರೂ ಸಹ ಪ್ರತಿಯೊಂದು ಕೆಲಸವನ್ನು ಜಾಗರೂಕತೆಯಿಂದ ದೂಡಿಸುತ್ತಲಿದ್ದರು. ರಸ್ತೆಗಳದುರಸ್ತಿಯು ಒತ್ತರದಿಂದ ನಡೆಯಿತು. ಅಲ್ಲಿಗಲ್ಲಿಗೆ ಧನ್ಯವಾಗಿ ತೋರುವ ಕಮಾನುಗಳು ವಿಚಿತ್ರವೇಷವಾಗಿ ಕತ್ತಿಗಳಿಂದ ಕೆತ್ತಲ್ಪಟ್ಟವು. ದೂರದೂರಿಂದ ಬೆಳ್ಳಿಬಂಗಾರದ ರಥಗಳು ತರಲ್ಪಟ್ಟವು. ಸಾವಿರಾರು ರೂಪಾಯಿಗಳು ವೆಚ್ಚವಾಗಿ ಸುಂದರವಾದ ಕುದುರೆಗಳು ಖರೀದಿಯಾದವು. ಪ್ರದರ್ಶನಗಳು ನೆರೆದವು. ಸುಪ್ರಸಿದ್ಧ ಕುಸ್ತಿಗಳು ಕರೆದವು ಅಲ್ಲಿಗಲ್ಲಿ ಕಾರಂಜಿಗಳು ಚಿಮ್ಮುತ್ತಿದ್ದವು. ಸುಂದರವಾದ ಮಯಿಲ್ಲಿನ ಪಾಂಡಪಟಗಳು ಸಿದ್ಧವಾದವು ಅಂತೂ ಲಕ್ಷಾವಧಿ ಹಣವು (ಹೇಳಿಹೆಸರಲ್ಲದೆ) ವೆಚ್ಚವಾಗಿ ಸರ್ವಸಿದ್ಧತೆಯಾಯಿತು ವ್ಹಾಯಿಸರಾಯರ ಗೌರವದರ್ಶನವು ಎಂದು ಆಗುವ

ಮೋ ಎಂದು ಮುಖ್ಯಾಧಿಕಾರಿಗಳೂ, ಶ್ರೀಮಂತರೂ ಅತ್ಯಾತುರರಾಗಿದ್ದರು. ವ್ಹಾಯಿಸರಾಯರ ಸ್ವಾಗತವನ್ನು ಮಾಡಲು ಮುಂಬಾಹುರಿಯವರಿಗೆ ಪ್ರಯಾಣವನ್ನು ಸಹ ಬೆಳಿಸಿದರು ಆದರೆ ದುರ್ದೈವದಿಂದ ಮುಂಬಯಿಗೆ ಬಂದಕೂಡಲೆ ವ್ಹಾಯಿಸರಾಯರ ಪ್ರಕೃತಿಯಲ್ಲಿ ಕೆಟ್ಟತು ಆಸ್ವಾಸ್ಥ್ಯವುಂಟಾಯಿತು! ಕೀರ್ತಿ, ಅವರ ಆಗಮನವು ಬಂದಾಯಿತು ಕೂಡಲೆ ವಿದ್ಯುದ್ವೇಗದಿಂದ ಈ ವಾರ್ತೆಯು ಎಲ್ಲಿಗೆಗೆ ಪಸರಿಸಿತು ನಲ್ಲರು ತಿಂಗಳುಗಳಿಂದ ಹತ್ತಾರು ವಿರಗಟ್ಟಿ ಜನರು ಅವಿಶ್ರಾಂತರಪ್ರಯತ್ನವಿಟ್ಟದ್ದೂ, ಲಕ್ಷಾವಧಿ ರೂಪಾಯಿಗಳು ವೆಚ್ಚವಾದದ್ದೂ, ಹೇಳಿ ಹೆಸರಲ್ಲವೆ ಹೋದಿತು! ಎಲ್ಲವೂ ಹೊಳೆಯಲ್ಲಿ ಹಳಿಯನ್ನು ತೊಳೆದಂತಾಯಿತು!! ಮುಮ್ಮುಖವಿಟ್ಟಿದೆ ಮುದಿಮನೆಯು ಸಂಭ್ರಮವನ್ನ ಹಬ್ಬಿದಂತಾಯಿತು! ಒಳ್ಳೆ ಡಾಲಿನಿಂದ ಎಡೆಯುಬ್ಬಿಸಿಕೋಗುವವನು ಒತವಿ ಮಣ್ಣು ಮುಕ್ಕಿದಂತಾಯಿತು!

ಈ ಉದಾಹರಣೆಯಿಂದ ನಮ್ಮ ಸಂಸ್ಥಾನಿಕರು ತಮ್ಮ ಹೆಚ್ಚು ಹಂಬಲವನ್ನ ಬಿಟ್ಟು, ಇನ್ನಾದರೂ ಜಾಣತನವನ್ನ ಕಲಿಯುವರೋ? ಪರದೇಶಕ್ಕೆ ಹೋಗತಕ್ಕ ಪ್ರಯಾಣಕ್ಕೆ ಒಪ್ಪಿದಾಗಿಟ್ಟ ಅವನ್ನು ಸ್ವದೇಶದ ಕಡೆಗೆ ಹೊರಳಿಸಿದರೇ? ಗ್ವಾಲಿಯರ ಗ್ವಾಲಿಯರ ಜನರಲ್ಲಾ ಒಂದೆರಡು ತಿಂಗಳಿಗೆ ಸರಾಸರಿಯಾದಿಂದ ಅಗತಕ್ಕ ಲಕ್ಷಾವಧಿ ರೂಪಾಯಿಗಳ ನೆಷ್ಟವನು ನಿಲಿಸಿ, ಅವೇ ಹಣವಂದ ಕೃಷಿ ಕಲ್ಯಾಣವನ್ನು ಚಿಂತಿಸಿ, ಯಾವ ಒಂದು ಲೋಕೋಪಕಾರವ ಕಾರ್ಯವನ್ನು ಕೈಕೊಂಡವೆ, ಒಳತಂಗಳಿಲ್ಲಿಷ್ಟಿನೇ? ಶ್ರಾಥನಿಸಿ ಶಿಷ್ಟಿಣದಂತಹ ಪವಿತ್ರತನು ಕಾರ್ಯಕ್ಕೆ ಖರ್ಚುಮಾಡುತಕ್ಕದೆ, ಸಂಸ್ಥಾನದಲ್ಲಿ ಹೊಣದ ಕೊರತೆಯುಂಟೆ! ಬಡಶಿಕ್ಷಕರು ಹೊಟ್ಟೆಗೆ ಸಾಲುವದಿಲ್ಲವೆಂದು ಹೊಟ್ಟೆ ಹೊಟ್ಟೆ ಬಡಕೊಂಡರೂ. ಇವರಿಗೆ ಶಿಕ್ಷಕರ ಆರ್ತಸ್ವರವು ಕೇಳಲೊಲ್ಲದು! ಅದರೆ, ಮೇಲಿನಂತಹ ಹರುಳಲ್ಲದ ಸಂದರ್ಭದಲ್ಲಿ ಮಾತ್ರ ಲಕ್ಷಾವಧಿ ರೂಪಾಯಿಗಳು ಹೇಳಹೆಸರಿಲ್ಲದೆ ಹೋಗುತ್ತಿರುವವು ಇದೆಲ್ಲಿಯ ನ್ಯಾಯವು?

ಹೊಲೆಯಲ್ಲಿ ಹುಳಿಯನ್ನ ತೊಳೆದಂತೆ ವ್ಯರ್ಥವಾದ ಆಡಂಬರಕ್ಕೆ ಮನಸೋತು, ಪ್ರಜಾನಿಧಿಯನ್ನ ಮನಬಂದಂತೆ ವೆಚ್ಚಮಾಡಿ, ಪ್ರಜರ ಕಲ್ಯಾಣವನ್ನು ಚಿಂತಿಸುತ್ತ, ಲೋಕೋಪಕಾರವ ಕಾರ್ಯಗಳನ್ನು ಮಾಡುತ್ತ ಪ್ರಜಾಪ್ರೇಮವನ್ನು ಸಂಪಾದಿಸುವದೇ, ರಾಜನ ಕರ್ತವ್ಯವೆ! ಈ ಕರ್ತವ್ಯವನ್ನು ಸ್ಮರಿಸಿ, ನಮ್ಮ ಸಂಸ್ಥಾನಿಕರು ವರ್ತಿಸುತ್ತಹೋದರೆ, ಪ್ರಜರು ಅವರನ್ನು ಹಾಡಿಹರಿಸುವದೇನಾಶ್ಚರ್ಯವು?

"ಓರ್ವ ಸಂಸ್ಥಾನ ನಿವಾಸಿ"

ಮೋಟಾರ ವ್ಯವಸ್ಥೆಯಲ್ಲಿ ಸುಧಾರಣೆ.

ಕಳೆದ ನಾಲ್ಕಾರು ವರ್ಷಗಳಿಂದ ನಮ್ಮ ಹಿಂದುಸ್ಥಾನದಲ್ಲಿ ಮೋಟಾರುಗಳ ಹಾವಳಿಯು ಹೆಚ್ಚಿದೆ ಆದರೂ ಈವರೆಗೂ ಸಂಘಶಕ್ತಿಯಿಂದ ಕೆಲಸಮಾಡುವದು ಕಂಡುಬಂದಿಲ್ಲ! ಇದಕ್ಕೆ ನಮ್ಮ ಜನರ ಅಜ್ಞಾನವೇ ಮುಖ್ಯಕಾರಣವು ಯಾವದೇ ವ್ಯವಹಾರ, ಉದ್ಯೋಗವನ್ನು ಸಂಘಶಕ್ತಿಯಿಂದ ನಡೆಸುವದು ಹಿತಪರಿಣಾಮಕಾರಿಯಾಗಿದೆ. ವಿದೇಶೀಯರ ಈ ಪದ್ಧತಿಯು ಅನುಕರಣೀಯವಾದುದು. ಬಾಗಲಕೋಟೆ. ಇಲಕಲ್ಲ ದಾರಿಯಲ್ಲಿ ತಿಲ ಮೋಟಾರುಗಳು ಓಡಾಡುತ್ತಿವೆ. ಈ ಮೋಟಾರಿನ ಒಂದು ಸಂಘವನ್ನು ಸ್ಥಾಪನೆಮಾಡಿ ತದ್ವಾರಾ ಕಾರ್ಯಮಾಡಬೇಕೆಂದು ಮುದ್ರಾಕಚೆರಿಯ ಮೋಟಾರಿನವರು ನಡಿಸಿದ ಪ್ರಯತ್ನವು ಅಭಿಸಂಧಿತೀಯವಾಗಿದೆ ಇವರು ತಮ್ಮ ಪ್ರಯತ್ನವನ್ನು ದೃಢಮನಸ್ಸಿನಿಂದ ಮಾಡಿ ಎಲ್ಲ ಮೋಟಾರಿನಲ್ಲಿ ಕಾಯಂವಾದ ಐಕ್ಯವನ್ನುಂಟುಮಾಡುವರೆಂದು ಭರವಸೆಯಿದೆ. ಇವರಿಗೆ, ಈವರೆಗೆ ಬಂದ ಅನುಭವದಿಂದ, ಇದರಲ್ಲಿ ಬರಬಹುದಾದ ತೊಂದರೆಗಳನ್ನು ಸಹಜವಾಗಿ ಕಂಡುಹಿಡಿಯಬಹುದು ಈ ಅನುಭವದ ಬಲದಿಂದ ತಾವು ರೇಲ್ವೆಕಂಪನಿಯವರಂತೆ ನಿಯಮಗಳನ್ನು ಮಾಡಿ ಪ್ರವಾಸಿಕರ ಅನುಕೂಲತೆಯಬಗ್ಗೆ ಎಚ್ಚರಪಡುವದರಿಂದ ಸಂಘದ ಹಿತವೂ ಆಗುವದು

ಮೋಟಾರುಗಳು ಹೊಂದುವ ವೇಳೆಯನ್ನೂ ದರಗಳನ್ನೂ ಗೊತ್ತುಪಡಿಸಿ ಮೋಟಾರ ಬಿಡುವಸ್ಥಳದಲ್ಲಿ ಎಲ್ಲರಿಗೂ ತಿಳಿದುಬರುವಂತೆ ಹಚ್ಚಬೇಕು ಪ್ರವಾಸಿಕರಿಗೆ ಅನುಕೂಲವಾಗುವಂತೆ ನಿಯಮುಗಳನ್ನು ಮಾಡಬೇಕು ಮತ್ತು ಪ್ರವಾಸಿಕರ ದೂರುಗಳನ್ನು ಅದರದಿಂದ ಕೇಳಲು ತಕ್ಕ ಏರ್ಪಾಡಮಾಡಿ ಅವುಗಳಬಗ್ಗೆ ಯೋಗ್ಯವ್ಯವಸ್ಥೆ ಮಾಡಬೇಕು. ಮೋಟಾರಿನಲ್ಲಿ ಅಪರಿಮಿತಿ ಜನರನ್ನ ಕೂಡಿಸದಂತೆ ನೋಡಿಕೊಳ್ಳುವದು ಪೋಲೀಸಿನವರ ಕೆಲಸವಾಗಿದೆ ಇದರ ಕಡೆಗೆ ಅವರು ದರ್ಲಕ್ಷಿಸಕೂಡದು ಮೋಟಾರಿನವರು ಪ್ರವಾಸಿರಕೊಡಸಭ್ಯತನದಿಂದ ವರ್ತಿಸುವಂತೆ ಕಟ್ಟಳೆಮಾಡಿರಬೇಕು.

—ಓರ್ವ ಪ್ರವಾಸಿಗ.

ನತಕಾರದ ಕಾಯದೆಯೂ, ಪೋಲೀಸರ ಉದ್ದಾಮತನವೂ!

ಸರಕಾರದವರು ಹಿಂದೆಮಾಡಿದ ಕಾಯದೆಯೊಂದನ್ನ ಅಮಲಿನಲ್ಲಿ ತರುವದಾಗಿದೆ, ನಮ್ಮ ಗದಗಿನಲ್ಲಿ ಪ್ರತಿಯೊಂದು ಚೌಕಿನಲ್ಲಿ (ನಾಲ್ಕು ಬೀದಿಗಳು ಸೇರುವ ಸ್ಥಳ) ಒಂದು ಸ್ಟೂಲಇಟ್ಟು ಅಲ್ಲಿ ಒಬ್ಬ ಪೋಲೀಸಿನವನನ್ನು ನಿಲ್ಲಿಸಿ, ಪ್ರತಿಯೊಂದು ಹೋಗುವಬರುವ ಗಾಡಿಗಳು ತನ್ನ ಎಡಭಾಗದಿಂದಲೇ ಹೋಗಬರುವಂತೆ ವೆವಸ್ಥೆಮಾಡಿರುವರು ಇದರಂತೆ ಪ್ರತಿಯೊಂದು ಮೊದ್ದ ಪಟ್ಟಣಗಳಲ್ಲಿಯೂ, ಪಂಡಿರಬಹುದು ಇದು ಸ್ತುತ್ಯವಾದ ಕಾಯದೆಯು ಇನ್ನು ಅಮಲಿನಲ್ಲಿತರುವದೂ ಸ್ತುತ್ಯ ಯಾಕಂದರೆ ಸಣ್ಣಿಕ್ಕಿ ಪಟ್ಟಣಗಳಲ್ಲಿ ಮೋಟಾರುಗಳೂ ಟಾಂಗೆಗಳೂ, ಸಾಯಕಲ್ಲುಗಳೂ ಹೆಚ್ಚಾಗಿ ಬರಲೇ ಅಪಘಾತಗಳಾಗಹತ್ತಿದ್ದರಿಂದ ಹೀಗೆ ಮಾಡಬೇಕಾಯಿತು ಹೀಗೆ ವ್ಯವಸ್ಥೆ ಮಾಡಿದ್ದಕ್ಕೆ ಸರಕಾರವನ್ನು ಹೊಗಳಲೇಬೇಕು ಆದರೆ ಸರಕಾರವು ಮಾಡಿದ ಸ್ತುತ್ಯಕಾರ್ಯಕ್ಕೆ ಸರಕಾರದ ಅಮಲದಾರರ ಅಮಲಿನಲ್ಲಿ ಕೆಟ್ಟುಹೋಗುವದೆಂದು ಹೀಗೆ ಅವರಿಗೆ ಹೇಗೆತಿಳಿಯಬೇಕು? ಆದನ್ನು ತಿಳಿಸುವ ಉದ್ದೇಶದಿಂದಲೇ ಪ್ರಸ್ತುತ ಲೇಖನವನ್ನು ಬರೆದಿರುವೆನು.

ಗದಗಿನಲ್ಲಿ ಪ್ರತಿಯೊಂದು ದೀರಿಯು ಚೌಕಿನಲ್ಲಿ ಮುಧ್ಯರಂಗಕ್ಕೆ ಜವಾನನು ಸ್ಟೂಲ ಹಾಕಿಕೊಂಡು ಕುಳಿತಿರುವನು. ಅಲ್ಲಿ ಹಾಡುಹಗಲು ಹಳ್ಳಿಯ ಜನರು ಸರಕುಕುಂದಿದ ತಮ್ಮ ಚಕ್ಕಡಿಗಳನ್ನು ಹೊಡೆದುಕೊಂಡು ನಿಯ ನಿಶ್ಚಿತವಾದ ಸ್ಥಳಕ್ಕೆ ಹೋಗಲು ಬರುವರು. ಪಾಪ! ಇವರಿಗೆ ಕೊಸದಾದ ಈ ಕಾಯದೆಯು ಹೇಗೆ ಗೊತ್ತಾಗಬೇಕು? ಒಮ್ಮೆ ಸಹ ತಿಳಿಹೇಳದೆ ಪೋಲೀಸನು ಒಮ್ಮಂದೊಮ್ಮೆಲೆ ಅವರ ಮೇಲೆ ಏರಿಹೋಗಿ ಎಲೇ ಸೂಳೇಮಗನೇ! ಚಕ್ಕಡಿ ಎಡಕಿನಿಂದ ಹೊಡಿಯೋದು ಬಿಟ್ಟು ನಡದಸ್ತೆಯಾಗ ಹೊಡೀತೀದೀ, ಚಕ್ಕಡಿ ತರದು ಏಟ್ಟುದಿದ್ದಾವೆ. ನಿನ್ನ ಮೇಲೆ ಖಟ್ಲೆಹಾಕತೀನಿ ಕೊರ್ಟಿನಲಿ! ಅಂತಾ ಗದ್ದರಿಸುವರು ಕೂಡಲೆ ಪಾಪ ಹಳ್ಳಿಗಾರರು ಧೈರ್ಯದಿಂದ ಇಲ್ಲರೀ, ಶಬ್ಬಾಶ್ರಿ ಇನ್ನೊಮ್ಮೆ ಮಾಡಾಗಿಲ್ರಿ ಅಂತ ಎಷ್ಟು ಬೇಡಿಕೊಂಡರೇನು, ಅವರಿಗೆ ದಯಹುಟ್ಟುವದಿಲ್ಲ ಪೋಲೀಸರಿಗೆ ಇನ್ನೊಬ್ಬ ಸ್ನೇಹಿತರು ವರು, ಅವರು ಪೋಲಿಸರಿಂತ ಹೆಚ್ಚಿಗೆ ಗದ್ದರಿಸಿ ಎಲೇ ಅವರು ಬಿಡುವವರೆಲ್ಲ ಎಂಟುಹತ್ತು ಆಣೆ ಕೊಟ್ಟುಹೋಗು ಖಟ್ಲೆಹಾಕ್ಯಾರು. ಅಂತಾ ಅವರಕಡಿಂದಾ ರೊಕ್ಕಾಎಬ್ಬಿಸಿ, ತಾವೂ ಪೋಲೀಸರು ಕೂಡಿ ಚಹಾದ ಅಂಗಡಿಗೆ ಹೋಗುವರು ಇಪ್ಪತೆಲ್ಲ ಟಾಂಗಾ, ಎತ್ತಾದವರು ಗಾಡಿ ಎಡಕಿನಿಂದ ಹೊಡೆಯುತ್ತಿದ್ದರೂ ಎಲೇ ಟಾಂಗಾವಾಲಾ! ಓ ಗಾಡಿವಾಲಾ! ಗಾಡಿಹೊಡಕೊಂಡುಬಾ ಇಲ್ಲಿ ಎಂತಾ ಕರೆದು ಅವರು ಬಂದಕೂಡಲೇ ಏ ಗಾಡೀ ನಡದಸ್ತೆದಾಗ ಹೊಡೀತೀದಿ! ಖಟ್ಲೆಹಾಕತೀನಿ ಅಂತಾ ಅಂಜಿಸಿ ಅವರಿಂದನೂ ರೊಕ್ಕಾತಿನ್ನುವರು. ಇನ್ನು ರಾತ್ರಿಯಲ್ಲಿ ಬೆಳದಿಂಗಳು ಇರಲಿ ಇಲ್ಲದಿರಲಿ ಕಂದಿಲುಗಳು ಗಾಡಿಗೆ ಇರಲೇಬೇಕು. ಇದುಸರಿಯೇ. ಆದರೆ ನಮ್ಮೂರು ಒಳ್ಳೆ ತನದ್ದು ಒಳ್ಳೆಯವರು ಹೊರಕ್ಕೆ ಹೋಗಿ ಬರಬೇಕಾದರೆ ಸಂಜೆಯಾಗ್ಲು

ವದು. ಆದರೂ ಇಲ್ಲಿಯವರು ಲಗುಬಗೆಯಿಂದ ಬರಲು ಯತ್ನಿಸು ವರು. ಗಳಿಗೆ ರಾತ್ರಿಯಾಗುವದೊತ್ತಟ್ಟಿಗಿರಲಿ. ಸೂರ್ಯಾಸ್ತವು ಸಂಪೂರ್ಣವಾಗದ ಅಂದರೆ ಸೂರ್ಯನು ಅರ್ಧ ಮುಳುಗಿದಾಗ ಬಂದರೂ ಖಟ್ಟಿ ದಿತ್ತಿಂದೇ ತಿಳಿಯಬೇಕು. ಬಾಯಿತುಂಬಾ ತಿಂದಿ ಕ್ಕೊಟರೆ ಬಿಟ್ಟುಕೊಡುವರು. ಅಂತೂ ಪೋಲೀಸರು ಇಲ್ಲಿ ಲಂಚಗೊಳಿ ಗಳಾಗಿದ್ದಾರೆ. ಎಷ್ಟೋಸಲ ಸಿರಿವಂತರು ಮೋಟಾರುಗಳು ಬಡವರ ಮೈಮೇಲೆ ಹಾಯು ಅವರ ರಕ್ತವನ್ನು ಭೂಮೇವಿಗೆ ಸುರಿಸಿದ್ದರೂ ಕೇಳು ವವರೇ ಇಲ್ಲ. ಅದರೆ ಬಡರೈತರಗೇ ಮಾತ್ರ ಈ ಗೊರು ಲಂಚ ಕೊಡಲಿಕ್ಕೆ ರಕ್ಕವಿಲ್ಲವ ಬಳತರು ಬಿಟ್ಟಿಯ ಬಲೆಯಲ್ಲಿ ಶಿಕ್ಕರೆಂದೇ ತಿಳಿಯಬೇಕ. ಆ ಮೇಲೆ ಅವರ ಚಾಕಸಿನಾಡುವ ಬೆಂಚ ಮ್ಯಾಜಿ ಸ್ಟ್ರೇಟರು ಸರಿಯಾಗಿ ವಿಚಾರಿಸದೇ ಮಾಡಿದರೇ ಎಂಡು ರೂಪಾಯಿ ದಂಡ, ಆಗ ರೈತರು ಇಲ್ಲರಿ ಗೊತ್ತಿದ್ದಿಲ್ಲರಿ ಬಡ ಅವರೇನ್ರಿ ಅಂತಾ ಹೇಳಿಕೊಂಡಹಾಗೆ ಸಾತಿಗೊಂದರಂತೆ ದಂಡದರೂಪಾಯಿ ಹೆಚ್ಚುವ ಪು. ಅವನ್ನು ಅವನು ತೆತ್ತಲೇಬೇಕಾನವದು ಹೀಗಾಗಿ ಇಲ್ಲಿ ಒಳ್ಳಲಿಗೂ ಗಾತಿಯುವರೂ ಟಾಂಗಾದವರೂ ಸುಖವಾಗಿ ದುಡಿದು ಜೀವಿಸುವ ಹೊತ್ತು ಬಾದಿಲ್ಲ ಇದನ್ನು ನಾವು ಪದೇಪದೇ ನೋಡು ತ್ತಿದ್ದು ಈ ದಿನ ತಲೆಯಲಾರದೇ ತಿಳ್ಳು ಮುಂದಿರಿಸಿದ್ದೇವೆ ಇದಲ್ಲದೆ ಬೌಕನಲ್ಲಿ ಜವಾನನ್ನು ವಿಚಾರಿಸಲು ರಾಯರೇ ನಿನ್ನಮೇನು ಗಂಟು ಖರ್ಚಾದೀತು ಇಂಥ ಇಪ್ಪತ್ತು ಖಟ್ಟಿ ಪ್ರತಿಬಿಬ್ಬ ಜವಾನನು ಪ್ರತಿ ತಿಂಗಳಲ್ಲಿ ತಂದೇ ತೀರಬೇಕೆಂದು ಮೇಲಿನ ಅಷ್ಟೆಅವೆ ಅಂತಾ ಅನ್ನುವನು.

ಅನುಲದವರೇ ಇವರಕಡೆಗೆ ಸ್ವಲ್ಪ ಲಕ್ಷ್ಯಕೊಡಿರಿ.

ಓರ್ವ ಪ್ರತ್ಯಕ್ಷದರ್ಶಿ.

ವಿಜಾಪುರ ಜಿಲ್ಲೆಯ ಸುದ್ದಿಗಳು.

[ನಮ್ಮ ಸ್ವಂತ ಸುದ್ದಿಗಾರರಿಂದ]

ಮುದ್ದೇಬಿಹಾಳ. ಈ ಊರ ಅರ್ಬನ್ ಕೊ. ಬ್ಯಾಂಕಿನ ಮೂರು ನಾಲ್ಕಾಂಶ ಬಂಡವಾಲವು. ಕಳಬಾಕಿಯಾಗಿರುವದು, ಇದ ಕ್ಕಾಗಿ ಹಿಂದಿನಕಾರಿ ಅಡಿಟರರು ಬಹಳ ಬಗೆಹೊಂತಿದ್ದರೂ ಈ ವರ್ಷ ವೂ ಅದೇ ಹಾಡಿದೆ! ಮತ್ತೆ ಅಡಿಟರರು ಈಗ ಬಂದಿದ್ದಾರೆ! ಏನು ಬರೆಯುವರೋ ನೋಡಬೇಕು? ಅದರೆ ಮುಂದಿನ ವರ್ಷ ಈ ಸ್ಥಿತಿ ಉಳಿಯಲಿಕ್ಕಿಲ್ಲ. ಯಾಕಂದರೆ ಈ ವರ್ಷ ಇಲ್ಲಿ ಬೆಳೆಗಳು ಸಾಧಾರಣ ವೆಂದೆನಿಸುವದು.

ಬದಾಮಿ. ತಾಲೂಕಿನ ಕೆಲಿಳಚಗುಡ್ಡದ ನಿವಾಸಿಯಾದ ಅಂ ಬುವವನು ಐವತ್ತು ರೂಪಾಯಿಗಳನ್ನು ಖರ್ಚಿಸುವವಕ್ಕಾಗಿ ಅಮಿನ ಗಡ್ಡಿ ಹೋಗಿ ಅಲ್ಲಿ ಅತ್ತಗಳನ್ನು ಕೊಂಡಲು ಹತ್ತೆಂಟು ರೂಪಾಯಿ ಗಳು ಐವತ್ತಿಹೊರಡಲು ಅಗ್ಗೆ ಅಲ್ಲಿಯೇ ಸಮೀಪದಲ್ಲಿರುವ ಒಬ್ಬ ಪೋಲೀಸನಿಗೆ ಸಂಶಯಬಂದು ಅವನನ್ನು ಹಿಡಿದು ತಪಾಸಮಾಡಲಾಗಿ ಅವನ ಹತ್ತರ ನಾಲ್ಕು ರೂಪಾಯಿಗಳು ಹೊರಬಿದಂತೆ? ಮುಂದೆ ಅವ ನನ್ನು ಪೋಲೀಸಚಾವಡಿಗೆ ಕರದೊಯ್ದು ವಿಚಾರಿಸಲು ಅವನು ಹೇಳಿ ದ್ದೇನಂದರೆ:—

ಕೆಲಿಳಚಗುಡ್ಡದಲ್ಲಿ ಸಿದ್ಧಪ್ಪಾನಾಗೂರ ಅಂಬುವವನ ಮನೆಯಲ್ಲಿ ಮಾಡಿದ್ದೇವೆ ಅಂತಾ ಹೇಳಿದ ಮೂಲಕಾ ಅಲ್ಲಿಂದ ಪೋಲೀಸರು ಜಪ್ತಮಾಡಲಿಕ್ಕೆ ಕೆಲಿಳಚಗುಡ್ಡಕ್ಕೆ ಬಂದು ಸಿದ್ಧಪ್ಪಾನಾಗೂರ ಇವರ ಮನೆ ಜಪ್ತಮಾಡಲು ರೂಪಾಯಿಗಳನ್ನು ಕಾಡುವ ಪಡಿಯಚ್ಚು ಮುಂತಾದ ಎಲ್ಲ ಸಾವಾಸಗಳು ಸಿಕ್ಕವು. ಆದರೆ ಸಿದ್ಧಪ್ಪಾ ಇವನು ಫರಾರಿಯಾಗಿರುವನಂತೆ ಎಂದು ವಾರ್ತೆ ಇದೆ.

ಸಿದ್ಧಪ್ಪನು ಊರಲ್ಲಿ ದೊಡ್ಡಮನುಷ್ಯನೂ, ಸಾಲೆಯ ಪಂಚನೂ, ಲಿಂಗಾಯತ ಬಾಂಧವರಲ್ಲಿ ಪ್ರಮುಖನೂ, ಇರುವನಂತೆ

ಧಾರವಾಡದ ಪತ್ರ.

ಒಂದು ಕಾಲಕ್ಕೆ ಇದ್ದಿಯು ನಗರಸಭೆಯ ಸಧಾನನರಾದ ರಂಪ್ರ ಯ್ಯಾ ಹಿರೇಮಠ ಇವರಮೇಲೆ ಕಾಟನ್ ಸೇಲ್ ಸೊಸಾಯಿಟಿಯ ದುರುದ್ದೇಶದಿಂದ ಸುಳ್ಳಾಪವಾದವನ್ನು ಹೊರಿಸಿ ಫಿರ್ಯಾದಿ ಮಾಡಿರುತ್ತಾರೆ.

ತುಂಬರಗುಂಪಿನರೊಬ್ಬರಾದ ಶ್ರೀ ಕೊಪ್ಪಳದವರು ಇಲ್ಲಿಗೆ ಬಂದಿದ್ದರು. ತಾವು ಸ್ವತಃ ಬರೆದ ಕೆಲವು ಹೊಸ ಕವಿತೆಗಳನ್ನು ಜಯ್ಯು ಕರ್ನಾಟಕ ಕಾರ್ಯಾಲಯದಲ್ಲಿ ಅಂಗು ತೋರಿಸಿದರು

ಹಕೇಮು ಅಜಮಲ್‌ಖಾನರ ಆಕಾಲಿಕ ನಿಧನವಬಗ್ಗೆ ದುಃಖ ಪ್ರದರ್ಶನಮಾಡುವವಕ್ಕಾಗಿ ಲಿಂಗಾಯತರ ನಗರ (Town Hall) ನುಂದಿರದಲ್ಲಿ ರಾ ತಿರಪತಿ ರಾಘವೇಂದ್ರರಾಯರ ಅಧ್ಯಕ್ಷತೆಯ ಕೆಳಗೆ ಧಾರವಾಡದ ನಾಗರಿಕರ ಸಭೆಯು ೧೧ ನೇ ತಾರೀಖಿನದಿನ ಸಾಯಂಕಾಲಕ್ಕೆ ಸೇರಿತು.

ಇನೇಂದಿಗೆ ತಾರೀಖಿನಿಂದ ಹಳೆ ನಗರಸಭೆಯು ಮುರಿದು ಹೊಸ ಸಭೆಯು ಅತುಲಿತಲ್ಲಿ ಬಂದಂತಾಯಿತು. ಇನ್ನೂ ಸರಕಾರ ದಿಂದ ನಿಯುಕ್ತರಾದ ಸಭಾಸದರ ಹೆಸರುಗಳು ಬಂದಿಲ್ಲವಾದಕಾರಣ, ಅಧ್ಯಕ್ಷರ ಆರಿಸುವಿಕೆಯು ಇನ್ನುವರೆಗೂ ಆಗಿಲ್ಲ ನಗರ ಪಿತಾಮಹ ರಾದ ಜೀವೇಶಿ ವಿಸಾಮಕರಾಯರು ಹೊಸಸಿರಲಿ ಸ್ವಾತಂತ್ರ್ಯ ಸಸ್ಯ ನನ್ನು ಅಸ್ತಿತ್ವದಲ್ಲಿ ತರಲು ಪ್ರಯತ್ನಮಾಡುತ್ತಿರುವರು. ಯೋಗ್ಯವಾದ ಕೆಲಸ.

ಈ ಊರಲ್ಲಿ ಎಲ್ಲಿಸೋಡಿದರೂ ಚಳಿಜ್ವರ ವಿಷಮಜ್ವರಗಳ ಉಪಟಳವು ಬಹಳವಾಗಿದೆ. ನಗರಸಭೆಯವರು ಊರ ಆರೋಗ್ಯತೆ ಯಕಡೆಗೆ ಲಕ್ಷಕೊಡುವರೇನು?

ಪ್ರತಿವರ್ಷದಂತೆ ಈಸಾರಿಯೂ ಇಲ್ಲಿಯು ಶ್ರೀಮನ್ಮಧ್ವಸಿದ್ಧಾಂ ತೋತ್ತೇಜಕ ಸಭೆಯು ಸರವಾಗಿ ಬೇರೆ ಬೇರೆ ತರಗತಿಯಲ್ಲಿ ವಿದ್ಯಾರ್ಥಿ ಗಳ ಪರೀಕ್ಷೆಯು ದಿಸೆಂಬರ ೨೩-೨೪-೨೫ ತರೆಗೆ ನಡೆದವು ಮತ್ತು ಅವರವರ ಯೋಗ್ಯತೆಗನುಸಾರವಾಗಿ ದಕ್ಷಿಣೆಗಳು ಕೊಡಲ್ಪಟ್ಟವು. ಇವಲ್ಲದೆ ದಿನಾಲು ಊರಲ್ಲಿಯ ವಿದ್ವಾಂಸರ ಉಪನ್ಯಾಸ ಕಾರ್ಯಗಳಾದವು.

ಪಟ್ಟಸರೋವರದಲ್ಲಿ ಶ್ರೀಮನ್ ಮಧ್ವಸಿದ್ಧಾಂತೋತ್ತೇಜಿನಿ ಸಭೆಗೆ ಹುಬ್ಬಳ್ಳಿಯ ಸಂಜಜ್ಜನ್ವಾದ ಶ್ರೀ ಪೋತದಾರ ಬಳವಂತ ರಾಯರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರುವರು.

ಈ ಸಾರಿಯು ಅರಿಸುವಿಕೆಯಲ್ಲಿ ಒಂದು ಕಾಲುಸಹ ವೆಚ್ಚವಿಲ್ಲದೆ ಬಂದ ನಿಸ್ಪೃಹಿ ಹಾಗೂ ಜನರ ಸೇವೆಯಲ್ಲಿ ತತ್ಪರರೂ ಆದ ಶ್ರೀ ಧಿ ಸೇ ನರಸಿಂಗರಾಯರಿಗೆ ೧ ಪದವಿ ಕೊಡಬೇಕೆಂದು ಅವರ ಮಿತ್ರವಂಡಲದವರು ನಿಶ್ಚಯಿಸಿರುತ್ತಾರೆ ಸ್ವತಃ.

ಧಾರವಾಡದ ಪುಸ್ತಸಿದ್ಧ ವಕೀಲರಾದ ಶ್ರೀ. ಹುಲಕೋಟೆ ಯವರು ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸಾಯಿಟಿಗೆ ೫೦೧ ಸಾವಿರ ರುಪಾಯಿಗಳ ದೇಣಗಿಯನ್ನು ಕೊಟ್ಟಿರುವರೆಂದು ಟಾಯಿಮ್ಸ್ ಆಫ್ ಇಂಡಿಯಾ' ಪತ್ರದಲ್ಲಿ ಪ್ರಸಿದ್ಧವಾಗಿತ್ತು. ಆದರೆ ಈ ರಕ್ಕವನ್ನು ತನ್ನ ಸ್ವಂತವಾದ ದೇಣಗಿಯಾಗದೆ, ಜನರಲ್ಲಿಯಿಂದ ವರ್ಗಣಿ ರೂಪವಾಗಿ ಕೂಡಿಸಿ ಕೊಡುವ ವಾಗ್ದಾನವನ್ನು ತಾವು ಕೊಟ್ಟಿರುವೆನೆಂದೂ, ಮೊದಲಿನ ಸುದ್ದಿಯು ಸುಳ್ಳೆಂದೂ ಶ್ರೀ. ಹುಲಕೋಟಿಯವರು ಪ್ರಸಿದ್ಧಪಡಿಸಿರುವರು.

ಹುಬ್ಬಳ್ಳಿಯ ಪತ್ರ.

ಹೋಗರಾಜ ವಿನಾಯಕ ಮಹಾರಾಜ ಇಚ್ಛಲಿಕರಂಜಿಯವರು ಇಲ್ಲಿಗೆ ಬಂದಿದ್ದು, ಬ್ರಹ್ಮಮಂದಿರ ಕೃಷ್ಣಮಂದಿರದಲ್ಲಿ ಕೀರ್ತನೆ ಗಳಾದವು.

ವಿಶ್ವಬ್ರಾಹ್ಮಣರ ಪರಿಷತ್ತು ಮುಗಿಯಿತು. ಅದರೆ ಪರಿಷತ್ತಿನಲ್ಲಿ ವಿನಾಯಿತೆನ್ನುವದು ಪರಿಷತ್ತಿಗೆಹೋದ ಪ್ರತಿನಿಧಿಗಳಿಗೆ ಗೊತ್ತಾಗಿರುವ

ದಿಲ್ಲಿ ಪ್ರತಿನಿಧಿಗಳನ್ನು ಪರಿಷತ್ತಿನಲ್ಲಿ ಏನಾದರೂ ಕೇಳಿದರೆ ನಮಗೆ ಏನೂ ತಿಳಿಯಲಿಲ್ಲವೆಂದು ಹೇಳುತ್ತಾರೆ.

ನಾರಾಯಣ ವ್ಯಾಯಾಮಶಾಲೆಯವತಿಯಿಂದ ಮತ್ತು ಭಗಿನಿ ಮಂಡಳದ ವತಿಯಿಂದ ವಿನಾಯಕಮಹಾರಾಜ ಇಚ್ಛಲಕರಂಜಿ ಇವರ ಪ್ರವಚನಗಳು ಕರ್ನಾಟಕ ಕ್ರಿಸ್ತನಿಷ್ಠ ಯೋಗ, ಮತ್ತು ಸ್ತ್ರೀ ಶಿಕ್ಷಣದಮೇಲೆ ಆದವು

ವಿನಾಯಕ ಮಹಾಜರ ಸ್ತ್ರೀಯರಲ್ಲಿಯು ಸಲಿಗೆಯೂ, ಏಕವಚನ ದಿಂದ ಮಾತಾಡುವದೂ ಮುಂತಾದನೇಕಕಾರಣದಿಂದ ಕೆಲವು ಜನ ರಲ್ಲಿ ಸಂಶಯ ಪಿಶಾಚಿಯು ಹೊಕ್ಕಿರುತ್ತದೆ

ಮುನಸೀಪಾಲ್ಟಿಯು ಮತದಾರ ಲಿಸ್ಟ ತಯಾರಿಸಿದ್ದು, ಅದರಲ್ಲಿ ಯಾರ ಹೆಸರು ಬಂದಿರುವದಿಲ್ಲವೋ, ಅವರು ಬಂದು ನೋಡಿಕೊಂಡು ಹೆಸರನ್ನು ಹಾಕುವದಕ್ಕೆ ಅರ್ಜಿಯನ್ನು ಕೊಡಬೇಕೆಂದು ಡಂಗುರ ಸಾರಿರುವರು. ಆದರೆ ನಾಕಾಳಿಸೂಟಿಯು ಇದ್ದ ಪಾಲಕ ಎಷ್ಟೋ ಜನರು ಊರಾಚೆಟ್ಟು ಹೋಗಿರುವರು ಅವರಿಗೆ ತಿಳಿಯಬೇಕಾದರೂ ಹ್ಯಾಗೆ, ಕಾರಣ ಮುದ್ದತನ್ನು ವಾಢಾಯಿಸುವರೋ?

ನಮ್ಮ ಬೆಳಗಾವಿಯ ಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ಪಾವಾಪೂರ ತಾಲೂಕ ಲೋಕಲ್ ಬೋರ್ಡಿನಲ್ಲಿ ಕರ್ನಾಟಕ ವಿಶೇಷವಾದ ವಿಷಯವಾಗಿಯೂ ಕನ್ನಡನಾಡಿಗೆ ಪ್ರತ್ಯೇಕ ವಿಶ್ವವಿ ದ್ಯಾಲಯವನ್ನು ಕೊಡಬೇಕಾಗಿಯೂ ಜಿಲ್ಲಾ ಲೋಕಲ್ ಬೋರ್ಡಿನ ಹರುಷಾಗಿ ಮುಂಬಯಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ಗೊತ್ತು ಪಳಿಯಾಗಿದೆ.

ಇಲ್ಲಿ ಅಕ್ಟೋಬರ ತಿಂಗಳಲ್ಲಿ ನಡೆದ ಕಲೆಕ್ಟರರ ಬಂಗಲೆಯಲ್ಲಿ ಆದ ಕಳವಿನಲ್ಲಿ ಹಳೇ ಬಟ್ಲರನ ಸಂಬಂಧವಿತ್ತೆಂದು ಪ್ರಕಟಿಸಿತ್ತಷ್ಟೇ ಆದರೆ ಆ ಸೇನಸಾಹೇಬನೆಂಬ ಹನುಮಂತ ಕಳವುಮಾಡಿರುವನೆಂದು ಪೋಲೀಸರು ಅವನನ್ನು ಬಂಧಿಸಿರುವರು ಸುಮಾರು ೧೫೦೦ ರೂ. ಸಾವಕಾರು ಸಿಕ್ಕಿರುತ್ತೆ ಮೇ ಕರೆಕ್ಟ ಸಾಹೇಬರ ೫೦೦೦ರೂಪಾಯಿ ನೋಟು ಸಿಕ್ಕಿರುತ್ತದಂತೆ, ಇವರ ವಿಚಾರಣೆಯು ಪೂರ್ಣಮಾಡಿದಬಾದ ಹೊಸ ತಾಲೂಕ ಫೌಜದಾರ ಮೆ. ಜೆ. ಡಿ ಜಗದಾಳ ಇವರ ಕಡೆಗೆ ನಡೆದಿದೆಯಂತೆ.

ಇಲ್ಲಿಯ ರೇಲವೆ ಮಂಡಳದ ಸೆಕ್ರೆಟರಿಯವರಾದ ಮಿ. ನಾ ಗೇಶರಾವ ಮುರಾರಿ ಮತ್ತು ಮಿ|| ಖಿತಿಜ. ಬಿ. ಏ ಇವರಿಗೆ ಹಿಂಡಲಗಿ ಜೇಲದಲ್ಲಿ, ಧಾರ್ಮಿಕ, ಮತ್ತು ನೈತಿಕ ವಿಷಯದ ವ್ಯಾಖ್ಯಾನವನ್ನು ಕೊಡಲಿಕ್ಕೆ ಸರಕಾರದವರು ಕೇಳಿರುತ್ತಾರೆ

ಮುಂಬೈ ಸ್ಟೇಶನ್ನಿನ ವೇಟಿಂಗ ಪ್ರವಾಸಿಕರಿಗೆ ಯಾಗುವ ತೊಂದ ರೆಗಳ ಕುರಿತು ಇಲ್ಲಿಯ ರೇಲವೇ ಮಂಡಳದ ಸೆಕ್ರೆಟರಿಯವರು ಜಿ. ಐಯು. ಪಿ ರೇಲವೆ ಅಧಿಕಾರಿಗಳಿಗೆ ತಿಳಿಸಲಾಗಿ "ತೀಪ್ರವೇ ಆ ತೊಂದರೆಗಳನ್ನು ದೂರಮಾಡುತ್ತೇನೆ" ಎಂದು ಮಂಡಳದ ಸೆಕ್ರೆಟರಿಯವರಿಗೆ ಬರೆದು ಬಂದಿದೆ.

ಈರಂವವಾತ ಸುಬ್ಬಾನದ (ಜಿ ಕದಲಿ) ವಾರ್ಧಮಾನ ದಲ್ಲಿ ಸ್ತ್ರೀಮಂಡಳ ಸ್ತ್ರೀಯರಿಗಾಗಿ ಏರ್ಪಾಟಾದ ಎಳ್ಳ ಜಿಲ್ಲೆಯ ಪ್ರದರ್ಶನವು ಶ್ರೀಮಂತ ರಾಣೀಸಾಹೇಬರ ಪಸ್ತದಿಂದ ತಾ|| ೧೪ ಜಾನೇವಾರಿಯಲ್ಲಿ ಪ್ರಾರಂಭವಾಗುವದು

ರೇಲವೆ ಕ್ರಾಸಿಂಗ ಗೇಟಿದ ಖರ್ಚು ೬೦೦೦ ರೂ ರೇಲವೆ ಕಂಪನಿಯವರು ಬೇಡಿದ್ದರಂತೆ! ಮಿ|| ಕಲೆಕ್ಟರ ಸಾಯಬರು ಮುನಸಿಪಾಲಿಟಿಯವರಿಗೆ ಕೇಳಲಾಗಿ ಮುನಸಿಪಾಲಿಟಿಯವರು ಜನ ರಲ್ ಕಮೀಟಿಮಲ್ಲಿ ೬೦೫೦ ರೂ ಕೊಡವದು ಗೊತ್ತುಮಾಡಿ ದರು ಉಳಿದ ರೂಪಾಯಿ ರೇಲವೆ ಗೇಟಿನ ದುರಸ್ತಿಯ ಬಗ್ಗೆ ವರ್ಷಾ ಖರ್ಚು ಹತ್ತುವದು. ಇದರ ಮುಂದಿನ ಖರ್ಚು ಪ್ರತಿ ವರುಷಕ್ಕೆ ೫೦೦ ರೂಪಾಯಿ ರೇಲವೆಯವರು ಎರಡನೆ ವ್ಯವಸ್ಥೆ ಯನ್ನು ಮಾಡುವವರಿಗೆ ಕೊಡಬೇಕೆಂದು ಗೊತ್ತಾಗಿದೆ.

ಇಲ್ಲಿಯ "ಎಸ್ಟಿಂಗ ವರ್ಕ್ಸ" ಮೂಲಕರಾದ ಶ್ರೀ ದೇವ ವಾಂಡೆ ಇವರಿಗೆ ಕೋಲ್ಹಾಪುರದಲ್ಲಿ ಆದ ಒಕ್ಕೂಲಕನದ ಪ್ರದರ್ಶ ನದಲ್ಲಿ ಮೊದಲನೇ ತರಗತಿಯ ಸುವರ್ಣ ಪದಕವು ದೊರೆತಿದೆ.

ವೆಂಗುರ್ಲಿಯಲ್ಲಿ ಪ್ರಚಂಡವಾದ ದೊಡ್ಡ ಹೆಬ್ಬಾವು ಅಲ್ಲಿಯ ಪೋಲಿಸ ಇನಸ್ಪೆಕ್ಟರ ಒಂದು ಆಡನ್ನು ನುಂಗಿತ್ತು, ಆದನ್ನು ಬಿಡಿಸಬೇಕೆಂದು ಪ್ರಯತ್ನ ಪಟ್ಟು ಕೂಡಿದ ಜನರು ನೋಡಿದರು. ಆದರೆ ಹೆಬ್ಬಾವನ್ನು ಗುಂಡು ಹಾಕಿ ಕೊಲ್ಲಬೇಕಾಯಿತು ಆದರ ಸಂಗಡ ಆಡನು ಸತ್ತಿತ್ತು.

ಮಿರಜದಲ್ಲಿ ಅಂಜಾಬಾಯಿ ವ್ಯಾಯಾಮ ಸಂಸ್ಥೆಯವರು ಮಾ ರ್ಗದರ್ಶಕ ತಿಂಗಳಲ್ಲಿ ೪ ಲಕ್ಷ ಸಾಷ್ಟಾಂಗ ನಮಸ್ಕಾರಹಾಕಿದರು.

ಸಾಂಗಲಿ ಆರೋಗ್ಯ ಸಂವರ್ಧನ ಮಂಡಳದ ಪರೀಕ್ಷೆ ಕಮೀ ಟಿಯವರು ಶ್ರೀ ಸಾ|| ರಮಾಬಾಯಿ ಕಾನಿಟಕರ ಇವರು ಬರೆದ "ಸಾಷ್ಟಾಂಗ ನಮಸ್ಕಾರ" ಈ ನಿಬಂಧವು ಬಹುಮಾನಕ್ಕೆ ಪಾತ್ರ ವೆಂದು ಗೊತ್ತುಮಾಡಿದ್ದಾರೆ.

ಹಿಂದುಸ್ಥಾನ.

ಇಂದೂರದ ಮೊದಲಿನ ಮಹಾರಾಜರು ವಿ ಸ್ ಮಿಲ್ಲಸ್‌ಎಂಬ ಅಮೇರಿಕೆಯ ಕುಮಾರಿಯೊಡನೆ ಲಗ್ನವಾಗುವರೆಂಬ ವಿಶ್ವಸನೀ ಯವಾದ ಸುದ್ದಿಯಿದೆ. ಇವರು ತಮ್ಮ ಅಮೇರಿಕೆಯ ಪ್ರವಾಸದಲ್ಲಿ ಕ್ಯಾಲಿಫೋರ್ನಿಯಾ ಎಂಬಲ್ಲಿ ಇವಳನ್ನು ಕಂಡರು ಮುಂದೆ ಪರಿ ಚಯವು ಪ್ರೇಮದ ಸದ್ಯಕ್ಕೆ ವಿವಾಹದಲ್ಲಿ ಪರಿಣಮಿಸುವಂತಿದೆ! ಮನುಕಾಜಳಿಂದ ಮೇ ಕೈಯ ಮೂಲಕ ರತ್ನಜಡಿಸಿಕೊಂಡ ಮಹಾ(?) ರಾಜರಿಗೆ! ಹಿಂದೂ ಧರ್ಮ ಸಂಸ್ಕೃತಿಗಳನ್ನು ಕಾಯಲು ಟೊಂಕಕಟ್ಟಿದ ಕ್ಷತ್ರಿಯರಾಜರಿವರು! ಈ ಮಿಲ್ಲರ ಕುವರಿಯು ಯಾವ ಅನರ್ಥಕ್ಕೆ ಕಾರಣಳಾಗುವಳೋ ಏನೊ! ವಿಷಯ ಲಾಲಸೆಯು ದಾಸರಾದ ಈ ಸಂಸ್ಥಾನಿಕರ ಲೀಲೆಯು ಅಗಾಧವಾಗಿದೆ.

ದೇವಾಸದ ಯುವರಾಜರು ತಮ್ಮ ತಂದೆಯ ಕಾಟವನ್ನು ತಪ್ಪಿಸಿಕೊಳ್ಳುವದಕ್ಕೆ ಇಂದೂರದ ರೆಸಿಡೆಂಟ ಸಾಹೇಬರಿಗೆ ಶರಣು ಹೋದರು. ಇವರ ತಾಯಿಯಾದ ಕೊಲ್ಹಾಪೂರದ ಶ್ರೀಮತಿ ಅಕ್ಕಾಜಾಯಿಯವರ ಮೇಲಿರುವ ಸದ್ಯದ ಮಹಾರಾಜರ ಮುನಿಸೇ ಇದಕ್ಕೆ ಕಾರಣವಂತೆ! ಗಲಿ ಪರುಷದ ಈ ಯುವರಾಜರಿಗೆ ಜತ್ತ, ಸಂಸ್ಥಾನಿಕರ ಸುಗಳನ್ನು ಕೊಟ್ಟಿದೆ ಸದ್ಯಕ್ಕೆ ಅವರು ಮುಂಬಯಿ ಯಲ್ಲಿ ಸುಖಕ್ಕಿತವ ಗಿರುವರು. ವ್ಯಾಪಿಸರಾಮರು ಇದರ ಬಗ್ಗೆ ವಿಚಾರ ಮಾಡ ಬರಿಯವರು

ಮುಂಬಯಿ ಮಹಾವಿದ್ಯಾಲಯದಲ್ಲಿ ಆರ್ಯಸಮಾ ಜದ ವತಿಯಿಂದ ಏರ್ಪಡವಾಗಿದ್ದ ಸನ್ಮಾನದಲ್ಲಿ ತಮ್ಮ ವದಗೊ ಸ್ಸರ ಡಾ|| ಸಾವರಕರ ಇವರ ಅನ್ಯೋನ್ಯತೆಯ ಕೆಳಗೆ ಒಂದು ಸಭೆ ನೇರುತ್ತು. ಸಭೆಯಲ್ಲಿ ವಿರೋಧಿಗಳ ಮಸ್ತು ಅನುಕೂಲವುಳ್ಳವರ ಭಾಷಣಗಳಾಗಿ ಕಾರ್ಯವು ಒಳ್ಳೆ ರೀತಿಯಿಂದ ಜರುಗಿಲ್ಲ ಆರ್ಯ ಸ್ವರು ಸಭಾಸ್ಥಾನದಿಂದ ಆರ್ಯಸಮಾಜದ ಸ್ವಯಂಸೇವಕರ ಸಹಾ ಯದಿಂದ ಪಲಾಯನ ಹೇಳಿಸಿದರು. ಸಮಾಜಸುಧಾರಕರು ಹಾಡೇ ಇದು!

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರನ್ನು ಕರೆಸಿದ್ದೇವೆ ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್‌ಲೆದರ, ಹಾಫ್‌ಲೆದರ ಫುಲ್‌ಕ್ಲಿಕೊ, ಹಾಫ್‌ಕ್ಲಿಕೆನ್, ಸಿಫ್ಲ್ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ ಲೆದರ ಬೈಂಡಿನ ಮೇಲೆ ಎಲ್ಲ ಗೆಡು ಗೋಲ್ಡಗಿಲ್ಟ ಕೆಲಸವೂ ಪಡಿಸಲ್ಪಡುತ್ತದೆ.

ಪ್ರಯಾಣಿಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರಾವ್ಹಲಿಂಗ ಬ್ಯಾಗುಗಳೂ (ಕೈಸೆಟ್ಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತ ದಪ್ಪನ ಹ ಕಾನೂಪ ಪಾಕಿಟಗಳೂ, ಲೆದರಿಂದಲೂ, ಬಟ್ಟೆಯಿಂದಲೂ, ಕೃಷ್ಣಾಂಜನದಿಂದಲೂ ನಮೂನೆಯಾರು ತಯಾರ ಮಾಡಲ್ಪಡುವದು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿದಿಯನ್ನು ಹೊಸದಾಗಿ ಕಂಪನಿಯ ನಮೂನೆಯಲ್ಲಿ ಹಚ್ಚು ಸಮಯ ಬಾಳಿಕೆ ಬರುವಂತೆ ತಯಾರುಮಾಡಿ ಚಲೋ ರೀತಿಯಿಂದ ದುರಸ್ತಿ ಮಾಡಲ್ಪಡುವದು

ಇನ್ನು, ಕೋರ್ಟ ಮತ್ತು ಕಚೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೊಲಿಯೋಗಳನ್ನೂ, ಫೈಲುಗಳನ್ನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ವೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ ವಿದ್ಯಾರ್ಥಿನಿಯರಿಗೆ ತಕ್ಕದ್ದಾದ ಹಾಗೂ ಉಪಜೀವನವ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಹೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭಕೋಣ,
ವ್ಯವಸ್ಥಾಪಕರು, ಕ ಮ ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಮ.

ಈ ನಕ್ಷೆಯಲ್ಲಿ ಕಂಡ ಪೌಂಟಿನ್ ಪೇನಾಪು ಇಂಗ್ಲಂಡಿನಲ್ಲಿ

ತಯಾರಾದ ದ್ದು ಇದಕ್ಕೆ ೧೪ ಕರೆಟ್ ನ ಭುಗ್ಗಾರದಂಥ ಸಿಬ್ಬು ಹಾಕಿದೆ ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚಿನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ಕೊಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ರೂ ೨-೮-೦

ವಿಳಾಸ- ಪೀಟರ್ ವಾಚ್ ಕಂಪನಿ.
ಪೋಷ್ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟೆ, ಪಜಾವುತ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತಲಿನ ಪ್ರಾಸಗಿನ ಸರ್ವೀಸಿನ ಮೋಟಾರ ಮಾಲಕರಿಗೆ ಸೌಸ್ಯೋಯ ದೊರವಾಗಬೇಕೆಂದು:
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೬ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರ .

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರ್‌ಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಪೇಂಟಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕರು— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಸುಂಗ ಮಾಡಿ ಕೊಡುವೆವು

ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಲಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ಉಚಿತ! ಉಚಿತ!!! ಕೇವಲ ಪುಗಸಟ್ಟೆ!!



೧೯೨೬ನೇ ಜನವರಿ ೧೫ರಿಂದ ಪ್ರಾರಂಭ.

ನಾವು ನಿಮಗೆ ೫ ವರ್ಷಗಳು ಗ್ಯಾರಂಟಿಯಾಗಿ ನಡೆಯುವ ಬಹು ಸುಂದರ ನಾಗಿಯೂ, ರವ್ಯವಾಗಿಯೂ, ಇರುವ ಹೊಸ ನಮೂನೆಯ "ರೋಲ್ಡ್ ಗೋಲ ರಿಸ್ಟ್‌ವಾಚ್" ಎಂಬ ಕೈಗೆ ಕಟ್ಟಿಕೊಳ್ಳುವ ಗಡಿಯಾರವನ್ನು ಉಚಿತವಾಗಿಯೂ ಬ ಮಾನವಾಗಿಯೂ ಕೊಡುತ್ತೇವೆ ಇದನ್ನು ಪಡೆಯುವ ಕ್ರಮವು ಅತಿಸುಲಭ! ಹೇಗೆಂ

೧. ನೀವು ನಮಗೆ ರೂ ೧-೮-೦ ಕೂಟ್ಟಿ ನಿಮ್ಮ ಹೆಸರನ್ನು ನಾವು ರಿಜಿಸ್ಟರು ಮಾಡಿಕೊಂಡು ನಿಮಗೆ ೫ ಕೂಪನ್ ಗಳನ್ನು ಕೊಡುತ್ತೇವೆ ೨. ಆ ೫ ಕೂಪನ್‌ಗಳನ್ನು ನೀವು ನಿಮ್ಮ ಸ್ನೇಹಿತರಿಗಾಗಲಿ, ಪರಿಚಯಸ್ಥರಿಗಾಗಲಿ, ೫ ಆಣೆ ಯ ಪ್ರಕಾರ ಮಾರಿ ನಮಗೆ ಕೊಟ್ಟಿರುವ ಮೊಬಲಗನ್ನು ವಾಪಸ್ ಪಡೆಯತಕ್ಕದ್ದು

೩. ಹೀಗೆ ನಿಮ್ಮಲ್ಲಿ ಕೂಪನ್ ಪಡೆದವರು ರೂ. ೧-೪-೦ ಯನ್ನೂ ಮತ್ತು ನಿಮ್ಮಿಂದ ತೆಗೆದುಕೊಂಡ ಕೂಪನ್‌ನ್ನೂ ನಮಗೆ ಕಳುಹಿಸಿಕೊಟ್ಟಲ್ಲಿ ಅವರ ಹೆಸರನ್ನು ರಿಜಿಸ್ಟರು ಮಾಡಿಕೊಂಡು ಅವರಿಗೆ ಪುನಃ ೫ ಕೂಪನ್‌ಗಳನ್ನು ಕೊಡುತ್ತೇನೆಂಬ ದಾಗಿ ನೀವು ಅವರಿಗೆ ತಿಳಿಸತಕ್ಕದ್ದು. ಇದರಂತೆ ನಿಮ್ಮಿಂದ ಪಡೆದ ೫ ಕೂಪನ್ನಿನವರ ಹೆಸರು ರಿಜಿಸ್ಟರಾದನಂತರ ನೀವು ಒಳ್ಳೆಯ ರವ್ಯವಾಗಿಯೂ ಸುಂದರವಾಗಿಯೂ ಇರತಕ್ಕ "ರೋಲ್ಡ್ ಗೋಲ್ಡ್" ರಿಸ್ಟ್‌ವಾಚನ್ನೂ ಮತ್ತು ಕೈಗೆ ಕಟ್ಟಿಕೊಳ್ಳುವ ಜರ್ಮನ್ ಆಥವಾ ರೇಷ್ಮೆ ಪಟ್ಟಿಯನ್ನೂ ಸಹಿತ ಉಚಿತವಾಗಿ ಕೊಡತ್ತೇವೆ.

೪. ಹಾಗೆ ನಮ್ಮಲ್ಲಿ ಕೂಪನ್ ಪಡೆದವರು ಯಾರೇ ಆಗಲಿ, ನೀಲೆ ಹೇಳಿದ ರೀತಿ ಕೆಲಸವನ್ನಾಡಿ ಗಡಿಯಾರವನ್ನು ಪಡೆಯಬಹುದು.

೫. ಹಾಗೆ ನಮ್ಮಲ್ಲಿ ಕೂಪನ್ ಪಡೆದು ಜಳರಿ ಮಾಡಲಾರದವರು ಪುನಃ ನಮ್ಮಲ್ಲಿ ೫ ರೂಪಾಯಿಗಳನ್ನು ಕೊಟ್ಟು ತಮಗೆ ಇಷ್ಟಬಂದ ವಾಚನ್ನು ಪಡೆಯಬಹುದು ಅಥವಾ ವಿ. ಪಿ ಮೂಲಕ ಕಳಿಸಿಕೊಳ್ಳಬಹುದು.

ಅನುಮಾನಪಡಬೇಡಿರಿ.

ಇದು ಲಾಟರಿಯಲ್ಲದ್ದರಿಂದ ಕೆಡುಕೊಳ್ಳುವ ಭಯವಿಲ್ಲ. ನಿಮ್ಮ ವಿರಾಮ ಕಾಲದಲ್ಲಿ ಸ್ವಲ್ಪ ಶ್ರಮಪಟ್ಟಲ್ಲಿ ನಿಮ್ಮ ಸ್ನೇಹಿತರೂ ಪರಿಚಯಸ್ಥರೂ ಅಸೂಯೆಪಡುವಂಥಾ ಅತಿ ಸುಂದರವಾದ ಕೈಗೆ ಕಟ್ಟುವ ಗಡಿಯಾರವನ್ನು ನೀವು ಪಡೆಯಬಹುದು.

ಇದಲ್ಲದೇ ನಮ್ಮಲ್ಲಿ ಗಡಿಯಾರಗಳ ಮತ್ತು ಗ್ರಾಮೋಫೋನುಗಳ ಸಾಮಾನುಗಳೂ, ವಾಚ್ ಗ್ಲಾಸುಗಳೂ ಕೈಗೆ ಕಟ್ಟುವ ಮತ್ತು ಜೇಬಿನ ಗಡಿಯಾರಗಳ ವಿಧವಿಧವಾದ ಸರಪಣಿಗಳೂ ರೇಷ್ಮೆಯ ಮತ್ತು ಜರ್ಮನ್ ಪಟ್ಟಿಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಹಾಗಲ್ಲದೆ ಮೇಲೆ ಹೇಳಿದ ಗಡಿಯಾರವನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅದನ್ನು ರೂ ೬-೮-೦ ಗಾಗಲಿ ಅಥವಾ ವಿ ಪಿ. ಮೂಲಕವಾಗಲಿ ಪಡೆಯಬಹುದು

ಟಿ. ರಾಮುರಾವ್, ವಾಚ್ ರಿಪೇರರ್ ಮತ್ತು ಡೀಲರ್ ೨೫೫, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶುದ್ಧವಾದ ಹಿಮಾಲಯದ

ಜೇನತುಪ್ಪ!

ನಮ್ಮಲ್ಲಿ ಶುದ್ಧ ಹಾಗೂ ಮಿಶ್ರಿತವಲ್ಲದಂತೆ ನಂತ ಸ್ಪವು ಗ್ಯಾರಂಟಿ ಪತ್ರ ಸಹಿತವಾಗಿ ದೊಡ್ಡ ಪ್ರಮಾಣ ದಿಂದ ಅಗ್ಗವಾಗಿ ದೊರಕುವುದು. ವ್ಯಾಪಾರಸ್ಥರು ಪತ್ರ ವ್ಯವಹಾರವನ್ನು ಇಂಗ್ಲಿಷ ಅಥವಾ ಹಿಂದಿಯಲ್ಲಿ ಮಾಡಬೇಕು

ವಿಳಾಸ— ಪಂಡಿತ ಘನಶ್ಯಾಮ ಪಾಂಡೆ
C/o ಲಾಲಾರಾಮ ಶರಣಜಾ ಸ ಕಿಸನಸಪಾಲು
ನಜೀರಾಬಾದು. (ಜಿಲ್ಲಾ ಬಿಜ್ನೂರ)

ಉಚಿತ! ಉಚಿತ!!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ಜಬ್ಬರ್ಡ್ ಪೊಕೆಟ್ ವಾಚ್ ಗಿ ಶೆಟ್ ರೋಲ್ಡ್ ಗೋಲ್ಡಿನದು. ಮುಂಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವುದೆಂದು ಗಡಿಯಾರ ಕರ್ತರು ಅಜ್ಞಾಪಿಸಿದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟ್ರೇಡ್‌ಮೇಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳು ಮಾತ್ರವೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹ್ಞಾಗೆ "ತಾರಾ" ಲೀವರ್ ರಿಜಿಸ್ಟರ್ಡ್ ಗಿ ಶೆಟ್ ರೋಲ್ಡ್ ಗೋಲ್ಡ್ ನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ!

ಕ್ಯಾಸ್ಟನ್ ವಾಚ್ ಕಂ. ಪಿ. ಬಿ. ೨೩೫ ಮದ್ರಾಸ್

For Ladies' and Gents' Insurance

in

The Bharat Insurance

Company, Ltd.

and for

Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgical Instruments and Drugs
(6) His Master's Voice Phones, and Records
(7) Cycles, Stoves and Gas Lights

and

(8) Up-to-date Books

Apply to:—

R. S. Tantry. B A.,

BAGALKOT.

ದಿ ಏಶಿಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ

ಲಾಯಿಫ ಅಶೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕಾರ್ಯವು ದಿನಾಂಕ ೨೬ ನೇ ಇಶ್ರಿಯ ಜನೇವರಿ ೩೧ ನೇ ಕಾಲ ದಿವಸ ಬೆಳಗ್ಗೆ ೧೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದ ಕಳಸೆ ಕಾರ್ಯಸಿದ್ಧ ಗೃಹಸ್ಥರಿಗೆ ಬಡ್ಡಿಯ ತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯುವುದೆಂದು ನಿರ್ಣಯವಾಯಿತು:—

(೧) ಎಸ್ ಬಿ ಸಿ ನಂ. ೨೫೨೬ ಸಯ್ಯದ ಅಲ್ಲಿ ಅಸಗರ ಬಿಲ್ಗ್ರಾಮಿ ಡಪರೆಂಟೆಂಡಂಟ್ ಸೆಕ್ರಟರಿಯಟ್ ಸೈದರಾಬಾದ ಹೈದ್ರಾಬಾದ ರೂ ೧೦೦೦

(೨) ಎಸ್ ಬಿ ಸಿ ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ ಕೆರ್ ಆಫ್ ಡಿ ಈ. ಪುರಾಣಿಕ ೧೦೦೦ ನಿಹಾಲಪುರ ಇಂದೂರ ೧೦೦೦

(೩) ಎಸ್ ಬಿ. ಸಿ ನಂ. ೩೪೧೧ ರಾಮಚಂದ್ರ ಅನಂತ ತಿಪ್ಪೊಳೆ ಡಿವಿಜನಲ್ ಫಾರೆಸ್ಟ ಆಫೀಸರ ಧಡ್ಡೂರಾ. ಎಪ್ಪತ್ತು ರೂಪಾಯಿದೇಶ ರೂ ೭೦೦

(೪) ಬಾಂಡ ನಂಬರು ೭೫೧೦೬ ಕೆ. ಜಿ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್ ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೫೬೭೪ ಎಸ್. ಜಿ. ಚಿಪರೆ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಸಿ. ಆರಾಧ್ಯ

ಜೋಫ ಏಜಂಟ ಹುಬ್ಳಿ (ಮುಂಬಯಿ ಶಾಖಾ.)



ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಪುರುಷಾರೆ ಸೌಖ್ಯಪಡಿಸುವದು ಒಳ್ಳೆಯದು ಇದು ಹೆಚ್ಚಾಗಿ ಶಂಕೆತಾಯಿಗಳಿಂದ ಮಕ್ಕಳಿಗೆ ಬರುವುದು. ಸಹಜ ಪುರೈವಾದಾಗ ಬಹಳ ಭಯಂಕರವಾಗಿ ತಾಗಿಸುವುದು. ಶ್ವಾಸ ಪರಿಯಾಗಿ ಬಿಡಲಿಕ್ಕಾಗದೆ ಗಂಟ್ಲು ಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣವೂ ಹೋಗುವಂತೆ ಕಾಣಿಸುವುದು ದೇಹದಲ್ಲಿ ಬೆಳ್ಳುಳ್ಳಿಯಂತೆ ಗೊಯಿ ಗೊಯಿ ಯೆಂಬಶಬ್ದವು ಕೇಳಿಸುವುದು. ಹಾಸಿಗೆಯಮೇಲೆ ವೈಚಾರಿಸುಲಗಲಾಗದು ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು. ನಮ್ಮ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ ಪೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವದು. ಸಂದೇಹವೇ ಇಲ್ಲ. ಅನುಪಾನಕ್ರಮ ಕನ್ನಡದಲ್ಲಿ ಔಷಧದಲ್ಲಿ ಕಳಿಸಲ್ಪಡುವದು.

ಬಾಟ್ಲಿ ೧ಕ್ಕೆ ರೂ ೨-೮-೦ ವಿ- ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣನ್ ಬ್ರದರ್ಸ್ ಪೋಸ್ಟ ಬಾಕ್ಸ ನಂ. ೧೬೬. ಮದ್ರಾಸು.

ಕಿಲ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯಾವುದೇ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೆ ಕಾಲುವೆಗಳಿಂದ ಕೊಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದ ನಮ್ಮ ನೇಗಿಲು ನಂ೭೮೦ ನಷ್ಟಾದಂತೆ ಎಳ್ಳು ಉಪಯೋಗಕ್ಕೆ ಒರುವದು. ರಚನೆಃ— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಂಡದಂತೆ 'ಚಿಲಿಂಗ ಪ್ರೊಸೆಸ್'ನಿಂದ ಗಟ್ಟಿಮಟ್ಟ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣ ಸತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತವೆ. ಎಳೆಯುವ ಶಕ್ತಿಃ— ೬ ರಿಂದ ೮ ಎತ್ತುಗಳು ಬೇಕು. ಸಾಲಿನ ಆಳಗಃ— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. ತೂಕಃ—ಸಂಸಾರಿ ೨೦೦ ಪೌಂಡು ಸಪ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ ಬೆಲೆ ಕಡಿಮೆಯಾಯಿ.

ಕಿಲ್ಲೋಸ್ಕರ ಬಂಧು. ಲಿಮಿಟೆಡ್ ಕಿಲ್ಲೋಸ್ಕರವಾಡಿ. ಜಿ. ಸಾತಾರಾ.

ಲಿಟ್ಲರ ಓರಿಯಂಟ್ಲ ಬಾಮು.

ನೋವು ಬಾಧೆಗಳ ನಿವಾರಣಾರ್ಥ!

೪೨ ವರ್ಷಗಳಿಂದ ಜಗತ್ತಿನ ತುಂಬ ಪ್ರಖ್ಯಾತಿಯನ್ನು ಪಡೆದ ಉಪಾಯ ವೆಂದರೆ ಇವೆ.

ಹಿಂದುಸ್ಥಾನದ ಅದ್ಭುತವಾದ
ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ, ಇದನ್ನೇ ಉಪಯೋಗಿಸಿರಿಃ—

ತಲೆಶೂಲಿ, ಸಂದಿವಾತ, ಎಲ್ಲ ತರದ ಕಸ, ನರ ಶೂಡಕು, ಹರಿವಾತ, ಟಿಂಗ್ಚರ್, ಅಧರಾಂಗವಾಯು ಉಳುಕು ಪಳಪದ್ದು

ಸ್ವಲ್ಪೇ ಮಟ್ಟಿಗಿಂದ ಒಹಳೇ ಗುಣ. ಉರುವು ಇಲ್ಲವೇಯಿಲ್ಲ. ಗುಳ್ಳೆ ಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು
ನೆಣ ಮೂಳಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ!

ಈ ದಿವಸನೇ
ಒಂದು ಬಾಟಿ ಕೊಳ್ಳಿ !

ಈ ಪತ್ರಿಕೆಯು ಮಂಗಳವೇಢೆ ರಾಜೇಶ್ವರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಆವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ ಬಿ. ೧೯೪೬ವಾ. ಚಂದಾ ೧—೮—೦ ಮಾತ್ರ

ಕನ್ನಡ ಜಯ

(ಇದರಲ್ಲಿ ಕನ್ನಡ ನವಜೀವನವು ಸವಸಾವಿಸ್ತಾರವಾಗಿದೆ)

ಯಥಾ ಪರಸ್ಯ ದುಃಖಂ । ಯಥಾತ್ಮನಃ ತಥಾ ಸುಖಂ ॥ — ಮಿತ್ರ

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಫಸ್ಯ ಬಾ೫ಳ ಸಂ ಶಕ ೧೮೪೯ ತಾ॥೨೨ ೧ ೧೯೨೮. Date 22—1—1928. | ಸಂಚಿಕೆ ೪೦

ಕನ್ನಡ ಬಂಧುಗಳೇ ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವಗ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವುಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ.ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದುಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ವಿವಾಹಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ !

ನಿಲಾಸಃ—ಕ. ಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ತಿಲಕ ಶನಿವಾರ ಪೇತ ಲಾಯಿಡ್‌ಬ್ರಿಜ್ಜಿದ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೆ ಕಾಗುವ ನಮೂನೆಗಳನ್ನು ಅ ಹಾಕಿಸಿ ನಮ್ಮಲ್ಲಿ ಮಾಂಲಿಕ್ಕೆ ಇಟ್ಟಿರುವೆವು- ಪಾವತಿ ಮೆಂ ಕಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ರತ ಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ

ವ್ಯವಸ್ಥಾಪಕಃ—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಮಯೂರ ಶಿವಾ

ದುರ್ಲಭವಾದ ವನಸ್ಪತಿಯು. ೫೦ ತೊಲಗೆ ೧ ರು ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಉಪಯೋಗವಾದ ವನಸ್ಪತಿಗಳ್ಳು ದೊರಕುವವು

ವೈದ್ಯಃ—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳು ಬುದ್ಧದೇವ, ನಾಯಕ, ಶಂಕರ, ವ.ಧ್ವ, ರಾಮಾನುಜಾ, ಒಸವರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತೂ ಟಿಳಕ, ಗೋಖಲೆ, ದಾದಾ ಗಾಂಧೀಯವರೇ ತಜ ವಿಭೂತಿಗಳ ಅತ್ಯುತ್ತಮವಾಗಿ ಒತ್ತೆ ತೆಗೆದ ಫೋಟೋಗೂ ಒಳ್ಳೇ ಲಲಿತವಾಗಿ ಕಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧ ಪಡಿಸಿರುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾಗಿಯೂ ಅಲಂಕಾರಂಗಳೇ ಸರಿ. ಅವರಂತೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗವೆ. ಅಲ್ಲದೆ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಬರೆದುಕೊಳ್ಳಿ!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ್ ನಗರತ್ತಪೇಟೆ, ಬೆಂಗಳೂರ ಸಿಟಿ

ಸುಲಭ ಕ್ರಯ ! ಡಾಕ್ಟರ ಜಿ. ಬೀ. ಯವರ ಸುಲಭ ಕ್ರಯ!!

ಸುಗಂಧನಶ್ಯದ ಪುಡಿ.

ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇವನ್ನು ಉಪಯೋಗಿಸಿ ಸಾವಿರಾಂತಕಗಳಾಗಿ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿಸಿಸಿ, ಒಂಟಿ ತಲೆ ನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಈತಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರು ಬೆಟ್ಟಿ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಜಿಮಟಿಕೆಯನ್ನು ವಿಸ್ತರಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಲಾಗುವದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವಿ. ಪಿ. ೪ ಆಣೆ. ಡಜನ್ ೧೮ ಕ್ರಯ ವಿ. ಪಿ. ಚಾರ್ಜು ೮ ಆಣೆ.

Registerd Trade mark ರೂ ೨—೮—೦, ವಿ. ಪಿ ಚಾರ್ಜು ೮ ಆಣೆ.

ವಿಳಾಸ:— ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,
ಪೋ. ಬಾ. ನಂ. ೫೫೫, ಪಾರ್ಕ್‌ಟೌನು, ಮದರಾಸು.

ದಯವಾಗಿ ನಿಮ್ಮ ವಿಳಾಸವನ್ನು, ಹೆಸರನ್ನು ಸರಿಯಾಗಿ ಕಳಿಯುವಂತೆ ಬರೆಯಿರಿ.



ಬಾಗಲಕೋಟೆ- ಕನ್ನಡಿಗ ಪುಷ್ಯ ಬಹುಳ ೩೦ ಶಕೆ ೧೮೪೯

ಸಂಪಾದಕರ ಭೂಮಿ

(೦)

ನನ್ನ ಮನಸಿನ ನೋಣವಾಡಿ ಕಟ್ಟುವೆನಾನು।
ನಿನ್ನ ಬೆಸನವಮಾಡಿದಂಥ ಮುಳ್ಳಿಲಿ ದೊನ್ನೆ।
ಚಿನ್ನ ಪಾದರು ನಿನ್ನ ನೋಣಬಸ್ತಿಯ ನೊಂದು ಚಿನ್ನಯಾಕಾಶದಲ್ಲಿ ॥
ನನ್ನ ದೇಹವ ನಿನ್ನ ವೀರಕಾಸವಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಕನ್ನಡಾನಾವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೇ
—ಅಂಬಿಕಾತನಯ ದತ್ತ

ಕರ್ನಾಟಕ ಏಕೀಕರಣದ ಪ್ರಸಾರಕ್ಕಾಗಿ ಉತ್ತರ ಕನ್ನಡ ಜಿಲ್ಲೆಗೆ ಹೋದ ಶ್ರೀ. ಮಂಗಳವೇಢೆ ಶ್ರೀನಿವಾಸ ರಾಯರ ವಂದಿಯು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಮುದ್ರಿತವಾಗಿದೆ. ಇವರನ್ನು ಬಾಗಲಕೋಟೆಯ ಸ್ವಾಗತ ಕಮೀಟಿಯವರು ಪ್ರಸಾರಕ್ಕಾಗಿ ಕಳುಹಿಸಿ, ತಮ್ಮ ಕಾರ್ಯದಕ್ಷತೆಯನ್ನು ತೋರಿಸಿದ್ದಕ್ಕಾಗಿ ನಮಗೆ ಸಂತೋಷವಾಗುತ್ತದೆ. ಇದೇ ಬಗೆಯಾಗಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಗೂ ಪ್ರಚಾರಕರನ್ನು ಕಳುಹಿಸುವ ವಿಷಯದು ಸ್ವಾಗತ ಕಮಿಟಿಯವರಿಂದಾದರೆ ನಮ್ಮ ಬಾಗಲಕೋಟೆಯ ಪರಿಷತ್ತು ಯಶಸ್ವಿಯಾಗದೇ ಇರದು. ಶ್ರೀನಿವಾಸ ರಾಯರು ಸೂಚಿಸಿದಂತೆ, ಕರ್ನಾಟಕ ಏಕೀಕರಣಕ್ಕಾಗಿ ಸ್ಥಾಪಿತವಾದ ಧಾರವಾಡದ ಮುಖ್ಯಸಭೆಯವರೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಉಪಮಂಡಲದವರೂ, ಬಾಗಲಕೋಟೆಯ ಸ್ವಾಗತ ಕಮೀಟಿಯವರೂ ಸಮ್ಮಿಲಿತವಾಗಿ ಕಾರ್ಯಮಾಡುವದು ಅತ್ಯಾವಶ್ಯವಿದೆ. ಇದರಿಂದ ಸಂಘಟಿತ ಕಾರ್ಯವು ಆಗದೇ ಇರದು. ಆದುದರಿಂದ ಈ ತ್ರಿವೇಣೀಸಂಗಮದ ಕಾರ್ಯವಾಹಕರು ಆದಷ್ಟು ಬೇಗನೇ ಬಾಗಲಕೋಟೆಯಲ್ಲಿ ಸೇರಿದು ತಮ್ಮ ಕಾರ್ಯಕ್ರಮವನ್ನು ನಿಶ್ಚಿತಗೊಳಿಸಬೇಕಾಗಿ ನಮ್ಮ ಅಗ್ರಹಪೂರ್ವಕವಾದ ಸೂಚನೆಯಿದೆ ಏಕೀಕರಣ ಪ್ರಶ್ನೆಯು ಕರ್ನಾಟಕದಲ್ಲಿ ಉದ್ಭವವಾಗಿ ೧೦ ಗಿತ ವರ್ಷಗಳಾಗಿದ್ದರೂ, ಜನರಲ್ಲಿ ಈ ಬಗ್ಗೆ ಜಾಗ್ರತೆಯಿಲ್ಲವೆಂದು ಮುಂಬೈ ಸರಕಾರದಿಂದ ಟೊಮ್ಮಿಯನ್ನು ಸಂಪಾದಿಸುವ ಪ್ರಸಂಗವು ಕನ್ನಡಿಗರಿಗೆ ಬಂದುದು ನಿಜವಾಗಿಯೂ ಆಂತೆನಾಸ್ಪದವು. ಆದುದರಿಂದ ನಮ್ಮ ಕರ್ನಾಟಕದ ಮುಖಂಡರೆಲ್ಲ ಇದೀಗ ಪ್ರಾರಂಭವಾದ ಏಕೀಕರಣದ ಪ್ರಚಾರದ ಕಾರ್ಯವನ್ನು ಅಚ್ಚು ಕಟ್ಟು ತನದಿಂದ ನಡಿಸುವುದನ್ನು ಸರ್ವಥಾ ಮರೆಯಲಾಗದು ಕಾರವಾರ ಜಿಲ್ಲೆಯಲ್ಲಿಯ "ಕರ್ನಾಟಕ ಧುರೀಣ" "ಕಾನಡಾವೃತ್ತ"ಗಳನ್ನು ನೋಡಿದರೆ, ಏಕೀಕರಣದಬಗ್ಗೆ ಆ ಜಿಲ್ಲೆಯಲ್ಲಿ ಶ್ರೀ. ಮಂಗಳವೇಢೆಯವರ ಆಗಮನದಿಂದ ಜನರಲ್ಲಿ ನಿಜವಾದ ಉತ್ಸಾಹಪೂರ್ಣತೆಯ ವಳವೂ ಉಂಟಾಗಿರುವದಾಗಿ ಕಂಡುಬರುವದು. ಆದುದರಿಂದ ಕರ್ನಾಟಕದ ಉದ್ಧಾರಕ್ಕಾಗಿ ಹೋಗಬಾಡುವವರು ಈ ಬಾಗಲಕೋಟೆ ಪರಿಷತ್ತಿನ ಸ್ವಾಗತ ಕಮೀಟಿಯವರು ಪ್ರಕಟಿಸಿದ ಕಾರ್ಯಕ್ಕೆ ತಮ್ಮ ತಮ್ಮ ಬೆಂಬಲವನ್ನು ಸಂಪೂರ್ಣವಾಗಿ ಕೊಡತಕ್ಕುದ್ದು ಅತ್ಯಂತ ಅಗತ್ಯವಾಗಿದೆ.

ಕೊಡಗಿನಲ್ಲಿ ಹೊಸದೊಂದು ಸುಂಟರಗಾಳಿಯು ಬಿಡುವದಿದೆಯಂತೆ! ಮುಂಬೈ ಟೈಮ್ಸ ಪತ್ರಿಕೆಯು ಹೇಳುತ್ತದೆ! ಈ ಸುಂಟರಗಾಳಿಯ ವೈಜಕ್ಷಣ್ಯವನ್ನು ಕೊಂಚ ನೋಡಿ! ಕೊಡಗಿನ ಈಗಿನ ಆಡಳಿತವು ಹಜ್ಜು ವೈಚಾರ್ಯಾದಿಯಾದ್ದರಿಂದ ಕೊಡಗನ್ನು ಮೈಸೂರ ಸಂಸ್ಥಾನಕ್ಕೆ ಸೇರಿಸಬೇಕೆಂದು ಕೆಲವರ ವಿಚಾರವಿದೆಯಂತೆ! ದೇಶೀಯ ಸಂಸ್ಥಾನಗಳಲ್ಲಿದ್ದ ಕೃಜೆಗಳು ಬ್ರಿಟಿಶ್ ಆಡಳಿತದಲ್ಲಿ ಒರಬೇಕೆಂದು ಅತುರ ವಡುತ್ತಿರುವಾಗ್ಯೆ ಬ್ರಿಟಿಶ್ ಆಡಳಿತದಲ್ಲಿದ್ದ ಕೊಡಗರು ದೇಶೀಯ ಸಂಸ್ಥಾನದಲ್ಲಿ ಸೇರಬೇಕೆಂಬ ಕಲ್ಪನೆಯನ್ನು ತಿಳಿಯುತ್ತಿರುವದು ಆಶ್ಚರ್ಯವೇ ಸರಿ ಈಗಿನ ಮೈಸೂರ ಮಹಾರಾಜರೇನೋ ಬೇವಾಂಶರು. ಇವರ ಆಡಳಿತವೂ ಸುಖಕರವಾಗಿರುವದು ಆದರೆ ಈ ಮುಂಚೀಯ ಪಶ್ಚಾತ್ತ ಒರುವವರೆಲ್ಲರೂ ದೇವಾಂಶರೇ ಆಗುವರೆಂದು ಈಗಿನಿಂದಲೇ ಭಾವಿಸುವದು ಸರಿಯಾಗಲಾರದು ದೇಶೀಯ ಸಂಸ್ಥಾನಗಳೆಲ್ಲ ಯಾವಾಗಲೂ ವೈಯಕ್ತಿಕವಾಗಿ ರಾಜನ ಗುಣಾವಗುಣಗಳನ್ನೇ ಆಶ್ರಯಿಸಿರುವದರಿಂದ ಆಡಳಿತಗಳ ಸುಖ-ಎಖಗಳೂ ಅವನ ಗುಣಾವಗುಣಗಳನ್ನೇ ಅನುಸರಿಸುವವು. ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯು ಸಂಪೂರ್ಣವಾಗಿ ಬ್ರಿಟಿಶ್ ಹಿಂದುಸ್ಥಾನದಲ್ಲಿ ಎಂದು ವೆಲೆಗೊಳ್ಳುವದೋ ಹೇಳಲಿಕ್ಕಾಗದ ಸಮಯದಲ್ಲಿ, ದೇಶೀಯ ಸಂಸ್ಥಾನಗಳಲ್ಲಿ ಅದು ಇಂತಿಷ್ಟೇ ಕಾಲದಲ್ಲಿ ನೆಲೆಗೊಳ್ಳುವದೆಂದು ತರ್ಕಿಸುವದು ಮುಜ್ಜತನವೇ ಸರಿ. ಇನ್ನು ಬ್ರಿಟಿಶರು ಆದಷ್ಟು ದೇಶೀಯ ಸಂಸ್ಥಾನಗಳನ್ನೇ ಮುರಿದು, ತಮ್ಮ ರಾಜ್ಯ ವಿಸ್ತಾರವನ್ನು ಸಾಡಿಕೊಳ್ಳಬೇಕೆಂದು ಹವಣಿಸುವಾಗ, ದೇಶೀಯ ಸಂಸ್ಥಾನಗಳಿಗೆ ತಮ್ಮ ವಶವಲ್ಲಿಯ ಭಾಗವನ್ನು ಕೊಡುವದೆಂಬ ಕಲ್ಪನೆಯು ಕೇವಲ ಮೂರ್ಖತನದ್ದೇ ಸರಿ. ಬ್ರಿಟಿಶ್ ಹಿಂದುಸ್ಥಾನದಲ್ಲಿರದ ಕೆಲವು ಹೆಚ್ಚಿನ ಸೌಕರ್ಯಗಳನ್ನು ಕೊಡಗರು ಮಾತ್ರ ಅನುಭವಿಸುತ್ತಿರುವದು ಎಲ್ಲರಿಗೂ ತಿಳಿದವಿಷಯ ಆದರೆ ದೇಶೀಯ ಸಂಸ್ಥಾನದಲ್ಲಿ ಸೇರಿಕೊಂಡರೆ ಈ ವಿಶಿಷ್ಟ ಕಕ್ಕಸ್ಯ ಬಾಧ್ಯತೆಗಳಿಗೆ ತಿಲಾಂಜಲಿಯನ್ನಿಯಲು ಕೊಡಗು ಕನ್ನಡಿಗರು ಸಿದ್ಧರಾಗಬೇಕಾಗುವದು. ಆಡಳಿತದ ವೆಚ್ಚವು ಹೆಚ್ಚಾಗಿದೆಯೆಂಬ ಒಂದೇ ಕಾರಣದಿಂದ ಕೊಡಗು ಕನ್ನಡಿಗರು ಅಷ್ಟೊಂದು ವೆದರುವ ಕಾರಣವಿಲ್ಲ. ಮೈಸೂರ ಸಂಸ್ಥಾನವನ್ನು ಸೇರಿ ಈ ವೆದರಿಕೆಯಿಂದ ಪಾರಾಗುವ ಆಲೋಚನೆಯೂ ಸರಿಯಾದುದಲ್ಲ. ಕರ್ನಾಟಕದ ಏಕೀಕರಣವನ್ನು ಸಂಪಾದಿಸುವದೇ ಇದಕ್ಕೆ ನಿಜವಾದ ಶರಣೋಪಾಯವು. ಭಾವೀ ಕರ್ನಾಟಕ ಪ್ರಾಂತವು ತನ್ನ ವೆಚ್ಚವನ್ನು ತಾನು ನೀಗಿಸಿಕೊಳ್ಳುವದಲ್ಲದೇ ಪ್ರತಿವರ್ಷ ಹೆಚ್ಚು ಹಣವನ್ನು ಶಿಲುಕಿನಲ್ಲಿಡಬಹುದಾಗಿದೆ. ಸಂಪದಭಿವೃದ್ಧಿಯು ಭಾವೀ ಕರ್ನಾಟಕ ಪ್ರಾಂತದಿಂದ ಕನ್ನಡ ನಾಡಿನಲ್ಲೆಲ್ಲ ಹೆಚ್ಚಾಗಿ ಆಗುವದು. ಆದ್ದರಿಂದ ಕರ್ನಾಟಕಕ್ಕೆ ಪ್ರತ್ಯೇಕವಾದ ಪ್ರಾಂತವು ದೊರಕುವಂತೆ ಪ್ರಯತ್ನಿಸುವದೇ ಕೊಡಗು ಕರ್ನಾಟಕಪ್ರಭೆಯವಾಗಿರಬೇಕು. ಇನ್ನು ಕರ್ನಾಟಕ ಏಕೀಕರಣದ ಪ್ರಚಾರಕರಲ್ಲಿ ಮತೈಕ್ಯವಿಲ್ಲದೆ ಕೊಡಗು ಕರ್ನಾಟಕದಲ್ಲಿ ಏಕೀಕರಣದ ಪ್ರಚಾರ ಕಾರ್ಯವು ಆಗದೇಇರುವದರಿಂದ

ಎಂಥ ಘಾತುಕವಾದ ವಿಚಾರಗಳು ಅಲ್ಲಿ ತಲೆದೋರುತ್ತಲಿವೆ. ಯೆಂಬುದನ್ನು ಏಕೀಕರಣದ ಧುರೀಣರು ತಿಳಿದುಕೊಳ್ಳಬೇಕು ಮತ್ತೂ ನಾವು ಈ ಮೊದಲೇ ಸೂಚಿಸಿದಂತೆ ಏಕೀಕರಣದ ವಾತಾವರಣವು ಕರ್ನಾಟಕದ ತುಂಬೆಲ್ಲ— ವಿಶೇಷವಾಗಿ ಕೊಡಗು ಕರ್ನಾಟಕದಲ್ಲಿ— ಹರಡುವಂತೆ ವಿಲಂಬವಿಲ್ಲದೇ ಎಲ್ಲರೂ ಪ್ರಯತ್ನಿಸಬೇಕು.

ಕಾಂಗ್ರೆಸ್ಸಿನ ಧ್ಯೇಯವು 'ಹಿಂದುಸ್ತಾನದ ಸಂಪೂರ್ಣ ಸ್ವಾತಂತ್ರ್ಯ'ವಾಗಿರಬೇಕಲ್ಲದೆ, ಸಾಮ್ರಾಜ್ಯಾಂತರ್ಗತ, ವ್ಯಾಂತರ್ಗತ ಮೊದಲಾದ ಅರಗಜ್ಜಿ ಸ್ವಾತಂತ್ರ್ಯದ ಸಲುವಾಗಿ ನಾವು ದಣುಕೊಳ್ಳಬಾರದೆಂಬ ಅಭಿಸ್ರಾಯದ ರಠಾವೊಂದು ಮುದ್ರಾಸ ಕಾಂಗ್ರೆಸ್ಸಿನಲ್ಲಿ ನಿರ್ಣಯಿಸಲ್ಪಟ್ಟಿರುವದೆಯೇ ? ಈ ರಠಾವಿನ ಬಗ್ಗೆ ವಿಷಯನಿಯಾಮಕ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ ತಿರುಗಿ ಭರ ಕಾಂಗ್ರೆಸ್ಸದಲ್ಲಿ ಸರ್ವಾನುಮತದ ಮನ್ನಣೆಯೂ ಆದಕ್ಕೆ ದೊರಕಿದೆ ಆ ವಿಷಯನಿಯಾಮಕ ಸಭೆಯಲ್ಲಿಯೂ ಪುನಃ ಭರಕಾಂಗ್ರೆಸ್ಸದಲ್ಲಿ ಕೈ ಎತ್ತಿ ಬಂದವರೇ ಕೆಲವು ವೃತ್ತಪತ್ರಕಾರರು ಆ ರಠಾವು ಹುಡುಗಾಟಿಕೆಯದೆಂದೂ ಅನಾವಶ್ಯಕವೆಂದೂ ಅನ್ಯವಹಾರ್ಯವೆಂದೂ ಹೆಸರಿಟ್ಟು ಅದನ್ನು ಮಂಣು ಕಾಣಿಸಬೇಕೆಂಬ ಹವ್ಯಾಸದಲ್ಲಿದ್ದದ್ದು ನೋಡಿ ಮನಸಿಗೆ ವ್ಯಸನವಾಗುತ್ತಿದೆ. ಈ ವಾದವು ಕಾಂಗ್ರೆಸ ನಂತರ ಮತ್ತೆ ಧ್ವನಿಗೊಂಡದ್ದು ಮೊದಲು ಗಾಂಧಿಯವರಿಂದ ಗಾಂಧಿಯವರ ಬರಹವೂ ಅವರ ಅಭಿಸ್ರಾಯವೂ ಒಸ್ಪತೆ ಹೊರ್ತು ಬೇರೆಯಾರು ಅನುಕರಿಸಹೋದರೆ 'ಹುಲಿಯ ಬಂಣಕ್ಕೆ ನರಿಯು ವೈಸುಟ್ಟು ಕೊಂಡಂತೆಯೇ ಸರಿ ಈ ರಠಾವನ್ನು ವಿರೋಧಿಸುವ ಅವರ ಬಗೆಯಾದರೂ ಅವರಂತೆಯೇ ಗಂಭೀರವಾದದ್ದು ಲೋಕೊತ್ತರವಾದದ್ದೂ ಆಗಿದೆ. ಮೊನ್ನಿನ 'ಯಂಗ ಇಂಡಿಯಾ' ದೊಳಗಿನ ಅವರ ಲೇಖನವನ್ನು ಓದಿದರೆ, ನಾವು ಮೇಲೆ ಹೇಳಿದ್ದು ಜನನ್ಯಾಗಿ ಹೇಳುವಂತಿದೆ. ಅವರ ವಿರೋಧವು ವಿರೋಧವೇ ಅಲ್ಲಾ. (೧) ಬರ್ಕನ್ನ ಹೆಡ್ಡನ ಉನ್ಮತ್ತತನಕ್ಕೆ ಇದು ಯೋಗ್ಯ ಉತ್ತರವಾಗಲಾರದು. ಇದಕ್ಕೂ ಹೆಚ್ಚಿನ ಸಂಗತಿಗಳನ್ನು ಮಾಡಿತೋರಿಸುವದು ಅವಶ್ಯವದೆ. (೨) ಸ್ವರಾಜ್ಯ ಶಬ್ದದೊಳಗೆ ಈ ಸಂಪೂರ್ಣ ಸ್ವಾತಂತ್ರ್ಯದ ಕಿಂಕಲೂ ಹೆಚ್ಚಿನ ಕಲ್ಪನೆಯನ್ನು ಸಹಜವಾಗಿ ತುಂಬಲಿಕ್ಕೆ ಬರುತ್ತಿರುವಾಗ ಎರಡನೇ ಶಬ್ದವನ್ನೇ ಸ್ವೀಕರಿಸುವದೇಕೆ ? (೩) ನಾವು ಮಾತಾಡುವಂತೆ ಕಾರ್ಯಮಾಡಿ ತೋರಿಸಲು ಸಿದ್ದ ವಿರಬೇಕು. ಅವರು ವಿರೋಧಿಸಲಿಕ್ಕೆ ಇವೇ ಮೂರು ಕಾರಣಗಳನ್ನು ತೋರಿಸಿರುವರು. ಅವು ಈ ಮಾದರಿಯ ವಿರೋಧವು ನಮಗೆ ಇಷ್ಟಾಪತ್ತಿಯೇ ಸರಿ ಡೂಂಬರಾಟದಲ್ಲಿ ಎರಡೇ ಲಗ ಹೊಡೆದವನನ್ನು ಪುಸ್ತಾದನು ನಿಂದಿಸಿ ನಾಲ್ಕು ಲಗ ಹೊಡೆಯಲಿಕ್ಕೆ ಭೋಧಿಸುತ್ತಿರುವಂತೆ ಗಾಂಧಿಯವರ ವಿರೋಧವನ್ನು ಅರಿತು ಕೊಳ್ಳಬೇಕು ಬರ್ಕನ್ನ ಹೆಡ್ಡನ ಉನ್ಮಾದವು ಈ ರಠಾವಿನಿಂದ ಇಳೆಯದೆಂಬದನ್ನು ನಾವಾದರೂ ಬಲ್ಲೆವು. ಅದಕ್ಕಂತೆ ವ್ಯವಹಾರ್ಯವಾದ ಬಹಿಷ್ಕಾರ ಕೃತಿಯನ್ನು ಪೂರ್ತಿಗೊಳಿಸಲಿಕ್ಕೆ ಪ್ರಯತ್ನ ನಡೆಸಿದೆ - ಇನ್ನು ಸ್ವರಾಜ್ಯ ಶಬ್ದದೊಳಗೆ ಇದೆಲ್ಲ ಅಡಕವಾಗಿದೆ ಎಂದು ವಾದಿಸಿದರೆ ಅದು ಕೇವಲ ಶಬ್ದದ ಸಲುವಾಗಿ ಗುದ್ದಾಡಿ ವೈನೋಯಿಸಿ ಕೊಂಡಂತೆ ಸರಿ. ಕೇವಲ ಶಬ್ದದ ಸಲುವಾಗಿ ಒಬ್ಬರಿಗೊಬ್ಬರು ವಿಮುಖರಾಗಿ ತೆರಳುವದು ಬುದ್ಧಿವಂತಿಕೆಯ ಮಾತಲ್ಲ. ಇನ್ನು ಆಡಿದಂತೆ ನಡೆಯಲಿಕ್ಕೆ ಸಿದ್ಧರಿರುವರೋ ಇಲ್ಲವೋ ಎಂಬದನ್ನು ನಿರ್ಧರಿಸಲಿಕ್ಕೆ ಈಗಾಗಲೇ ಹೇಗೆ ಬಂದೀತು ? ಮೇಲಾಗಿ ಸ್ವರ್ಯಕ್ಕೆ ಒಕಾದ ಸಿದ್ದತೆಯೇ ಈ ಸ್ವಾತಂತ್ರ್ಯ ಸಂಪಾದನೆಗೂ ಸಾಕಾಗುವದು. ಅಂದಮೇಲೆ ಸಿದ್ಧಾಸಿದ್ಧತೆಯ ಪ್ರಶ್ನೆಯನ್ನೇ ಎತ್ತುವಂತಿಲ್ಲ; ರಾಷ್ಟ್ರವು ಸಿದ್ಧವಾಗಬೇಕೆಂದೇ ಉಪಾಯವದ ಮೇಲ ಉಪಾಯವನ್ನು ಯೋಜಿಸಬೇಕಾಗಿದೆ

ಈ ವರ್ಷದ ವಿಷಯ ನಿಯಾಮಕ ಸಭೆಯ ವಾದವಿವಾದದಲ್ಲಿ ಗಾಂಭೀರ್ಯವೂ ಕಾರ್ಯತತ್ಪರತೆಯೂ ಇರಲಿಲ್ಲವೆಂಬದೊಂದು ಭ್ರವ ವೊಂದು ಪ್ರಸಾರ ಹೊಂದುತ್ತಿರುವದು. ಈ ಆರೋಪವನ್ನಾದರೂ ಮೊದಲು ಹೊರಿಸಿ ಬಂದವರು ಗಾಂಧಿಯವರೇ ಅವರನ್ನು ಅನುಸರಿಸಿ ಹೋಗಿ ಕೆಲವು ಪತ್ರಕಾರರೂ ಕಾಂಗ್ರೆಸ್ಸದ ಇಲ್ಲದ ದೋಷ ಎಣಿಸಹೋಗಿ ಆ ಪವಿತ್ರ ಸಂಸ್ಥೆಯ ಪಾವಿತ್ರ್ಯದ ಬಗ್ಗೆ ಜನರಿಗಿದುವ ಆದರವು ಕಿರಿದಾಗುವಂತೆ ಯತ್ನಿಸುವದು ಎಂಥ ಘಾತುಕ ಕೆಲಸ ವೊಂದನ್ನು ಮುಂದೆ ಬರೆಯುವೆವು

ರಾವಬಹಾದ್ದೂರ ಗೋಪಾಳಗಿರಿಯವರು.

ಧಾರವಾಡದ ಸುಪ್ರಸಿದ್ದನಾಗರಿಕರಾದ ರಾ ಬ ಗೋಪಾಳರಾಯರು ಆರ್ಧಾಂಗವಾಯುವಿನ ಏಕಾಂತದಿಂದ ಕಳೆದವಾರ ಪರಲೋಕವಾಸಿಗಳಾದರೆಂದರಿಯಲು ವ್ಯಸನವಾಗುತ್ತದೆ ಇವರ ಜನ್ಮವು ೧೮೫೯ನೇ ಇಸ್ವಿಯಲ್ಲಿ ಆಯಿತು. ಆಗಿನ ಇವರ ಮನೆತನದ ಸ್ಥಿತಿಯು ಅತಿಶಯ ತಾಪ್ರಸದಾಯಕವಿದ್ದಿತು. ಇವರು ತಳ್ಳವಟ್ಟಿಗೆ ಶಿಕ್ಷಣ ಹೊಂದಿದಾಗ್ಯೂ ತಮ್ಮ ೧೫ನೇ ವಯಸ್ಸಿನಲ್ಲಿ ಸ್ವಸ್ಥಳದ ನಾವುಕಾರಲ್ಲಿ ಒಂದು ಕಾಕಕೂನಿಯ ನೌಕರಿಯನ್ನು ಕೈಕೊಂಡರು ಸ್ವತಂತ್ರವೃತ್ತಿಯವರಾದ ಇವರಿಗೆ ಈ ಉದ್ಯೋಗವು ಹನ್ನಾಗಿ ರುಚಿಸದ್ದರಿಂದ, ಕೆಲವು ವರ್ಷಗಳಲ್ಲಿಯೇ ತಾರಾಫಿ ಅಂಗಡಿಯನ್ನು ವ್ಯಾರಂಭಿಸಿದರು. ಈ ವ್ಯವಹಾರದಿಂದ ಇವರಿಗೆ, ವ್ಯಾಪಾರದ ನರ್ಮವು ತಿಳಿದು ಅನೇಕ ಕಂಟ್ರಾಕ್ಟಗಳನ್ನು ವಹಿಸಿ, ಅವುಗಳ ಮುಖಾಂತರ ಲಕ್ಷಾವಧಿ ರೂಪಾಯಿಗಳನ್ನು ಗಳಿಸಿದರು. ತಮ್ಮ ದ್ರವ್ಯಸಂಗ್ರಹವನ್ನು ಉಪಭೋಗಕ್ಕಾಗಿಯೇ ವ್ಯಯಮಾಡದಲ್ಲೇ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ತಕ್ಕ ಸಹಾಯವನ್ನಿತ್ತರು. ಅನಾಥ ಬಡಬಗ್ಗರಿಗಾಗಿಯೂ ಶಿಕ್ಷಣ ಸೌಲಭ್ಯಕ್ಕಾಗಿಯೂ ಬೇರೆ ಬೇರೆ ಪ್ರಸಂಗಗಳಲ್ಲಿ ಸಂಸ್ಥೆಗಳಿಗಾಗಿ ಕೊಟ್ಟ ದೇಣಿಗೆಗಳು ಅಗಣಿತವಾಗಿರುವವು. ಈ ಪ್ರಕಾರ ನಿಸ್ವಾರ್ಥ ಬುದ್ಧಿಯಿಂದ ಸಾರ್ವಜನಿಕ ಲೋಕೋಪಯುಕ್ತವಾದ ಸಂಸ್ಥೆಗಳಿಗೆ ಸಹಾಯವನ್ನೀಯಲು ಇವರು ಎಂದೂ ಅಲ್ಲಗಳೆಯುತ್ತಿದ್ದಿಲ್ಲ. ಹಲವ್ಯಾಳ ಮುನಸಿಪಾಲಿಟಿಯ ಅಧ್ಯಕ್ಷರಾಗೂ ಉಪಾಧ್ಯಕ್ಷ ಪದಕ್ಕೆ ಅನೇಕ ವೇಳ್ಯೆ ಆರಿಸಲ್ಪಟ್ಟಿದ್ದರು. ೧೯೧೦ನೇ ಇಸ್ವಿಯಲ್ಲಿ ರಾವಬಹಾದ್ದೂರ ಎಂಬ ಗೌರವದ ಪದವಿಯು ಸರಕಾರದಿಂದ ಇವರಿಗೆ ದೊರೆತಿತು. ಜನತೆಯ ಸೌಕರ್ಯಕ್ಕಾಗಿ ಅನೇಕ ಕಟ್ಟಡಗಳನ್ನು ಏರ್ಪಡಿಸಿದ್ದಾರೆ. ಇವರೇ ಧಾರವಾಡದಲ್ಲಿ ವಿದ್ಯುದ್ದೀಪಗಳ ಯೋಜನೆಯನ್ನು ಕೂಡಾ ಕೈಕೊಳ್ಳತಕ್ಕವರಿದ್ದರು, ಅಷ್ಟರಲ್ಲಿ ಪರಲೋಕವಾಸಿಗಳಾದರು. ಇವರ ಸ್ವತಂತ್ರವೃತ್ತಿಯೂ, ಸ್ವಾವಲಂಬನವೂ, ಅವಿಶ್ರಾಂತ ಪರಿಶ್ರಮದಿಂದ ದೊರೆಯಬಹುದಾದ ಅಭ್ಯುದಯವನ್ನು ತೋರಿಸುವ ಇವರ ಜರಿತ್ರೆಯೂ ಈಗಿನ ಯುವಕರಿಗೆ ಮಾರ್ಗದರ್ಶಕಗಳಾಗಿಯೂ ಆದರ್ಶಪ್ರಾಯವೂ ಆಗಿರುವವು. ಇವರ ಮರಣದಿಂದ ಕರ್ನಾಟಕದಲ್ಲಿಯ ಒಬ್ಬ ಸಾಹಸಪ್ರಿಯ ಶ್ರೀಮಂತ ಸಹಾಯಕರು ಇಲ್ಲದಂತಾಯಿತು. ವಿಧಿಮಹಿಮೆ ! ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ

೧ ಏಕೀಕರಣವೂ ಉತ್ತರಕನ್ನಡವೂ

ಉತ್ತರ ಕನ್ನಡದಲ್ಲಿ ಏಕೀಕರಣ ಚಳವಳಿಯು ಇದೀಗ ಪ್ರಾರಂಭವಾಯಿತೆನ್ನಬಹುದು. ಶ್ರೀ. ಮಂಗಳವೇಢೇ ಶ್ರೀನಿವಾಸರಾಯರು, ಕುಮಟಾ, ಹೊನ್ನಾವರ ಈ ಎರಡು ಪಟ್ಟಣಗಳಲ್ಲಿ ವ್ಯಾಖ್ಯಾನವನ್ನು ಮಾಡಿ ಏಕೀಕರಣ ವಿಚಾರವನ್ನು ಜಾಗ್ರತೆಗೊಳಿಸಿರುವರು ಈ ಎರಡೂ ಪಟ್ಟಣಗಳಲ್ಲಿ ಕಂಡು ಬಂದ ಉತ್ಸಾಹವು ಅನಂದವನ್ನುಂಟುಮಾಡುತ್ತದೆ ಭಟ್ಕಳ ಬಂದರದ ವಿಷಯದಲ್ಲಿಯಂತೂ ವಿಶೇಷ ಉತ್ಸಾಹವು ವ್ಯಕ್ತವಾಯಿತು. ಏಕೀಕರಣದಿಂದ ಉತ್ತರ ಕನ್ನಡಕ್ಕೆ ಘನವಾದ ಲಾಭವಾಗುವುದೆಂಬುದನ್ನೂ ಗೌವವು ಪ್ರಾಪ್ತವಾಗುವದೆಂಬುದನ್ನೂ ನಾವು ಈ ಮೊದಲೇ ಹೇಳಿದ್ದೇವೆ. ಆದರೆ ಇದರ ಸಾಧನೆಗಾಗಿ ಮಾತ್ರ ಉತ್ತರ ಕನ್ನಡಿಗರು ಮನಃಪೂರ್ವಕ ಪ್ರಯತ್ನಮಾಡಬೇಕಾಗಿದೆ. ಬಾಗಲಕೋಟೆಯಲ್ಲಿ ಸೇರುವ ಏಕೀಕರಣ ಪರಿಷತ್ತಿಗೆ ಹೊನ್ನಾವರ ಮುಂತಾದೆಗಳಿಂದ ಹಲವರು ಹೋಗುವರೆಂದು ತಿಳಿದುಬಂದಿದೆ. ಮಾತ್ರವಲ್ಲದೆ ಶ್ರೀ ಕರ್ಕಿ ಮತ್ತು ಶ್ರೀ॥ ಶಾಸ್ತ್ರಿ ಪ್ರಭೃತಿಗಳು ಪರಿಷತ್ತಿನಲ್ಲಿ ಭಟ್ಕಳ ಬಂದರದ ಕುರಿತು ವಿಶೇಷ ಭಾಗತಕ್ಕೊಳ್ಳುವೆನೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಏಕೀಕರಣ ಚಳವಳಿಯು ಗುರಿಯನ್ನು ಸಾಧಿಸುವುದಕ್ಕೆ ಮುಖ್ಯತಃ ಬೇಕಾದುದು. ಲೋಕಮತ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ಜನರು ಸಭೆಸೇರಿ ಏಕೀಕರಣವಾಗಬೇಕೆಂದು ಏಕಮುಖದಿಂದ ಸಾರಿದರೆ, ಏಕೀಕರಣದ ಶತ್ರುವನ್ನು ಮಾನ್ಯಮಾಡಿದ ಸರಕಾರವು ಕಣ್ತೆರೆಯದೆ ಇರದು. ಆದರಿಂದ ಉತ್ತರ ಕನ್ನಡಿಗರು, ಭಟ್ಕಳ ಬಂದರ ಮಾತ್ರ ಭಟ್ಕಳ ರಾಜಧಾನಿ ಈ ಗುರಿಯನ್ನಟ್ಟುಕೊಂಡು ಏಕೀಕರಣ ಚಳವಳಿಯ ಪಕ್ಷವನ್ನು ಮುಂದೆ ನೂಕುವುದಕ್ಕೆ ವಿಶೇಷ ಪ್ರಯತ್ನ ಮಾಡಬೇಕೆಂದು ನಮ್ಮ ಅಗ್ರಹದ ವಿನಂತಿಯಿದೆ.

೨ ಭಟ್ಕಳ ಬಂದರ.

ಭಟ್ಕಳ ಬಂದರವು ಹೊಸದಲ್ಲ. ಅನೇಕ ಶತಮಾನಗಳಿಂದ ಇದು ಉತ್ತಮ ತರದ ಬಂದರವೆಂದು ಖ್ಯಾತಿಗೊಂಡಿದೆ. ಅದ್ಭುತ ವಿಜಯನಗರದ ಹೆಬ್ಬಾಗಿಲಾಗಿತ್ತೆಂಬುದನ್ನು ಈ ಮೊದಲೇ ಹೇಳಿದ್ದೇವೆ. ಕೇವಲ ಬ್ರಿಟಿಷರ ಆಳಿಕೆಗೆ ಆರಂಭವಾದ ಬಳಿಕವೇ ಸ್ವೈಸರ್ಗಿಕವಾದ ಬಂದರವು ಮೂಲೆಗೆ ಬಿದ್ದಿತು. ಭಟ್ಕಳವು ಹಿಂದೆಯು ರಾಜಧಾನಿ. ಸಾಹಸಿಗಳಾದ ನವಾಯತ ವ್ಯಾಪಾರಿಗಳ ವಾಸಸ್ಥಾನವೇ ಭಟ್ಕಳವೆಂದರೂ ಸಲ್ಲುವುದು. ಇಂದಿಗೂ ಭಟ್ಕಳವು ಜನಪಟ್ಟಣಕ್ಕೆಯುಳ್ಳ ಪಟ್ಟಣ. ಉತ್ತಮವಾದ ಹವೆ ಒಳ್ಳೇ ನೀರು. ಪಟ್ಟಣವನ್ನು ಬೆಳೆಸುವುದಕ್ಕೆ ವಿಶಾಲವಾದ ಪ್ರದೇಶ. ಬಂದರನ್ನು ಈಗಣ ಪದ್ಧತಿಯಂತೆ ಕಟ್ಟಿಸಿದರೆ ಶ್ರೇಷ್ಠತರಗತಿಯ ಒಂದಾಗುವುದೆಂದು ಇಂಜಿನಿಯರಿಂಗ ಶಾಸ್ತ್ರದಲ್ಲಿ ಮಹಾ ನಿಷ್ಣಾತರಾದ ಸರ್ ಎಂ ವಿಶ್ವೇಶ್ವರಯ್ಯನವರು ಶೋಧಿಸಿಯೇ ಇದ್ದಾರೆ. ಈ ಯೋಜನೆಯಲ್ಲಿ ಭಟ್ಕಳ ಬಂದರಕ್ಕೆ ಅಷ್ಟು ಪ್ರಾಶಸ್ತ್ಯ ಕೊಟ್ಟಿರುವರು ಈ ಬಂದರವನ್ನು ಕಟ್ಟುವುದಕ್ಕೆ ಇದ್ದಷ್ಟು ಸೌಕರ್ಯಗಳು ಇನ್ನಾವುದಕ್ಕೂ ಇಲ್ಲ. ಈ ಬಂದರಕ್ಕೆ ವಿದೇಶದ ಹಡಗುಗಳು ಮುಂಬಯಿಗಿಂತ ಬೇಗ ತಾಸು ಮೊದಲೇ ಬಂದು ಸೇರಬಹುದಾದ್ದು ಗೊತ್ತಾಗಿದೆ. ಈ ಬಂದರನ್ನು ಕಟ್ಟಿ ರೈಲು ಮಾರ್ಗವನ್ನು ಸ್ಥಾಪಿಸಿದರೆ ದಕ್ಷಿಣ ಹಿಂದುಸ್ಥಾನದ ವಿದೇಶದ ವ್ಯಾಪಾರವೆಲ್ಲ ಈ ಬಂದರದ ದ್ವಾರವೇ ನಡೆಯುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಇಂತಹ ಒಂದು ಒಂದನೆ ಸ್ಥಾನವು ಕರ್ನಾಟಕಕ್ಕಿದ್ದುದು ಪರಮ ಸುದೈವವು. ಕರ್ನಾಟಕದ ಸಂಪತ್ತು ಕರ್ನಾಟಕದ ವ್ಯಾಪಾರಿಗಳ ಕೈಯಲ್ಲೇ ಉಳಿದ ಕರ್ನಾಟಕವು ಸಂಪನ್ನವಾಗಬೇಕೆಂದು ಕನ್ನಡಿಗರು ಅಪೇಕ್ಷಿಸುತ್ತಿದ್ದರೆ, ಭಟ್ಕಳದ ಒಂದರದ ಯೊ ಜನೆಯನ್ನು ಕೊನೆಗಾಣಿಸಲು ಯತ್ನಿಸಕ್ಕದ್ದು.

—ಕರ್ನಾಟಕ ಭೂಷಣ.

"ನನ್ನ ತುಣುಕು ವಹಿಯಿಂದ"

"ಶ್ರೀ ಶೃಂಗಗಿರಿ ಜಗದ್ಗುರುಗಳು ಕಲ್ಯಾಣವ್ರತಕ್ಕೆ ಬಿಜಯಂಗೈಯುತ್ತ ಪುರದಿಂದ ಹೊರಡುವಾಗ ಹಲವುಮಂದಿ ನಿತ್ಯಸುಮಂಗಲಿಯರಿಂದ ಮರ್ಯಾದಿತರಾದರು. ಶಪ್ಪೇನು? ನೊಡ್ಡವರ ನಡತೆಯಲ್ಲಿ ಕುಂದೆಣಿಸಲು ಪಾಮರ ಕೀಟಗಳಾದ ನಮಗೆಷ್ಟು ಶಕ್ತಿ!" ಸ್ವಾಮಿಗಳಿಗೆ ಯಾವದೂ ಬೇಡ. ಇದು ಕೇವಲ ಭಕ್ತ ವೃಂದದ ಸಂತೋಷ "ಎಂದೊಬ್ಬ ಪುಣ್ಯಾತ್ಮರು "ಒಕ್ಕಲಿಗರ ಪತ್ರಿಕೆ"ಯಲ್ಲಿ ಬರೆದರು. ನಿಜನಿಜ! ಹಿಂದೂ ಸಮಾಜದ ಈ ಅಪಸ್ಸಿಂದೆಯನ್ನು ಕೊನೆಗಾಣಿಸುವ ಸುಧಾರಣೆಯೂ ಪ್ರಾಯಶಃ ಶ್ರೀ ಶ್ರೀಗಳಿಗೆ ಬೇಡವೇನೋ? ಎಸ್. ಕ್ಯಾಥರಿನ್ ಮಹಾತಾಯಿ ತನ್ನ "ಮದರ ಇಂಡಿಯಾ" ಗ್ರಂಥವನ್ನು ಕನ್ನಡದಲ್ಲಿ ಒರೆದಿದ್ದರೆ ಜನ್ಮಾಗಿರತಿತ್ತು ಎನಿಸುತ್ತದೆ.

* * * *

ಬಡಬ್ರಾಹ್ಮಣ ಬಾಲಕರ ಆರ್ತನಾದವು ಶ್ರೀ. ಶ್ರೀಗಳವರೆ ಕಿವಿಗಳಿಗೆ ಬೀಳಲಿಲ್ಲವೆಂದು ಕಾಣುತ್ತದೆ. ಅದು ಹೇಗೆ ಬೀಳಬೇಕು? ವೇದ ಘೋಷದ ರಮ್ಯರವವನ್ನಾಲಿಸುವುದರಲ್ಲಿ ನಿಮಗ್ನರಾಗಿರುವವರಿಗೆ ಅರಣ್ಯ ರೋದನವು ಕೇಳಬರುವುದೆ? ಮುಖ್ಯ! ಬ್ರಾಹ್ಮಣ ಬಾಲಕರದೆಸೆಯಿನ್ನೂ ತಿರಿಗಿಲ್ಲ.

† † † †

ಈ ಸುಧಾರಣೆಗಳು ಅನವಶ್ಯಕವೆಂದಭಿಪ್ರಾಯಪಡುವ ಪ್ರಜಾಪ್ರಭುತ್ವದ ಪುರುಷೋತ್ತಮರಿನ್ನೂ ಇದ್ದಾರೆಂದು ನನಗೆ ಮನವರಿಕೆಯಾಗಿರಲಿಲ್ಲ. ನನ್ನ ಸಹೋದ್ಯೋಗಿಗಳಾದ "ಮಾತಿನಮಲ್ಲ"—"ಓದುಗ"—"ವಿನಾಯಕಶಾಸ್ತ್ರಿ"— ಇವರುಗಳು ನನ್ನ ಕಂಗಳಲ್ಲಿಯೇ ನೋಡುವುದು ಹರ್ಷದಾಯಕವಾಗಿದೆ.

† † † † †

ಜಗದ್ಗುರುದೀನದಾಸ ಜನ್ನಬಸವೇಶ್ವರರ ಬೋಧನೆಯು ಈಗ್ಗೂ ಮೈಸೂರ ಪ್ರಾಂತದಲ್ಲಿ ಸುರಕ್ಷಿತವಾಗಿ ನಡೆಯುತ್ತಲಿದೆ! ಭಕ್ತವೃಂದವು ಬೆಳೆಯುತ್ತಲೂ ಇದೆ! ಇವರ ಬೋಧನಾವೈಖರಿಯನ್ನು ಸಿದ್ಧಾಂತಗಳ ನಾವೀನ್ಯತೆಯನ್ನೂ ಸೂಕ್ಷ್ಮವಾಗವಲೋಕಿಸಿದರೆ ಸಧ್ಯದಲ್ಲಿ ಶಾಂತಿಸ್ವರೂಪದಲ್ಲಿದ್ದ ಮೈಸೂರಿನಲ್ಲಿ "ಹಿಂದೂ-ಮಹಮ್ಮದೀಯರ ಕಲಹ ವಿಚಾರಕ ಮಂಡಳಿ"ಯು ಅವಶ್ಯಕತೆಯು ಹುಟ್ಟಬಹುದೆಂದು ಘನ ಮೈಸೂರು ಸರ್ಕಾರಕ್ಕೆ ನನ್ನದೊಂದು ಸೂಚನೆ! ಈ ಸಂಸ್ಥೆಗೆ ಅಧಿಕಾರ ವರ್ಗದಿಂದ ಪ್ರೋತ್ಸಾಹ ದೊರೆಯುತ್ತಿದೆಯೆಂದು ಕೆಲವರ ಅಭಿಪ್ರಾಯ! ನಾನದನ್ನು ನಂಬಲಾರೆ!!

—"ವಿಶ್ವಭ್ರಾತಾ"

ಕರ್ಜಗಿಯಲ್ಲಿ ಉತ್ತರಾದಿಮಠದ ಶ್ರೀ ಶ್ರೀಗಳವರು ಜರುಗಿಸುವ ಮಹಾ ಸಪ್ತಾಹ ಧನೆಯ ಕಾಲಕ್ಕೆ ತಾ॥ ೩೦ ರಿಂದ ೬-೨-೩೮ ರವರೆಗೆ ಕರ್ಜಗಿ ಸ್ಟೇಶನದಲ್ಲಿ ಎರಡು ವೇಳೆಗಾಡಿಗಳನ್ನು ನಿಲ್ಲಿಸಲು ರೇಲ್ವೇಕಂಪನಿಯವರಿಗೆ ಕೇಳಿಕೊಂಡ ಪ್ರಕಾರ ಏರ್ಪಾಡಾಗಿದೆಯಂತೆ.

ಹೊನ್ನಾವರದಲ್ಲಾದ ವಿಕೇಂದ್ರೀಕರಣ ವಿಷಯಕ್ಕೆ ರಾವುಗಳು

೧ ಭಾಷಾವಾರ್ಯು ಪ್ರಾಂತರಚನೆಯು ತತ್ವವು ಈ ಸಭೆಗೆ ಸಂಪೂರ್ಣವಾಗಿ ಮಾನ್ಯವಿದ್ದು ಕರ್ನಾಟಕಕ್ಕರಿಗೆ ಸ್ವತಂತ್ರವಾದ ಪ್ರಾಂತೀಯ ಸರಕಾರವು ಆಗತ್ಯವಾಗಿ ದೊರೆಯುಬೇಕೆಂದು ಈ ಸಭೆಯು ಮತವದೆ ಮತ್ತು ಈ ವಿಷಯವಾಗಿ ಕರ್ನಾಟಕ ವಿಕೇಂದ್ರೀಕರಣ ಸಭೆಯವರು ನಡಿಸಿದ ಕಾರ್ಯಕ್ಕೆ ನನ್ನ ಹೊನ್ನಾವರ ನಾಗರಿಕರ ಪೂರ್ಣ ಬೆಂಬಲವಿದೆ

೨ ಈ ಸಾರೆ ಬಾಗಲಕೋಟೆಯಲ್ಲಿ ನೇರುವ ವಿಕೇಂದ್ರೀಕರಣ ಪರಿಷತ್ತಿನ ಸ್ವಾಗತಮಂಡಲದವರು ಕೊಟ್ಟ ಆಮಂತ್ರಣವನ್ನು ಹೊನ್ನಾವರ ನಾಗರಿಕರ ಈ ಸಭೆಯು ಸ್ವೀಕರಿಸುತ್ತದೆ. ಮತ್ತು ಇದ್ದಿಂದ ಶಕ್ಯವಿದ್ದಷ್ಟು ಹೆಚ್ಚಿಗೆ ಪ್ರತಿನಿಧಿಗಳನ್ನು ಕಳಿಸತಕ್ಕದ್ದೆಂದು ನಿರ್ಣಯಿಸುತ್ತದೆ

ಸೋಜಿಗದ ಸುದ್ದಿ.

ಲಂಡನ್ನಿನ ನೇಜರ ರೇಮಂಡ ಫಿಲಿಪ್ಸರು "ಧ್ವನಿ ವಶೀಕರಣ" ಎಂಬ ಯಂತ್ರವನ್ನು ಶೋಧಿಸಿದ್ದಾರೆ ಶಂತಿಯಿಲ್ಲದ ವಿದ್ಯುತ್ ಶಕ್ತಿಯನ್ನು ಇವರು ಬಹು ಜಾಣತನದಿಂದ ಒಂದು ವಿಚಿತ್ರವಾದ ವಿಶಿಷ್ಟ ಪದ್ಧತಿಗೆ ಹಿಡಿದು ತಂದಿದ್ದಾರೆ ಇದರಿಂದ ಮನುಷ್ಯನು ಮಾತನಾಡಿದ ಕೂಡಲೇ ಯಂತ್ರಗಳು ಅವನು ಹೇಳಿದಂತೆ ಕಲಸವು ಜತೊಶಗುಸವು. ಎಷ್ಟೆ ಮೊನ್ನೆ ಲಂಡನ್ನದಲ್ಲಿ ಇಂಜನಿಯರರು ಪ್ರದರ್ಶನವಾಯಿತು. ಒಂದು ಮಾದರಿಯು ಇಂಜನನ್ನು ಅವನು ಮಾಡಿ ತಂದಿದ್ದನು. ಈ ರೇಲ್ವೇದ ಇಂಜನಿಗ "ನಿಲ್ಲು" ಎಂದು ಹೇಳಿದಾಕ್ಷಣವೇ ಅದು ಮುಂದೆ ನಡೆಯಿತು! "ನಿಲ್ಲು" ಎಂದಾಕ್ಷಣವೇ ಗಕ್ಕನೇ ನಿಂತಿತು!! "ಸರ" ಎಂದು ಕೂಗಿದ್ದೇ ತಡ, ಹಿಂದಕ್ಕೆ ಓಡಲಾರಂಭಿಸಿತು!!! ಇದನ್ನು ಪ್ರತ್ಯಕ್ಷವಾಗಿ ಕಂಡು ವಿದ್ಯಾರ್ಥಿಗಳೂ, ಮುಮುಕ್ಷರೂ, ಇತರ ಪ್ರೇಕ್ಷಕರೂ ಅತ್ಯಂತ ವಿಸ್ಮಯ ಹೊಂದಿದರು! ಒಮ್ಮೆ ದಿನ ಎಲ್ಲ ರೇಲ್ವೇಗಳೂ ಹೀಗೆ ನಡೆಯು ಬಹುದೋ ? ಎಂದು ಹಿರ್ವ ವಿದ್ಯಾರ್ಥಿಯು ಕೇಳಲು, "ನಿಃಸಂದೇಹವಾಗಿ" ಎಂದು ಫಿಲಿಪ್ಸರು ಹೇಳಿದರು. "ಬಾಗಿಲ ತೆರೆ" ಎಂದ ಕೂಡಲೆ ರೇಲ್ವೇ ಡಬ್ಬಿಗಳ ಬಾಗಿಲ ತೆರೆಯುವದು! ರೇಲ್ವೇ ಡಬ್ಬಿಗಳಲ್ಲಿಯ ಸರಸಳಿಯನ್ನು ತೆಗೆದು ಅಲ್ಲಿಯೂ ಈ ಯಂತ್ರವನ್ನಿಟ್ಟರೆ "ನಿಲ್ಲು" ಎಂದಾಕ್ಷಣವೇ ಓಡುವ ಗಾಡಿಯು ನಿಂತೇ ಬಿಡುವದು! ಈ ಧ್ವನೀ ವಶೀಕರಣ ಯಂತ್ರವು ಜಗತ್ತಿನಲ್ಲಿ ಇನ್ನೂ ಅದ್ಭುತಕಾರ್ಯಗಳನ್ನು ಮಾಡಬಲ್ಲದು. ಮಿಲ್ಲಗಳಲ್ಲಿ ಕೂಲಿಯವರಿಗೆ ಗಾಯತಗಲಿದಾಗ್ಯೆ ಅವರು ತಮ್ಮ ಸಂಕಟದ ಆರ್ತಧ್ವನಿಯಿಂದ ಒದರಿದ ಕೂಡಲೇ, ಪ್ರಜಂಡವಾದ ಯಂತ್ರಗಳು ತತ್ಕಾಲದಲ್ಲಿ ನಿಲ್ಲ ವಂತೆ ಧ್ವನೀ ಯಂತ್ರವನ್ನು ಸಿದ್ಧಪಡಿಸಲಿಕ್ಕಾ ಬರುವದಂತೆ! ಸರ್ಕಾರಿಯ ವೈಟ್ಟು ಎಲ್ಲಿಗೆ ಹೋಗಿ ತಗಲುವದೋ ತಿಳಿಯದು.

ಸ್ವೀಕಾರ.

೧. ವೀರಶೈವ ಕರದರ್ಪಣ.
೨. ಭಯಸೂಚಕ ಭೇರಿ.
೩. ಯಾದಗಿರಿಯ ಸಂಸ್ಕೃತ ಕಾಲೇಜದ ಮೂರು ವರ್ಷಗಳ ವರದಿಯು.
೪. 'ನವಜೀವನ' ದ ವಿಶೇಷ ಸಂಚಿಕೆ.
೫ ವಿಶ್ವಬ್ರಹ್ಮ ವಿಜಯ ಎಂಬ ಮಾಸಪತ್ರಿಕೆಯ ೪-೫ ಸಂಚಿಕೆಗಳು

ಇವೆಲ್ಲವುಗಳ ವಿಮರ್ಶೆಯು ಯಥಾವಕಾಶವಾಗಿ ಮಾಡಲ್ಪಡುವದು

ಸವಣೂರ ಸಂಸ್ಥಾನ ಈ ಸಂಸ್ಥಾನದ ಪೋಲೀಸರು ಗಾಂಧಿ ಟೊಪ್ಪಿಗೆ ಬಾಕಾಯವರ ಪೆನ್ನು ಹತ್ತುವರಂತೆ, ಟೊಪ್ಪಿಗೆ ಇಡಲು ಆಗ್ರಹಮಾಡುವರಂತೆ. ಅಂತೂ ಸವಣೂರಿನ ಪೋಲಿಸ ಗೂಗಗಳಿಗೆ ಗಾಂಧೀ ಟೊಪ್ಪಿಗೆಯು ಪ್ರಕಾಶವು ಇನ್ನೂ ಅಸಹ್ಯವಾಗಿದೆ. ಸವಣೂರ ನವಾಬರೇ ಈ ವಿಚಾರದ ಪೋಲಿಸರೋ ಅಥವಾ ಇದು ಕೇವಲ ಪೋಲಿಸರ ಉಪದಸ್ಯಿಕವೋ?

ಹಿಂದುಸ್ಥಾನ.

ಸಾಬರ ಮತಿಯಲ್ಲಿ ಅಂತರರಾಷ್ಟ್ರೀಯ ಹಿತಚಿಂತಕರಾದ ದ. ಪರಿಷತ್ತು ಸೇರಿತ್ತು ಅದರಲ್ಲಿ ಗಾಂಧಿಜಿಯವರು ಮತ್ತು ದೀನ ಬಂಧು ಆಂಡ್ರೂಜರವರೂ ಹಾಜರು ಇದ್ದರು. ಅಲ್ಲಿ ನಡೆದ ವಿಷಯಗಳ ಜರ್ಜೆಯು ರಹಸ್ಯವಾಗಿದ್ದುದರಿಂದ ಹೆಚ್ಚಿಗೆ ಬಿಚ್ಚಿಬರೆಯಲಿಕ್ಕೆ ಸಾಧ್ಯವಿಲ್ಲ ಆದರೂ ಹಿಂದು ಮುಸಲ್ಮಾನರ ವಿಷಯದ ಬಗ್ಗೆ ಕೆಲವು ಮಾತುಗಳಾದವೆಂಬುದಿಷ್ಟು ಸುದ್ದಿ ಒಡದಿದೆ.

ಮುಂಬೈ ಸರಕಾರದ ಗ್ಯಾಝೆಟ.

ಮಿ|| ಎಮ್. ಎಸ್. ಬಗಲೆ, ಎಲ್. ಎಲ್. ಬಿ. ಇವರು ಬೆಳಗಾಂವಿಯ ೨ನೇ ವರ್ಗ ಸಬ್ ಜಜ್ಜರಾಗಿ ನಿಯುಮಿಸಲ್ಪಟ್ಟಿದ್ದಾರೆ

ಪಂಢರಪುರ ೨ನೇ ವರ್ಗ ಸಬ್ ಜಜ್ಜ ರಾದ ಮಿ|| ಬಿ. ಎಸ್. ಕೆಂಭಾವಿಯವರು ಪಿಂಪಳಗಾಂವಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಕುಮಠಾದ ೨ನೇ ವರ್ಗ ಸಬ್ ಜಜ್ಜ ರಾದ ಮಿ|| ವಿ. ಆರ್. ಮಂಗಳವೇಢೇಕರ ಇವರಿಗೆ ಪಂಢರಪುರಕ್ಕೆ ವರ್ಗವಾಗಿದೆ.

ರತ್ನಾಗಿರಿಯ ೨ನೇ ವರ್ಗ ಸಬ್ ಜಜ್ಜ ರಾದ ಮಿ|| ಎಸ್. ಎಸ್. ಖತೀಬ ಇವರು ಮಂದ್ರೇಬಿಹಾಳಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಇಹವೃತ್ತ.

ಹಿಂಗಾರಿಯ ಬೆಳೆಗಳು ಒಣಗಹತ್ತಿವೆ. ಗೋಹತ್ತಿಯ ಬೆಳೆಯು ಸಾಧಾರಣವದೆ. ಮುಂಜಾವಿನಲ್ಲಿ ಸ್ವಲ್ಪ ಧಂಡಿ ಬೀಳುತ್ತದೆ.

ಇಲ್ಲಿಯ ವೆಸ್ಟ ಪೇಟೆಂಟ ಪ್ರೆಸ್ ದ ಮ್ಯಾನೇಜರರಾದ ಶ್ರೀ ವಿರ್ಕಲರಾವ ದೇಶಪಾಂಡೆ ಇವರು ಅದೇ ಕಂಪನಿಯಲ್ಲಿ ೩೬ ವರ್ಷ ಕೆಲಸಮಾಡಿ ಇದೇ ತಿಂಗಳ ಕೊನೆಗೆ ನಿವೃತ್ತರಾಗುವರು. ಈ ದೀರ್ಘವಾದ ಅವಧಿಯಲ್ಲಿ ಇವರು ತೋರಿಸಿದ ಕಾರ್ಯಕ್ಷಮತೆ ನಿಷ್ಠೆಗಳಿಗಾಗಿ ಕಂಪನಿಯವರು ಇವರಿಗೆ ೨ ಸಾವಿರ ರೂಪಾಯಿಗಳ ಬಹುಮಾನವನ್ನು ಕೊಟ್ಟರುವದು ಅಭಿನಂದನೀಯವಾಗಿದೆ. ಇದಲ್ಲದೆ, ಇವರು ವೈದ್ಯಕೀಯದಲ್ಲಿ ನಿಷ್ಣಾತರಾಗಿರುವರು. ಇವರು ಸಹ ವೆಚ್ಚವಿಲ್ಲದೆ ಇವರಿಂದ ಗುಣ ಹೊಂದಿದ ಅನೇಕ ಜನರು ಈ ಊರಲ್ಲಿ- ಪರಊರಗಳಲ್ಲಿ ಸಹ ಅನೇಕರಿರುವರು. ಈ ಧಾರ್ಮಿಕ ಲೋಕಪ್ರಿಯ ಗೃಹಸ್ಥರು ತಮ್ಮ ಮುಂದಿನ ಆಯುಷ್ಯವನ್ನು ಲೋಕಹಿತಕ್ಕಾಗಿ ಅರ್ಪಿಸುವರೆಂದು ನಮ್ಮ ಭರವಸೆ.

ವಾಡಿಕೆಯಂತೆ ಮುಂಬಯಿ ವಿಶ್ವವಿದ್ಯಾಲಯದ ವತಿಯಿಂದ ಪ್ರೊ|| ಶಹಾ- ಹಾಗೂ ಪ್ರೊ|| ಕಾನಿಟಕರರು ಇಲ್ಲಿಯ ಬಸವೇಶ್ವರ ಹಾಯಸ್ಕೂಲಿಗೆ ಒಂದು ನೋಡಿಹೋದರಾಗಿ ತಿಳಿಯುತ್ತಿದೆ. ಶಾಲೆಯ ನಿಜರೂಪವು ವಿರಾಟ ಸ್ವರೂಪವು- ಇವರ ದೃಷ್ಟಿಗೆ ಬಿದ್ದಿರ ಬಹುದಲ್ಲವೆ?

ಉತ್ತರ ಕನ್ನಡ ಜಿಲ್ಲೆಯೂ, ಕರ್ನಾಟಕ ಏಕೀಕರಣ ಚಳವಳಿಯೂ

ಬಾಗಲಕೋಟೆಯ ಕರ್ನಾಟಕ ಏಕೀಕರಣ ಪರಿಷತ್ತಿನ ಸ್ವಾಗತಮಂಡಲದವರ ವತಿಯಿಂದ ಉತ್ತರ ಕನ್ನಡ ಜಿಲ್ಲೆಯವರನ್ನು ಆಮಂತ್ರಿಸಲಿಕ್ಕೂ, ಏಕೀಕರಣ ಚಳವಳಿಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಹಬ್ಬಿಸಲಿಕ್ಕೂ ನಾನು ಈ ಜಿಲ್ಲೆಗೆ ಒಂದಪ್ಪಾಯಿತು. ಇಲ್ಲಿ ಕುಮಟಾ ಹಾಗೂ ಹೊನ್ನಾವರಗಳಲ್ಲಿ ಸಾರ್ವಜನಿಕ ವ್ಯಾಖ್ಯಾನಗಳಾದವು. ಎರಡೂ ಸ್ಥಳಗಳಲ್ಲಿಯೂ ಊರಲ್ಲಿಯ ವಕೀಲರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ವ್ಯಾಪಾರಸ್ಥರು ಸಭೆಗೆ ಬಂದಿದ್ದರು ಏಕೀಕರಣದ ಪ್ರಶ್ನೆಯು ಈ ಜಿಲ್ಲೆಯಲ್ಲಿ ಹೊಸದ್ದು ಇದೇ ಮೊದಲನೇ ಸಲವಾದ್ದರಿಂದ ಜನರು ಹಚ್ಚಾಗಿ ಸಭೆಗಳಿಗೆ ಒಂದಿರಲಿಲ್ಲ. ಆದರೆ ಈ ಎರಡೂ ಸ್ಥಳಗಳಲ್ಲಿಯೂ ಊರಲ್ಲಿನ ವಿಚಾರವಂತ, ಬುದ್ಧಿವಂತ ಹಾಗೂ ಸಾರ್ವಜನಿಕ ಕಾರ್ಯಗಳಲ್ಲಿ ಮನಸ್ಸುಹಾಕುವ ಮಹನೀಯರು ಏಕೀಕರಣ ವಿಷಯವನ್ನು ತಿಳಿದುಕೊಳ್ಳುವ ಅನಿವಾರ್ಯತೆಯಿಂದ ಸಭೆಗೆಬಂದಿದ್ದರೆನ್ನುವದನ್ನು ನೆನೆದರೆ, ಏಕೀಕರಣದ ಪ್ರಚಾರದ ಕಾರ್ಯವು ಇನ್ನೂ ಹೆಚ್ಚು ರಭಸದಿಂದ ಈ ಜಿಲ್ಲೆಯಲ್ಲಿ ಸಾಗುವಂತೆ ಪ್ರಯತ್ನವಾದರೆ, ಜನತೆಯಲ್ಲೆಲ್ಲ ಈ ಚಳವಳಿವು ಬೇಗನೇ ಪ್ರಸಾರ ಹೊಂದುವದೆಂಬುವದು ಕಂಡು ಬರುತ್ತದೆ. ಆದುದರಿಂದ ಕರ್ನಾಟಕ ಏಕೀಕರಣ ಸಭೆಯವರಾಗಲಿ, ಪ್ರತಿ ಕಾಂಗ್ರೆಸ ಕಮೀಟಿಯಿಂದ ಸ್ಥಾಪಿತವಾದ ಏಕೀಕರಣ-ಉಪಸಮಿತಿಯವರಾಗಲಿ, ಬಾಗಲಕೋಟೆಯ ಪರಿಷತ್ತಿನ ಸ್ವಾಗತ ಕಮೀಟಿಯವರಾಗಲಿ, ಅಥವಾ ಎಲ್ಲರೂ ಕೂಡಿಕೊಂಡಾಗಲಿ, ಈ ಪ್ರಚಾರದ ಕಾರ್ಯವನ್ನು ಕೈಕೊಳ್ಳಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಅವರಲ್ಲಿ ಬೇಡಿಕೊಳ್ಳುತ್ತೇನೆ. ಏಕೀಕರಣದ ಬಗ್ಗೆ ಕಾರ್ಯಮಾಡಲು ಈ ಮೂರು ಸಂಸ್ಥೆಗಳು ಈಗ್ಗೆ ಕರ್ನಾಟಕದ ಸುದ್ದಿಯಿಂದ ನಮ್ಮಲ್ಲಿ ಉದ್ಭವವಾಗಿವೆ. ಧಾರವಾಡದ ಮುಖ್ಯ ಏಕೀಕರಣ ಸಭೆಯು ಸಂಪೂರ್ಣ ನಿಷ್ಕ್ರಿಯಸ್ಥಿತಿಯಲ್ಲಿದ್ದರೂ, ಉಳಿದ ಎರಡೂ ಸಂಸ್ಥೆಗಳು ತಮ್ಮ ತಮ್ಮ ಕಾರ್ಯಗಳಿಂದ ಆ ಸಭೆಗೆ ಸಾಜೀವನವನ್ನುಂಟು ಮಾಡಬಹುದಾಗಿದೆ. ಏನೇ ಆಗಲಿ ಕನಿಷ್ಟ ಈ ವರ್ಷದಲ್ಲಿಯಾದರೂ ಈ ಏಕೀಕರಣದ ಪ್ರಚಾರದ ಕಾರ್ಯವು ಜೋರ್ಯಾಗಿ ನಡೆಯುವಂತೆ ಏರ್ಪಡಿಸಲು ಎಲ್ಲರೂ ಕಂಕಣಬದ್ಧರಾಗಿ ಬಿನ್ನಹ.

ಕುಮಟಾ ಹೊನ್ನಾವರಗಳಲ್ಲಿಯ ಮುಖ್ಯ ಮುಖ್ಯ ಜನರ ಮನೆಗೆ ಹೋಗಿ ನಾನು ಅವರನ್ನು ಸಂದರ್ಶಿಸಿದ್ದು ಉಂಟು. ಬಹುತೇಕವಾಗಿ ಎಲ್ಲ ಜನರೂ ಈ ವಿಷಯವನ್ನು ಆದರದಿಂದಲೂ ಆಲೋಚನೆಯಿಂದಲೂ ಚರ್ಚಿಸುತ್ತಲಿದ್ದುದು ನನ್ನ ಅನುಭವಕ್ಕೆ ಬಂದಿತು. ಇದೇ ಬಗೆಯ ಭಾವನೆಯು ಉಳಿದ ಜಿಲ್ಲೆಗಳ ಕನ್ನಡಿಗರಲ್ಲಿಯೂ ಕಂಡುಬರಲಿಕ್ಕೆ ಸಾಕು. ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ಈ ಪ್ರಶ್ನೆಯು ಹೆಚ್ಚಾಗಿ ಚರ್ಚಿಸಲ್ಪಟ್ಟಿದೆ. ಆದರೆ ಮಂಗಳೂರ, ಕಾರವಾರ, ಬಳ್ಳಾರಿ, ನೀಲಗಿರಿ, ಸೇಲಂ, ಕೃಷ್ಣಾ ಮತ್ತೂರ, ಅನಂತಪೂರ ಹಾಗೂ ಕೊಡಗುಗಳಲ್ಲಿ ಅಂದರೆ ಕನ್ನಡಿಗರ ಹೆಚ್ಚು ಭಾಗಗಳಲ್ಲಿ ಈ ಚಳವಳಿದ ಪ್ರಸಾರವು ವಿಶೇಷ ಜೋರಿನಿಂದ ಆಗ ಬೇಕಾಗಿದೆ. ಆದುದರಿಂದ ಸುಸಂಘಟಿತವಾದ ಚಳವಳಿವು ಪ್ರಾರಂಭಿಸಲ್ಪಡಬೇಕು. ಹೀಗೆಮಾಡಲು ಮೇಲೆ ಸೂಚಿಸಿದ ಮೂರೂ ಸಂಸ್ಥೆಗಳು ಒಬ್ಬಾಗಿ ಸೇರಿ, ವಿಚಾರಮಾಡಿ, ಕಾರ್ಯಪ್ರಣಾಳಿಕೆಯನ್ನು ಪೂರ್ಣ ಪರಿಣಾಮಕಾರಿ ಯಾಗಿ ತೋರಿಸುತ್ತವೆ

ನಾನು ಈ ಸಲ ಕಾರವಾರ ಜಿಲ್ಲೆಯ ಘಟ್ಟದ ಕೆಳಗಿನ ತಾಲೂಕುಗಳನ್ನೆಲ್ಲ ಸಂದರ್ಶಿಸಬೇಕೆಂದೂ, ಘಟ್ಟದ ಮೇಲಿನ ತಾಲೂಕುಗಳನ್ನು ಇನ್ನೊಂದು ಸಲ ಸಂದರ್ಶಿಸಬೇಕೆಂದೂ ಯೋಚಿಸಿದೆ. ಆದರೆ ಕಾರವಾರದಲ್ಲಿ ಪ್ಲೇಗಿನ ಗೊಂದಲವೆದ್ದಿದೆ. ಅಂಕೋಲೆಯಲ್ಲಿಯೂ ಕೊಂಚ ಪ್ಲೇಗಿನ ಗಾಳಿಯು ಬೀಸಿದೆಯಂತೆ! ಘಟ್ಟದ ಕೆಳಗಿನವರಿಗೆ ಪ್ಲೇಗೆಂದರೆ ಎಂಥ ಬೇನೆಯೆಂಬ ಕಲ್ಪನೆಯು ಕೇವಲ ಓದುವದರಿಂದ ಈ ವರೆಗೆ ಬಂದಿತ್ತು. ಆದರೆ ಈಗ್ಗೆ ಪ್ರತ್ಯಕ್ಷವಾದ ಅನುಭವದಿಂದ ಕಂಡುಬರುವ ಪ್ರಸಂಗ ಒಂದದರಿಂದ ಜನರೆಲ್ಲ ಕೊಂಚ ಗಾಬರಿಯಾದುದು ಆಶ್ಚರ್ಯವಲ್ಲ ಇಂಥ ಸಮಯದಲ್ಲಿ ನಾನು ಆ ಸ್ಥಳಗಳಿಗೆ ಹೋಗುವದು ಯೋಗ್ಯವಲ್ಲವೆಂದು ಇಲ್ಲಿಯ ಜನರ ಅಭಿಪ್ರಾಯವಾದ್ದರಿಂದ ನಾನು ಸದ್ಯಕ್ಕೆ ಹಿಂತಿರುಗಬೇಕಾಗಿದೆ. ಮುಂದೆ ಮತ್ತೆ ಇಲ್ಲಿ ಪ್ರಚಾರಕರು ಬಂಬೇಕಾಗುವದೆಂದು ಸ್ವಾಗತ ಕಮೀಟಿಯವರಿಗೆ ಸೂಚಿಸದೆ ಇರಲಾರೆನು.

ಮುಕ್ತಾಂ. ಕುಮಟಾ. ತಾ॥ ೧೩-೧೧-೩೮

ಶ್ರೀನಿವಾಸ ರಾಮರಾವ ಮಂಗಳವೇಢೆ,
ಕಾರ್ಯದರ್ಶಿ ಸ್ವಾಗತ ಕಮೀಟಿ
ಏಕೀಕರಣ ಪರಿಷತ್ತು, ಬಾಗಲಕೋಟೆ.

ತಾ॥ ೧೩ ನೇ ದಿನ ಹೊನ್ನಾವರದಲ್ಲಿ "ಕರ್ನಾಟಕ ಏಕೀಕರಣವೂ ಭಟ್ಕಳ ಬಂದರದಿಂದ ಉತ್ತರ ಕನ್ನಡ ಜಿಲ್ಲೆಯವರಿಗಾಗ ಬಹುದಾದ ಲಾಭಗಳೂ," ಈ ವಿಷಯದ ಮೇಲೆ ಶ್ರೀ ಮಂಗಳವೇಢೆ ಶ್ರೀನಿವಾಸರಾಯರ ವ್ಯಾಖ್ಯಾನವಾಯಿತು. ಮುಂಬೈ ಕಾಯದೇ ಮಂಡಲದ ಸಭಾಸದರಾದ ಶ್ರೀ ಮಂಜುನಾಥಭಟ್ಟ ಕರ್ಕಿಯವರು ಅಧ್ಯಕ್ಷರಿದ್ದರು. ಟಪ್ಪರ ಹಾದಿದಲ್ಲಿ ಸಭೆ ಸೇರಿದ್ದಿತು. ಬಾಗಲಕೋಟೆಯ ಪರಿಷತ್ತಿನ ಆಮಂತ್ರಣವನ್ನು ಸ್ವೀಕರಿಸಿದಬಗ್ಗೆ, ಹೆಚ್ಚಾಗಿ ಪ್ರತಿನಿಧಿಗಳು ಜಿಲ್ಲೆಗೆ ಹೋಗುವ ಬಗ್ಗೆ, ಹಾಗೂ ಏಕೀಕರಣಕ್ಕೆ ಹೊನ್ನಾವರದವರ ಸಂಪೂರ್ಣ ಬೆಂಬಲವಿದ್ದ ಬಗ್ಗೆಯೂ ತರಾವುಗಳಾದವು. "ಕೊಂಕಣೀ ಮಾತನಾಡುವವರು ಏಕೀಕರಣವಾದರೆ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು" ಎಂಬದಾಗಿ ಓರ್ವ ಸದ್ಗೃಹಸ್ಥರು ಕೇಳಿದ ಪ್ರಶ್ನೆಗೆ, ಶ್ರೀ ಶಾಸ್ತ್ರೀ ವಕೀಲರು ಉತ್ತರ ಹೇಳಿದ್ದು:- ಕೊಂಕಣೀ ಮಾತನಾಡುವವರಿಗೆ ಕನ್ನಡವೂ ಅಷ್ಟೇ ಮರಾಠಿಯು ಅಷ್ಟೇ. ಉತ್ತರ ಕನ್ನಡಕ್ಕೆ ಹೈಗನಾಡೆಂಬ ಹೆಸರಿದೆ. ಅಂದರೆ ಇದು ಹವ್ಯಕರನಾಡು. ಕೊಂಕಣಿಯವರಲ್ಲ ಕೊಂಕಣಿಯವರು ಬಿದರುವ ಕಾರಣವೂ ಇಲ್ಲ. ಯಾರೂ ಅವರನ್ನು ಹೊರಕ್ಕೆ ಓಡಿಸರು" ಎಂಬದಾಗಿ. ಬಾಗಲಕೋಟೆಯ ಪರಿಷತ್ತಿಗೆ ಪ್ರತಿನಿಧಿಗಳು ಹೆಚ್ಚಾಗಿ ಬರುವರಾಗಿ ಆದಿನ ತೋರಿತು.

ಕರ್ನಾಟಕ ಏಕೀಕರಣವೂ, ಬಳ್ಳಾರಿ ಮಂಡಲವೂ.

ಏಕೀಕರಣದ ಮಹತ್ವದ ಉದ್ಯಮದಲ್ಲಿ ಕರ್ನಾಟಕಸಾಮ್ರಾಜ್ಯ ಲಕ್ಷ್ಮೀಹೃದಯ ಸಾನದಂತಿರುವ ಬಳ್ಳಾರಿ ಮಂಡಲದ ಕನ್ನಡಿಗರ ಜವಾಬ್ದಾರಿಯು ವಿಶೇಷವಿರುತ್ತದೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಕನ್ನಡದ ಎಳ್ಗೆಯ ಬಗ್ಗೆ ಪ್ರಯತ್ನ ನಡೆಸಿರುವದು ಅಭಿನಂದನೀಯವಾದ ಸಂಗತಿಯಾಗಿದೆ. ತಾ॥ ೧೩-೧೧-೩೮ ಗುರುವಾರ ಸಾಯಂಕಾಲದಲ್ಲಿ ಇಲ್ಲಿಯ ವೀರಶೈವ ಶಾಲಾಮಂದಿರದಲ್ಲಿ ಇಲ್ಲಿಯ ಏಕೀಕರಣ ಸಂಘದ ವತಿಯಿಂದ ಒಂದು ಚಾಹೀರ ಸಭೆಸೇರಿತ್ತು. ಸಂಘದ ಕಾರ್ಯದರ್ಶಿಗಳಾದ ಶ್ರೀ ಬಿ. ಎಚ್. ಎಮ್. ಚಂದ್ರಶೇಖರ ಶಾಸ್ತ್ರಿ ಬಿ. ಎ ಬಿ ಎಲ್. ಇವರ ಸೂಚನೆ

ಯಂತೆ ಪ್ರಜಾಬಂಧು ಪತ್ರಿಕೆಯ ಸಂಪಾದಕರಾದ ಡಾ ನಾಗನ ಗೌಡರು ಪಿ. ಎಚ್. ಡಿ. ಎಂ ಎಲ್. ಸಿ. ಇವರ ಅಧ್ಯಕ್ಷತೆಯ ಕೆಳಗೆ, ಬಾಗಲಕೋಟೆಯಿಂದ ಇಲ್ಲಿಗೆ ದಯಮಾಡಿಸಿದ್ದ ಶ್ರೀ ಮುರಿಗೇಂದ್ರಯ್ಯಸ್ವಾಮಿ ಜಂಗಿನ ಮಠ ಇವರು "ಕರ್ನಾಟಕ ಏಕೀಕರಣ ವಿಷಯದ ಮೇಲೆ ಸುಶ್ರಾವ್ಯವಾದ ಭಾಷಣವನ್ನು ಸುಮಾರು ಒಂದು ತಾಸಿನ ವರೆಗೆ ಮಾಡಿದರು ಇವರ ಭಾಷಣದ ನಂತರ ಶ್ರೀ. ಟಿ. ಎಚ್ ಎಂ. ಸದಾತಿವಯ್ಯಾ ಎಂ. ಎ. ಬಿ. ಎಲ್ ಇವರಾದರೂ ಇದೇ ವಿಷಯದ ಮೇಲೆ ಭಾಷಣಮಾಡಿದರು. ಸಭೆಯಲ್ಲಿ ಚರ್ಚಿಸಿದ್ದ ವಿಷಯಗಳು:—

ಆಂಧ್ರ ವಿಶ್ವವಿದ್ಯಾಲಯದ ಕಾರ್ಯಸ್ಥಾನವು ಇದೂ ವರೆಗೂ ವೇಷವಾಗಿದ್ದಲ್ಲಿದ್ದು ಈಗ ಅನಂತಪುರಕ್ಕೆ ಸಾಗಿಸಬೇಕೆಂಬ ಆಂಧ್ರರ ಪ್ರಯತ್ನವು ಒಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳ ಕನ್ನಡದ ಏಳ್ಗೆಗೆ ವಿಘ್ನಕಾರಿಯಾಗಿ ಪರಿಣಮಿಸುವದರಿಂದ ಆಂಧ್ರರ ಮೇಲ್ಕಂಡ ಪ್ರಯತ್ನವನ್ನು ಮದ್ರಾಸ ಕಾಯದೇ ಕೌನ್ಸಿಲದಲ್ಲಿ ವಿರೋಧಿಸಬೇಕಾಗಿ ಈ ಸಭೆಯು ಕರ್ನಾಟಕಾಭಿಮಾನಿಗಳಾದ ಕೌನ್ಸಿಲದ ಮೆಂಬರುಗಳನ್ನು ಪ್ರಾರ್ಥಿಸಿಕೊಳ್ಳುವದಲ್ಲದೆ ಸದರಿ ಪ್ರಯತ್ನಕ್ಕೆ ಅನವಕಾಶ ಕೊಡಬಾರದಾಗಿ ಮದ್ರಾಸಸರ್ಕಾರಕ್ಕೆ ಏನಂತಿ ಮಾಡಿಕೊಳ್ಳುತ್ತದೆ

ಈ ಠರಾವನ್ನು ವೇ|| ನಾಗೇಶ ಶಾಸ್ತ್ರಿಗಳು ಪುಷ್ಟೀಕರಿಸಿದ ನಂತರ ಸರ್ವಾನುಮತದಿಂದ ಸ್ವೀಕೃತವಾಯಿತು.

ಮುನಿಸಿಪಲ್ ಕೌನ್ಸಿಲರಾದ ಶ್ರೀ ಶಿವಜನ್ನಪ್ಪನವರು ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

ಭಾಷಾವಾರ ಪ್ರಾಂತ ರಚನೆಯು ಸರ್ಕಾರದವರ ಧ್ಯೇಯಗಳಲ್ಲೊಂದಾಗಿದ್ದು, ಅದಷ್ಟು ತೀವ್ರ ಕರ್ನಾಟಕ ಪ್ರಾಂತವನ್ನು ನಿರ್ಮಾಣಮಾಡಬೇಕಾಗಿಯೂ ಅ ಬಗ್ಗೆ ಮಾಡಬೇಕಾದ ಏರ್ಪಾಟನ್ನು ಕ್ಷಿಪ್ರದಲ್ಲಿಯೇ ಕೈಕೊಳ್ಳಬೇಕಾಗಿಯೂ ಈ ಸಭೆಯು ಸರ್ಕಾರಕ್ಕೆ ಏನಂತಿಮಾಡಿಕೊಳ್ಳುತ್ತದೆ.

ಈ ಠರಾವು ಶ್ರೀ ಮಹಾಬಲೇಶ್ವರಪ್ಪನವರು ಅನುಮೋದನೆಯನ್ನಿತ್ತನಂತರ ಅಂಗೀಕೃತವಾಯಿತು.

ಅಧ್ಯಕ್ಷರಿಗೂ ಮತ್ತೂ ಭಾಷಣಕಾರರಿಗೂ ಅಭಿನಂದನೆಗಳನ್ನರ್ಪಿಸಿದನಂತರ ಸಭೆಯು ಮುಕ್ತಾಯ ಗೊಂಡಿತು.

ಓರ್ವಪ್ರತ್ಯಕ್ಷದರ್ಶಿ

ಮೈಸೂರು ಸಂಸ್ಥಾನದ ಆಡಳಿತೆಯು.

ಮೈಸೂರಿನ ಆಡಳಿತೆಯ ಬಗ್ಗೆ ಪ್ರಸಿದ್ಧವಾಗಿರುವ (೧೯೩೬-೩೭) ವರದಿಯು ಕೈ ಸೇರಿದೆ ಸಂಸ್ಥಾನದ ಈಗಿನ ದಿವಾಣರೆಂದರೆ ಶ್ರೀ. ಮಿರ್ಝಾಇಸ್ಮಾಯಿಲರು. ಸಂಸ್ಥಾನದ ಆದಾಯ ಒಟ್ಟು ರೂಪಾಯಿ ೩,೫೮,೬೯,೭೪೯, ವೆಚ್ಚವಾಗತಕ್ಕ ಹಣ ೩,೪೬,೯೭,೭೮೭ ಆದರೆ ಕೊರತೆ ಬಿದ್ದ ರಕಮು ೮,೭೦,೯೫೫ರ ರುವಾಯಿಗಳು. ಅಬಕಾರಿ, ಮತ್ತು ಫಾರೆಸ್ಟ ಖಾತೆಗಳ ಆದಾಯವು ಕಡಿಮೆಯಾದದ್ದೇ ವೆಚ್ಚವಾಗತಕ್ಕ ಹಣಕ್ಕೆ ಕೊರತೆಯಾಯಿತು ೧೯೩೬-೩೭ ಸಾಲಿನಲ್ಲಿ ೩೮೮ ಶಾಲೆಗಳಲ್ಲಿ ೩೭೬೦ ಬಾಲ್ಕಿಕೆಯರಿದ್ದರೆ ೩೭-೩೮ ಸಾಲಿನಲ್ಲಿ ೩೮,೭೭೪ ಬಾಲಿಕೆಯರಿದ್ದಾರೆ. ಖಾಸಗೀ ಮತ್ತು ಬಾಲಕರ ಶಾಲೆಗಳಲ್ಲಿ ೨೩,೬೨೯ ಬಾಲಿಕೆಯರಿದ್ದಾರೆ. ಹೋದಸಲಕ್ಕಿಂತ ಈಸಲ ಬಾಲಿಕೆಯರ ಸಂಖೆಯು ಕಡಿಮೆ ಆಗಿದೆ. ವಿದ್ಯಾಖಾತೆಯವರು ಇತ್ತ ಕಡೆಗೆ ವಿಶೇಷ ಲಕ್ಷಕೊಟ್ಟಂತೆ ಕಂಡು ಬರುವದಿಲ್ಲ. ಬಾಲಕರ ಸಂಖೆಯು ಮಾತ್ರ ಹೋದ ವರ್ಷಕ್ಕಿಂತ ತುಸು ಹೆಚ್ಚಿದೆ ೧೯೩೬ ೩೭ರಲ್ಲಿ ಲಂಟಿ ಸಾಲೆಗಳಲ್ಲಿ ೩೧,೫೯,೯೯೯ ವಿದ್ಯಾರ್ಥಿಗಳಿದ್ದರೆ ೧೯೩೭-೩೮ ಮಾರ್ಚದವರೆಗೆ ಲಂಟಿ ಶಾಲೆಗಳಲ್ಲಿ ೩೧೯೩೩೩ ವಿದ್ಯಾರ್ಥಿಗಳಿದ್ದಾರೆ. ಅಸ್ಪೃಶ್ಯ ವಕ್ಕುಳ ಸಲುವಾಗಿ ೧೯೩೬-೩೭ ದಲ್ಲಿ ೬೧೫ ಶಾಲೆಗಳಲ್ಲಿ ೧೫೫೬೫ ಹುಡುಗರಿದ್ದಾರೆ ಅಸ್ಪೃಶ್ಯ ಬಾಲಿಕೆಯರ ಸಂಖೆಯಾಡರೂ ಹೋದಸಲಕ್ಕಿಂತ ಕೊಂಚ ಹೆಚ್ಚಿದೆ. ಹಿಂದುಳಿದ ಜಾತಿಗಳ ಸಲುವಾಗಿ ಶಿಕ್ಷಣವು ವಿಶೇಷ ಸವಲತಿಯಿಂದ್ಕೂಡಲಾಗಿದೆ. ಅಸ್ಪೃಶ್ಯ ಕಾರ್ಯ , ಪಶ್ಚ ವಿದ್ಯಾರ್ಥಿಗಳ ಸಂಖೆಯು ಹೆಚ್ಚಾದ ಸಂಗತಿ ಎಂದರೆ ಅವರಲ್ಲಿ ಶಿಕ್ಷಣಕ್ಕೊಸ್ಕರ ಹುಟ್ಟಿದ ಉತ್ಸಟ ಇಚ್ಛೆಯೇ. ಮಂ ನರ ಸಲುವಾಗಿ ಶಾಲೆಗಳಿದ್ದ ಅವುಗಳಾದರೂ ಈ ಸಲ ಸಂಸ್ಕೃತ ಶಿಕ್ಷಣಕ್ಕೂ ಮಹಾರಾಜರವರು ತಕ್ಕ ಪೆನ್ಶನ್ನುಸವನ್ನು ದಯಪಾಲಿಸಿದ್ದಾರೆ. ಎಷ್ಟೋ ಪಾಠಶಾಲೆಗಳಲ್ಲದೆ ಸಂಸ್ಕೃತ ಮಹಾವಿದ್ಯಾಲಯಗಳಿವೆ. ಬೆಂಗಳೂರ ಚಾಮರಾಜೇಂದ್ರ ವಿದ್ಯಾಲಯದಲ್ಲಿ ಎಲ್ಲ ಜಾತಿ ಸಂಗಡಗಳಿಗೆ ವಿದ್ಯೆ ಶಿಕ್ಷಣ ಅನುವು ದೊರೆತಿವೆ ಒಕ್ಕಲತನವು ವೈಸೂಲ್ಲಿಯ ಮುಖ್ಯ ವ್ಯವಸಾಯವು ಹೋದ ವರ್ಷಕ್ಕಿಂತ ೫೭೭೫೫ ಎಕರೆ ಹೆಚ್ಚು ಭೂಮಿಯು ಸಾಗುವಳಿಯಾಗಿದೆ. ಕಬ್ಬು, ರಾಗಿ, ಹತ್ತಿ ಇವುಗಳ ಬಿತ್ತಿಗೆಯು ಹೋದ ವರ್ಷಕ್ಕಿಂತ ಹೆಚ್ಚಾಗಿದೆ. ಆದರೆ ಭತ್ತದ ಬಿತ್ತಿಗೆಯು ಮಾತ್ರ ಸ್ವಲ್ಪ ಕಡಿಮೆ ಔದ್ಯೋಗಿಕ ಶಿಕ್ಷಣ ವಿಷಯದಲ್ಲಿ ವೈಸೂರು ಸಂಸ್ಥಾನವು ಹೆಚ್ಚು ಮುಂದೊರೆದಿದೆ. ಹಳ್ಳಿಯ ವ್ಯವಸಾಯಗಳು ಭರಭರಾಟಿಯಲ್ಲಿವೆ. ನೂಲುವ ಮತ್ತು ನೇಯುವ ವಿಷಯದಲ್ಲಿ ಪಂಪ್ಯಾಟ ಪ್ರದರ್ಶನಗಳ ಪೂರಕ ತಿದ್ದುಪಡಿ ಯಾಗಿದೆ ರೇಶಿಮೆಯು ಕಾರಖಾನೆಯಿಂದ ೨ ಲಕ್ಷಕ್ಕಿಂತ ಹೆಚ್ಚು ಕುಟುಂಬಗಳ ಉಪಜೀವನವು ನಡಗುತ್ತದೆ. ಈ ಕಾರಖಾನೆಗೆ ತಗಲಿದ ವೆಚ್ಚವಾದರೂ ಹೋದ ವರ್ಷಕ್ಕಿಂತ ಕಡಿಮೆಯೇ. ಕಬ್ಬಿಣದ ಕಾರಖಾನೆಗಳಿಂದ ಜನೇವರಿ ೧೯೩೩ ದಿಂದ ಜೂನ ೧೯೩೭ ವರೆಗೆ ತಗಲಿದ ಹಾನಿ ಎಂದರೆ ೩೩,೭೫,೩೮೨ ರುಪಾಯಿಗಳು. ಈ ಹಾನಿಯು ತಗಲದಿದ್ದಿಲ್ಲವಾದರೆ ಆರ್ಥಿಕ ಸ್ಥಿತಿಯು ಜನ್ನಾಗಿರುತ್ತಿತ್ತು.

ಮಾದಕ ಪದಾರ್ಥಗಳ ಅಂಗಡಿಗಳು ಕಡಿಮೆಯಾಗಿದ್ದರೂ ಸೇವನೆಯು ಮಾತ್ರ ಹೆಚ್ಚಿದೆ. ವಿದೇಶದ ಸಂಬಾಯಿಯ ಮಾರಾಟ ವಾದರೂ ಸ್ವಲ್ಪ ಕಡಿಮೆ ಆಗಿದೆ. ಮಾರಾಟಕ್ಕೆ ಪರವಾನಗಿಯನ್ನೀಯುವ ಜೋರ್ಡುಗಳು ಸ್ಥಾಪಿಸಲ್ಪಟ್ಟದ್ದಿಂದು ಅಬಕಾರೀ ಸುಧಾರಣೆಯ ದ್ಯೋತಕವು. ಈ ಆರೇಳು ವರ್ಷಗಳಲ್ಲಿ ಸಿಂದಿ ಸಾಯಿಗಳ ಸೇವನೆಯು ಕಡಿಮೆಯಾಗಲು ಕಾರಣವೇನೆಂದರೆ:- ಮಾರಾಟದ ವೇಳೆಯು ಚಂತಿಪ್ಪೇ ಇರಕಕ್ಕೆದ್ದೆಂದೂ, ೧೮ ವರ್ಷದ ಕೆಳಗಿನವರಿಗೆ ಸೇವಿಸಲು ಅನುವು ಕೊಡದಿದ್ದದ್ದೂ, ಕರವನ್ನು ಹೆಚ್ಚಿಸಿದ್ದೂ ಕಾರಣಗಳಾಗಿವೆ. ಜೀಲಿನಲ್ಲಿಯೂ ತಕ್ಕ ಸುಧಾರಣೆಗಳಾಗಿವೆ ಭಜನೆ ಕೀರ್ತನೆಗಳು ಜರಗಲು ಅವಕಾಶ ಕೊಟ್ಟಿದೆ. ಒಂದಿಗಳು ವಾಚನಾಲಯದ ಅಭಿವೃದ್ಧಿಯನ್ನಾವರೂ ಹೊಂದಿವ್ವಾರೆ. ಅಸೆಂಬ್ಲಿಯ ಅಧಿವೇಶನಗಳು ಎರಡು. ಲೇಜಿಸ್ಲೆಟಿವ್ ಕೌನ್ಸಿಲ್‌ನ ಅಧಿವೇಶನಗಳು ನಾಲ್ಕು. ಹಿಂದಿನ ವರ್ಷದ ಆರು ವಿಷಯಗಳು ಮತ್ತು ಈ ವರ್ಷದ ಹದಿಮೂರು ವಿಷಯಗಳಲ್ಲಿ ಹತ್ತು ವಿಷಯಗಳು ಚರ್ಚಿಸಲ್ಪಟ್ಟವು. ಬೆಂಗಳೂರ, ಹಾಸನ, ಕೋಲಾರ, ಮೈಸೂರ ಮತ್ತು ಚಿತ್ರದುರ್ಗ ಈ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾಗದ್ದರಿಂದ, ಜನರಿಗೆ ಸರಕಾರದಿಂದ ಹಣದ ಸಹಾಯವು ಕೊಡಲ್ಪಟ್ಟಿದೆ.

ಒಟ್ಟಿನ ಮೇಲೆ ನೋಡಲಾಗಿ ಮೈಸೂರ ಸಂಸ್ಥಾನದ ಪ್ರಜೆಗಳು ಸುಖಪ್ರದರೂ, ಉತ್ತಮ ಸ್ಥಿತಿಯುಳ್ಳವರೂ ಇದ್ದಾರೆಂದು ನಿಶಾತಂಕವಾಗಿ ಹೇಳಬಹುದು.

—ನಾರಾಯಣ

ವಿಜಾಪುರ ಜಿಲ್ಲೆಯ ಸುದ್ದಿಗಳು.

[ನಮ್ಮ ಸ್ವಂತ ಸುದ್ದಿಗಾರರಿಂದ]

ಗುಳೇದಗುಡ್ಡ. ಇಲ್ಲಿ ಮೊನ್ನೆ ನಿರಂಜನ ಸ್ವಾಮಿಗಳ ಅಧ್ಯಕ್ಷತೆಯಲ್ಲಿಗೆ ಏಕೀಕರಣ ಮತ್ತು ಹಿಂ. ಸೇ ವಲದ ವಿಷಯವಾಗಿ ಶ್ರೀ ಬೀರಿಯವರ ಮತ್ತು ಶ್ರೀ ಮುರಿಗಯ್ಯಸ್ವಾಮಿ ಜಂಗೀನ ಇವರ ವ್ಯಾಖ್ಯಾನಗಳಾದವು. ಮುನಸೀಪಾಲಿಟಿಯಲ್ಲಿಯಾದರೂ ಏಕೀಕರಣದ ಸಲುವಾಗಿ ರಾತ್ರಿ ಸಭೆಯನ್ನು ಮತದಿಂದ ಜಾಸಾಯಿತು.

ಗಲಗಲಿ ಇಲ್ಲಿ ಶ್ರೀ ಹುಬ್ಬಳ್ಳಿಕರರು ಗೀತಾಶಿಕ್ಷಣದ ವರ್ಗವೊಂದನ್ನು ಆರಂಭಿಸಿದ್ದಾರೆ. ಗೀತಾಶ್ರಮವೆಂದು ಆ ವರ್ಗಕ್ಕೆ ಹೆಸರಿಟ್ಟಿದ್ದಾರೆ.

ಧಾರವಾಡದ ಪತ್ರ

"ಮೈಸೂರ ಬ್ರಹ್ಮಚರ್ಯಾಶ್ರಮದ ಯೋಗಿರಾಜ ವಿನಾಯಕ ಮಹಾರಾಜರವರು ಇಲ್ಲಿಗೆ ಬಂದಿದ್ದು, ದಿನಾಲು ಸ್ಕೂ ಇಂಗ್ಲಿಷ ಶಾಲೆಯ ಕಟ್ಟಡದಲ್ಲಿ "ಭಗವದ್ಗೀತೆ"ಯ ಮೇಲೆ ಪ್ರವಚನಗಳನ್ನು ಹೇಳುತ್ತಿರುವರು ಇವರ ವಿದ್ವತ್ತಾ ಪ್ರಚುರವಾದ ಧರ್ಮೋಪದೇಶವನ್ನು ಕೇಳಿಕೊಳ್ಳಲಿಕ್ಕೆ ಸಾವಿರಾರು ಸ್ತ್ರೀ ಪುರುಷರು ನೆರೆದಿರುತ್ತಾರೆ."

"ಮಕರ ಸಂಕ್ರಮಣದ ದಿವಸ ಇಲ್ಲಿಯ ಗೆಳೆಯರ ಸಂಪಿಪತ್ತು ಶಯಕರ್ನಾಟಕದ ಜಾನಪದಿಯಲ್ಲಿ ವಿಲೀತರಾಗಿ, ಬೆಂಗಳೂರಿನ ಕರ್ನಾಟಕ ಸಂಘದವರು ಮುದ್ದಣನ ಸಂಚಿಕೆಯನ್ನು ಹೊರಡಿಸಿದಂತೆ ತಾವಾದರೂ ರನ್ನನ ಸಂಚಿಕೆಯನ್ನು ಹೊರತಿಸಬೇಕೆಂಬುದಾಗಿ ವಿಚಾರ ಮಾಡಿದರಂತೆ ತಿಳಿಯುತ್ತದೆ. ರನ್ನನ ಸಂಚಿಕೆಯು ಪಂಪನ ಸಂಚಿಕೆಯಂತೆ ಆಗದಿರದು ಮತ್ತೆ!

"ಇಲ್ಲಿಂದ ಮದ್ರಾಸ ಕಾಂಗ್ರೆಸಕ್ಕೆ ಹೋಗಿ ತಿರುಗಿ ಬಂದ ಮುಖಂಡರು ಸ್ವಸ್ಥಚಿತ್ತರಾಗಿ ಕುಳಿತುಕೊಂಡಿರುವರು. ಕರ್ನಾಟಕದ ಕೇಂದ್ರಸ್ಥಾನವೆಂದೆನಿಸಿಕೊಳ್ಳಲು ಹಾತೊರೆಯುವ ಧಾರವಾಡದ ಕನ್ನಡಿಗರಿಗೆ ಇದು ಎಷ್ಟೂ ಭೂಷಣಾಸ್ಪದವಾದದ್ದಲ್ಲ ಇನ್ನಾದರೂ ಎಚ್ಚೆತ್ತು ಜನರಲ್ಲಿ ಜಾಗೃತಿಯನ್ನುಂಟು ಮಾಡುವರೋ ನೋಡಬೇಕಾಗಿದೆ."

ರಂಗಭೂಮಿಯ ಸಮಾಚಾರ

ಶ್ರೀ. ಅಂಬಾಪ್ರಸಾದಿಕ ಕರ್ನಾಟಕ ಸಂಗೀತ ನಾಟಕ ಮಂಡಳಿಯ ಪ್ರಯೋಗಗಳು ತೀರ್ಥಹಳ್ಳಿಯಲ್ಲಿ ಅದವು ಜನರ ಉದಾರ ಆಶ್ರಯವು ಚನ್ನಾಗಿತ್ತು ಅಲ್ಲಿಯ ಮಹಾಜನಗಳು ಶ್ರೀ. ಯಂ. ರಂಗನಾಥ ಭಟ್ಟರಿಗೆ 'ಅಭಿನಯ ವಿಭೂಷಣ' ಎಂಬ ಬಿರುದನ್ನು ಕೊಟ್ಟರು ಕೆಲವು ಪಾರಿತೋಷಕ ಸಹಿತ ಪ್ರಶಸ್ತಿ ಪತ್ರಿಕೆಯನ್ನಾದರೂ ಸಮರ್ಪಿಸಿದರು. ೧೪ ನೇ ತಾರೀಖಿಗೆ ಕಾಳೀದಾಸನೆಂಬ ನಾಟಕವನ್ನಾಡಿ ಕಂಪನಿಯು ಚಿಕ್ಕಮಗಳೂರಿಗೆ ಹೋಯಿತು.

ಶ್ರೀ ವಾಮನರಾವ ಮಾಸ್ತರರ ವಿಶ್ವಗುಣಾದರ್ಶ ನಾಟಕ ಮಂಡಳಿಯು ದಾವಣಗೆರೆಯಲ್ಲಿದೆ. ಪ್ರಯೋಗಗಳು ನಡೆದಿವೆ ಜನರಿಂದ ಪ್ರೋತ್ಸಾಹನವು ಚನ್ನಾಗಿ ಸಿಗುತ್ತಲಿದೆ

ಶ್ರೀ ಸದಾಶಿವರಾವ ಗರೂಡ ಇವರ ದತ್ತಾತ್ರೇಯ ನಾಟಕ ಮಂಡಳಿಯವರು ಈ ತಿಂಗಳ ಕೊನೆಯವಾರದೊಳಗೆ ಬಾಗಲಕೊಟೆಗೆ ಬರುವರು.

ಶಿರಹಟ್ಟಿ ನಾಟಕ ಮಂಡಲದವರು ಉಡುಪಿಯಲ್ಲಿ ಇದ್ದಾರೆ. ಪ್ರಯೋಗಗಳು ಚನ್ನಾಗಿ ನಡೆದಿವೆ.

ಗುಜರಾಥ ವಿದ್ಯಾಪೀಠ

ದೀನಬಂಧು ಎಂಡ್ರೂಜರು ಗುಜರಾಥ ವಿದ್ಯಾಪೀಠದ ಪದವೀದಾನಸಮಾರಂಭದಲ್ಲಿ ಗಾಂಧಿಯವರ ಅಧ್ಯಕ್ಷತೆಯು ಕೆಳಗೆ ಅಲ್ಲಿಯ ವಿದ್ಯಾರ್ಥಿಗಳಿಗೆ ಎಂದ ಆಪತ್ಕಾಲದಲ್ಲಿಯೂ ಸತ್ಯನ್ಯಾಯತನ್ನ ಪಾಲಿಸಿರೆಂದು ಉಪದೇಶಿಸಿದರು; ಮತ್ತು ಧರ್ಮ ಸಂವಾದನೆಗಿಂತಲೂ ದೇವತಾ ಅನುಗ್ರಹವನ್ನು ಹೊಂದುವದಕ್ಕೆ ಕಡಿಗೆ ಹೆಜ್ಜೆಗವನ ಕೊಡವದೇ ಹಿಂದೀ ನಿವಾಸಿಗಳ ಸಂಸ್ಕೃತಿ ರೂಪವಾಗಿದ್ದು ಇದನ್ನೆ ಉಳಿದ ರಾಷ್ಟ್ರಗಳಿಗೆ ಕಲಿಯುವಷ್ಟು ಪ್ರಪಂಚವನ್ನೇ ಸೃಷ್ಟಿಸಿಕರ್ತನ ಕಡಿಗೆ ತಿರಿಗಿಸುವದೇ ಹಿಂದೂ ಪವಿತ್ರ ಕರ್ತವ್ಯವಾಗಿದೆ ಎಂದು ಮತಪಟ್ಟಿರುವರು. ಹೆಚ್ಚು ಸಂಪತ್ತಿಗಬೇಕೆಂಬುದೊಂದೆ ಹಂಬಲದಿಂದ ಇಡಿ ಪ್ರಪಂಚವೆ ಹುಚ್ಚೆದ್ದು ಕುಣಿಯುತ್ತಿರುವಾಗ ದೀನ ದುರ್ಬಲರಾದ ಹಿಂದೀ ಜನರ ಈ ಕೂಗು ಎಲ್ಲಿಗೆ ಮುಟ್ಟೀತು? ಕೇಳಬಂದರೂ ಮನ್ನಿಸುವರಾರು? ಇಸಾಪ ಕಥೆಯೊಳಗಿನ ಬಾಲವನ್ನು ಕಳಿಕೊಂಡ ನರಿಯ ಉಪದೇಶವನ್ನು ಉಳಿದ ನರಿಗಳು ಅ ಸೈದಂತೆ ನಮ್ಮ ಈಗಿನ ಉಪದೇಶವನ್ನು ನಮಗೇಡು ಆದೀತಲ್ಲ ನಮ್ಮ ಸಂಸ್ಕೃತಿಯ ವರ್ಜಸ್ಸು ಪರರಾಷ್ಟ್ರಗಳ ಮೇಲೆ ನಾಟಬೇಕಾದರೆ ಹಿಂದುಸ್ತಾನವೂ ಧನಸಂಪನ್ನವಾಗಿ ಸುಖಸಂಪತ್ತಿಯಿಂದ ಮೆರೆಯಹತ್ತಬೇಕು. ರಾಜ್ಯಸೂತ್ರಗಳು ಹಿಂದೀ ಜನರಕೈಯಲ್ಲಿ ಬರದ ಹೊತ್ತು ಇದಾಗುವದು ಶಕ್ಯನೇ ಇಲ್ಲ. ಮಧ್ಯಾಹ್ನದ ಹೊಣಾಕು ರೊಟ್ಟಿಗಾಗಿ ತೊಳೆದಾಡುತ್ತಿರುವ ಬಡಹಿಂದುಸ್ತಾನವು ವೇದಾಂತ ಬೋಧಿಸುವ ತನ್ನ ಅಧಿಕಾರವನ್ನು ಕಳಕೊಂಡು ಬಿಟ್ಟಿದೆ. ಅದಕ್ಕಾಗಿ ಆ ಗೋಜಿಗೆ ಹೋಗದೆ ವಿತ್ತೋತ್ಪಾರ್ಜನೆಯ ವಿಚಾರವನ್ನು ಹೆಚ್ಚಾಗಿ ಮಾಡುವದೇ ವಿಹಿತವಾಗಿ ತೋರುತ್ತದೆ.

ಹಿಂದುಸ್ಥಾನ.

ಪಂಡೀತ ಮಾಲವೀಯರವರು ರಜಪುತಾನಾ ವ್ಯಾಂತರದಲ್ಲಿಷ್ಟೇ ತಮ್ಮ ಹಿಂದೂ ವಿಶ್ವವಿದ್ಯಾಲಯಕ್ಕೆಂದು ಈ ವಾರದಲ್ಲಿ ೧೫ ಲಕ್ಷ ರೂಪಾಯಿಗಳನ್ನು ಕೂಡ್ರಿಸಿರುವರಂತೆ. ಮಾಲವೀಯರು ಮೌತಾಡಿದರೆ ಕೊಕ್ಕು ಸುರಿಯುತ್ತಿರಬಹುದು (ಅಂತೇ ಇವರಿಗೆ Biggggest beggar ಎಂದು ಕರೆಯುವದೆಂಬ.) ನಿಸ್ವಾರ್ಥ ದೇಶಸೇವೆ ಮಾಡುವವನಲ್ಲಿ ಜನತೆಯಾದರು ಎಷ್ಟೊಂದು ಅಭಿಮಾನ ವಿಶ್ವಾಸಗಳನ್ನು ತೋರಿಸುವದೆಂಬದಕ್ಕೆ ಈ ಮಹನೀಯನಿಗಿಂತ ಹೆಚ್ಚಿನ ಉದಾಹರಣೆ ಬೇಕೆ?

ಡೆಹರಾಡೂನ ಕಾಲೇಜದಲ್ಲಿ ಓರ್ವ ಕನ್ನಡಿಗನ ನೇರ್ಪಡೆ—

ಮಧ್ಯಪ್ರಾಂತದಲ್ಲಿ ಪೋಸ್ಟಮಾಸ್ತರ ಜನರಲ್ಲರಾಗಿರುವ ಬಾಗಲಕೋಟೆಯ ಶ್ರೀ. ಗುರುರಾವ ಬೇವೂರ (ಐ ಸಿ ಎಸ್.) ಇವರ ಚಿ॥ ಗೋಪಾಲನು ಡೆಹರಾಡೂನ ಸೈನಿಕ ಕಾಲೇಜಕ್ಕೆ ಭಾರತದ ಸೇನಾಧಿಪತಿಗಳಿಂದ ಆರಿಸಲ್ಪಟ್ಟಿದ್ದಾನೆ. ಅಲ್ಲಿಯ ಶಿಕ್ಷಣ ಮುಗಿದ ಮೇಲೆ ಸಾಂಡಹರ್ಸ್ಟ ಕಾಲೇಜದಲ್ಲಿ ಮೇಲ್ತರದ ಶಿಕ್ಷಣ ಹೊಂದಿ ಹಿಂದುಸ್ತಾನಕ್ಕೆ ಹಿಂದಿರುಗುವನು ಸೈನ್ಯದ ದೊಡ್ಡ ಅಧಿಕಾರಿಯೂ ಆಗುವನು. ದೇವರು ಈ ತರುಣ ಕನ್ನಡಿಗನಿಗೆ ದೀರ್ಘಾಯುರಾರೋಗ್ಯ ಪಯುಪಾಲಿಸಲೆಂದೂ ಕನ್ನಡಿಗರ ಕೀರ್ತಿಯು ಹೀಗೆಯೇ ಜಗತ್ತಿನತುಂಬ ಹಬ್ಬಲೆಂದೂ ಹಾರೈಸುತ್ತೇವೆ.

ಸಿರನೇ ಸಂಚಿಕೆಯಲ್ಲಿ ಮುದ್ರಿತವಾದ ಒಡಪುಗಳ ಉತ್ತರಗಳು.

(೧) ವಸುಧೆ.

(೨) ಕವಿತಾರೂಪದಿಂದ ಬಿಡಿಸಿರುವ ಕೆಲವು ಪದ್ಯಗಳನ್ನು ಕೆಳಗೆ ಮಾದರಿಗಾಗಿ ಕೊಟ್ಟಿರುವೆವು.

ಕಂದಪದ್ಯಗಳು-

ಒಡಪಿಗೆ ಕವಿತಾರೂಪದಿ। ಕೊಡಲೆಕ್ಷಿಸೆಗುತ್ತರವನು ನಿಜಮತಿಯಂತೆ।
ಸಡಗರದಿಂ ಬಾಳು ಪೂ-। ಗಡಣದಿ ಶೋಭಿಸುವ ವಲಿವ ರಾಣಿಯು। ನೀನು ॥ ೧॥

ಶಿಕ್ಷಕ ಬಂಧುಗಳಿಲ್ಲರು। ದಕ್ಷತೆಯಿಂ ಪೇಳ್ವುದರಿಂದ? ತವನಾಪ-ವನು॥
ಅಕ್ಷಿವನೋಡಿರ ಕಂಟಿಕ। ವೃಕ್ಷದಿ ನೆರಿಸಿರುವ ನೀ "ಗುಲಾಬಿಯು" ನಿಜದಿಂ ॥ ೨॥

—ಕವಿಚಾರ್ಯರಿಗೆ ವಿನಂತಿ—

ಪರಕವಿತಾರೂಪದೊಳು-। ತ್ತರವೀಪ್ಸಿಪ ರಾಘವೇಂದ್ರ ಆಚಾರ್ಯರಿ ತಾವ್॥
ಪರಚಿಸಿದಂತಹ ವೃತ್ತದ। ಪರಲಕ್ಷಣ(!) ಪೇಳಲಿಂಗ ಸಂಸವಂಜಸದಿಂ ॥ ೩॥
ಬರೆದಿಹ ಪೂರೂ ಪದಗಳೊ-। ಳರಾವವು ದೋಷಗಳು ಒಂದು ಚರಣಕ ಬೇರೊಂ-॥
ದಿರುವದಕಂಗತಿ ಮೇಚೊಂ- । ದರ ಲಕ್ಷಣವೊಂದಕಿರುವದೇಂ? ಪ್ರೌಢಿಯದೇಂ? ॥ ೪॥
ಗತಿವಿದಿಯಾಚಾರ್ಯರಿ ಕೈ-। ಗಡ ಕವಿತಾಮಾಲೆ ಬಯಕೆಯಿಂ ಪಡಿರಿನ್ನು ॥
ಜೊಡೆಯದೆ ನುಡಿಸಿಂ ಬರಹಕೆ । ಕಡುದಯವಿಂ ನೋಡಿರಿನ್ನ ತವ ಬಂಧುವಿನಾಂ ॥ ೫॥

—ಪೆದಂಬರ ಯಜ್ಞೇಶ್ವರ ದೀಕ್ಷಿತ, ಮಾಸ್ತರ. ಮಾರೀಹಾಳ.

ಸಾಕೆವೃತ್ತ.

ಕವಿವರ ಸಾದಿಸ್ಸು ನಿನ್ನ ಕೋಟಿವಿಧಾನವ ಕಾವ್ಯಕೆ ಕೊಟ್ಟು।
ಕವಿಕುಲಿಯೋರ್ವನು ಕವಿತೆಯು ಸರದೊಳ್ ಪೋಷಿಸಲಾಣೆಯನಿಟ್ಟು॥
ಅರನಾವ್ಹಾವನ ನೋಡಿ ಮಹಾಕವಿ ನಾನು ನಿನ್ನ ಪೋಷಿಸುವೆ।
ಕವಿತೆಯಸರದೊಳ್,ಗುಲಾಬ,ನಿನ್ನನು ಯಾಕೆಲೆ ಒದ್ದಾಡುವಿಯೇ!॥
ಕವಿವರ ಲಕ್ಷ್ಮೀಶಾದಿ ಶ್ರೇಷ್ಠರು ಪ್ರಸ್ತುತ ಪಂತೋಜಿಗಳು।
ಕವಿತೆಯ ನಾಡುವ ಸೊಡಿ ವೋರೆಯನು ತೆಗ್ಗಿಸದಿರಲೇ ಪೇಳು॥

—ವಿನಾಯಕ.

(೩) ಸಂಗಡಿಗರು.

(೧) ಖಾದಾಸಾ। ರಾಸ್ತುನುಸಾ। ಲಕ್ಷ್ಮಿಪತಾರೀ ಹುಬ್ಬಳ್ಳಿ ೧೩ (೨) ಸಂಗಪ್ಪಾ ಮಾಳವಾಡ ಗೋಪನಕೊಪ್ಪ. ೧-೩ (೩) ಕೆ. ಡಿ. ಮುದಾನಪೂರ ವಿಜಾಪೂರ. ೧೩. (೪) ವ್ಯಾ. ಅ. ಹೆರಕಲ್ಲ ಹೈ. ಮಾಸ್ತರ ಮುಳವಾಡ ೧೩. (೫) ಸು. ಗೋ. ಗುಮಾಸ್ತೆ. ಬಾಗಲಕೊಟೆ. ೧-೩. (೬) ಕೃ. ಓ. ಹಡಗಲಿ ಬಾಗಲಕೋಟೆ ೧-೩ (೭) ಜಯತೀರ್ಥ ಜಹಾಗೀರದಾರ ಬಾಗಲಕೋಟೆ. ೧-೩ (೮) ಗ ವ. ತಟ್ಟಿ ಅಲೂರ ಹಾನಗಲ್ಲ ೧-೩. (೯) ವೈವಸ್ವತಾಚಾರ್ಯ ರಾಮಕೃಷ್ಣ ಪೆಸ್ತಕಭಂಡಾರ. ವಿಜಾಪೂರ ೧-೩ (೧೦) ಬಾ. ಭಿ. ರಾಯಚೂರ ಸವಣೂರ ೧ (೧೧) ರಾ ಅ ದೇಸಾಯಿ ಮುಬ್ಬಗಟ್ಟಿ. ೧. (೧೨) ಹ ಮ ಸುರೇಬಾನ- ಹಡಗಲಿ. ೧ (೧೩) ನಿ. ಮ ರಜ್ಜವಾಡಿಗಿ. ವಿಜಾಪೂರ ೧ (೧೪) ಎಫ್. ಎಮ್. ಹಿರೇಮಠ ಹುಬ್ಬಳ್ಳಿ ೧. (೧೫) ಸ ಕೃ. ಅಲಕರ್ಜ ಹುಬ್ಬಳ್ಳಿ ೧-೩-೩ (೧೬) ವಾ. ಬಾ. ಕಲಕರ್ಜ ಕೊಣ್ಣೂರ ೧-೩-೩. (೧೭) ವಿನಾಯಕ ಬಾಗಲಕೋಟೆ ೧೩ (೧೮) ಸಿ ಎ ಪಡನೂರ ಹುಬ್ಬಳ್ಳಿ ೩.

ಸೂಚನೆ— ಕವಿತಾರೂಪದಿಂದ ಒಡಪುಕೊಟ್ಟು ಕವಿತಾರೂಪದಿಂದಲೇ ಉತ್ತರವನ್ನು ಇಚ್ಛಿಸುವವರ ಒಡಪ್ಪಗಳು ಪ್ರಕಟಿಸಲಾರವು. ಹೊಸ ಒಡಪುಗಳ ಸಂಗಡ ಉತ್ತರಗಳನ್ನು ಕಳುಹಬೇಕು.

* ಒಡಪು. *

(೧) ಪುರಾಣಪ್ರಸಿದ್ಧಳಾದ ನನ್ನ ಹೆಸರು ನಾಲ್ಕಕ್ಷರಗಳಿಂದ ಕೂಡಿರುತ್ತದೆ. ನನ್ನ ಹೆಸರಿನ ಮೊದಲನೇ ಅಕ್ಷರವು "ಕೋತಿ" ಯ ಹೆಸರಿನ ಮೊದಲನೇ ಅಕ್ಷರವಾಗಿಯೂ ಎರಡನೇ ಅಕ್ಷರವು ವೈದ್ಯ ಶಾಸ್ತ್ರದಲ್ಲಿ ಹೇಳುವ ಒಂದು ಯಂತ್ರದ ಮೊದಲನೇ ಅಕ್ಷರವಾಗಿಯೂ ಮೂರನೇ ಅಕ್ಷರವು "ಸೂರ್ಯವಂಶದ ಒಬ್ಬ ರಾಜ" ನ ಹೆಸರಿನ ಮೊದಲನೇ ಅಕ್ಷರವಾಗಿಯೂ ನಾಲ್ಕನೇ ಅಕ್ಷರವು "ದರಿದ್ರ" ಶಬ್ದದ ಮೊದಲನೇ ಅಕ್ಷರವಾಗಿಯೂ ಇರುತ್ತದೆ! ನಾನು ಯಾರು? ನನ್ನ ಹೆಸರೇನು?

(ಸೂಚನೆ— ಆಯಾ ಶಬ್ದಗಳನ್ನು ಬರೆದು ಉತ್ತರಗಳನ್ನು ಬರೆಯಬೇಕು)

—ದುರ್ಗಾದಾಸ.

(೨) ಚಕ್ರಬಂಧ ಆಕೃತಿ—

೧	೨	೩	೪
೫	೬	೭	೮
೯	೧೦	೧೧	೧೨
೧೩	೧೪	೧೫	೧೬

ಸೂಚನೆಗಳು—

ಅ) ೧- ೨- ೩- ೪- ನೇ ಅಕ್ಷರಗಳಿಂದಾ, ಪನಚರ-ಪ್ರಾಶಗಳಲ್ಲಿ ಶ್ರೇಷ್ಠ ಎಂತಲೂ,

ಬ) ೧- ೧೩- ೧೫- ೧೦- ನೇ ಅಕ್ಷರಗಳನ್ನು ಪರಿಪೊಣ್ಣೆ, ಪೀಜರಪ್ರಾಣಿಗಳಲ್ಲಿ ಶ್ರೇಷ್ಠ ಎಂತಲೂ,

ಕ) ೪- ೫- ೬- ೭- ನೇ ಅಕ್ಷರಗಳನ್ನು ಉಚ್ಚರಿಸಲು, ಸುಲಭದಲ್ಲಿ ಶ್ರೇಷ್ಠ ಎಂತಲೂ,

ಡ) ೭- ೮- ೯- ೧೦ ರಿಂದ ಹರನಶಕ್ತಿ ಎತಂಲೂ,

ಈ) ೪-೧೪-೧೬-೧೦ (Cross) ಅಕ್ಷರಗಳು ಹರಪೆಂತಲೂ,

ಫ) ೧೪-೧೫-೧೬-೧೭
ಬ) ೧೬-೧೭-೧೪-೧೫
ಕ) ೧೭-೧೫-೧೪-೧೬
ಡ) ೧೪-೧೭-೧೬-೧೫

(ಫ) ಪರಿಪೂರ್ಣದಲ್ಲಿ ಸಮೂಹವಿರುವ ಅ. ಬ, ಕ, ಡ, ಈ ನಾಲ್ಕು ಕಲ್ಪನೆಗಳಿಂದ, (ಪ್ರತಿಯಂದು ಕಲ್ಪನೆಯಿಂದಾ) ಈಟೀರನೆಂತಲೂ,

ಈಪ್ರಕಾರಾ ವಿವಿಧ ಅರ್ಥಗಳನ್ನು ಚಕ್ರಬಂಧವು ಪ್ರತಿಪಾದಿಸುವದು. ಆಯಾ ಅರ್ಥಗಳನ್ನು ಬೋಧಿಸುವ, ಶಬ್ದಗಳನ್ನು ಆಯಾ ಮನಗಳಲ್ಲಿ ತುಂಬಬೇಕಷ್ಟೆ.

ಬಿ. ಆರ್. ರಾಯಚೂರಿ ಕ್ಲಾರ್ಕ ಸಬ್ ಜಜ್ಜಕೋರ್ಟ ಸವಣೂರ.

(೩) ಒಂದು ಕಂಚ್ಲಿಯಲ್ಲಿ ಒಬ್ಬನ ಹೆಸರನ್ನು ಅವಿವಾಹಿತರಿಬ್ಬರ ಹೆಸರು ಬೋಧಿಸುವಾಗಬೇಕು. ಆ ಇಬ್ಬರು ಪರಸ್ಪರ- ವೈರಿಗಳಾಗಿರಬೇಕು. ಇದು ಹೇಗೆ?

(೪) ನಾನೊಂದು ನಾಲ್ಗಾಲಿ ಪ್ರಾಣಿ. ನನ್ನ ಹೆಸರು ಒಂದು ಹಬ್ಬಿನಲ್ಲಿ; ಕರ್ನಾಟಕದಲ್ಲಿಯಿದೇ! ಹಿಂಗಾಲು, ಮುಂಗಾಲು ಜೋಡಿಸಿದರೆ, 'ಶೂರರ ಕೈ' ಎಂದಾಗುತದೆ. ಮತ್ತು, ಕೈಯ ಒಳಗೆ ಸೂರ್ಯನಿದ್ದಾನೆ ಅದರೆ, ನಾನಾರು?

—ಬಲ್ಲವಸುತ.

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರ್ರನ್ನು ಕರೆಸಿದ್ದೇವೆ. ಮುಂಬೈ. ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್‌ಬೆದರ, ಹಾಫ್‌ಬೆದರ ಫುಲ್‌ಕೆಲಿಕೋ, ಹಾಫ್‌ಕೆಲಿಕೋ, ಸಿಫ್ಟ್ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಲೆದರ ಬೈಂಡಿನ ಮೇಲೆ ಎಲ್ಲ ಗೆಯ ಗೋಲ್ಡಗಿಲ್ಟ ಕೆಲಸವೂ ಮಾಡಲ್ಪಡುತ್ತದೆ.

ಪ್ರಯಾಣಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರ್ಯಾವ್ಹಲಿಂಗ ಬ್ಯಾಗುಗಳೂ (ಕೈಪೆಟ್ಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತು ದುಡ್ಡು ಹಾಕುವಂಥ ಪಾಕೀಟುಗಳೂ, ಲೆದರಿನಿಂದಲೂ, ಬಟ್ಟೆಯಿಂದಲೂ, ಕೃತ್ರಾಂಜನದಿಂದಲೂ ನಮೂನೆವಾರು ತಯಾರ ಮಾಡಲ್ಪಡುವದು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿರಿಯನ್ನು ಹೊಸದಾಗಿ ಕಂಪನಿಯ ನಮೂನೆಯಲ್ಲಿ ಹೆಚ್ಚು ಸಮಯ ಬಾಳಿಕೆ ಬರುವಂತೆ ತಯಾರುಮಾಡಿ ಜಲ್ದೀ ರೀತಿಯಿಂದ ದುರಸ್ತಿ ಮಾಡಲ್ಪಡುವದು.

ಇವೇ, ಕೋರ್ಟು ಮತ್ತು ಕಛೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೊಲಿಯೋಗಳ್ನೂ, ಫೈಲುಗಳನ್ನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾಗಿ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯೂ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭಕೋಣ,
ವ್ಯವಸ್ಥಾಪಕರು, ಕ ಮ. ವಿದ್ಯಾಲಯ, ಧಾರವಾಡ.

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ್ರಪೌಂಟೆನ್ ಪೇನಾವು ಇಂಗ್ಲಂಡಿನಲ್ಲಿ

ತಯಾರಾದ ದ್ದು ಇದಕ್ಕೆ ೧೪ ಕೆರೆಕಿನ ಭುಗಾರದಂಥ ನಿಬ್ಬು ಹಾಕಿದೆ ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ ಕ್ಕೆ ೩-೪-೦

ವಿಳಾಸ- ಪೀಟರ್ ವಾಚ್ ಕಂಪನಿ.
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಫಾಸಲು ಮುದ್ದಾಂ ಮಾಡಲ್ಪಟ್ಟಿದೆ.

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಹಾಸಗಿವ ಸರ್ವೀಸಿಗ ಮೋಟಾರ ಮಾಲೀಕರ ಗೈರಸೋಯ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು
ತಾ॥ ೧೦ ಸಪ್ಟೆಂಬರ ೧೯೨೨ನೇ ಇಸ್ವಿಯಿಂದ ಬಾಗಲಕೋಟೆಯಲಿ

ಸುರು ಮಾಡಿರುವರ.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಒವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಪೇಂಟಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳನ್ನು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಸ್ಯೆ ಅಥವಾ ಪತ್ರದ್ವಾರದಿಂದ,

ಚಾಲಕರು— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವೀಸ ಯಥಾಪ್ರಕಾರ ನಡೆದಿದೆ

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂರನ್ಸದ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ.

WANTED.

Agents, Travelling Agents and Chief Agents. Men with experience of Insurance work capable of bringing business, required. Cash security. Salary according to qualifications.

Apply to:— Mr S Rabboor B. A., F. S. S. (Lond) Asst. Manager (on deputation) General Assurance Society Ltd 44, Linggi Chetty street, Madras.

ಅತ್ಯಲ್ಪವಿವೆ! ಉಚಿತ
ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ ಪೊಕೆಟ ವೊಚ್ ಗಿಲ್ ಕೇಟೆಟ್ ರೋಲ್ಡ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಆಜ್ಞೆ ಹೊಡಿದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಪ್ಲೈಂಪೇಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳು ಮಾತ್ರ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ "ತಾರಾ" ಲೀವರ್ ರಜಿಸ್ಟರ್ಡ ಗಿಲ್ ಕೇಟೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಇಂದೇ ಬರೆದು ಕೊಡಾಯಿಗೆ

ಕ್ಯಾಪ್ಟನ್ ನಾಥ್ ಕಂ. ಬಿ. ಬಿ. ಅಹಮದ್ರಾಬಾದ

ಶುದ್ಧವಾದ ಹಿಮಾಲಯದ

ಜೇನತುಪ್ಪ!

ನಮಲ್ಲಿ ಶುದ್ಧ ಹಾಗೂ ಮಿಶ್ರಿತವಲ್ಲದಜೇನತುಪ್ಪವು ಗ್ಯಾರಂಟಿ ಪತ್ರ ಸಹಿತವಾಗಿ ದೊಡ್ಡ ಪ್ರಮಾಣದಿಂದ ಆಗ್ಗವಾಗಿ ದೊರಕುವದು. ವ್ಯಾಪಾರಸ್ಥರು ತ್ವರೆಮಾಡಬೇಕು, ಪತ್ರವ್ಯವಹಾರವನ್ನು ಇಂಗ್ಲಿಷ ಅಥವಾ ಹಿಂದಿಯಲ್ಲಿ ಮಾಡಬೇಕು

ವಿಳಾಸ— ಪಂಡಿತ ಘನಶ್ಯಾಮ ಪಾಂಡೆ.
C/o ಲಾಲಾರಾಮ ಶರಣದಾಸ ಕೆಸನಸಹಾಯ
ನಜೀಬಾಬಾದ. (ಜಿಲ್ಲಾ ಬಿಜನೋರ)

ಇದೋ ನೋಡಿ!

ಜಾಹೀರಾತ ಕೊಡತಕ್ಕವರೇ?

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ತಾನಾಗಿಯೇಬಂದ ಈ ಪತ್ರವನ್ನು ಓದಿರಿ. ಆ ಮೇಲೆ ಯಾವಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದೆಂಬುದನ್ನು ನೀವೇ ನಿಶ್ಚಯಿಸಿರಿ.

ಕುಲಕರ್ಣಿ ಬ್ರದರ್ಸ್ ವೋಟಾರ ಡ್ರಾಯಿಂಗ್ ಇನ್ ಸ್ಟಿಟೂಶನ್ ಲಾಜ್ ಶನಿವಾರ ಪೇಟೆ ಪುಣೆ ಶಹರ

ತಾರೀಖು 31ನೆ ಜುಲೈ

ರಾ॥ ರಾ॥ ವ್ಯವಸ್ಥಾಪಕರ 'ಕನ್ನಡಿಗ' ಬಾಗಲಕೋಟೆ ಇವರಿಗೆ— ವಿ ವಿ ನಾನು ನಿಮಗೆ ನಮ್ಮ ಸಂಸ್ಥೆಯಲ್ಲಾ ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹೀರಾತಿನ ಪರಿಣಾಮವು ಒಳ್ಳೇ ಜನ್ನಾಗಿ ಆಗಿದೆಂಬುದು ನಮಗೆ ಕಂಡುಬರುತ್ತದೆ ಆದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ. ಆದರ ಬೆಲೆ ನಿನಾಗುವದು ಅದನ್ನು ತಿಳಿಸಬೇಕು. ಕೊಡುವೆನು.

ಜಿ. ಎಚ್. ಕುಲಕರ್ಣಿ, ಮ್ಯಾನೇಜರ.

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭಹೊಂದಿರಿ. ತಡವೇಕೆ ಈ ದಿನವೇ ಪತ್ರಬರೆಯಿರಿ.

—ವ್ಯವಸ್ಥಾಪಕ.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮ್ಯಾಲುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳ ೧೪ ಅಗಲಿ ಮೊಳ ೩, ಥಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧ಕ್ಕೆ ರೂ ೨ ರಿಂದ೫೦ ರವರೆಗೆ. ಬುಟ್ಟಿದಾರ್ ಬನಾರ್ಸ್ ೧೮ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೩೦ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮೆ ಜರೀದುಪಟ್ಟಿ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳಿ ರೇಶ್ಮಿ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ ಕ್ಕೆ ರೂ. ೬ ರಿಂದ ೧೫ ರವರೆಗೆ ಸ್ಪಟಿಕದ ೧೦೦ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ ಕ್ಕೆ ಆಣೆ ೮ರಿಂದ ರೂಪಾಯಿ 1½ ರವರೆಗೆ ಜಗನ್ನಾಥಜಾಗಂಟಿ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವ್ಹಾ ೨ಗಳ ಕೆಟಲಾಗ ಇನಾಂ

ವಿಳಾಸ-ತಿರೋ ಎಣೆ ನಾರಾಯಣಾಚಾರ್ಯ
ಕಂಪನಿ ಜೊಳಂಬಾ ಶಾಖೆ ಬನಾರಸ್

ಲಘುಕಾವ್ಯಮಾಲಾ.

ಸಂಪಾದಕ:—ಶ್ರೀ ಎನ್. ವ್ಹಿ. ಕುಲಕರ್ಣಿ ಬಿ. ಎ. ಗದಗ. ಈ ಮಾಲೆಯ ನಾಲ್ಕನೆಯ ಪುಷ್ಪವಾದ "ಹುಣ್ಣಿಮೆಂಬಿ" ಎಂಬುದೊಂದೇ ಹೊಸ ವರುಷದ ಮೊದಲನೆಯ ಪುಷ್ಪವು ವರ್ಷಕ್ಕೆ ಒಟ್ಟು ಆರು ಕುಸುಮಗಳು ವಾಷಕರಿಗೆಪ್ಪಿಸಲ್ಪಡುವವು ಚಿಕ್ಕಮಕ್ಕಳಿಗೂ ಮಹಿಳೆಯರಿಗೂ ಸುವಿಧವಾಗಿ ತಿಳಿಯಬೇಕಾ ಶೈಲಿ ಇದೊಂದೇ ಕಾವ್ಯಮಾಲೆಯು. ವರ್ಷಿಕ ವರ್ಗಣಿ ಕೇವಲ ೫—೮—೦ ಮಾತ್ರ.

ಈ ಮಾಲೆಯ ಮೊದಲಿನ ಮೂರು ಪುಷ್ಪಗಳು ಮೂರಾಣೆ ಕ್ಕೀಟು ಕಳುಹಿಸಿದರೆ ದೊರಕುವವು!

ಪ್ರಾಣಿದಯೆ.

ಸಚಿತ್ರ ಮಾಸಪತ್ರಿಕೆ.

ಚಿಕ್ಕಪೇಟೆ. ಬೆಂಗಳೂರಸಿಟಿ

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ಪ್ರಾಣಿದಯಾ ಸಂಬಂಧವಾದ ಲೇಖಗಳನ್ನೇ ಸೇಖರಿಸಿ ಕರ್ನಾಟಕಮಾತೆಯ ಸೇವೆಮಾಡುವ ಮುಖ್ಯೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯು, "ಇದು ಒಂದೇ."

ಸಮಸ್ತ ಕನ್ನಡಿಗರ ಕರಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 5/- ರೂ ಪಾಯಿಗಳನ್ನು ಕೊಡುವವರನ್ನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನ್ನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿಸಂಚಿಕೆಯಲ್ಲಿಯೂ ಅವರ ಹೆಸರುಗಳು ಪ್ರಕಟಿಸಲ್ಪಡುವವು.

ಈ ಪತ್ರರಾಜ ಸಮಾರ್ಥ

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ

ಗದಗ ಶ್ರೀದತ್ತಾತ್ರೇಯ ನಾಟಕ ಮಂಡಳಿಯವರು

ಇದೇ ಜಾನೇವಾರಿತಿಂಗಳ-ಕೊನೆಯವಾರಕ್ಕೆ ಬಾಗಲಕೋಟೆಗೆ

ಬರುವರು.

ಮತ್ತೂ ಶ್ರೀ ಶಿವಾನಂದ ಥಿಯೇಟರಿನಲ್ಲಿ ತಮ್ಮ ಚಿತ್ತಾಕರ್ಷಕವಾದ ನಾಟಕಗಳನ್ನಾರಂಭಿಸುವರು. ಪ್ರಥಮ ನಾಟಕ ಪದವಿಯಂದ್ರು.

ಸಂಘಟಕರಿಯ

ಸದಾಶಿವರಾವ ಗರೂಡ ಕರ್ನಾಟಕ ನಾಟಕಾಲಂಕಾರ

ಅಭಿನಯ ಕೇಸರಿ.

ಸ್ಟ್ಯಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಒಹುಮಾನವಾಗಿ ಪಡೆದ ಸ್ಟ್ಯಾಂಡರ್ಡ್ ಕಾಫಿಪುಡಿಯು ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕ್ಷಣೋಕದಿ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಹಿಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿನ್ನ ಮನಸ್ಸು ಹೋಗಲಾರದು.

ಪೌಂಡಿಗೆ ೧-೪-೦ ಮತ್ತು ೧-೨-೦.

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಲ್ಪಮಧೇನು.

ದೇವಲೋಕದ ಕಾಮಧೇನುವು ಹೇಗೆ ಬಡಿದ ನರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ :—

ಕ್ರಯವು ಇನಾಂ!!! ಅಂ. ಹಾಸಲು

ಇಷ್ಟಕ್ಕೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಯೆಂಬ ಆರೋಗ್ಯ ವೈದ್ಯದರ್ಶನ. ಅನೇಕ ರಹಸ್ಯವಾವ ವಿಷಯಗಳವೆ.

ಏಜಂಟರು:—ಜಂಬುಲಿಂಗಪ್ಪ ಜಾಲವಾದಿ.
ಸ್ಟೇಶನಸರ್ ಬಾಗಲಕೋಟೆ.
ರಾಜವೈದ್ಯ ನಾರಾಯಣಜಿ ಕೇಶವಜಿ
ಳಿ. ಜೀನಾಬಜಾರ್, ಮದ್ರಾಸು

ವರರು ಬೇಕಾಗಿರುವರು

ವೇಸ್ಯಾ ಪ್ರಂಗಡಳಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಯಿಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೆಟ್ರಿಕ್ಯುಲೇಶನ್ ಜಾಲಕ್ಕಿಯರ್ತ್ ಪರೀಕ್ಷೆಯನ್ನು ೧೯೧೮ II. III. VI Form ಶಾಲೆಗಳಲ್ಲಿ ಓದಿದವರು. ಗುಣವತಿಯರೂ ರೂಪವತಿಯರು-ಆದ ಕನ್ಯೆಯರ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕಾರ್ಯಕ C/o- ಪತ್ರಿಕೆ.

ಮಾಸ) ಸನಾತನ ಧರ್ಮ ಸಂಜೀವಿನೀ (ಪತ್ರಿಕೆ

ಧರ್ಮಾಭಿಮಾನಿಗಳೇ! ನಿಮಗೆ ನಿಮ್ಮ ಧರ್ಮವು ಉಳಿಯ ಬೇಕೆಂಬ ಅಭಿಲಾಷೆಯಿದೆಯೋ ಹಾಗಾದರೆ ಧರ್ಮಧ್ವಜವನ್ನು ಎತ್ತಿ ಹಿಡಿದು ಹಿಂದೂಸಮಾಜದ ದುಃಸ್ಥಿತಿಯನ್ನೂ ಧರ್ಮಕ್ಕೆ ಕಲವು ಆಧುನಿಕ ದುರ್ಭಾವನೆಗಳಿಂದಟಾಗುತ್ತಿರುವ ಆಘಾತಗಳನ್ನು ನಿರ್ಭಯವಾಗಿ ಪ್ರತಿಪಾದಿಸುವ ಶಾಸ್ತ್ರಮರ್ಮಗಳನ್ನು ತಿಳಿಸುವ ವಿದ್ವಾಂಸರ ಲೇಖನಗಳಿಂದ ತುಂಬಿತುಳುಕಾಡುತ್ತ ಜಸ್ಥಾನವ್ಯೆಳರಣ ವಿದ್ವಾನ್ ಎಂ ಕೇ ಶ್ರೀನಿವಾಸ ರಾಘವಾಚಾರ್ಯರು ಸಂಪಾದಕತ್ವದಲ್ಲಿ ಪ್ರೊರಡುತ್ತಿರುವ ಈ ಪತ್ರಿಕೆಗೆ ಜಂದಾದಾರರಾಗಿರಿವಯ್ಯ ವಿಟ್ಟು ಈಗಲೇ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿ ಕೊಳ್ಳಿರಿ.

ವಾರ್ಷಿಕ ಚಂದಾ ರೂ 2- 4 ಮಾತ್ರ

ಸಂಪಾದಕ – ಸನಾತನ ಧರ್ಮ ಸಂಜೀವಿನೀ
(ಕೌಪನಂಜಾಂಬಾ ಅಗ್ರಹಾರ) ಮೈಸೂರು

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ

ಪೋಷಕರಿಗೆ ವಾ. ಚ ರೂ. ಉಪಕಾರಕರ್ತೃಗಳಿಗೆ ವಾ. ೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಜಂದಾದಾರರಿಗೆ } ೧ ರೂ. ಇಲ್ಲವೇ, ೧೫ ನಂಬರಿಗೆ ಕಡಮೆ ಯಾಗದಂಥ ೪೦೦ ಯಾರ್ಡ ಕೈನೂಲು

ಪರಸ್ಥಳದವರಿಗೆ } ಮನಿಯಾರ್ಡರದಿಂದ ೧-೧೫-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦ ಯಾರ್ಡ ಕೈನೂಲು

ವಾಜನಾಲಯ ಸಭೆ, ಸಮಿತಿ ಶಾಲೆ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ— } ಸ್ಥಳದವರಿಗೆ ೨-೦-೦ ಪರಸ್ಥಳದವರಿಗೆ ಮನಿಯಾರ್ಡರದಿಂದ ೨-೧೫-೦ ವಿ. ಪಿ ಯಿಂದ ೩-೧-೦

ಸರಕಾರ, ಮುನಸೀ ಪಾಲಿಟಿ, ಲೋಕಲ್ ಬೋರ್ಡ್ ಇತ್ಯಾದಿ } ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೫-೦ ವಿ. ಪಿ. ಯಿಂದ ೫-೧-

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨೦ಪೈ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ರಿತಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಶ್ರೀ ಗುಬ್ಬಿ ಚೆನ್ನಬಸವೇಶ್ವರ ನಾಟಕ ಕಂಪನಿ

ಗದಗಿನಲ್ಲಿ ಜನವರಿ ಒಂದನೇ ವಾರ ಹೊಸನಗರದಲ್ಲಿ ನಡೆಯುವ "ವನಗಳ ಪ್ರದರ್ಶನ" ಕಾಲದಲ್ಲಿ, ಮೇಳ್ಕಂಡ ನಾಟಕ ಕಂಪನಿಯವರು ಮತ್ತು ಇದರ ಶಾಖೆಯಾದ ಬಾಲಕರ ಸಂಗೀತ ಸಹ್ಯಾ, ಹೊಸನಗರ ಮಿಸಾಫರ್ ಖಾನೆ ಪಕ್ಕದಲ್ಲಿ ವಿದ್ಯುಚ್ಛಕ್ತಿ ದೀಪಗಳಿಂದ್ಲೂ ಶೃಂಗಾರವಾಗಿ ಅಲಂಕರಿಸಿಟ್ಟ ಎರಡು ಸಾಗಿಸುವ ಮಂದಿರಗಳಲ್ಲಿ, ಅದ್ಭುತ ಟ್ರಾನ್ಸ್‌ಫರ್ಸ್, ಮತ್ತು ಕೊಸಮೀನುಗಳಿಂದಲೂ, ಹೂಸ ಉಪ್ಪುಗಳಿಂದಲೂ, ಅಮೋಘವಾಗಿರುವ ನಾಟಕಗಳನ್ನಾಡುವರು. ಇದಾ ಸಂಧಿ ಮತ್ತು ಅಪೂರ್ವ ಸಮಯವನ್ನು ಕಳಿಸುಕೊಳ್ಳದೇ, ಸರ್ವರೂ ಪ್ರೋತ್ಸಾಹಿಸುವ ಕೆಂದು ನೆಬಿರುತ್ತೆ.

For Ladies' and Gents' Insurance
in
The Bharat Insurance
Company, Ltd.
and for

Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgical Instruments and Drugs
(6) His Master's Voice Phones, and Records
(7) Cycles, Stoves and Gas Lights
and
(8) Up-to-date Books

Apply to:—

B. S. Tantry. B A
BAGALKOT.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.
ಪ್ರಕಟನೆ.

ಈ ಕಂಪನಿಯ ಬಾಂಡು ಪೋಲ್ಸರುಗಳ ಚೀಟಿ ಎತ್ತುವ ಕ್ರಮವು ೧೯೨೩ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟಿಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್ ಬಿ ಸಿ ನಂ ೨೩೭೬ ಸಭ್ಯದ ಅಲ್ಲಿ ಆಪಗೌಡ ಚಿಲ್ಗಾಮಿ ಸುಪರಿಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ ಕೆರ್ ಆಫ್ ಡಿ. ಈ. ಪುರಾಣಿಕ ೧೦೭ ನಿಜಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನ್ನಂತ ಶಿರೋಳ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಷೂರಾ. ಪಶ್ಚಿಮಖಾನದೇಶ ರೂ. ೯೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾವಾರಸ್ಥ. ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜೆ. ಚವರೆ. ಅಶಿಸ್ಟಂಟ ಸ್ಟೇಶನ್ ಮಾಸ್ತರ ಕೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ,
ಚೀಫ ಏಜಂಟ ಹಬಳ್ಳಿ (ಮುಂಬಯಿ ಇಲಾಖಾ.)

ಅಪಾಯ ಸಂಭವಿಸಿದಾಗ ಏನುಮಾಡಬೇಕು?

ಸಾಧಾರಣವಾಗಿ ಕುಗ್ರಾಮಗಳಲ್ಲಿ ಜನರಿಗೆ ಗಾಯವೂ, ಮೂರ್ಛೆಮೊದಲಾದ ಅಪಾಯಗಳೂ ಸಂಭವಿಸಿದಾಗ, ಜಲಗಂಡ ಅಗ್ನಿಗಂಡ, ವಿಷಜಂತು ದಷ್ಟ ಸರ್ಪಾದಿ, ಹಾವು, ಹುಚ್ಚುನಾಯಿ, ಚೇಳು ಮುಂತಾದವಿಷಜಂತುಗಳು ಕಚ್ಚಿದಾಗ, ಆಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯು ಸಂಭವಿಸಿದಾಗಲೂ. ಸಮೀಪದಾದ ವೈದ್ಯರ ಸಹಾಯವು ದೊರೆಯುವುದು ಕಷ್ಟವಾಗಿದೆ. ಹಾಗೆ ಒದಗದೆ ಹೋದಾಗ, ರೋಗಿಯನ್ನು ವೈದ್ಯರಿರುವಲ್ಲಿಗೆ ಕೊಂಡುಹೋಗುವವರೆಗೆ ಯಾ ವೈದ್ಯರನ್ನು ಕರೆತರುವವರೆಗೆ ಯಾವತರದ ಚಿಕಿತ್ಸೆ ಮಾಡಬೇಕೆಂದು ತಿಳಿಯದೆ, ಅನೇಕ ಜನರು ಅಪಾರಂಗಳಿಗೆ ಗುರಿಯಾಗುವದು ಬಹಳ ಸಾಧಾರಣ, ಕೆಲವು ಸಾರಿ ಮರಣವನ್ನುಕೂಡ ಹೊಂದುವುದುಂಟು. ಇಂಥಾ ಕಷ್ಟ ಗಳಿಗೆ ಒಳಪಡದಹಾಗೆ ಮದ್ರಾಸು ಪಟ್ಟಣದಲ್ಲಿರುವ ರಾವ್ ಸಾಹೇಬ ಡಾಕ್ಟರ್, ಯು. ರಾಮರಾವ್ ಇವರು ಪ್ರಥಮ ಚಿಕಿತ್ಸೆ ಯೆಂಬ ಪುಸ್ತಕವನ್ನು ರಚಿಸಿದ್ದಾರೆ- ಈ ಪುಸ್ತಕದಲ್ಲಿ ಮೇಲೆ ಹೇಳಿದ ಆಕಸ್ಮಾತ್ತಾಗಿ ಸಂಭವಿಸುವ ಅಸ್ವಸ್ಥತೆ ಮಾಡಬೇಕಾದ ಚಿಕಿತ್ಸೆಯನ್ನು ಬಹಳ ಸುಲಭವಾದ ಕನ್ನಡದಲ್ಲಿ ೧೩೫ ಚಿತ್ರಪಟಗಳೊಡನೆ ಬರೆದಿರುವರು ಈ ಪುಸ್ತಕವನ್ನು ಓದಿ ತಿಳಿಕೊಂಡರೆ ಅನೇಕರದ ಅಪಮೃತ್ಯುಗಳನ್ನು ಪರಿಹರಿಸಬಹುದಲ್ಲದೆ ವ್ಯರ್ಥವಾಗಿ ಮರಣಹೊಂದುವ ಜನರ ಜೀವವನ್ನು ಕೂಡ ಉಳಿಸಿ ಪುಣ್ಯಸಂಪಾದಿಸಬಹುದು.

ಪುಸ್ತಕದ ಬೆಲೆ ಅಣೆ ೧ ಟಪಾಲ್ ಖಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ—ಶ್ರೀಕೃಷ್ಣನ್ ಬ್ರದರ್ಸ ೩೨೩ ತಂಬುಚೆಟ್ಟಿ ಬೀದಿ, ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದ ನಮ್ಮ ನೇಗಿಲು ನಂ೧೧೦ ನೆಯದಂತೆ ಮಿಕ್ಕ ಉಪಯೋಗಕ್ಕೂ ಒರುವದು. **ರಚನೆಃ**— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟಿ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿಸುತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತದೆ **ಎಳೆಯುವ ಶಕ್ತಿಃ**— ೬ ಎಂದಲ ಎತ್ತುಗಳು ಬೇಕು. **ಸಾಲಿನ ಆಳಗಲಃ**— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕಃ**—ಸುಮಾರಿ ೨೦೦ ಪೌಂಡು

ಸಪ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೫೫ ರೂಪಾಯಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವು ಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಖಚ್ಚಿದ ಕಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷದಲ್ಲಿ ಇಡಿರಿ.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ, ನರ ತೊಡಕು, ಹರಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ಪಳದದ್ದು)

೪೦ ವರ್ಷಗಳಿಂದ ಈ ಔಷಧವು ಜಗಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣವಾಗುವದು—ಒಂದೇ ಕಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮತ್ತು ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ

Buy a bottle

TO-DAY!

ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭ ವಾ. ಚಂದಾ ೧—೧೬—೦ ಮಾತ್ರ

ಕನ್ನಡ ಪತ್ರಿಕೆ.

(ಇದರಲ್ಲಿ ಕನ್ನಡ ಜನತೆಯ ಸಮಾವಿಷ್ಟವಾಗಿದೆ)

ಸಂಪಾದಕರು—[illegible]

ವರ್ಷ ೩ | ಬಾಗಲಕೋಟೆ ಬುಧವಾರ ಮಿತಿ ಮಾಘ ಬ.೧೩ ಶಕೆ ೧೮೪೯ ವಿ.ಸಂ. ೧೯೮೪ | ಸಂಚಿಕೆ ೬೧

Date 29-1-1928

ಕನ್ನಡ ಬಂಧುಗಳೇ ಈ ಸಂಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೆ, ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕಟ್ಟುಬಿಟ್ಟ ಮುರಿದು-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸ್ತಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದೆಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದುಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆಕೊಳ್ಳಿರಿ !

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಲಲ ಶನಿವಾರ ಪೇತ ಲಾಯಿಡ್‌ಬ್ರಿಜ್ಜದ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೆಂಬರರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಕೇಳುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಮಯೂರ ಶಿಖಾ

ದುರ್ಲಭವಾವ ವನಸ್ಪತಿಯು. ೨೦ ತೊಲೆಗ ೧ ರು ವೈದ್ಯರಿಗೂ, ವ್ಯಾವಾರಸ್ಥರಿಗೂ, ಅನೇಕ ಅಪರೂಪವಾದ ವನಸ್ಪತಿಗಳು ದೊರಕುವವು

ವೈದ್ಯ—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ಮಧ್ವ, ರಾಮಾನುಜಾ, ಬಸವರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತು ಟಿಳಕ, ಗೋಖಲೆ, ದಾಸ ಗಾಂಧೀಯವರ ಕಹಿ ಎಭೂತಿಗಳ ಆತ್ಯುತ್ತಮವಾಗಿ ಒತ್ತಿ ತೆಗೆದ ಹಾಗೂ ಒಳ್ಳೇ ಲಲಿತವಾಗಿ ಳಿಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧ ಪಡಿಸಿರುತ್ತೇವೆ ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾಗಿಯೂ ಅಲಂಕಾರಗಳೇ ಸರಿ. ಅದರಂತೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗವೆ. ಅಲ್ಲದೇ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಬರೆದು ಕೊಳ್ಳಿ!

ದಿ ಇಂಡಿಯನ್ ಜ್ಯೂವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ. ಬೀ. ಯವರ ಸುಲಭ ಕ್ರಯ!!

ಸುಗಂಧನಶ್ಯದ ಪುಡಿ.

ಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಿಸಿ, ಒಂಟಿ ತಲೆ ನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ವಾಡುತ್ತದೆ. ಮೂರು ಬಿಟ್ಟಿ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಮಟಿಕೆಯನ್ನು ಮಿಶ್ರಮಾಡಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ. ೪ ಆಣೆ. ಡಜನ್ ೧೪ ಕ್ರಯ ರೂ ೩—೮—೦, ವ್ಹಿ. ಪಿ. ಚಾರ್ಜು ೮ ಆಣೆ.

Registerd Trads mark.

ವಿಳಾಸ:— ಗುರುಬಸವ ಆ್ಯಂಡ್ ಕಂಪೆನಿ, ಲಿಮಿಟೆಡ್,

ಪೋ. ಬಾ. ೫೧೦, ಪಾರ್ಕ್‌ಟೌನು, ಮದರಾಸು.

☞ ಇಂಗ್ಲೀಷಿನಲ್ಲಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಕನ್ನಡಿಗ.

ಬಾಗಲಕೋಟೆ- ಕನ್ನಡಿಗ ಮಾಘ ಶುದ್ಧ ೭ ಶಕೆ ೧೮೮೯

ಸಂಪಾದಕರ ಭೂಮಿ

ನನ್ನ ಮನಸಿನ ನೋಣವಾಡಿ ಕಟ್ಟುವೆನಾನು।
ನಿನ್ನ ಬಿಸನವವಾಡಿದಂಥ ಮುಳ್ಳಿನ ದೊಪ್ಪಿ!
ಚಿನ್ನದಾರದು ನಿನ್ನ ನೋಣಬಸ್ತಿಯು ಸೊಂದು ಚಿನ್ನಯಾಕಾಶದಲ್ಲಿ ॥
ನನ್ನ ದೇಹವ ನಿನ್ನ ವೀರಶಾಸನಕಾಗಿ।
ಕೆನ್ನೆನ್ನು ಕಲ್ಲಾಗಿ ಸಿಲ್ಲಿಸಲು ಸಿದ್ಧವಿದೆ।
ಚಿನ್ನಪ್ಪಾವ ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ॥
—ಅಂದಿಕಾ ತನಯ ದತ್ತ

ಕರ್ನಾಟಕವಿಲ್ಲಿ ಸ್ವಯಮನ್ನ ಕಮಿಟಿಶನ್ನದ ಬಹಿಷ್ಕಾರದ ಜಳವಳಿಕೆಯನ್ನು ಪ್ರಬಲವಾಗಿ ಹಬ್ಬಿಸುವ ಪ್ರಯತ್ನವು ಒಜ್ಜೊಂದು ಜಿಲ್ಲೆಯಿಂದ ಎಲ್ಲ ಜಿಲ್ಲೆಗಳಲ್ಲಿಯೂ ನಡೆದಂತೆ ಕಂಡು ಬರುವದಿಲ್ಲ. ಧಾರವಾಡದಲ್ಲಿ ಮಾತ್ರ ಈ ಬಗ್ಗೆ ಉತ್ಸಾಹವು ಕೊಂಚ ಹೆಚ್ಚಾಗಿರುವಂತೆ ಕಾಣುತ್ತದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಮಿತಿಯ ಈಚಿನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಲಿಕ್ಕೆಂದು ಒಂದು ಉಪಸಮಿತಿಯನ್ನು ನೇಮಿಸಿ, ಅದರ ವೆಚ್ಚಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನೂ ತೆಗೆದಿಟ್ಟಿರುವರು ಆದರೆ ಈ ಮಂಡಲವು ಇಂಥ ಸಮಯದಲ್ಲಿ ಸಹ ಸುಮ್ಮನೇ ಕುಳಿತುಕೊಳ್ಳುವದು ಸರಿಯಲ್ಲ. ಮದ್ರಾಸ ಕಾಂಗ್ರೆಸ್ಸ ಆದ ಕೂಡಲೆ ಈ ಮಂಡಲವು ಚಟುವಟಿಕೆಗಳನ್ನು ಪ್ರಾರಂಭಿಸಿದ್ದರೆ ಕರ್ನಾಟಕದ ಕುಂಬೆಲ್ಲ ಒಹಿಷ್ಕಾರದ ವಾತಾವರಣವು ಸಂಪೂರ್ಣವಾಗಿ ಹಬ್ಬಿಕೊಳ್ಳಲು ಅನುಕೂಲವಾಗುತ್ತಿತ್ತು. ಈಗಲಾದರೂ ಈ ಕಮಿಟಿಯವರು ಎಚ್ಚತ್ತು, ಪ್ರತಿ ಜಿಲ್ಲೆಗೂ ಪ್ರಚಾರಕರನ್ನೂ, ಪತ್ರಪತ್ರಿಕೆಗಳನ್ನೂ, ಭಿತ್ತಿಪತ್ರಿಕೆಗಳನ್ನೂ ಕಳುಹಿಸಿ, ಶುಕ್ರವಾರದ ಬಹಿಷ್ಕಾರವು ಕರ್ನಾಟಕದಲ್ಲಿ ಅತ್ಯಂತ ಯಶಸ್ವಿಯಾಗುವಂತೆ ಏರ್ಪಾಡು ಮಾಡಬೇಕಾಗಿ ಸೂಚನೆಯಿದೆ.

ಕರ್ನಾಟಕತ್ವದ ಪ್ರವರ್ತಕರೂ ಕರ್ನಾಟಕ ಏಕೀಕರಣ ಜಳವಳದ ಮುಖ್ಯ ಆಧಾರಸ್ತಂಭರೂ ಆಗಿದ್ದ ಕಡವಾ ರಾಘವೇಂದ್ರರಾಯರು ಪೈಕುಂಠವಾಸಿಗಳಾಗಿ ಒಂದು ವರ್ಷ ಆಗುತ್ತ ಬಂದಿತು. ಇದೇ ಮಾಘ ಶುದ್ಧ ೧೫ ಶನಿವಾರ (ತಾ॥ ೪-೨-೭೮) ವು ಕಡವಾ ರಾಯರ ಪುಣ್ಯದಿನವು. ಕರ್ನಾಟಕದ ಏಕೀಕರಣಕ್ಕೂ ಕರ್ನಾಟಕದ ಕೀರ್ತಿಯನ್ನು ಪರಪ್ರಾಂತಗಳಲ್ಲಿ ಹರಡುವದಕ್ಕೂ ರಾಘವೇಂದ್ರರಾಯರು ಮಾಡಿದ ಕಾರ್ಯವನ್ನು ನೆನೆದು, ಮೊದಲನೇ ವಾರ್ಷಿಕ ಶ್ರಾದ್ಧದ ದಿನ ಅವರ ಪುಣ್ಯಸ್ಮರಣೆಯು ಕನ್ನಡಿಗರಿಗೆಲ್ಲ ಒದಗಿ ಬರುವಂತೆ ಅಲ್ಲಲ್ಲಿ ಏರ್ಪಾಡಾಗಬೇಕು ಕರ್ನಾಟಕ ಏಕೀಕರಣ ಸಭೆಯ ಶಾಖೆಗಳು ಎಲ್ಲೆಲ್ಲಿ ಉಂಟೋ ಅಲ್ಲಲ್ಲಿ ಆ ದಿನ ಸಭೆ ಕರೆದು ಏಕೀಕರಣದ ಪ್ರಚಾರವನ್ನು ಮಾಡಬೇಕು. ಏಕೀಕರಣವೇ ಕಡವಾರಾಯರ ಜಪಿಸುವ ಮಂತ್ರವಾಗಿದ್ದರಿಂದ ಅವರ ಪುಣ್ಯತಿಥಿಯಲ್ಲಿ ಅದರ ಪ್ರಚಾರದ ಕಾರ್ಯ ನಡೆದರೆ ಅವರ ಆತ್ಮಕ್ಕೆ ಹೊರಯುವಷ್ಟು ಶಾಂತಿಯು ಎಲ್ಲಿಯೂ ದೊರೆಯದು. ಆದ್ದರಿಂದ ಏಕೀಕರಣದ ಭಕ್ತರು ಈ ಪ್ರಸಂಗವನ್ನು ಹೋಗಗೊಡಬಾರದಾಗಿ ಕೋರುತ್ತೇವೆ.

ವಿಜಾಪುರ ಜಿಲ್ಲಾ ಸ್ಕೂಲಬೋರ್ಡಿನ ಆಡಳಿತೆಯ ಬಗ್ಗೆ ಈಗ್ಗೆ ಜನರಲ್ಲಿ ಏನೇನು ಚರ್ಚೆ ನಡೆದಿದೆಯಷ್ಟೇ? ಬ್ರಾಹ್ಮಣೇತರರು ಕೈಯಲ್ಲಿಯೇ ಈಗ್ಗೆ ಸ್ಕೂಲ ಬೋರ್ಡು ಇರುವದರಿಂದ ಬ್ರಾಹ್ಮಣ ಶಿಕ್ಷಕರಿಗೂ, ನೌಕರರಿಗೂ ವಿಶೇಷ ತೊಂದರೆಯಾಗುತ್ತಿರುವದೆಂಬುದೇ ಈ ವಾದದ ಮುಖ್ಯಾಂಶವು. ಬ್ರಾಹ್ಮಣರನ್ನು ದ್ವೇಷಿಸುವ ಹೊಡ್ಡದೊಂದು ಜಳವಳವು ೧೦-೧೫ ವರ್ಷಗಳಿಂದ ಕರ್ನಾಟಕದಲ್ಲಿ ಉದ್ಭವವಾಗಿದೆ. ಆದರೆ ಜಾತಿಜಾತಿಗಳ ಮೇಲೆ ಪಂಗಡಗಳನ್ನು ಮಾಡಿಕೊಂಡು ಸಾರ್ವಜನಿಕ ಕಾರ್ಯಗಳನ್ನು ನಡೆಸುವದು ಹಿತಕರವಲ್ಲವೆಂಬುದನ್ನು ಇತ್ತೀತ್ತಿ ಪ್ರತ್ಯಕ್ಷವಾದ ಅನುಭವದಿಂದ ಅನೇಕರು ಕಂಡು ಹಿಡಿದಿರುವರು. ಆದುದರಿಂದಲೇ ಮೊದಲಿನಂತೆ ಬ್ರಾಹ್ಮಣೇತರರಲ್ಲವೇ ಈಗ್ಗೆ ಐಕ್ಯವಿಲ್ಲ. ತೆಂಗಾಯತೇತರ ಜಳವಳವೂ ದೃಗ್ಗೋಚರವಾಗಿದೆ. ರಡ್ಡಿ, ವಿಶ್ವಕರ್ಮ, ಮರಾಠಾ ಎಂಬ ಭೇದಗಳೂ ತಲೆದೋರುತ್ತಿವೆ. ಲಿಂಗಾಯತರು ಬ್ರಾಹ್ಮಣ ಮುಖಂಡರೊಂದಿಗೂ, ಬ್ರಾಹ್ಮಣರು ಮುಸಲ್ಮಾನ-ರಡ್ಡೀ ಮುಖಂಡರೊಂದಿಗೂ ಸಖ್ಯ ಬೆಳೆಸಿ, ತಮ್ಮ ತಮ್ಮ ಸ್ವತಂತ್ರ ವಿಚಾರಗಳನ್ನು ಕೃತಿಯಲ್ಲಿ ತರಲಾರಂಭಿಸಿರುವರು. ಇನ್ನೂ ಕೆಲವು ಕಾಲವು ಗತಿಸಿತೆಂದರೆ, ಜಾತಿ-ಜಾತಿಗಳ ಪ್ರತಿನಿಧಿತ್ವ ಪದ್ಧತಿಯು ದುಷ್ಟವಾದುದೆಂಬುದನ್ನೂ, ವಿಚಾರಶಕ್ತಿಗಳ ಮೇಲೆಯೇ ಪಂಗಡಗಳಿರತಕ್ಕದ್ದೆಂಬುದನ್ನೂ ಎಲ್ಲ ಕಾರ್ಯವಾಹಕರೂ ಸಂಪೂರ್ಣವಾಗಿ ಕಂಡುಕೊಳ್ಳುವರೆಂಬುವದರಲ್ಲಿ ಸಂದೇಹವಿಲ್ಲ ಆದುದರಿಂದ ಬ್ರಾಹ್ಮಣೇತರ ಈಗಿನ ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತೆಯ ಅವ್ಯವಸ್ಥೆಯ ಬಗ್ಗೆ ಭೂಮ್ಯಾಕಾಶವನ್ನು ಒಂದುಗೂಡಿಸುವ ಪ್ರಯತ್ನವನ್ನು ನಾವು ಮಾಡುವದು ಅವಶ್ಯ ವಿಲ್ಲ. ಬ್ರಾಹ್ಮಣರ ಬಗ್ಗೆ ಅನೇಕ ಬ್ರಾಹ್ಮಣೇತರರ ಕಣ್ಣುಗಳಲ್ಲಿ ಯಾವುದೇ ಒಂದು ಬಗೆಯ ಮಬ್ಬು ತುಂಬಿಕೊಂಡಿದೆ. ಆದರೆ ಅದು ಈಗೀಗ ಅನೇಕರ ಕಣ್ಣುಗಳಿಂದ ಹೊರಗೆ ಹೋಗುತ್ತಲಿದೆ. ಇರಲಿ. ಈ ಸ್ಕೂಲ ಬೋರ್ಡಿನ ಸಧ್ಯದ ವಾದವನ್ನು ಇನ್ನು ಕೊಂಚ ವಿಚಾರಿಸುವಾ. 'ನವಕರ್ನಾಟಕ' ರಾ. ಸಾ, ಹಳಕಟ್ಟಿಯವರ ನೇತೃತ್ವದಲ್ಲಿ ಇದ್ದುದರಿಂದ ನಿಷ್ಪಕ್ಷಪಾತವಾದ ಪತ್ರಿಕೆಯೆಂದು ಎಂಬದಾಗಿ ಜನರು ತಿಳಿಯುತ್ತಲಿರುವರು. ಆದರೆ "ಬಾಲಸುತ ಮಿತ್ರ" ನೆಂಬ ಲೇಖನ ಪತ್ರವನ್ನು ಪ್ರಕಟಿಸಿದ್ದರಿಂದ ಅದರ ನಿಷ್ಪಕ್ಷಪಾತದ ಬಗ್ಗೆ ಜನರು ಗುಣುಗುಟ್ಟುತ್ತಿರುವರು. ಆದುದರಿಂದ 'ನವಕರ್ನಾಟಕ' ದ ಬಗ್ಗೆ ಈಗ್ಗೆ ಜನರಲ್ಲಿದ್ದ ತಿಳುವಳಿಕೆಯು ತಪ್ಪಿನದೆಂಬ ಭಾವನೆಯಾಗುವಂಥ ಧೋರಣವನ್ನು ರಾ. ಸಾ. ಹಳಕಟ್ಟಿಯವರು ಮುಂದಾದರೂ ಹಿಡಿಯಲಾರರೆಂದು ನಾವು ಭಾವಿಸುತ್ತೇವೆ. 'ಬಾಲಸುತ ಮಿತ್ರ'ನು ಸಂಪೂರ್ಣವಾಗಿ ಬ್ರಾಹ್ಮಣ ವರ್ಗಕ್ಕೆಲ್ಲ ಬಯ್ಯುದು ಸಮಂಜಸವೇ? ಗೊಡ್ಡಿಗಳು ಎಲ್ಲ ಕಡೆಗೂ ಇರುವಂತೆ ಬ್ರಾಹ್ಮಣ ಸಮಾಜದಲ್ಲಿಯೂ ಇದ್ದರೆ, ಅದರಿಂದ ಇಡೀ ಬ್ರಾಹ್ಮಣ ಸಮಾಜವೇ ದೋಷಾರ್ಹವೋ? ಬ್ರಾಹ್ಮಣೇತರರಲ್ಲಿಯೇ, ಅಥವಾ ಅಷ್ಟೇಕೆ? ಲಿಂಗಾಯತರಲ್ಲಿಯೇ ಎಲ್ಲರೂ ಸರ್ವಗುಣ ಸಂಪನ್ನರೋ? ಬ್ರಾಹ್ಮಣೇತರರಲ್ಲಿಯೇ ಅದರಲ್ಲೂ ವೀರಶೈವ- ವೀರಶೈವೆಂಬಲ್ಲಿಯೇ ಮತ ಭೇದ, ಕಲಹ, ಬಡಿದಾಟಗಳೇಕಿವೆ? ನಾವು ಹೇಳುವ ಮತಿತಾರ್ಥವೇನೆಂದರೆ:— ಸಂಪೂರ್ಣವಾಗಿ ಒಂದು ಸಮಾಜವನ್ನು ದೂರುವ

ಕೆಲಸವು ಸುಗಮವಾಗಿ ಅಯೋಗ್ಯವು. ಈ ಬಗ್ಗೆ ಏನೇ ಹೇಳಿಕೊಂಡರೂ 'ನವಕರ್ನಾಟಕ'ವು "ಒಟ್ಟು ಬಡ ಶಿಕ್ಷಕರಲ್ಲಿ ಶೇಕಡ ಜನರು ಬ್ರಾಹ್ಮಣರೂ ಶೇಕಡ ಲಿಂಗಾಯತರೂ, ಇನ್ನಾರೆ— ೧೦೦೦ ರೂ. ಗಳ ಅಲವನ್ನು ಬ್ರಾಹ್ಮಣ ಶಿಕ್ಷಕರಿಗೆ ಶೇಕಡತ್ತಿದ್ದರೆ ೫೦೦ ರೂ. ಗಳು ಮಾತ್ರ ಲಿಂಗಾಯತ ಶಿಕ್ಷಕರಿಗೆ ದೊರೆಯುತ್ತವೆ---" ಎಂಬ ಒಂದು ಅವತರಣಿಕೆಯನ್ನು ಕೊಟ್ಟಿದೆ. ಇದನ್ನು ಕಂಡು ನಮಗೆ ಕೊಂಚ ಆಶ್ಚರ್ಯವಾಗಿದೆ. ಯಾಕಂದರೆ ಈ 'ಲೆಕ್ಕಾಚಾರ'ದ ಹಿಂದಿನ ಅವತರಣಿಕೆಯಿಂದ ಈಗಿನ ಜಿಲ್ಲಾ ಲೋಕಲ್ ಬೋರ್ಡ್ ದಲ್ಲಿದ್ದ ಬ್ರಾಹ್ಮಣೇತರರ ನಿಷ್ಪಕ್ಷಪಾತನನ್ನು ಸಿದ್ಧಗೊಳಿಸಲು 'ನವಕರ್ನಾಟಕ'ವು ಹಾತೊರೆಯಿತೆ. ಈಗೀಗ ಬ್ರಾಹ್ಮಣೇತರ ಶಿಕ್ಷಕರು ಹೆಚ್ಚಾಗಿ ದೊರೆಯುತ್ತಲಿದ್ದರಿಂದಲೂ, ಅವರಿಗೆ ಅನುಕೂಲವಿರುವದರಿಂದಲೂ, ಬ್ರಾಹ್ಮಣೇತರ ಶಿಕ್ಷಕರು ಹೆಚ್ಚು ಹೆಚ್ಚಾಗಿ ನೇಮಿಸಲ್ಪಡುತ್ತಲಿದ್ದಾರೆ. ಹೊಸದಾಗಿ ಬಂದ ಈ ಜನರ ಪಗಾರದ 'ಸ್ಕೇಲು' ಅರ್ಥಾತ್ ಕಡಿಮೆಯಾಗಿದೆ. ಆದರೆ ಬ್ರಾಹ್ಮಣ ಶಿಕ್ಷಕರು ಮುದುಕರಾಗಿತ್ತ ಬಂದುದರಿಂದ ಅವರ ಪಗಾರವು ಹೆಚ್ಚಾಗಿದೆ. ಆದ್ದರಿಂದಲೇ ಬ್ರಾಹ್ಮಣ ಶಿಕ್ಷಕರ ಹಾಗೂ ಬ್ರಾಹ್ಮಣೇತರ ಶಿಕ್ಷಕರ ಸಂಖ್ಯೆಯು ಅಜಮಾಸ ಅಷ್ಟೇ ಇದ್ದರೂ, ಬ್ರಾಹ್ಮಣ ಶಿಕ್ಷಕರ ಪಗಾರಕ್ಕೆ ಹೆಚ್ಚು ಹಣವು ಹತ್ತುತ್ತದೆ. ಮೇಲಾಗಿ 'ನವಕರ್ನಾಟಕ'ವು ಕೊಟ್ಟ ಅವತರಣಿಕೆಯೊಳಗಿನ ಅಂಕಗಳು ಯಾವ ವರ್ಷದವು ಎಂಬುವುದೂ ಸ್ಪಷ್ಟವಿಲ್ಲ. ಆದುದರಿಂದ ಜಿಲ್ಲಾ ಸ್ಕೂಲ ಬೋರ್ಡಿನ ನಿಷ್ಪಕ್ಷಪಾತ ಧೋರಣವು ಕೇವಲ ಇದೊಂದರಿಂದಲೇ ಸಿದ್ಧವಾಗದು.

ಪಕ್ರವ್ಯವಹಾರ

(೧) 'ಸ್ವಧರ್ಮ' ಮಾಸಿಕದಲ್ಲಿ ಬ್ರಾಹ್ಮಣ ವಿಧವೆಯರ ವಸನದ ಬಗ್ಗೆ ಬರೆದ ಲೇಖನವು ಬಂದಿದೆ. ಆದರೆ ಲೇಖಕರು ಪ್ರಸಿದ್ಧಿಗಾಗಿ ಅಲ್ಲದಿದ್ದರೂ, ನಮ್ಮ ಮಾಹಿತಿಗಾಗಿ ತಮ್ಮ ಹೆಸರು ವಿಳಾಸಗಳನ್ನು ತಿಳಿಸದ ಹೊರತು ನಾವದನ್ನು ಪ್ರಕಟಿಸಬಾರೆವು.

(೨) ಬಾಲಸುತ ಮಿಶ್ರನಿಗೆ ರಂಗಭೂಮಿ ಸೇವಕನ ಉತ್ತರವು ತಲ್ಪಿದೆ ಆದರೆ ೯ ಪುಟಗಳುಳ್ಳ ದೊಡ್ಡದಾದ ಇಂಥ ಲೇಖನವನ್ನು ಪ್ರಕಟಿಸುವದು ಶಕ್ಯವಿಲ್ಲ.

ಓರ್ವ ಕನ್ನಡಿಗನ ಗೌರವ

ಕಾರವಾರ ಜಿಲ್ಲೆಯ ಶ್ರೀ ಮುಂಗೇಶರಾವ ತೇಲಂಗರು ವೀಣೆಯನ್ನು ಬಾರಿಸುವದರಲ್ಲಿ ಒಳ್ಳೇ ನಿಷ್ಣಾತರು. ಮುಂಬಯಿಯಲ್ಲಿರುವ ಸುಪ್ರಸಿದ್ಧ ಶಿಲ್ಪಜ್ಞರೂ ಕನ್ನಡಿಗರೂ ಆದ ಶ್ರೀ ವಾಘರ ಮಾವಂದಿರು. ಈಗ್ಗೆ ಶ್ರೀ ತೇಲಂಗರು ಮುಂಬೈಗೆ ಹೋಗಿದ್ದು, ಅಲ್ಲಿಯ ರಸಿಕರನ್ನು ತಮ್ಮ ವಾದನದ ಕಾರ್ಯಕ್ರಮಗಳಿಂದ ಮೋಹಗೊಳಿಸಿ, ಮುಂಬೈಯಲ್ಲಿ ಪ್ರಖ್ಯಾತಿಯನ್ನು ಹೊಂದುತ್ತಲಿದ್ದಾರೆ. ಈ ಕನ್ನಡಿಗನು ಹೀಗೆ ಹೊರನಾಡಿನಲ್ಲಿ ಕರ್ನಾಟಕದ ಕೀರ್ತಿಯನ್ನು ಪಸರಿಸಿದ್ದಕ್ಕಾಗಿ ನನಗೆ ಬಹು ಅಭಿಮಾನವೆನಿಸುತ್ತದೆ.

ನಮ್ಮ ಉಡಪಿಯ ಪತ್ರ

ಪರ್ಯಾಯ ಮಹೋತ್ಸವವು ಬಹಳ ವಿಜೃಂಭಣೆಯಿಂದ ಸಾಗಿತು. ಗುರುವಾರ ತಾರೀಖಿಗೆ ಶ್ರೀ ಕೃಷ್ಣಾಪುರ ಸ್ವಾಮಿಗಳವರ ಪರ್ಯಾಯದ ಅವಧಿಯು ಮುಗಿದು ಶ್ರೀ ಪುತ್ತಿಗೆ ಸ್ವಾಮಿಯವರ ಪಡಲಿಕೆಯು ಪ್ರಾರಂಭವಾಯಿತು. ಈ ವರ್ಷ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಸಮರ್ಪಕವಾದ ಏರ್ಪಾಡು ಮಾಡಲ್ಪಟ್ಟಿತ್ತು. ಈ ಕೆಲಸಕ್ಕಾಗಿಯೇ ಒಂದು ಸ್ವಾಗತ ಸಭೆಯನ್ನು ಏರ್ಪಟ್ಟು ಪರಸ್ಥಳ ಯಾತ್ರಿಕರ ಸೌಕರ್ಯಕ್ಕಾಗಿ ನೂರಾರು ರೂಪಾಯಿ ಕೋಣೆಗಳನ್ನು ಉಚಿತವಾಗಿ ಕೊಟ್ಟಿದ್ದರು. ಯಾತ್ರಿಕರು ದುಡ್ಡು ಸಾಮಾನುಗಳನ್ನು ಇಳಿದುಕೊಳ್ಳಬಾರದೆಂದು ಬ್ಯಾಂಕನ್ನೂ ಕೊಠಡಿಯನ್ನೂ ಏರ್ಪಡಿಸಿಕೊಂಡು ಬೇಕಾದವರ ಹಣ ಮತ್ತು ಸಾಮಾನುಗಳನ್ನು ಇರಿಸಿಕೊಂಡು ಬೇಕಾದಾಗ ಕೊಡುತ್ತಿದ್ದರು. ದೇವಸ್ಥಾನ, ಮಧ್ವ ಸರೋವರಗಳಂಥ ಅಂದರೆ ಜನರು ಹೆಚ್ಚು ಸಂದಣಿ ಸೇರುವ ಕಡೆ ಬಲ್ಲ ಸ್ವಯಂಸೇವಕರು ಬಹಳ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿದರು. ಎಲ್ಲರಿಗೂ ಸ್ವಲ್ಪವೂ ಕಷ್ಟವಿಲ್ಲದಂತೆ ದೇವರ ಸಂದರ್ಶನವಾಗುವಂತೆ ಬಹು ಸಮರ್ಪಕವಾದ ಏರ್ಪಾಡುಗಳು ಮಾಡಲ್ಪಟ್ಟಿದ್ದವು. ಆದರೆ ಅಷ್ಟ ಮಠದ ಸ್ವಾಮಿಗಳವರಲ್ಲಿಯ ತಮ್ಮ್ಯ ತಮ್ಮ ಲ್ಲಿಯ ಕಲಹಗಳೂ ಅನ್ಯವಸ್ಥೆಯೂ ಒಹಳ ಪ್ರಮಾದವನ್ನುಂಟು ಮಾಡುತ್ತಿದ್ದವು!

ಡಾ॥ ಹರ್ಡೀಕರವರು ಮುಂಚಿತವಾಗಿಯೇ ಬಂದು ತಾತ್ಕಾಲಿಕ ಹಿಂದುಸ್ತಾನೀ ಸೇವಾದಲದ ಸ್ವಯಂಸೇವಕ ಶಿಬಿರವನ್ನು ಕೇವಲ ಪರ್ಯಾಯಕ್ಕಾಗಿ ಸ್ಥಾಪಿಸಿ, ತಮ್ಮ ಸೇವಾಕಾರ್ಯವನ್ನು ಸಾಗಿಸುತ್ತಿದ್ದರು ಪ್ರತಿದಿನ ಸಾಯಂಕಾಲದಲ್ಲಿ ವ್ಯಾಖ್ಯಾನಗಳನ್ನು ಏರ್ಪಡಿಸಿದ್ದರು. ಡಾ॥ ಹರ್ಡೀಕರರಿಗೆ ಸ್ಥಾನಿಕ ಮಹಾಜನರು ಈ ಕಾರ್ಯದಲ್ಲಿ ಬಹು ಸಹಾಯವನ್ನು ಮಾಡಿದರು.

ಈ ಜಿಲ್ಲೆಯಲ್ಲಿ ಸೇವಾದಲವು ಏನೆ ನು ಕೆಲಸ ಮಾಡಬೇಕೆಂಬ ವಿಷಯದಲ್ಲಿಯೂ ಕರ್ನಾಟಕದ ಮಧ್ಯವರ್ತಿ ತಾರೀಕಿನ ಶಿಕ್ಷಣ ಸಂಸ್ಥೆಯ ಕಟ್ಟಡಕ್ಕೆ ಹಣ ಕೂಡಿಸುವ ವಿಚಾರವಾಗಿಯೂ ಬಹಳ ಪ್ರಯತ್ನಪಟ್ಟರು. ಇದೇ ಕಟ್ಟಡಕ್ಕಾಗಿ ಶಿರಹಟ್ಟಿ ನಾಟಕ ಮಂಡಲಿಯ ಯಜಮಾನರಾದ ಶ್ರೀಯುತ ವೆಂಕೋಬರಾಯರು ನಾಳೆ ಅಂದರೆ ಗುರುವಾರ "ಸಂಪೂರ್ಣ ಕೃಷ್ಣಲೀಲಾ" ಎಂಬ ನಾಟಕವಾಡಿ ಆ ದಿನದ ಹಣವನ್ನು ಕೊಡಲೊಪ್ಪಿರುತ್ತಾರೆ. ಮತ್ತು ಕುಂದಾಪುರದಲ್ಲಿಯೂ, ಮಂಗಳೂರಲ್ಲಿಯೂ ಒಂದೊಂದು ನಾಟಕ ಕೊಡಲು ಒಪ್ಪಿರುತ್ತಾರೆ ಉಡುಪಿ ತಾ॥ ೨೫-೧-೨೮

ಇಲ್ಲಿಯ ವೆಸ್ಟ ಪೇಟೆಂಟ ಪ್ರೆಸ್ಸಿನ ಮ್ಯಾನೇಜರರಾದ ಶ್ರೀ ದೇಶಪಾಂಡೆ ವಿಠ್ಠಲರಾಯರು ತಮ್ಮ ಕೆಲಸದಿಂದ ನಿವೃತ್ತರಾದುದರಿಂದ ಅವರಿಗೆ ನಿರೋಪ ಕೊಡುವದಕ್ಕಾಗಿ ಗಿರಣಿಯ ಜನರೆಲ್ಲರು ನಿನ್ನೆಯ ದಿವಸ ಸಭೆಗೂಡಿಸಿದ್ದರು. ಪ್ರಮುಖ ವ್ಯಾಪಾರಿಗಳು ವಕೀಲರೂ ಸಭೆಗೆ ನಯಮಾಡಿಸಿದ್ದರು, ಶ್ರೀ ಬೆಳಗಲ್ ವಕೀಲರು ಅಧ್ಯಕ್ಷರಾಗಿದ್ದರು ಈಗಿನ ಮ್ಯಾನೇಜರರಾದ ಶ್ರೀ ಬಗಿಯವರು ಶ್ರೀ ವಿಠ್ಠಲರಾಯರ ಪ್ರೇಮಲ ವೃತ್ತಿಯನ್ನು ವರ್ಣಿಸಿದರು. ಕಂಪನಿಯ ಜನರು ಅಂತಃಕರುಣದಿಂದ ಕಾಣಿಕೆಯಾಗಿ ಕೊಟ್ಟ ಜರದ ಥೋತರವನ್ನು ಶ್ರೀ ವಿಠ್ಠಲರಾಯರಿಗೆ ಅಧ್ಯಕ್ಷರು ಅರ್ಪಣ ಮಾಡಿದರು.

ಬೆಳಗಾವಿ ರೇಲವೆ ಮಂಡಳದ ವಿನಂತಿಯ ಪ್ರಕಾರ ಬಾರಾಲಾಯಿಟ ರೇಲವೆ ಕಂಪನಿಯವರು ತಮ್ಮ 'ಟಾಯಿಮ ಟೇಬಲ'ನ್ನು ಮರಾಟಿಯಂತೆ ಕನ್ನಡದಲ್ಲಿಯೂ ಪ್ರಸಿದ್ಧ ಮಾಡಿ ತಮ್ಮ ಸ್ಟೇಶನಗಳ ಮೇಲೆ ಹಚ್ಚುವದಕ್ಕೆ ಸಮ್ಮತಿಸಿರುವರು. ಮೊದಲು ಇಂಗ್ಲಿಷ ಮತ್ತು ಮರಾಟಿಯಲ್ಲಿ ಮಾತ್ರ ಇದ್ದವು.

ತಾಳೀಕೋಟೆಯ ವಾರ್ತೆ.

ವಿಶೇಷದ ಪ್ರತಿನಿಧಿಯಿಂದ!

ಈ ಹೊತ್ತು (ತಾರೀಖು ೫—೧—೧೯೨೮) ಶನಿವಾರ ದಿವಸ ಈ ಊರಿಗೆ ಶ್ರೀ. ಬಿಂದು ಮಾಧವ, ಬರ್ಲಿ ಎಂಬವರು ಸಾಯಂಕಾಲಕ್ಕೆ ಬಂದರು. ಮರುದಿವಸ ಶ್ರೀಮತ್ ಪ್ರಾಸಗತ ಸ್ವಾಮಿ ಮಠದ ದೊಡ್ಡ ಪಟಾಂಗಣದಲ್ಲಿ "ಕರ್ನಾಟಕದ ಏಕೀಕರಣ" ಈ ವಿಷಯಕ್ಕೆ ಸುಶ್ರಾವ್ಯವಾದ ವ್ಯಾಖ್ಯಾನವನ್ನು ಕೊಟ್ಟರು. ಮತ್ತು "ಬಾಗಲಕೋಟೆ ವ್ಯಾಯಾಮ ಮಂದಿರಕ್ಕೆ" ಸಾರ್ವಜನಿಕ ಸ್ಥಿತಿಯು ಏರಿಳಿತಗಳು. (೫) ಶ್ರೀ ಪ್ರಾಸ್ಥಿತ ಮಠದ ಸಂಸ್ಕೃತ ಪಾಠಶಾಲಾವಲೋಕನ ಇತ್ಯಾದಿ.

ಈ ರೀತಿಯಾಗಿ ಶ್ರೀ. ಬರ್ಲಿಯವರು ಆಡಿದ, ಮಾಡಿದವುಗಳ ಮೇಲಿಂದ ಹೊಳೆದುಳಿಯುವ ಕೊಳವೆಂದರೆ— ಈ ಬಲ್ಲವನು ಈಸಬೇಕು ಬಾಳುಗುವದು ಯೋಗ್ಯವೇ? ಏನದು ಕಾನೆ? ಎಂದು ಪ್ರತಿಯೊಬ್ಬನ ಮನದಲ್ಲಿ ಮೂಡಿತು.

—ಸಭಿಕ ವಾಸುದೇವ.

ಕನ್ನಡಿಗರೇ ಲಕ್ಷದಲ್ಲಿರಲಿ!

ಫೆಬ್ರುವರಿ ೩ನೇ ತಾರೀಖು

ನಾಳಿನ ಶುಕ್ರವಾರವೇ ಆಗುವದು! ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ನೋಗಿನಿಂದ, ಸೈಮನ್ನ ಕಮೀಶನ್ನವ, ಹೊರಲಾರದಂಥ ಭಾರಯಮ್ಮಿಯನ್ನು ಹೊತ್ತು, ಭರತಖಂಡದ ಭೂಮಿಗೆ ಆದಿನ ಬರುವದು 'ಭಾರತೀಯರೆಲ್ಲ ಬಹಿಷ್ಕಾರವನ್ನು ಹಾಕಬೇಕೆಂದು, ಒನ್ಮನಸ್ಸಿನಿಂದ, ಎಲ್ಲ ರಾಜಕೀಯ ಪಂಗಡಗಳೂ, ಶ್ರೀ ಕಾಶೀ ಕ್ಷೇತ್ರದಲ್ಲಿ ನಿರ್ಣಯಿಸಿದಂತೆ, ಆ ದಿನ, ಕರ್ನಾಟಕದಲ್ಲಿಯ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ಕೆಳಗೆ ಕಾಣಿಸಿದಂತೆ ಬಹಿಷ್ಕಾರ ಕಾರ್ಯಕ್ರಮವನ್ನು ಜರುಗಿಸಲು ಅಲ್ಲಲ್ಲಿಯ ಮುಖಂಡರು ಮರೆಯಕೂಡದು:—

(೧) ಬೆಳಿಗಿನಿಂದ ಸಾಯಂಕಾಲದ ಸಭೆ ಜರುಗುವವರೆಗೆ ಊರಲ್ಲೆಲ್ಲ ಹರ್ತಾಳವು ಆಚರಿಸಲ್ಪಡಬೇಕು.

(೨) ಮುಂಜಾನೆ ಕಮೀ ನಿಶಾನಿಗಳೊಂದಿಗೆ ಊರಲ್ಲಿ ಪೆರವಣಿಗೆ ಹೊರಡಬೇಕು.

(೩) ಸಾಯಂಕಾಲ ೪-೩೦ ಗಂಟೆಗೆ ಸರಿಯಾಗಿ ಸಾರ್ವಜನಿಕ ಸಭೆಮಾಡಿ ಕೆಳಗೆ ಕಾಣಿಸಿದ ಎಂಟು ಠರಾವುಗಳನ್ನು ಅಲ್ಲಿ ಪಾಸುಮಾಡಬೇಕು:—

(೧) ಭಾರತೀಯರ ಮತವನ್ನು ಸಂಪೂರ್ಣವಾಗಿ ಮೂಲಿಗೊತ್ತಿ ಸೈಮನ್ ಕಮೀಶನ್ನು ಸ್ಥಾಪಿಸಲ್ಪಟ್ಟಿದ್ದನ್ನು ..... (ಇಲ್ಲಿ ಅವಶ್ಯ ಹೆಸರು ಬರೆಯಬೇಕು.) ನಾಗರಿಕರ ಈ ಸಭೆಯು ನಿಷೇಧಿಸುತ್ತದೆ; ಮತ್ತೂ ಈ ಕಮೀಶನ್ನಿಕ್ಕೆ ಯಾವ ರೀತಿಯಿಂದಲೂ ಯಾವ ಕಾಲಕ್ಕಿಸ್ಥಿ ಸಹಾಯ ಮಾಡತಕ್ಕದ್ದಲ್ಲೆಂದು ನಿಶ್ಚಯ ಪೂರ್ವಕವಾಗಿ ಪ್ರಕಟ ಮಾಡುತ್ತದೆ. ಕಾನ್ಸಿಲ್ ಆಫ್ ಸ್ಟೇಟ್, ಅಸೆಂಬ್ಲಿ ಪಾರೂ ಪ್ರಾಂತಿಕ ಕಾನ್ಸಿಲ್‌ಗಳಲ್ಲಿ ಈ ಕಮೀಶನ್ನಿಕ್ಕೆ ಸಹಾಯಕಾರಿಯಾದ ಉಪಮಂಡಲಗಳು ಸ್ಥಾಪಿಸಲ್ಪಡದಂತೆ ಪ್ರತಿಯೊಂದು ರೀತಿಯಿಂದಲೂ ಆತಂಕವನ್ನು ಉಂಟುಮಾಡಬೇಕೆಂದು ಕರ್ನಾಟಕ ಪ್ರಾಂತದ ಪತಿಯಿಂದ ಆಲಿ ಕಾಯದೇ ಮಂಡಲಗಳಲ್ಲಿರುವ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಗೆ ಈ ಸಭೆಯು ಆಜ್ಞೆ ಕೊಡುತ್ತದೆ.

(೨) ಭರತಖಂಡದ ರಾಜ್ಯ ಸಂಘಟನೆಯು ಭಾರತೀಯರಿಂದಲೇ ಯೋಚಿಸಲ್ಪಡಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ; ಮತ್ತೂ ಇಂಥ ಯೋಜನೆಯನ್ನು ಸಿದ್ಧಗೊಳಿಸಲಿಕ್ಕೆ ಸರ್ವ ಪಂಗಡಗಳ ವಿಶೇಷ ಸಭೆಯನ್ನು ಕೂಡಿಸಬೇಕೆಂಬುದಾಗಿ ಬಂದ ಸೂಚನೆಯನ್ನು ಸಮರ್ಥಿಸುತ್ತದೆ.

ಲುಗಳ ಹಾಗು ಆದರ ಪೂರಾಹಿತಿಯನ್ನು ಯಥಾತಥ್ಯವಾಗಿ ತಿಳಿಸಿಕೊಟ್ಟರು. ಒಟ್ಟಿಗೆ ಬಾಗಲಕೋಟೆಯಲ್ಲಿ ಕೂಡುವ ಕರ್ನಾಟಕವ ಏಕೀಕರಣ ಮಹಾಸಭೆಗೆ ಕನ್ನಡಿಗರೆಲ್ಲರೂ ದಯಮಾಡಿಸಿರೆಂದು ಕರೆಯಲು ಬಂದಿರುವೆವೆಂದು ಮನದುಂಬಿ ಬೀಡಿಕೊಟ್ಟರು.

ಇದಲ್ಲದೆ ಶ್ರೀ. ಬರ್ಲಿಯವರು ಕೆಳಗೆ ಕಾಣಿಸಿದ ಸಹಜ ಜ್ಞಾನುಕರಣೀಯ ಮಹತ್ಕೃತ್ಯಗಳನ್ನು ಮಾಡಿದರು.

(೧) ಶಿಲಾಲಿಪಿಗಳ ಸಂಶೋಧನೆ. (೨) ಐತಿಹಾಸಿಕ ಮಾಹಿತಿ. (೩) ಅಸ್ಪೃಶ್ಯರ ಜಮಾಖರ್ಚಿನ ವೈಶಿಷ್ಟ್ಯ. (೪) ಊರ

ಕಾಯಂ ರೈತವಾರಿ.

ಬಂಗಾಲದಲ್ಲಿದ್ದ ಕಾಯಂ ರೈತವಾರಿ ಪದ್ಧತಿಯು ಗುಣಾವಗುಣಗಳನ್ನೂ, ಅದರಿಂದ ಜಮೀನದಾರರಿಗೂ, ರೈತರಿಗೂ, ಸರಕಾರಕ್ಕೂ ಆದ ಲಾಭ ಹಾನಿಗಳನ್ನೂ ವಿಚಾರಿಸಿ, ಈ ರೈತವಾರಿಯ ತೆರಿಗೆಯನ್ನು ಹೆಚ್ಚಿಸುವದು ಕಷ್ಟವಿದೆಯೋ ಹೇಗೆಂಬುದನ್ನು ಗೊತ್ತುಪಡಿಸಲಿಕ್ಕೆ ಒಂದು ಉಪಮಂಡಲವನ್ನು ಸ್ಥಾಪಿಸಬೇಕೆಂದು ಬಂಗಾಲ ಕಾಯದೇ ಮಂಡಲದಲ್ಲಿ ಶ್ರೀ ಬ್ಯಾನರ್ಜಿಯವರು ಒಂದು ಠರಾವನ್ನು ತರತಕ್ಕವರಿದ್ದಾರೆ. ಇದರಿಂದ ಬಂಗಾಲ ಪ್ರಾಂತದಲ್ಲಿ ಚಳವಳಿಯೇಳುತ್ತಲಿದೆ.

ಭಟ್ಕಳ ಬಂದರ.

ಭಟ್ಕಳ ಒಂದಾನವು ಪ್ರಾಚೀನ ಕಾಲದಿಂದ ಖ್ಯಾತಿಹೊಂದಿರುವುದು. ಭಟ್ಕಳದಲ್ಲಿ ಪ್ರಸಿದ್ಧ ಮೂರ್ ಜಾತಿಯ ವ್ಯಾಪಾರಿಗಳಿದ್ದರು. ೧೬ ನೇ ಶತಮಾನದ ಆರಂಭದಲ್ಲಿ ಅರ್ಮುಝ್ ದ್ವೀಪಕ್ಕೂ ಭಟ್ಕಳಕ್ಕೂ ದೊಡ್ಡ ವ್ಯಾಪಾರವು ನಡೆಯುತ್ತಿದ್ದಿತು. ಆಗ ಕುದುರೆಯ ವ್ಯಾಪಾರವು ಅತ್ಯಂತ ಮಹತ್ವದ್ದಾಗಿತ್ತು. ಈ ಬಂದರದಿಂದ ಅಕ್ಕಿ, ಸಕ್ಕರೆ, ಕಬ್ಬಿಣ ಮುಂತಾದ ಸರಕುಗಳ ಬಹು ದೊಡ್ಡ ಪ್ರಮಾಣದಿಂದ ಹಿಂದುಸ್ಥಾನಕ ಎಲ್ಲ ಭಾಗಗಳಿಗೂ ಪರದೇಶಕ್ಕೂ ಹೋಗುತ್ತಿದ್ದುವು. ಈ ಬಂದರವು ವಿಜಯನಗರದ ರಾಜ್ಯಕ್ಕೆ ಸೇರಿತ್ತು. ಆಗ್ಗೆ ಭಟ್ಕಳಕ್ಕೆ ಒಬ್ಬ ಮಾಂಡಲಿಕನಿದ್ದನು. ಅದೇ ಸಮಯಕ್ಕೆ ಒಂದ ಇಟಲಿಯ ಪ್ರವಾಸಿಯೊಬ್ಬನು ಭಟ್ಕಳವು ಘನತೆಯನ್ನೆಯ್ದಿದ ನಗರವೆಂದೂ ಇಲ್ಲಿಯ ವ್ಯಾಪಾರವು ಪ್ರಚಂಡವಾಗಿರುವುದೆಂದೂ ವರ್ಣಿಸಿದ್ದಾನೆ. ೧೫೮೫–೧೬೩೦ ರವರೆಗೆ ವಿಜಯನಗರದ ಕೃಷ್ಣರಾಜನ ಕಾಲದಲ್ಲಿ ಕುದುರೆಯ ವ್ಯಾಪಾರವೆಲ್ಲ ಭಟ್ಕಳ ಮುಖಾಂತರವಾಗಿಯೇ ನಡೆಯುತ್ತಿದ್ದಿತು. ೧೬೧೪ ರಲ್ಲಿ ಬಂದ ಪೋರ್ತುಗೀಸ ಪ್ರವಾಸಿಯು ಭಟ್ಕಳವು ದೊಡ್ಡ ಪಟ್ಟಣವೆಂದೂ ಭಟ್ಕಳದಲ್ಲಿ ವ್ಯಾಪಾರಚತುರರೂ ಸುಸ್ವಭಾವರೂ ಆದ ಮೂರ್ ಜನರಿರುತ್ತಿರುವರೆಂದೂ ವರ್ಣಿಸಿದ್ದಾನೆ. ೧೬೨೦ ರ ಸುಮಾರಕ್ಕೆ ಬಂದ ಡಚ್ ಪ್ರವಾಸಿಯೊಬ್ಬನು ಇದು ಉತ್ಕೃಷ್ಟ ಸ್ಥಳವೆಂದೂ ದೊಡ್ಡ ವ್ಯಾಪಾರಸ್ಥಳವೆಂದೂ ಅಂದಿದ್ದಾನೆ. ೧೬೫೩ ರಲ್ಲಿ ಬ್ರಿಟಿಷರೂ ವ್ಯಾಪಾರಕ್ಕಾಗಿ ಭಟ್ಕಳದಲ್ಲಿ ಉಗ್ರಾಣವನ್ನು ಕಟ್ಟಿಸಿದ್ದರು. ೧೬೫೦ ರಲ್ಲಿ ಡಚ್ ಪ್ರವಾಸಿಯೊಬ್ಬನು ಹೊನ್ನಾವರ ಭಟ್ಕಳ-ಇವೆರಡೇ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧ ಪಟ್ಟಣಗಳೆಂದು ಅಂದಿರುತ್ತಾನೆ. ಭಟ್ಕಳವು ಪ್ರಸಿದ್ಧಪಟ್ಟಣ ಮತ್ತು ಬಂದರವಾಗಿತ್ತೆಂಬ ಬಗ್ಗೆ ಇನ್ನೂ ಅನೇಕ ಐತಿಹಾಸಿಕ ಆಧಾರಗಳು ದೊರೆಯುತ್ತಿವೆ

—ಕರ್ನಾಟಕ ಭೂಷಣ.

ಇಹವೃತ್ತ.

ಈಗಾಗಲೇ ಸೆಕೆಯು ಹೆಚ್ಚಾಗಿದೆ.

ದತ್ತಾತ್ರೇಯ ನಾಟಕ ಮಂಡಳದವರಿಲ್ಲಿಗೆ ಬಂದಿದ್ದು ಶಿವಾನಂದ ನಾಟಕ ಗೃಹದಲ್ಲಿ ತಮ್ಮ ಪ್ರಯೋಗಗಳನ್ನು ಪ್ರಾರಂಭಿಸಿದ್ದಾರೆ. ನಿನ್ನೆ ದಿನ " ಚಪತೀ ಚಂದ್ರ " ವು ಆಡಲ್ಪಟ್ಟಿತು. ಸುದ್ದಿ ಬಹುದಿನಗಳಿಂದ ಬಾಗಲಕೋಟೆಗೆ ಇವರು ಬರುವರು ಬರುವರೆಂಬ ಯಿದ್ದರೂ ಬಂದಿರಲಿಲ್ಲ. ಆದ್ದರಿಂದ ಈಗ್ಗೆ ಬಂದ ಇಲ್ಲಿಯ ರಸಿಕರು ಇವನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ. ಸುಶಿಕ್ಷಿತರೂ ಪದವಿಧರರೂ ಆದ ಶ್ರೀ. ಕುಲಕರ್ಣಿ ನಾರಾಯಣರಾಯರನ್ನು ಈ ಮಂಡಲದವರು ವ್ಯವಸ್ಥಾಪಕರನ್ನಾಗಿ ಮಾಡಿದ್ದಾರೆ. ಬಿ. ಎ. ಆದವರಿಗೆ ವ್ಯವಸ್ಥಾಪಕರ ಕೆಲಸವನ್ನು ಕೊಟ್ಟ ಕನ್ನಡ ಕಂಪನಿಯೆಂದರೆ ಇದೇ ಮೊದಲನೇಯದಿಂದೆನ್ನ ಬಹುದು.

ಬಸವೇಶ್ವರ ಹೈಸ್ಕೂಲಿನ ಶಿಕ್ಷಕರಿಗೆ ದಿಸೆಂಬರ ತಿಂಗಳ ಪಗಾರವು ಈ ವರೆಗೂ ದೊರೆತಿಲ್ಲವಂತೆ! ಇದು ಸುವ್ಯವಸ್ಥೆಯ ಲಕ್ಷಣವೋ ?

ಶುಕ್ರವಾರ ಮುಂದಿನೇ ತಾ॥ ನಲ್ಲಿ ಆಚರಿಸುವ ಬಹಿಷ್ಕಾರದ ಬಗ್ಗೆ ಊರ ಮುಂದಾಳುಗಳಿನ್ನೂ ಅಷ್ಟೊಂದು ಚಟುವಟಿಕೆಯಿಂದ ಕೆಲಸ ಮಾಡಲು ತೊಡಗಿಲ್ಲ! ಕಾರಣವೇನು ? ತಾಲೂಕಾ-ಕಾಂಗ್ರೆಸ್ಸ ಕಮೀಟಿಯು ಮಲಗಿರುವದೋ ?

ಕರ್ನಾಟಕ ಏಕೀಕರಣ ಪರಿಷತ್ತಿನ ಸ್ವಾಗತ ಸಭೆಯು ತಾ॥ ೩೦ ಸೋಮವಾರ ಸಂಜೆಯ ೫॥ ಗಂಟೆಗೆ ಸೊಲ್ಲಾಪುರ ಬ್ಯಾಂಕದಲ್ಲಿ ಕೂಡುವದು. ಆಗ್ಗೆ ಮಹತ್ವದ ಅನೇಕ ವಿಷಯಗಳ ನಿರ್ಣಯವಾಗುವದಿದ್ದರಿಂದ ಎಲ್ಲ ಸಭಾಸದರೂ ದಯವಿಟ್ಟು ಸಭೆಗೆ ಬರಬೇಕೆಂತಾಗಿ ಕಾರ್ಯದರ್ಶಿಗಳ ವಿಜ್ಞಾಪನೆ.

ಧಾರವಾಡದಸತ್ಕ.

ಡಾಕ್ಟರ ನಾಡಿಗೇರ ಯಶವಂತರಾಯರು ಕಾಲೇಜು ಪ್ರಾರಂಭವಾದ್ದರಿಂದ ತಮ್ಮ ಕೇಸದ ಮೇಲೆ ಹಾಜರಾಗಲಿಕ್ಕೆ ಇಲ್ಲಿಂದ ೧೩ನೇ ತಾರೀಖಿಗೆ ಮುಂಬಯಿಗೆ ತೆರಳಿದರು.

ಶ್ರೀ ವಿನಾಯಕ ಮಹಾರಾಜ ಮಸೂರಕರ ಇವರ ಶ್ರೀಮದ್ಭಗವದ್ಗೀತೆಯ ಮೇಲಿನ ಪ್ರವಚನಗಳು ಮುಗಿದಪ್ಪೆ. ಮಂಗಳವಾರ ಸುಮಾರು ೧೫೦೦ ಜನರ ಭೋಜನವಾಯಿತು.

ಭಗವದ್ಭಕ್ತ ಪುರಂದರದಾಸರ ಪುಣ್ಯತಿಥಿಯ ನಿಮಿತ್ತವಾಗಿ ವೆ॥ ಪಾಮದಿ ರಾಘವೇಂದ್ರಾಚಾರ್ಯರು ಕಳೆದ ರವಿವಾರ ಸುಧ್ಯಾನ್ನಕ್ಕೆ ಬ್ರಾಹ್ಮಣ ಭೋಜನ ಮಾಡಿಸಿದರು. ಸಾಯಂಕಾಲಕ್ಕೆ ಊರಲ್ಲಿ ದಾಸರ ಭಾವಚಿತ್ರದ ಮೆರವಣಿಗೆಯಾಗಿ, ಶ್ರೀ ವಿಠ್ಠಲ ಮಂದಿರದಲ್ಲಿ ಆಚಾರ್ಯರವರ ಕೀರ್ತನವೂ ಆಯಿತು. ಕರ್ನಾಟಕ ವೃತ್ತ ಕಾರ್ಯಾಲಯದಲ್ಲಿಯೂ ಈ ಪುಣ್ಯತಿಥಿಯು ಆಚರಿಸಲ್ಪಟ್ಟಿತು.

ಹಿಂದುಸ್ಥಾನ.

ಅಜಮಲಖಾನರ ನಿಧನದ ಒಗ್ಗೆ ಪರದೇಶದಿಂದ ಸಹ ಸಹಾನುಭೂತಿಪರವಾದ ಪತ್ರಗಳು ಅವರ ಬಾಗನಾದ ಡಾ. ಎಮ್. ಎ. ಅನಸಾರಿಗೆ ಬಂದಿವೆ ಹಿಂದುಸ್ಥಾನದ ವೈಸರಾಯರಾಗಿದ್ದ ಲಾರ್ಡ ಹಾರ್ಡಿಂಜರೂ ಒಂದು ಪತ್ರವನ್ನು ಬರೆದಿರುವರು.

ದಿನಾಣೀ ಮತ್ತು ಮುಲ್ಕೀ ಖಾತೆಗಳನ್ನು ಬೇರೆ ಬೇರೆ ಮಾಡಬೇಕೆಂಬ ತಾನು ಮಧ್ಯಪ್ರಾಂತದಲ್ಲಿ ಪಾಸಾಗಿ, ಅದಕ್ಕಾಗಿ ೯ ಲಕ್ಷರೂ ಗಳು ತೆಗೆದಿಡಲ್ಪಟ್ಟಿವೆ.

ವಕೀಲರು ಹೆಚ್ಚಿದ್ದಲ್ಲಿ ಕಲಹಗಳೂ ಹೆಚ್ಚಿರಲೇ ಬೇಕು.

ಮೈಸೂರ ಮಹಾರಾಜರ ಸೆಕ್ರೆಟರಿಗಳಾದ ಸರ ಜಾರ್ಜ ಸಿ ಟಾಪಂಟರರು ಹಾಸನ ಜಿಲ್ಲಾ ಪರಿಷತ್ತಿನ ತಮ್ಮ ಅಧ್ಯಕ್ಷರ ಭಾಷಣದಲ್ಲಿ ಹೀಗೆನ್ನುತಿದ್ದರು:— " ವಕೀಲರು ಎಲ್ಲೆಲ್ಲಿ ಹೆಚ್ಚಾಗಿರುವರೋ ಅಲ್ಲೆಲ್ಲ ಕಲಹಗಳೂ, ಅಪರಾಧಗಳೂ, ಅನ್ಯಾಯವೂ ತುಂಬಿ ತುಳುಕುತ್ತಿದೆಂಬದು ಕೆಟ್ಟಿಟ್ಟವಾತು! ವಕೀಲರ ಕಿಸೆಯಲ್ಲಿ ಬೀಳುವ ಫೀರೂಪಾಯಿದ ಒಂದು ಕಾಸಿನಸಹ ರಾಷ್ಟ್ರದ ಅಭ್ಯುದಯವನ್ನು ಹೆಚ್ಚಿಸಲಾರದು!! " ಈ ಭಾಷಣದಿಂದ ಮೈಸೂರಲ್ಲಿಯು ವಕೀಲರು ಕುಪಿತರಾಗಿದ್ದಾರೆ. ಮೈಸೂರ ವಕೀಲರ ಸಂಘದವರು ನಿಷೇಧಪ್ರದವಾದ ಠರಾವನ್ನು ಈಗಾಗಲೇ ಮಾಡಿದ್ದು, ಉಳಿದ ಜಿಲ್ಲೆಗಳ ವಕೀಲರು ಸಹ ಇವರ ಅನುಕರಣವನ್ನು ಮಾಡತೊಡಗಿದ್ದಾರಂತೆ!

ಕಾಯದೇ ಮಂಡಲಗಳೂ, ಬಹಿಷ್ಕಾರದ ಠರಾವುಗಳೂ.

ಮಧ್ಯಪ್ರಾಂತ ಕೌನ್ಸಿಲ್ಲದಲ್ಲಿ ಸೈಮನ್ನ ಕಮೀಶನ್ನಿಕ್ಕೆ ಬಹಿಷ್ಕಾರ ಹಾಕುವ ಠರಾವು ಪಾಸಾಗಿದೆ

ದಿಲ್ಲಿಯ ಅಸೆಂಬ್ಲಿಯಲ್ಲಿ ಈ ಬಹಿಷ್ಕಾರದ ಬಗ್ಗೆ ಅನೇಕ ಸೂಚನೆಗಳು ಹೋಗಿದ್ದರೂ, ಅವೆಲ್ಲ ಸರಿಯಾದ ಪದ್ಧತಿಯಲ್ಲಿ ಇಲ್ಲೆಂಬ ಕಾರಣದಿಂದ ಅಧ್ಯಕ್ಷರು ಅವನ್ನು ಕಾರ್ಯಕ್ರಮದಲ್ಲಿ ಸೇರಿಸಲು ನಿರಾಕರಿಸಿದರು. ಈ ಬಹಿಷ್ಕಾರದ ಸರಿಯಾದ ಪದ್ಧತಿಯದೊಂದು ಸೂಚನೆಯನ್ನು ತಳಸತೊಡಗಿದ್ದಾರಂತೆ!

ಮುದ್ರಾಸ ಕೌನ್ಸಿಲ್ಲದಲ್ಲಿಯೂ ಈ ಠರಾವು ವಾದವಿವಾದಕ್ಕೆ ಬಂದಿತ್ತು. ಇದನ್ನು ಕೇಳಲಿಕ್ಕೆ ಜನರು ಕಿಕ್ಕಿರಿದು ಸಭೆಗೆ ಬಂದಿದ್ದರು. ಗವರ್ನರರು ಸಹ ಅದಿನ ಅಲ್ಲಿಗೆ ಬಂದಿದ್ದರಂತೆ! ಕಡೆಗೆ ೬೦ ವಿರುದ್ಧ ೫೫ ಮತದಿಂದ ಠರಾವು ಪಾಸಾಯಿತು!

ಕರ್ನಾಟಕದ

ವಿಕೀಕರಣವು.

(ಕರ್ನಾಟಕ ವಿಕೀಕರಣದ ವಿಷಯವು ಈಗ್ಗೆ ಹೆಚ್ಚು ಹೆಚ್ಚು ಪ್ರಚಾರಕ್ಕೊಂದುತ್ತಲಿದೆ ಜನರಾದರೂ ಈ ಜಗ್ಗೆ ಎಲ್ಲ ಸಂಗತಿಗಳನ್ನು ವಿಶದವಾಗಿ ತಿಳಿದುಕೊಳ್ಳಲು ಆತುರಪಡುತ್ತಲೂ ಇರುವರು. ಆದುದರಿಂದ ಈ ವಿಷಯವನ್ನು ಆದಷ್ಟು ವಿಸ್ತೃತವಾಗಿ ವಿವೇಚಿಸಬೇಕೆಂದು ನಿರ್ಧರಿಸಿ ಈ ಲೇಖನಾಂಕಗಳನ್ನು ಪ್ರಾರಂಭಿಸಿದ್ದೇವೆ. —ಸಂಪಾದಕ ಕನ್ನಡಿಗ.)

ಪ್ರಕರಣ ೧.

ಭಾಷಾನ್ವಯ ಪ್ರಾಂತರಚನೆಯ ತತ್ವದ ಇತಿಹಾಸವು.

೧೮೫೭ ನೇ ಇಸ್ವಿಯಲ್ಲಿ ಆದ ಬಂಡಾಯದವರೆಗೆ ಹಿಂದುಸ್ಥಾನದೊಳಗೆ ಅರ್ವಾಚೀನ ಕಾಲದಲ್ಲಿ (ಅಂದರೆ ೧೮ನೇ ಶತಮಾನದಿಂದ) ಯುದ್ಧಗಳೇ ಹೆಚ್ಚಾಗಿ ನಡೆಯುತ್ತಿದ್ದವು. ಆದುದರಿಂದ ಬೌದ್ಧಿಕ ವಿಚಾರಗಳಿಗೆ ಆಗ್ಗೆ ಅವಕಾಶವಿರಲಿಲ್ಲ. ಆದರೆ ೧೮೫೭ ರ ನಂತರ ಯುದ್ಧ ಪ್ರಸಂಗಗಳು ನಮ್ಮಲ್ಲಿ ಮಾಯವಾದವು. ಮುಂದೆ ವಿಶ್ವವಿದ್ಯಾಲಯಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟು, ಪಾಶ್ಚಾತ್ಯ ಶಿಕ್ಷಣ ಪ್ರಸಾರವೂ ಭರದಿಂದ ಸಾಗಿತು. ಈ ಶಿಕ್ಷಣದ ಲಾಭಕೊಂದಿದವರಲ್ಲನೇಕರು ಸರಕಾರೀ ನೌಕರಿಗೇ ಹೆಚ್ಚಾಗಿ ಹೋಗಿದ್ದರೂ, ರಾಷ್ಟ್ರಸಂಘಟನೆಯ ಕಾರ್ಯದ ಭಾರವನ್ನು ಅನೇಕ ಮೇಧಾವಿಗಳಾದ ರಾಷ್ಟ್ರಪುರುಷರು ತಮ್ಮ ಹೆಗಲಮೇಲೆ ಹೊತ್ತುಕೊಂಡರು. ಅಂತೆಯೇ ೧೯ನೇ ಶತಮಾನದ ಕಡೆಯ ಭಾಗದಲ್ಲಿ ಸಮಾಜ ಸುಧಾರಣೆ, ಆರ್ಯ ಧರ್ಮದ ಪುನರುದ್ಧಾರ, ಶಿಕ್ಷಣ ಪ್ರಸಾರ, ಸ್ವಾತಂತ್ರ್ಯದ ಸಂಗ್ರಾಮ ಮುಂತಾವುಗಳ ಚಳವಳಿಗಳು ಭರತಖಂಡದಲ್ಲಿ ಉದ್ಭವವಾದವು. ಈಶ್ವರ ಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ರಾನಡೆ, ಗೋಖಲೆ, ಟಿಳಕ, ವಿವೇಕಾನಂದ, ರಾಮತೀರ್ಥರಂಥ ಮಹಾವ್ಯಕ್ತಿಗಳೇ ಈ ಚಳವಳಿಗಳ ಪುರಸ್ಕರ್ತರು. ಭಾಷಾನ್ವಯ ಪ್ರಾಂತರಚನೆಯ ಚಳವಳವಾದರೂ ಇದೇ ಸಮಯದಲ್ಲಿಯೇ ಹುಟ್ಟಿತು. ಬಿಹಾರ ದೇಶವೇ ಇದಕ್ಕೆ ಮೂಲಸ್ಥಾನವು "ಒಬ್ಬಳೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ, ಅವಳ ಮೊಲೆಯ ಹಾಲನ್ನು ಕುಡಿದು ಬೆಳೆದ ಅಣ್ಣತಮ್ಮಂದಿರಲ್ಲಿರುವ ಐಕ್ಯಭಾವನೆಗಿಂತಲೂ ಹೆಚ್ಚಿನ ಐಕ್ಯಭಾವವು ಒಂದೇ ಭಾಷೆಯನ್ನಾಡುವ ಜನಾಂಗವವರಲ್ಲಿ ಹೆಚ್ಚಾಗಿ ನೆಲೆಗೊಳ್ಳುತ್ತದೆ." (To speak the same language constitutes closer union than to have drunk the same milk) ಎಂದು ಸುಪ್ರಸಿದ್ಧರಾದ ವ್ಯಾಳ್ಸಮಿಲ್ಲರ ಸಾಹೇಬರು ನುಡಿದು ದನ್ನು ಓದಿ, ಸ್ಫೂರ್ತಿಗೊಂಡ ಶ್ರೀ. ಮಹೇಶ್ವರ ನಾರಾಯಣರೇ ಈ ಭಾಷಾನ್ವಯ ಪ್ರಾಂತರಚನೆಯ ತತ್ವದ ಮೂಲ ಉತ್ಪಾದಕರು. ಇವರು ಬಿಹಾರದ ಮೆಚ್ಚಿನ ಮುಂದಾಳುಗಳಾಗಿದ್ದರು. ಅವರ ಕಾಲಕ್ಕೆ ಬಂಗಾಲೀ ಭಾಷೆಯೇ ಬಿಹಾರದಲ್ಲಿ ನೆಲೆಗೊಂಡಿತ್ತು. ಯಾಕೆಂದರೆ ಬಂಗಾಲ ಪ್ರಾಂತದ ಆಡಳಿತದಲ್ಲಿ ಬಿಹಾರದ ಹೆಚ್ಚು ಭಾಗವು ಸೇರ್ದಡೆಯಾಗಿತ್ತು. ಇದರಿಂದ ಬಿಹಾರೀ ಜನರು ಮನೆಯಲ್ಲಿ ತಮ್ಮ ಮಾತೃಭಾಷೆಯಾದ ಬಿಹಾರಿಯನ್ನೇ ಮಾತಾಡುತ್ತಿದ್ದರೂ ಸಹ, ಶಾಲೆಯಲ್ಲಿ ಬಂಗಾಲೀ ಕಲಿಯ ಬೇಕಾಗುತ್ತಿತ್ತು. ಕೊರ್ಟಿನಲ್ಲಿ ಬಂಗಾಲೀ ಭಾಷೆಯೇ ಮುಸುಕಿತ್ತು. ಸರಕಾರೀ ಭಾಷೆಯೂ ಬಂಗಾಲೀ ಆಗಿತ್ತು! ಸರಕಾರದ ದೊಡ್ಡ ದೊಡ್ಡ ಅಧಿಕಾರಗಳಿಗೂ ಬಂಗಾಲದಲ್ಲಿ ಶಿಕ್ಷಣ ಪಡೆದ ಬಂಗಾಲೀ ಮಾತೃ ಭಾಷೆಯುಳ್ಳ ಜನರುಗಳೇ ವಿಶೇಷವಾಗಿ ಇರುತ್ತಿದ್ದರು! ಆದುದರಿಂದ ಬಿಹಾರಿಗಳು ತಮ್ಮ ನಾಡಾದ ಬಿಹಾರದಲ್ಲಿಯೇ ತಮ್ಮ ಮಾತೃಭಾಷೆಗಿಂತ ಬಂಗಾಲಿಭಾಷೆಗೇ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತಲಿದ್ದಿತು. ಕಲಕತ್ತೆಯೇ ರಾಜಧಾನಿಯಾಗಿದ್ದ ದರಿಂದ ಹೈಕೋರ್ಟ ಕೆಲಸಗಳಿಗೂ ಶ್ವವಿದ್ಯಾಲಯ ಶಿಕ್ಷಣಕ್ಕೂ, ಮತ್ತೆ ಯಾವದಾದರೂ ಕಾರ್ಯಸಾಧನೆಗೂ ಬಂಗಾಲೀ ಭಾಷೆಯನ್ನು ಕಲಿಯಲೇ ಬೇಕಾಗುತ್ತಲಿದ್ದಿತು. ಇದರಿಂದ ಬಿಹಾರೀ ಭಾಷೆಯ ವಿದ್ಯಾಯವು ವಿಕಾಸಕೊಳ್ಳಲು ಅತಂಕವಾಗುತ್ತಲಿದ್ದಿತು; ಬಿಹಾರಿಗಳು ಪ್ರಸಿದ್ಧಿಗೆ ಒಲಿಯಲು ಅವಕಾಶವೂ ದೊರೆಯುತ್ತಿರಲಿಲ್ಲ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಈಗಿನ ಕನ್ನಡಿಗರ ಸ್ಥಿತಿಯಂತೆಯೇ ಅವರ ಸ್ಥಿತಿಯಿದ್ದಿತು. ಈ ರಾಷ್ಟ್ರಘಾತುಕವಾದ ಶೋಚನೀಯ ಪರಿಸ್ಥಿತಿಯನ್ನು ಒದಲಾಯಿಸುವ ವಿಚಾರದಲ್ಲಿ ಅಲ್ಲಿಯ ಮುಂದಾಳುಗಳು ಬಿದ್ದಾಗ, ಕೈ ಮಹೇಶ್ವರ ನಾರಾಯಣರಾಯರು ಭಾಷಾನ್ವಯ ಪ್ರಾಂತರಚನೆಯ ಯೋಜನೆಯನ್ನು ೧೯೧೭ನೇ ಸನ್ ರಲ್ಲಿ ಜನರ ಮುಂದೆ ಇಟ್ಟರು. ಮುಂದೆ ಆ ಬಗ್ಗೆ ಪ್ರಯತ್ನಿಸಿ, ಬಿಹಾರಕ್ಕೆ ಪ್ರತ್ಯೇಕ ಪ್ರಾಂತವನ್ನು ದೊರಕಿಸುವ ಕುರಿತು ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಬಿಹಾರವು ಈಗ್ಗೆ ಸ್ವತಂತ್ರ ಪ್ರಾಂತವನ್ನು ದೊರಕಿಸಿದ್ದನ್ನು ನೋಡಿ ಸಂತೋಷಪಡಲು ಮಾತ್ರ ಶ್ರೀ. ನಾರಾಯಣರಾಯರಾಯರು ಜೀವಂತ ಇರದಿರುವದು ಮಾತ್ರ ಕೊಂಚ ವಿಷಾದಕರವಾಗಿದೆ. ಆಗದೂ ಬಿಹಾರಿಗಳು ಅವರ ಪ್ರಯತ್ನದ ಫಲಗಳನ್ನು ಈಗ್ಗೆ ಸೇವಿಸುತ್ತಿರುವದು, ಅವರ ಆತ್ಮಕ್ಕೆ ಶಾಂತಿಯನ್ನು ಕೊಡದೇ ಇರದು.

ಬಿಹಾರದಲ್ಲಿ ಈ ಪ್ರತ್ಯೇಕ ಪ್ರಾಂತರಚನೆಯ ಚಳವಳವು ನಡೆದಿದ್ದರೂ ಅದು ಕೇವಲ ಪ್ರಾಂತಿಕ ಪ್ರಶ್ನೆಯಾಗಿದ್ದಿತು. ಅದು ಅಖಿಲ ಭಾರತೀಯ ಪ್ರಶ್ನೆಯಾಗುವ ಸುಪ್ರಸಂಗವು ಆಗ್ಗೆ ಬರಲಿಲ್ಲ. ಅಖಿಲ ಹಿಂದುಸ್ಥಾನದ ಜನರಿದುರಿಗೆ ಈ ಪ್ರಶ್ನೆಯು ಬಂದುದು ಲೋಕಮಾನ್ಯ ಟಿಳಕರಿಂದ. ಅಖಿಲ ಭರತಖಂಡದ ಸುಶಿಕ್ಷಿತ ಸಮಾಜಕ್ಕೆ ಈ ವಿಷಯವನ್ನು ಪರಿಚಯಮಾಡಿಕೊಟ್ಟ ಶ್ರೇಯವು ಲೋಕಮಾನ್ಯರಿಗೇ ಹೋಗುವದು. ಅಧಿಕಾರ ವಿಭಾಗ-ಕಮೀಶನ್ (Royal commission on Decentralisation) ದ ಮುಂದೆ ಸಾಕ್ಷಿ ಕೊಡುವಾಗ್ಗೆ, ಅಧಿಕಾರವನ್ನು ವಿಭಾಗಿಸಬೇಕಿದ್ದರೆ ಭಾಷಾನ್ವಯ ಪ್ರಾಂತರಚನೆಮಾಡಿ, ಮಧ್ಯ ಸರಕಾರದ ಅಧಿಕಾರದ ಭಾರವನ್ನು ಆಯಾ ಪ್ರಾಂತಗಳಿಗೆ ಹಂಚಿಕೊಡಬೇಕೆಂದೂ, ಅಧಿಕಾರದ ವಿಭಾಗವು ನಿಜವಾಗಿ ಆಗಬೇಕಿದ್ದರೆ ಭಾಷಾನ್ವಯ ಪ್ರಾಂತರಚನೆಯೊಂದೇ ತರಣೋಪಾಯವೆಂದೂ ಲೋಕಮಾನ್ಯರು ಹೇಳಿದರು! ಲೋಕಮಾನ್ಯರಂಥ ಪ್ರತಿಭಾಸಂಪನ್ನರಿಂದ ಮಂಡಿಸಲ್ಪಟ್ಟ ಈ ವಿಧಾನವು ಆಗಿನ ಕಾಲದ ಎಲ್ಲ ಇಂಗ್ಲೀಷ ಪತ್ರಿಕೆಗಳಲ್ಲಿ ಚರ್ಚಿಸಲ್ಪಟ್ಟಿದ್ದರಿಂದ ಭರತ ಖಂಡದ ಎಲ್ಲ ಭಾಗದ ಜನರಿಗೂ ಈ ವಿಷಯದ ಪರಿಚಯವು ಆಯಿತು. ಮುಂದೆ ವಂಗಭಂಗದಿಂದ ಈ ಭಾಷಾನ್ವಯ ಪ್ರಾಂತ ರಚನೆಯ ತತ್ವದ ಪ್ರಸಾರವು ಭರತಖಂಡದಲ್ಲಿ ಬಹು ತೀವ್ರವಾಗಿ ಆಯಿತು ವಂಗಭಂಗದಿಂದ ಪ್ರಚಂಡವಾದ ಕ್ಷೋಭೆಯು ಅಖಂಡ ಭರತ ಖಂಡದಲ್ಲೆಲ್ಲ ಉಂಟಾಗಿದ್ದರಿಂದ, ಈ ಚಳವಳದಿಂದ, ಭಾಷಾನ್ವಯ ಪ್ರಾಂತ ರಚನೆಯ ಮಹತ್ವವು ಸ್ವಾಭಾವಿಕವಾಗಿ ಜನರಿಗೆಲ್ಲ ತಿಳಿದು ಬಂದಿತು. (ಮುಂದೆ ನಡೆಯುವದು.)

ವಾಙ್ಮಯ ಪರಿಚಯ.

ಆಯುರ್ವೇದ ಔಷಧಿ ಪ್ರಕಾಶಿಕೆ:—

ಲೇಖಕರು — ವೈದ್ಯ ಸುಬ್ರಾಯನ ವಿ. ಡಿ. ಪುರ ತ.

ಸಂಪಾದಕ ವೈದ್ಯಸಿಂಧು ಬೇಗಳೂರ–

ಪುಟಗಳ ಸಂಖ್ಯೆ ೨೫೬ ಬೆಲೆ ೮ ಆಣೆ, ಮುದ್ರಣ ಹಾಗೂ ಕಾಗದ ಗಳು ಆಷ್ಟೊಂದು ಅಂದವಾಗಿಲ್ಲ ಇದೊಂದು ಆಯುರ್ವೇದಸಧಿಗಳನ್ನು ಬೋಧಿಸುವ ಶಾಸ್ತ್ರೀಯ ವಿಷಯವಾದ ಪುಸ್ತಕವಾಗಿದೆ. ವಿಷಯ ಸಂಗ್ರಹದ ಪರಿಶ್ರಮದ ಮಾನದಿಂದ ಬೆಲೆಯು ಅಲ್ಪವಿದೆಯೆಂದು ಅನ್ನಲು ಅಭ್ಯಂತರವಿಲ್ಲ. ಇರಲಿ ಪಂಡಿತರವರ ಈ ಸಾಹಸಕ್ಕಾಗಿ ನಾವು ಅವರನ್ನು ಬಂಬಾ ಅಭಿನಂದಿಸುತ್ತೇವೆ. ಗ್ರಂಥದಲ್ಲಿ ಇದ್ದ ಶಾಸ್ತ್ರೀಯ ದೋಷಗಳು:— ಪುಟ ೧೩ ಸ್ವರ್ಜಕ್ಷೀರಿಗೆ ಶತಮೂರಿ ಎಂದು ಹೇಳಿದ್ದು ವಿಸಂಗತವಾಗಿದೆ ಪುಟ ೧೭ ಶಂಖವಾಷ್ಪಾಣಾರ್ಕವು ಇದರ ಪರಿ ಜ್ಞಾನವಿಲ್ಲ! ಕಷಾಯ ಪ್ರಕರ್ಣದಲ್ಲಿ– ಕಷಾಯದಲ್ಲಿ ಉಪಯೋಗಿಸ ಬೇಕಾದ ಏಕೌಷಧಿಗಳ ಯಾವ ಯಾವ ಅಂಗಗಳನ್ನು ಗ್ರಹಣಮಾಡ ತಕ್ಕದ್ದು ಯಾವುಗಳನ್ನು ತಾಜಾ ಉಪಯೋಗಿಸಬೇಕು. ಯಾವು ಗಳನ್ನು ಹಸಿದಾದ ಉಪಯೋಗಿಸಬೇಕು. ಅವುಗಳ ಪ್ರಮಾಣ ಇತ್ಯಾದಿ ಗಳ ಉಲ್ಲೇಖವು ಅವಶ್ಯವಾಗಿದೆ. ಭೂನಿಂಬಕ್ಕೆ- ಚಿರಾಯತವೆಂದು ಹೇಳಿದ್ದು ತಪ್ಪಾದದ್ದು. ಭೂನಿಂಬ- ನೆಲಬೇವು- ಶೃಂಗ್ಯಾದಿಚೂರ್ಣ ಇಲ್ಲಿ ಕಕ್ಕೇಕಾಯಿ ಎಂದು ಹೇಳಿದ್ದು ತಪ್ಪಾದದ್ದು. ಶೃಂಗಿ– ಕಾಸಡ ಶಿಂಗಿ ಪುಟ ೧೯- ಸ್ವರ್ಣಕ್ಷೀರೀರಸ– ಸತ್ಯಾನಾಸೀ ಹೇಮಕ್ಷೀರೀ– ಮುಳ್ಳು ಹಳದೀ ಗೊಳಗೊಳಿಕೆ, ಇತ್ಯಾದಿ. ಇದಕ್ಕೆ ದತ್ತೂರ ಎಂದು ಅರ್ಥಮಾಡಿದ್ದು ಕೇವಲ ತಪ್ಪಾದದ್ದು– ಘೃತವರ್ಗ:— ಇಲ್ಲಿ ಆಕಳ ತುಪ್ಪ, ಎಮ್ಮೆಯ ತುಪ್ಪ, ಆಡು, ಕುರಿ, ಕಾದುರೆ, ಇತ್ಯಾದಿ ಘೃತ ವರ್ಗಗಳ ಗುಣದೋಷಗಳನ್ನು ಹೇಳುವದೂ, ಮತ್ತು ಯಾವ ಯೋಗ ಗಳಲ್ಲಿ ಯಾವ ಘೃತವನ್ನು ಉಪಯೋಗಿಸಬೇಕೆಂಬ ಸರ್ವಸಾಧಾರಣ ಮಾಹಿತಿಯನ್ನು ಕೊಡುವದು ಅವಶ್ಯವಾದುದಲ್ಲದೇ ಪ್ರಾರಂಭದಲ್ಲಿ ಅನುಕ್ರಮಣಿಕೆಯನ್ನು ಸುಬೋಧವಾಗಿ ಮಾಡುವುದು ಮತ್ತೂ ಆಯಾ ಯೋಗಗಳ ಜೊತೆಯಲ್ಲಿ ಅನ್ಯಾ ಗ್ರಂಥಪ್ರಕಾಶೂಚನೆಯನ್ನು ಅಂಕಿತ ಮಾಡುವದೂ ಅವಶ್ಯಕವಾಗಿದೆ. ಮುಂದಿನ ಸಂಪುಟದಲ್ಲಿ ಮೇಲ್ಕಂಡ ವಿಷಯಕ್ಕೆ, ಮುದ್ರಣ, ಬೈಂಡಿಂಗು ಕಾಗದ ಮುಂತಾದವುಗಳ ಬಗ್ಗೆ ವಿಶೇಷ ಲಕ್ಷಕೊಡಬೇಕಾಗಿ ನಾವು ಪಂಡಿತರವರಿಗೆ ಪ್ರೇಮ ಪೂರ್ವಕವಾಗಿ ಸೂಚಿಸುತ್ತೇವೆ. ಒಟ್ಟಾಗಿ ಗ್ರಂಥವು ಸಕಲರಿಗೂ ಪರ ಸೀಯವಾಗಿದೆ ಇದರಲ್ಲಿ ಸಂದೇಹವಿಲ್ಲ

ದುರ್ಲಭವಾದ ನಮ್ಮ ಪ್ರಾಚೀನ ಸಾಹಿತ್ಯ ಭಾಂಡಾರ

೩೩೩ ಕೋಟಿ ಶ್ಲೋಕಗಳು ಒಬ್ಬನಿಗೇ ಕಂಠಸ್ಥವಾಗಿತ್ತೆ!!

ಪುರಾತನಕಾಲದಲ್ಲಿ ನಮ್ಮ ಭರತಖಂಡವಲ್ಲಿ ಕಲಾಕೌಶಲ್ಯ, ವಿದ್ಯಬುದ್ಧಿ, ಧನಧಾನಕ, ಶರೀರ ಸಂಪತ್ತು ಮುಂತಾದವುಗಳ ಕೊರತೆ ಇದ್ದಿಲ್ಲವಿಸ್ಟೇಅಲ್ಲದೆ, ಅನ್ಯ ಯಾವ ದೇಶವೂ ಇದನ್ನು ಸರಿಗಟ್ಟಲು ಸಮರ್ಥವಿದ್ದಿಲ್ಲವೆಂಬುದು ನಿರ್ವಿವಾದವಾದದ್ದು. ಆದರೆ ಕಾಲವಶ ದಿಂದ, ವಿಪರೀತಾವಸ್ಥೆಯು ಪ್ರಾಪ್ತವಾಗಿ, ನಮ್ಮ ಆ ಪ್ರಾಚೀನ ವೈಭವವನ್ನು ಕೇವಲ ಇತಿಹಾಸದ ಪುಟಗಳಲ್ಲಿಯೇ ನೋಡಿ ತೃಪ್ತಿ ಗೊಳ್ಳಬೇಕಾಗಿ ಬಂದಿದೆ.

ಪೂರ್ವದಲ್ಲಿ ವಿದ್ಯಾರ್ಥಿಗಳು ಧರ್ಮಬಂಧನದಮೇರೆಗೆ ಬ್ರಹ್ಮ ಚರ್ಯಾಶ್ರಮದಿಂದಿದ್ದು, ವಿದ್ಯಾರ್ಜನೆಮಾಡುವ ಸಂಪ್ರದಾಯವಿತ್ತು. ಆಗಿನ ಕಾಲದಲ್ಲಿ ಮುದ್ರಣಾಲಯಗಳ ಸೌಕರ್ಯವಿಲ್ಲದುದರಿಂದ ದೊಡ್ಡ ದೊಡ್ಡ ಗ್ರಂಥಗಳನ್ನು ಕಂಠಸ್ಥಮಾಡಬೇಕಾಗುತ್ತಿದ್ದಿತು. ಏಳ ಕಾರಿ, ದ್ವಿಚಾರಿ, ಮುಂತಾಗಿ ಮೇಧಾಶಕ್ತಿಯುಳ್ಳ ಪಾಧಕರೂ ಇದ್ದರು, ಆದರೆ ಕ್ರಮೇಣ ಈ ಪದ್ಧತಿಯು ಅನೇಕ ಅಡಚಣ್ಣುಗಳಿಗೀಡಾಗಿ ಕುಂ ದುತ್ತ ಬಂತು. ಪರದೇಶದವರ ದಾಳಿಯಿಂದಲೂ ನಮ್ಮ ಭಂಡಾರಕ್ಕೆ ಅಪರಿಮಿತ ಹಾನಿಯುಂಟಾಯಿತು. ಆದುದರಿಂದಲೇ, ನಮ್ಮ ಕಲಾ ಕೌಶಲ್ಯ, ವಿದ್ಯಾಬುದ್ಧಿಗಳ ಗೌರವಕ್ಕೆ ಆತಂಕವಾಗಿ, ಜನತೆಯು ಉದಾ ಸೀನ ದೃಷ್ಟಿಯಿಂದ ನಮ್ಮನ್ನು ನೋಡುತ್ತಿದೆ. ಈ ನಮ್ಮ ದೇಯವಾದ ಸ್ಥಿತಿಯನ್ನು ಸರಿಪಡಿಸಲು, ನಮ್ಮ ಪೂರ್ವಜರ ಕಂಠಸ್ಥ ಗ್ರಂಥ ಭಾಂ ಡಾರವನ್ನು ಸಂಗ್ರಹಿಸುವದೊಂದು ಮಾರ್ಗವೂ ಇದೆ ಹೀಗೆ ಗ್ರಂಥ ಭಾಂಡಾರವನ್ನು ಕಂಠಸ್ಥಮಾಡಿದ ನರರತ್ನಗಳು ಅಲ್ಲಲ್ಲಿ ಮಿನಗುತ್ತಿವೆ. ಅಂಥವರಿಂದ ಸಾಹಿತ್ಯಗಳನ್ನು ಸಂಗ್ರಹಿಸಲಾಪಕ್ರಮಿಸಬೇಕಾಗಿ ಆಯಾ ಸಂಘದವರು ಎಚ್ಚರಗೊಂಡು ಕಾರ್ಯವನ್ನು ಮನಮುಟ್ಟಿ ಅದಷ್ಟು ಜಾಗ್ರತೆಯಿಂದ ನಡೆಸಬೇಕೆಂಬುವದೇ ನಮ್ಮ ಮುಖ್ಯ ಉದ್ದೇಶ, ಇದಕ್ಕಾಗಿಯೇ ನಾವು ಇತ್ತ ಮುಕ್ತಕಂಠದಿಂದ ಘೋಷಣಮಾಡುತ್ತೇವೆ.

ಉತ್ತರಖಂಡದ ಬಸ್ತಿ ನಿವಾಸಿಗಳಾದ ಪಂಡಿತ ಧನರಾಜ ಶಾಸ್ತ್ರಿ ಗಳವರು ಈಗ್ಗೆ ೫೪ ವರುಷದ ವಯಸ್ಸಿನವರಿದ್ದು ಇವರಿಗೆ ಕಾರಣ ವಶದಿಂದ ವಯಸ್ಸಿನ ೧೯ನೇ ವರುಷ ಕಣ್ಣುಗಳು ಹೋದವು! ಇವರಿಗೆ ಕೆಳಗೆ ಕಾಣಿಸಿದ ಗ್ರಂಥಗಳು ಕಂಠಸ್ಥವಾಗಿವೆ.

ನೀತಿ	ಗ್ರಂಥಗಳು	೧೦	ಅವುಗಳಲ್ಲಿ	೪೧೯೦೦೦	ಶ್ಲೋಕಗಳಿವೆ.
ನಾಟ್ಯ	,,	೪	,,	೪೯೬೦೦೦	,,
ವ್ಯಾಕರಣ	,	೧೪	,,	೨೨೧೦೦೦	,,
ಶೇಕ್ಷ್ಯ	,,	೪	,,	೨೪೨೦೦೦	,,
ಜ್ಯೋತಿಷ್ಯ	,,	೧೯	,,	೪೧೬೦೦೦	,,
ಅರ್ಥ	,,	೪	,,	೨೭೨೦೦೦	,,
ಕಲ್ಪ	,,	೩	,,	೧೭೨೦೦೦	,,
ಛಂದ	,,	೬	,,	೨೪೪೦೦೦	,,
ನಿರುಕ್ತ	,,	೫	,,	೨೯೨೦೦೦	,,
ರಾಮಾಯಣ	,,	೫	,,	೪೪೪೦೦೦	,,
ವೈದ್ಯಕ	,,	೨೭	,,	೫೦೧೫೫೦೦	,,
		೧೦೦		೩,೭೪,೯೫,೫೦೦	

ಇಂತಹ ಅಲೌಕಿಕ ಮಹಾಪುರುಷರಿಂದ ಗ್ರಂಥ ಸಂಗ್ರಹಮಾಡು ವದುಮಹತ್ಕಾರ್ಯವನ್ನು, ಮುಖಾಧಿಕಾರಿಗಳೂ, ಧರ್ಮಾಧಿಕಾರಿಗಳೂ, ಇತಿಹಾಸ, ಜ್ಯೋತಿಷ್ಯ, ವೈದ್ಯಕ ಇತ್ಯಾದಿ ವಾಙ್ಮಯ ಸಂಶೋಧಕ ಸಂಘದವರು ಕೈಕೊಂಡು ಪ್ರತ್ಯಕ್ಷ ಕಾರ್ಯಾರಂಭವನ್ನಾಡಬೇಕಾಗಿ ನಮ್ಮ ಕೋರಿಕೆ.

ಇದು ಕರ್ನಾಟಕಕ್ಕೆ ಸಂಬಂಧಪಟ್ಟದ್ದಲ್ಲವೆಂದು ಕರ್ನಾಟಕ ಇತಿ ಹಾಸ ಸಂಶೋಧನ ಮಂಡಲದವರು ಇದನ್ನು ದುರ್ಲಕ್ಷಿಸದೇ, ತಮ್ಮ ಕೈಯಿಂದಾದಷ್ಟು ಸಂಗ್ರಹ ಮಾಡತಕ್ಕದ್ದು.

—ಬಿಲ್ವಶನಯ.

ಮೈಸೂರಿನ ಬೆಡಗು.

(ತಿರುಗಲನು ಬರೆದುದು.)

ಟಾಟಾ ರಸಾಯನ ಶಾಸ್ತ್ರದ ಪ್ರಯೋಗಶಾಲೆ.

ಅನೇಕ ವಿಧದಿಂದ ಖ್ಯಾತಿಗೊಂಡ್ಡಮೈಸೂರ ಸಂಸ್ಥಾನವು ತನ್ನ ಏಳಿಗೆಗಾಗಿ ಅವಿಶ್ರಾಂತ ಶ್ರಮವನ್ನು ಅಪರ್ಯಾಪ್ತವಾಡುತ್ತ, ಅನ್ಯ ಪ್ರಾಂತಗಳಿಗೆ ಮಾರ್ಗದರ್ಶಕವಾಗಿದೆ. ಸೃಷ್ಟಿ ಸೌಕರ್ಯವಾದರೂ ಇಲ್ಲಿ ವಿಶೇಷ ಅನುಕೂಲವಿದ್ದು, ಪ್ರಾಂತಾಧಿಪತಿಯು ಈ ಈಶ್ವರ ದತ್ತ ವೈಭವದತಡೆಗೆ ಅದರ ದೃಷ್ಟಿಯಿಂದ ನೋಡುತ್ತ ಪ್ರಜಾನುರಾಗ ಉಳ್ಳವನಾಗಿ ಸಂಸ್ಥಾನಾಭಿವೃದ್ಧಿಯಲ್ಲಿ ಹೆಚ್ಚಾಗಿ ಪ್ರಯತ್ನಪಡುತ್ತ ತನ್ನ ಅಡಳಿತದ ಕೀರ್ತಿಯ ಸೌರಭವನ್ನು ವಿದೇಶದಲ್ಲಿಯೂ ತೂರಿ ಪಸರಿಸುತ್ತಿರುವದು ಭೂಷಣಾವಹವೇ ಸರಿ! ಸದ್ಯಸ್ಥಿತಿಯಲ್ಲಿ ದೇಶೀಯ ಉದ್ಯೋಗ ಧಂದೆಗಳಿಗೆ ರಾಜಾಶ್ರಯವು ದೊರಕುವದು ಅಪರೂಪ ಆದರೆ ಇಲ್ಲಿ ಸ್ವತಃ ಅನುಕರೇ ಟೊಂಕಕಟ್ಟಿ ನಿಂತಮೇಲೆ ಪ್ರಜರುಗಳಿಗೇ ಕರ ಕೊರತೆ! ಅಂತಿಯೇ ಸುಪ್ರಸಿದ್ಧ ಶ್ರೀ ಟಾಟಾನವರು. ಇ

ಶಾಸ್ತ್ರೀಯ ಪ್ರಯೋಗಶಾಲೆಯನ್ನು ಸ್ಥಾಪಿಸಿದ್ದಾರೆ. ಈ ಪ್ರಯೋಗ ಶಾಲೆಯು ಬೆಂಗಳೂರ ಪಗರದ ವಾಯವ್ಯಭಾಗಕ್ಕೆ ತುಮಕೂರಿನ ದಾರಿಯ ಮೇಲೆ ಇದೆ ಯಶವಂತಪುರ ರೇಲ್ವೆ ಸ್ಟೇಶನವ ಇಲ್ಲಿಗೆ ಒಂದೂವರೆ ಮೈಲಿನಲ್ಲಿ ಇದೆ. ಈ ಸಂಸ್ಥೆಯು ಮೂವು ನೂರು ಎಕರೆಯ ವಿಸ್ತೀರ್ಣವಾದ ಪಟಾಂಗಣದಲ್ಲಿ ಸ್ಥಾಪಿಸಲ್ಪಟ್ಟಿದ್ದು, ಅಲ್ಲಿಯ ವಾತಾವರಣವ ಶಾಂತವೂ, ತಂಪಾಗಿಯೂ ನಿವಾಂತವಾಗಿಯೂ ಇರುವದರಿಂದ ಕೈ. ಟಾಟಾ ಅವರು ಈ ಸ್ಥಲವನೇ ತಮ್ಮ ಪ್ರಯೋಗಶಾಲೆಗೆ ಆರಿಸಿದ್ದಾರೆ. ಸಂಸ್ಥೆಯ ಸುಂದರವಾದ ಭವ್ಯಮಂದಿರದ ಎದುರಿನಲ್ಲಿ ಕೈ ಟಾಟಾ ನವರ ಕಲ್ಲಿನ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ. ಮುಖ್ಯ ಮಂದಿರದಲ್ಲಿ ವ್ಯಕ್ಟಾನ ಮಂದಿರ, ವಾಚನಾಲಯ, ಗ್ರಂಥ ಸಂಗ್ರಹಾಲಯ, ಪಂಡಿತರ ಮಂದಿರ, ವಿದ್ಯಾರ್ಥಿಗಳ ವಾದವಿವಾದಾಲಯ, ಮುಂತಾಗಿ ಬೇರೆ ಬೇರೆ ಪ್ರಶಸ್ತವಾದ ಆಲಯಗಳೂ ಉಂಟು ಮಧ್ಯಭಾಗದಲ್ಲಿ ಸುಮಾರು ನಾಲ್ಕು ಅಡಿ ಎತ್ತರವುಳ್ಳ ಶಿಖರವು ಮಂದಿರದ ಸೌಂದರ್ಯವನ್ನು ಹೆಚ್ಚಿಸುತ್ತಲಿದೆ. ಈ ಮುಖ್ಯ ಮಂದಿರದಿಂದ ಸ್ವಲ್ಪ ಅಂತರ ದಲ್ಲಿಯೇ ಈ ಸಂಸ್ಥೆಯ (೧) ರಸಾಯನ ಶಾಸ್ತ್ರ ಪ್ರಯೋಗಾಲಯ (೨) ವಿದ್ಯುತ್ ಶಾಸ್ತ್ರ ಪ್ರಯೋಗಾಲಯ. (೩) ಜೀವನ ರಸಾಯನ ಪ್ರಯೋಗಾಲಯಗಳೆಂಬ ಮೂರು ಪ್ರಯೋಗ ಶಾಲೆಗಳು ಶಾಸ್ತ್ರೀಯ ಸಂಶೋಧನೆಕ್ಕಾಗಿ ಅವಶ್ಯಕವಿರುವ, ಯಂತ್ರಾದಿ ಉಪಕರಣಗಳಿಂದ ಸಜ್ಜಾಗಿರುವವು. ವಿದ್ಯಾರ್ಥಿಗಳ ವಸತಿಗ್ರಹದ ಕೋಣೆಗಳು ಪ್ರಶಸ್ತವಾಗಿಯೂ, ಗಾಳಿ, ಬೆಳಕುಗಳ ಸಮೃದ್ಧಿಯುಂದಲೂ ಜೊಕ್ಕಟವಾಗಿವೆ. ವಿದ್ಯಾರ್ಥಿಗಳ ಊಟದ ವ್ಯವಸ್ಥೆಯಾದರೂ ಚೆನ್ನಾಗಿದೆ. ಎಲ್ಲ ಜಾತಿಯ, ಎಲ್ಲ ಧರ್ಮದ ವಿದ್ಯಾರ್ಥಿಗಳ ಊಟದ ವ್ಯವಸ್ಥೆಯು, ನಿಯಮಿತವಾದ ಪದ್ಧತಿಗನುಸರಿಸಿ ಏರ್ಪಡಿಸಲ್ಪಡುತ್ತಿದೆ. ಎಲ್ಲರೂ ಕೂಡಿಯೇ, ಮತಭೇದಗಳನ್ನೆಣಿಸದೇ ಊಟಮಾಡುವರು. ಮಾಂಸಾಹಾರ, ಶಾಖಾಹಾರಗಳನ್ನು ಅವರವರ ಪದ್ಧತಿಯ ಪ್ರಕಾರ ಐಚ್ಛಿಕವಾಗಿ ಕೊಡುವರು. ಸ್ಪರ್ಶಾಸ್ಪರ್ಶದ ನಿರ್ಬಂಧವಿಲ್ಲ.

ಈ ಸಂಸ್ಥೆಯ ಭಿನ್ನಭಿನ್ನವಾದ ಮೂರು ಶಾಖೆಗಳಲ್ಲಿ ಸುಮಾರು ೧೫೫ ವಿದ್ಯಾರ್ಥಿಗಳು ಕಲೆಯುತ್ತಿದ್ದಾರೆ. ಅವರಲ್ಲಿ ಸುಮಾರು ೧/೩ ವಿದ್ಯಾರ್ಥಿಗಳಿಗೆ ಸಂಸ್ಥೆಯಿಂದ ಶಿಷ್ಯವೃತ್ತಿಯು ದೊರಕುತ್ತಿದೆ ಕೆಲವ ರನ್ನು ಪ್ರಾಂತಿಕ ಸರಕಾರದವರೂ, ಸಂಸ್ಥಾನಿಕರೂ ತಮ್ಮ ಖರ್ಚಿನಿಂದ ಕಳುಹಿಸಿರುತ್ತಾರೆ. ಸ್ವಂತಖರ್ಚಿನಿಂದ ಕಲಿಯಲು ಬಂದ ವಿದ್ಯಾರ್ಥಿಗಳೇ ಸ್ವಲ್ಪ. ಈ ಸಂಸ್ಥೆಯ ವಾರ್ಷಿಕ ಉತ್ಪನ್ನವು ಸುಮಾರು ೫೫- ಲಕ್ಷ ರೂಪಾಯಿ ಇದೆ. ವೆಚ್ಚವಾದರೂ ಸ್ವಲ್ಪ ಹೆಚ್ಚು ಕಡಮೆ ಆಷ್ಟೇ ಇದೆ. ೧೨೫ ವಿದ್ಯಾರ್ಥಿಗಳ ಅನುಕೂಲವಿರುವ ಸಂಶೋಧನ ಸಂಸ್ಥೆಯ ವೆಚ್ಚಕ್ಕೆ ಪ್ರತಿವರುಷ ೫೫- ಲಕ್ಷ ರೂಪಾಯಿಗಳು ಬೇಕಾಗುವವು. ಇದರಮೇಲಿಂದ ಶಾಸ್ತ್ರೀಯ ಸಂಶೋಧನಕಾರ್ಯವು ಎಷು ವೆಚ್ಚದ್ದಿದೆ ಎಂಬದರ ಕಲ್ಪನೆಯನ್ನು ಮಾಡಿಕೊಳ್ಳಬಹುದು.

ಗಂಧದ ಎಣ್ಣೆಯ ಕಾರ್ಖಾನೆ.

ಮೈಸೂರ ಸಂಸ್ಥಾನದ ಕೀರ್ತಿಯು ವಿದೇಶದಲ್ಲಿಯೂ ಪಸರಿಸಿದೆ. ಇಲ್ಲಿ ೫೦ಗಂಧದ ಎಣ್ಣೆಯ ಎರಡು ಕಾರಖಾನೆಗಳುಂಟು. ಒಂದು ಮೈಸೂರಿನಲ್ಲಿ; ಒಂದು ಬೆಂಗಳೂರಿನಲ್ಲಿ. ಇವೆರಡೂ ಕಾರಖಾನೆಗಳಲ್ಲಿ ಪ್ರತಿವರ್ಷ ಸುಮಾರು ೧೫೫ ಲಕ್ಷ ಪೌಂಡು ಗಂಧದ ಎಣ್ಣೆಯು ಸಿದ್ಧವಾಗುತ್ತದೆ. ಅದರ ಬೆಲೆಯುತ್ತ ಲಕ್ಷ ರೂಪಾಯಿ ಆಗುವದು. ಎರಡೂ ಕಾರಖಾನೆಗಳ ವೆಚ್ಚ ಸುಮಾರು ೭ಲಕ್ಷ ರೂಪಾಯಿಗಳು ಕಳುಹಿದು ಸರಕಾರಕ್ಕೆ ಸುಮಾರು ೧೫ ಲಕ್ಷ ರೂಪಾಯಿಗಳ ಉತ್ಪನ್ನವಾಗುತ್ತಿದೆ. ಈ ಕಾರಖಾನೆಯು ಬೆಂಗಳೂರಿನಲ್ಲಿ ಸಾಕಷ್ಟು ಎಂಬ ಕೀರ್ತಿಯದಂಡಿಗೆ ಪಾತ್ರ ಇದೆ. ಇದರ ಪಟಾಂಗಣವು ಆಷ್ಟೇನು ವಿಸ್ತೀರ್ಣವಾಗಿಲ್ಲ. ಮುಂಭಾಗದಲ್ಲಿ ಸಣ್ಣ ಹೂದೋಟವಿದೆ. ಈ ಕಾರ್ಖಾನೆಯ ಸಮೀಪಕ್ಕೆ ಹೋದ ಕೂಡಲೇ ಸುತ್ತಲಿನ ಎಲ್ಲ ವಾತಾವರಣದಲ್ಲಿಯೂ ಸುಗಂಧದ ವಾಸನೆಯು ಮೂಗಿಗೆ ಬಂದು ತಾನೇ ಪ್ರಖರವಾಗಿ ಅಡರುತ್ತದೆ. ಇದರಿಂದ ಕಾರ್ಖಾನೆಯ ಸಮೀಪದಲ್ಲಿ ನಾವು ಬಂದಿರುವೆವೆಂಬದು ಕೂಡಲೇ ಗೊತ್ತಾಗುವದು. ಈ ಕಾರಖಾನೆಗೆ, ಬಟ್ಟಿಯ ನಿರಡೆಯಂತೆ ಅನೇಕ ವಿಧವಾದ ಯಂತ್ರಸಾಮಗ್ರಿಗಳ ಅವಶ್ಯಕತೆ ಇಲ್ಲ. ದೊಡ್ಡ ದೊಡ್ಡ ಗಂಧದ ಕೊರಡುಕಟಿಗಳನ್ನು ಹಲಿಗೆಯಹಾಗೆ ತರಿಸುವದೂ ಬಳಿಕ ಅದರ ಸೂಕ್ಷ್ಮವಾದ ಪುಡಿಮಾಡುವದೂ ಯಂತ್ರ ಸಹಾಯದಿಂದಲೇ ಆಗುವದು. ಮುಂದೆ ಆ ಸೂಕ್ಷ್ಮವಾದ ಪುಡಿಗೆ ಬಲವಾದ ಉಷ್ಣತೆಯನ್ನು ಕೊಟ್ಟು, ಅದನ್ನು ಕಿಚುಕಿ ಎಣ್ಣೆಯನ್ನು ಬೇರ್ಪಡಿಸುವ ಯಂತ್ರಗಳು ಇವೆ ಇಂಥ ಎಣ್ಣೆಯಲ್ಲಿಯು ಹೊಲಸೂ, ಕಣ ವೂ ತೆಗೆಯಲ್ಪಟ್ಟನಂತರ ಶುದ್ಧವಾದ ಅರಸಿನ ಬಣ್ಣದ ಎಣ್ಣೆಯು ಸಿದ್ಧವಾಗುವದು ಈ ಸಂಸ್ಥಾನದ ಎಣ್ಣೆಯ ಉತ್ಕೃಷ್ಟತೆಯ ಬಗ್ಗೆ ಪ್ರಸಿದ್ಧವಿದ್ದು ಬಹುತರವಾಗಿ ಎಲ್ಲ ಎಣ್ಣೆಯು ಅಮೇರಿಕೆಗೆ ಕಳುಹಿಸಲ್ಪಡುತ್ತಿದೆ. ಈ ಸಂಸ್ಥಾನದಲ್ಲಿ ಇಂತಹ ಅನೇಕ ಉಪಯುಕ್ತವಾದ ಕಾರಖಾನೆಗಳಿದ್ದು ಅವುಗಳ ವಿಷಯಕ್ಕೆ ಯಥಾವಕಾಶ ಅಲೋಚಿಸುವೆನು.

ನಮ್ಮ ಉತ್ತರ ಕನ್ನಡದ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ.)

ಪ್ಲೇಗು:— ಸಿರ್ಸಿಯಲ್ಲಿ ಪ್ಲೇಗು ಉಗ್ರಸ್ಥಿತಿಯಲ್ಲೇ ಇದೆ. ಕಾರವಾರದಲ್ಲಿ ಪ್ಲೇಗಿನ ಇಲಿಗಳು ಬೀಳಹತ್ತಿವೆ. ೩-೪ ಮರಣಗಳೂ ಆದವು. ಕಾರವಾರಕ್ಕೆ ಪ್ಲೇಗು ಬಂದುದು ಇದು ಎರಡನೆಯಸಾರಿ. ಜಿಲ್ಲೆಯಲ್ಲೆಲ್ಲ ಮಲೇರಿಯಾ ಜ್ವರ ಇನ್ ಫ್ಲುಯೆಂಝಾ ಜ್ವರಗಳು ಹಬ್ಬಿರುವಂತೆ ತೋರುತ್ತಿದೆ.

ಬೆಳೆ:— ಈ ಸಾರೆ ಭತ್ತದ ಬೆಳೆ ಮಧ್ಯಮ. ಅಡಿಕೆಯ ಬೆಳೆಯು ಮಧ್ಯಮ.

ಬಹಿಷ್ಕಾರ:— ಈ ಜಿಲ್ಲೆಯಲ್ಲಿ ಸಾಯ್ಮನ್ ಕಮಿಶನ್ನಿನ ಬಹಿಷ್ಕಾರದ ಕುರಿತು ಯಾವದೂ ಚಳವಳಿಯಿಲ್ಲ! ಕುಮಟೆಯಲ್ಲಿ ಹೊರಡುವ 'ಕರ್ನಾಟಕ ಧುರೀಣ' 'ಕಾನಡಾ ವೃತ್ತ' ಈ ಎರಡೂ ಪತ್ರಿಕೆಗಳು ಬಹಿಷ್ಕಾರವನ್ನು ಸಮರ್ಥಿಸುತ್ತಿವೆ ಜನತೆಯು ಬಲವು ಬಹಿಷ್ಕಾರದ ಕಡೆಗೇ ಇರುವದು ಆದರೆ ಚಳವಳಿಯನ್ನೆಬ್ಬಿಸುವ ಮುಖಂಡರು ಮಾತ್ರ ಇಲ್ಲ. ಮದ್ರಾಸ್ ಕಾಂಗ್ರೆಸ್ಸಿಗೆ ಈ ಜಿಲ್ಲೆಯಿಂದ ೧೫-೨೦ ಜನರು ಹೋಗಿದ್ದರು. ಆದರೆ ಅವರೆಲ್ಲ ಮಲಗಿದಂತೆ ತೋರುತ್ತದೆ.

ಏಕೀಕರಣ ಚಳವಳಿ:— ೫ೇ. ಮಂಗಳವೇಢೆ ೫ೇನಿವಾಸ ರಾಯರು ಕುಮಟಾ, ಹೊನ್ನಾವರಗಳಲ್ಲಿ ಏಕೀಕರಣದ ಕುರಿತು ವ್ಯಾಖ್ಯಾನಗಳನ್ನು ಕೊಟ್ಟರು. ಕುಮಟೆಯ ರಾ॥ ಬಾ ಕಲ್ಯಾಣಪುರೆಕರ, ೫ೇ ೫ೇಷಾದರಾವ ಕಲ್ಯಾಣಪುರಕರ, ಹೊನ್ನಾವರದ ೫ೇ. ಎಂ. ಡಿ. ಕರ್ಕಿ ಎಂ. ಎಲ್. ಸಿ ೫ೇ ಎಸ್ ಎಸ್. ಶಾಸ್ತ್ರಿ ೫ೇ ಗೋಕರ್ಣ, ೫ೇ ಎಂ. ಪಿ ನಾಡಕರ್ಣ ಪ್ರಭೃತಿಗಳು ಈ ಚಳವಳಿಯ ಬಗ್ಗೆ ವಿಶೇಷ ಉತ್ಸುಕತೆಯನ್ನು ತೋರಿಸಿದರು. ಬಾಗಲಕೋಟೆಯಲ್ಲಿ ಸೇರುವ ಏಕೀಕರಣ ಪರಿಷತ್ತಿಗೆ ಅನೇಕರು ಹೋಗಬೇಕೆಂದು ನಿಶ್ಚಯಿಸಿದ್ದಾರಾಗಿ ತಿಳಿಯುತ್ತದೆ.

'ಕರ್ನಾಟಕ ಧುರೀಣ' ಪತ್ರಿಕೆಯು ಏಕೀಕರಣ ಚಳವಳಿಯ ಬಗ್ಗೆ ಮನಮುಟ್ಟಿ ಪ್ರಯತ್ನಮಾಡುತ್ತಿರುವದು. ಆ ಪತ್ರಿಕೆಯ ಸಂಪಾದಕರಾದ ೫ೇ. ಯಾಜಿಯವರು ಈ ಚಳವಳಿಯ ಪ್ರಚಾರದ ಬಗ್ಗೆ ೫ೇ. ೫ೇನಿವಾಸರಾಯರಿಗೆ ಸಹಾಯವನ್ನಾಡಿದರು. ಆದರೆ 'ಕಾನಡಾವೃತ್ತ'ವು ಅಷ್ಟೊಂದು ಉತ್ಸುಕತೆಯನ್ನು ತೋರಿಸಲಿಲ್ಲ! ಆದರೂ ಅದು ಏಕೀಕರಣಕ್ಕೆ ವಿರೋಧಿಯಾಗಿಲ್ಲ!

ಭಟ್ಟಕಳ ಬಂದರದ ಬಗ್ಗೆ ಕರ್ನಾಟಕ ಧುರೀಣದಲ್ಲಿ ವಿಶೇಷ ಮಾಹಿತಿಯನ್ನೊಳಗೊಂಡ ಲೇಖನಗಳು ಪ್ರಕಟವಾಗಹತ್ತಿದ್ದು, ಭಟ್ಟಕಳ ಬಂದರದ ಬಗ್ಗೆ ಜನತೆಯಲ್ಲಿ ಜಾಗ್ರತೆಯನ್ನುಂಟುಮಾಡತೊಡಗಿದೆ.

ಏಕೀಕರಣ ತತ್ವದ ಪ್ರಚಾರವನ್ನು ಈ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ಮಾಡಿದರೆ ಅದಕ್ಕೆ ತುಂಬಾ ಬೆಂಬಲಸಿಕ್ಕುವುದೆಂದು ಧರವಸೆಇದೆ.

ಪರಿಷತ್ತು:— ಈ ಜಿಲ್ಲೆಯ ಸ್ಥಾನಿಕ ಸ್ವರಾಜ್ಯ ಪರಿಷತ್ತು ಕಾರವಾರದಲ್ಲಿ ಫೇಬ್ರುವರೀ ತಿಂಗಳಲ್ಲಿ ಸೇರುವದೆಂದು ತಿಳಿಯುತ್ತದೆ. ರಾ॥ ಬಾ ಕಲ್ಯಾಣಪುರಕರ ವಿಶ್ವೇಶ್ವರರಾಯರು ಪರಿಷತ್ತಿನ ಅಧ್ಯಕ್ಷರಾಗಿಯೂ, ವಿ. ಕುಟಿನೋ ಇವರು ಸ್ವಾಗತಾಧ್ಯಕ್ಷರಾಗಿಯೂ ನಿಯೋಜಿಸಲ್ಪಟ್ಟಿದ್ದಾರೆ.

ನಮ್ಮ ಧಾರವಾಡದ ಪತ್ರ.

ಹಿಂದಕ್ಕೆ ಇಲ್ಲಿಯ ನಗರ ಸಭೆಯು (ಮ್ಯುನಿಸಿಪಾಲಿಟಿಯ) ಚೀಫಆಫೀಸರರಾದ ಚವನಗೌಡರ ಮೇಲಿನ ನಗರಸಭೆಯ ದುರುಪಯೋಗ ಮಾಡಿದ ಬಗ್ಗೆ ಹಾಕಿದ ಖಟ್ಲೆಯು ೧೬—೧—೮೯ನೇ ದಿನ ಸಬ್‌ಡಿವಿಜನಲ್ ಮ್ಯಾಜಿಸ್ಟೇಟರಾದ ಶ್ರೀ. ವೈದ್ಯರವರ ಮುಂದೆ ಪ್ರಾರಂಭವಾಯಿತು.

ಕೆಲವು ದಿನಗಳ ಹಿಂದೆ ಇಲ್ಲಿಯ ಕಲೇಕ್ಟರ ಸಾಹೇಬರು ವೋಟಾರನಲ್ಲಿ ಕುಳಿತು ತಮ್ಮ ಕಚೇರಿಯ ಕಂಪೌಂಡಿನಿಂದ ಉಳಿವಿಬಸಪ್ಪನ ಗುಡ್ಡದ ಕಡೆಗೆ ಹೋಟಾಗ ಗೇಟಿನ ಹತ್ತರವೇ ಪೆನಶನ್ ಪಾಮಲೇದಾರರಾದ ಶ್ರೀ ಪರಪನಹಳ್ಳಿಯವರು ಕಟ್ಟಿಸುತ್ತಿದ್ದ ಮನೆಯು ಬದಿಯಲ್ಲಿ ಒಬ್ಬ ಉಪ್ಪಾರನು ಕಲ್ಲು ಕಟಿಯುವದನ್ನು ನೋಡಿ ದಾರಿಯಮೇಲೆ ಕಲ್ಲಿನ ಪೆಣಿಕೆಗಳು ನೀಳುತ್ತವಾದ್ದರಿಂದ ಕಟಯುವದನ್ನು ನಿಲ್ಲಿಸಂದು ಹೇಳಿದರಂತೆ ! ಕೆಲಸವು ತುಸುವೇ ಉಳಿದದ್ದರಿಂದ ಸಾಹೇಬರ ವೋಟಾರ ಹೋದ ಮೇಲೆ ೧೫ ಪೆಟ್ಟುಗಳನ್ನು ಹಾಕಿದನು. ಕೂಡಲೇ ಸಾಹೇಬರು ಅವನಮೇಲೆ (Nuisance) ಸಾರ್ವಜನಿಕ ತೊಂದರೆಯ ಆರೋಪನ್ನು ಹೊರಸಿ ಖಟ್ಲೆ ಹಾಕಿಸಿದರಂತೆ! ಅವನಿಗೆ ೫ ರೂಪಾಯಿ ದುಡವೂ ಆಯಿತು ! ಅನ್ನಬೇಕು ಇದಕ್ಕೆ ನ್ಯಾಯವೆಂದು ?

ಕಳೆದ ರವಿವಾರ ಪ್ರಾತಃಕಾಲದಲ್ಲಿ ಶ್ರೀ ಹೆರ್ಲೆಕರ ಇನರ ಅಟ್ಟದ ಮೇಲೆ ವೇ॥ ಶಿವಲಿಂಗಶಾಸ್ತ್ರಿಯವರ ಅಧ್ಯಕ್ಷತೆಯ ಕೆಳಗೆ ಧಾರವಾಡ ಜಿಲ್ಲೆಯ ಪ್ರಮುಖರ ಸಭೆಸೇರಿ ಸಾಯಮನ್ ಕಮಿಶನ್ ' ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದೂ, ಬರುವ ಫೆಬ್ರುವರಿ ೩ ನೇ ತಾರೀಖಿಗೆ ಎಲ್ಲ ಕಡೆಯಲ್ಲಿಯೂ ಹರತಾಳ ಪಾಲಿಸಬೇಕೆಂದೂ ನಿರ್ಣಯಗಳಾದವು.

ಸೋಮವಾರ ರಾತ್ರಿ ಜಿಲ್ಲೆಯ ಕಾಂಗ್ರೆಸ ಕಮಿಟಿಯ ಸಭೆ ಸೇರಿ ಮೇಲೆ ನಿರ್ದೇಶಿಸಿದ ಸರ್ವಪಂಗಡಗಳ ಸಭೆಯಲ್ಲಿ ಪಾಸಾದ ನಿರ್ಣಯಗಳಿಗೆ ಬೆಂಬಲವನ್ನು ಕೊಟ್ಟು, ಜಿಲ್ಲೆಯಲ್ಲಿ ಎಲ್ಲ ಕಡೆಗೂ ಈ ವಿಷಯವಾಗಿ ಜಳವಳವಾಡುವದಕ್ಕೆ ಕೆಲವು ಮುಖಂಡರ ಸಹಿಯುಳ್ಳವಾದ ಹತ್ತುಪತ್ರಿಕೆಗಳನ್ನು ಹಂಚಬೇಕೆಂತಲೂ ಊರಿಗೆ ಊರಿಗೆ ಹೋಗಿ ವ್ಯಾಖ್ಯಾನಗಳನ್ನು ಕೊಡಬೇಕೆಂತಲೂ ಸಭಿಕರು ನಿಶ್ಚಯಿಸಿದರು.

ಮಂಗಳವಾರ ರಾತ್ರಿ ವೇ. ಶಿವಲಿಂಗಶಾಸ್ತ್ರಿಯವರ ಅಧ್ಯಕ್ಷತೆಯ ಕೆಳಗೆ ದೇಶಭಕ್ತ ಶ್ರೀವಾಸರಾವ ಕೌಜಲಗಿಯವರು 'ಸಾಯಮನ್ ಕಮೀಶನ್ ಯಾಕೆ ಬಹಿಷ್ಕರಿಸಬೇಕು'? ಎಂಬ ವಿಷಯದ ಮೇಲೆ ಸುಮಾರು ೧॥ ತಾಸಿನ ವರೆಗೆ ಬಹು ಪರಿಣಾಮಕಾರಕವಾದ ಮತ್ತು ಕಾರಣಯುಕ್ತವಾದ ಉಪನ್ಯಾಸವನ್ನು ಕೊಟ್ಟರು.

"ಇಲ್ಲಿಯ ಕರ್ನಾಟಕ- ಮಹಾಪ್ಯ ಮಂಡಲದವರೂ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯವರೂ ಶ್ರೀ ವಿನಾಯಕ ಮಹಾರಾಜುವರಿಗೆ ಸನ್ಮಾನ ಮಾಡಿದರು. ಕರ್ನಾಟಕ- ಮಹಾರಾಷ್ಟ್ರಮಂಡಲದಲ್ಲಿ ವಿನಾಯಕ ಮಹಾರಾಜರು; " ಕರ್ನಾಟಕವು ಶೃದ್ಧಾ ಮತ್ತು ಭಾವನಾಪ್ರಧಾನವಾದ ಪ್ರಾಂತವಾಗಿದ್ದು, ಕರ್ನಾಟಕದಲ್ಲಿ ಎಲ್ಲಿ ಹುಡಕಿದರೂ ಜೀವಜ್ಯೋತಿಗಳು ಇದ್ದೇ ಇರುತ್ತವೆ ಆದರೆ ಅವರಿಗೆ ಬೆಳಕಿಗೆ ಬರಲು ಮನಸ್ಸು ಇಲ್ಲ. ಪೂರ್ವಕಾಲದಲ್ಲಿ ಕರ್ನಾಟಕವು ಇಡೀ ಹಿಂದುಸ್ತಾನದ ನೇತೃವಾಗಿತ್ತು. ಆದುದರಿಂದ ಕರ್ನಾಟಕದಲ್ಲಿಯ ಮಹಾರಾಷ್ಟ್ರೀಯರು, ಕರ್ನಾಟಕದ ಜೀವಜ್ಯೋತಿಯನ್ನೂ ಸಂಸ್ಕೃತಿಯನ್ನೂ ಮಹಾರಾಷ್ಟ್ರಕ್ಕೆ ನಿಜವಾಗಿ ತಿಳಿಸಿ ಹೇಳಿ ಕೀರ್ತಿಯನ್ನು ಪಡೆಯುಬೇಕ"ಂದು ಉಪದೇಶಿಸಿದರು ಇದು ಬಾಲರಿಗೆ ರುಚಿಸಿದಬಹುದೋ?

ಸ್ತ್ರೀಯರು ಮತ್ತು " ಸ್ಟೇಜು "

ಸ್ತ್ರೀಯರು ನಾಟಕಕ್ಕೆ ಅತ್ಯವಶ್ಯವೆಂದು ಬಹಳ ಮಂದಿ ಹೇಳುವರು. ಇನ್ನು ಮೇಲೆ ಇಂಥವರ ಸಂಖೆಯು ಹೆಚ್ಚುವದಲ್ಲದೆ ಕಡಿಮೆಯಾಗುವದಿಲ್ಲ. ಹೊಸದಾದ ಹಾಗೂ ಇಂದಿನವರೆಗೂ ನೋಟಕರ ಕಣ್ಣಿಗೆ ಬೀಳದಿದ್ದ ಒಂದು ಅಗೋಚರ ಜ್ಯೋತಿಯನ್ನು ಸ್ತ್ರೀಯರುರಂಗಸ್ಥಳಕ್ಕೆತರುವರೆಂದು ಕೆಲವರ ಅಭಿಪ್ರಾಯ. ಈಗ ಸ್ತ್ರೀಪಾತ್ರಗಳನ್ನ ವಹಿಸುವ ಅರ್ಧನಾರೀಶ್ವರರಗಿಂತಲೂ ಸ್ತ್ರೀಯರಿಗೇಸ್ತ್ರೀಪಾತ್ರಗಳನ್ನ ಪ್ರತಿಪಾದಿಸಲು ದೇವರು ಹೆಚ್ಚು ಯೋಗ್ಯತೆಯನ್ನು ಕೊಟ್ಟಿರುವನೆಂದು ಮತ್ತೆ ಕೆಲವರ ಅಭಿಪ್ರಾಯ. ಹೀಗೆ ಸ್ತ್ರೀಪಾತ್ರಗಳನ್ನು ಸ್ತ್ರೀಯರೇ ಅಭಿನಯಿಸುವ ಕಾಲ ಬಂದಾಗ ನಾಟಕಗಳ ರಮ್ಯ, ತೇಜಸ್ಸು, ಸೊಗಸು, ಅಂದಗಳನ್ನು ಬಣ್ಣಿಸಲಾಗುವದಿಲ್ಲವಂತೆ ! ಈ ಮಾತುಗಳಲ್ಲಿ ನಮಗೆ ನಂಬಿಕೆಯು ಅಷ್ಟು ದೃಢವಾಗಿಲ್ಲ.....ನಾವು ಮೊನ್ನೆ ಒಂದು ವಿನೋದಾವಳಿಗೆ ದುಡ್ಡು ಕೊಟ್ಟ ಹೋಗಿದ್ದೆವು. " ಹೆಣ್ಣು ಗಂಡಸರು " 'ಗಂಡು ಹೆಂಗಸರು' 'ಅಪ್ಪಟ ಹೆಂಗಸರು,' 'ಪೂರ್ತಿ ಹೆಂಗಸರು,' ಎಲ್ಲರೂ ಸೇರಿ ಈ "ಹಾವಳಿ"ಯನ್ನು ಜರುಗಿಸಿದರು. ಆಗ ಇದೇ " ಸ್ತ್ರೀ ಪುರುಷ ಪಾತ್ರಗಳ " ಚರ್ಚೆಯು ನೆನಪಿಗೆ ಬಂತು. ನಮ್ಮ ಕಣ್ಣು ಮುಂದೆ ಓಡಾಡಿದ ವ್ಯಕ್ತಿಗಳಲ್ಲಿ ನಾಟ್ಯಕಲೆಯ ಕಟ್ಟಳೆ, ಸಂಕೇತ, ನಿಬಂಧನೆಗಳನ್ನು ಅಭ್ಯಾಸವಾಗದಂತೆ ಅನುಸರಿಸಿ, ಅಭಿನಯಿಸುವದರಲ್ಲಿ ನಮ್ಮ ಅರ್ಧ ನಾರೀಶ್ವರರೇ ಮೇಲಾಗಿ ತೋರಿದರು. "ಅಪ್ಪಟ ಹೆಂಗಸರು"-ಪಾಸ! ಅಬಲೆಯರು!-ರಂಗಸ್ಥಳವನ್ನು ಬಿಟ್ಟು ಎದ್ದು ಒಳಕ್ಕೆ ಹೋಗುವುದಕ್ಕೇ ಅಂಜಿಬಿಟ್ಟರು. ಇವರು ರಂಗಸ್ಥಳದ ಧೂಳನ್ನು ಮೆಟ್ಟಿ ಬಹಳ ಯುಗಗಳಾಗಿರಬೇಕು ! ...ಸ್ತ್ರೀಯರು " ಹೆಂಗಸರು, " ಇವರಿಗೆ ಪ್ರತ್ಯೇಕವಾಗಿ ರಂಗಸ್ಥಳದ ಮೇಲೂ ಜಾಗವನ್ನು ಮಾಡಬೇಕೆಂಬುದನ್ನು ಮರೆತು, ಆಲೋಚಿಸಿದರೆ ಈ ಪ್ರಶ್ನೆಗೆ ಒಂದು ಉಪಾಯ ತೋರುವದು. ನಾಟಕವು ಕಲೆ; ಅದರ ಭೂಮಿಕೆಯು ಬೋರೆಗೌಡನ ಕೋಣೆಯೇ ಆಗಿರಬಹುದು; ಅದರೆ ಈ ಕೋಣೆಯು " ಸ್ಟೇಜನ್ನು " ಹತ್ತಿದ ಕೂಡಲೆ ಕೆಲವು ಕಲಾಕಟ್ಟಪಾಡುಗಳನ್ನು ಅನುಸರಿಸಬೇಕಾವುದು. ಇವುಗಳಿಗೆ ಪುರುಷರೆಷ್ಟು ಹೊರಬರೋ ಸ್ತ್ರೀಯರೂ ಅಷ್ಟೇ! (ಇಲ್ಲ. ಇನ್ನೂ ಸ್ವಲ್ಪು ಹೆಚ್ಚೇ!) ಸ್ತ್ರೀ ಪಾತ್ರಗಳಿಗೆ ಸ್ತ್ರೀಯರೇ ಸ್ವಾಭಾವಿಕವಾಗಿ ಅರ್ಹರಾದರೆ, ನಾಳೆಯಿಂದ ಚಿತ್ರಗಾರನು ಸ್ತ್ರೀವ್ಯಕ್ತಿಯನ್ನೇ ತನ್ನ ಪಟದಿಂದ ಓಡಿಸಬೇಕು. ಶಿಲ್ಪಗಾರನು ಸ್ತ್ರೀ ಪ್ರತಿಮೆಯನ್ನು ಕತ್ತಿದರೆ, ಪೂರ್ವದ ಈಸ್ಟ್ ಇಂಡಿಯಾ ಕಂಪೆನಿಯವರಂತೆ ಅವನ ಉಂಗುಷ್ಟವನ್ನು ಕತ್ತರಿಸಬೇಕು ! ಇದು ನ್ಯಾಯವೇ ?..... ಸ್ತ್ರೀಯರು ನಾಟಕವನ್ನು ಕಲಾದೀಕ್ಷೆಯಾಗಿ ಕೈಗೆಕೊಂಡರೆ ಅದರ ಫಲವು ಬೇರೆ. ಸ್ತ್ರೀ ಶಕ್ತಿಕ್ಕೆ ನಮ್ಮ ಸಮಾಜದಲ್ಲಿ ಉನ್ನತ ಸ್ಥಾನವನ್ನು ಕೊಟ್ಟರೆ ಜನತೆಯು ಹೇಗೆ ಹೊಸ ಒಗೆಯ ಜೀವಕಳೆಮನ್ನು ಹೊಂದುವುದೋ ಹಾಗೆಯೇ ಸ್ತ್ರೀಯರು ರಂಗಸ್ಥಳಕ್ಕೆ ಬರುವುದರಿಂದ ಈಗ ಕನಿಷ್ಠವಾದ ನಟ ಸಮಾಜವು ಆಗ ಗೌರವನ್ನ ಪಡೆಯುವುದು. ಅಲ್ಲಿ ಕಂಡು ಕಾಣದಿರುವ ಗಲೀಜು, ಧೂಳು, ಕಸ, ಇರುವದಂತೆ; ಇದನ್ನು ಗುಡಿಸಿ ಸೊಪ್ಪಗೆ ಬೀಸಾಡಬೇಕಾದರೆ, ಗೃಹಲಕ್ಷ್ಮಿಯೇ ದಯವಿಟ್ಟು ರಂಗಸ್ಥಳಕ್ಕೆ ಬರಬೇಕು. ಆದರೆ, ಸ್ತ್ರೀಯರು ಪ್ರಬಲ ನಟಯರಾಗಬೇಕಾದರೆ, ಪುರುಷರಂತೆ ಕಸ್ಟಪಡಬೇಕು; ರಂಗಸ್ಥಳಕ್ಕೆ ಬರೀ ಬಣ್ಣವೇ ಸಾಲದು. ಬೆವರೂ ಬೇಕು ! ನಮ್ಮ ಅಕ್ಕ ತಂಗಿಯರು ಏನು ಹೇಳುವರೋ ?

—ಗಂಡಸರ ಪರವಾಗಿ

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂ ಅರನ್ಸದ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ.

WANTED.

Agents, Travelling Agents and hief Agents. Men with experience of Insurance work. capable of bringing business, required. ash security. Salary according to qualifications.

Apply to:— Mr S Rabboor B. A., F. S. S. (Lond) Asst. Manager (on deputation) General Assurance Society Ltd 44, Linggi Chetty street, Madras.

ಅತ್ಯಲ್ಪವಿವೆ! ಉಚಿತ
ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊತಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವನರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್‌ಗೋಲ್ಡ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ಪಾಜ್ ಕಂ. ಪಿ, ಬಿ. ೩೫೫ ಮದ್ರಾಸ

ಶ್ರೀ ದತ್ತರಾಜ ಸಮರ್ಥ

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ

ಗದಗ ಶ್ರೀದತ್ತಾತ್ರೇಯ ನಾಟಕ ಮಂಡಳಿಯವರು

ಬಾಗಲಕೋಟೆ ಶಿವಾನಂದ ಥಿಯೇಟರಿನಲ್ಲಿ

ಸೋಮವಾರ ತಾ॥ ೩೦—೧—೨೮

ಶರಣಬಸವ.

ಬುಧವಾರ ತಾ॥ ೧—೨—೨೭

ವತ್ಸಲಾಹರಣ.

ಶನಿವಾರ ತಾ॥ ೪—೨—೨೮

ಪಾದುಕಾ

ಪಟ್ಟಾಭಿಷೇಕ.

ಎಂಬ ನಾಟಕಗಳನ್ನು ಆಡುವರು. ಈ ಪ್ರಯೋಗಗಳಲ್ಲಿ ಟ್ರಾನ್ಸ್ ಫರ್ ಸೀನ ಸೀನರಿಗಳು ತೋರಿಸಲ್ಪಡುವವು.

* ಟಿಕೀಟಿನ ದರಗಳು. *

ಖುರ್ಚಿ ರೂ. ೩—೦—೦; ೨—೦—೦; ೧—೮—೦; ೧—೦—೪
ಮಹಡಿ ೦—೮—೦; ನೆಲಾ ೦—೩—೦
ಕುಲಿನ ಸ್ತ್ರಿಯರಿಗೆ ೦—೩—೦ ವೇಶ್ಯರಿಗೆ ೦—೧೫—೦

ಸೂಚನೆ—: ಖುರ್ಚಿ ೧ಕ್ಕೆ ೨ ಆಣೆ ಹೆಚ್ಚಿಗೆ ಕೊಟ್ಟಲ್ಲಿ ರಿಝರ್ವ ಮಾಡಲಾದೀತು. ರಿಝರ್ವ ಮಾಡಿಸತಕ್ಕವರು ನಾಟಕದ ದಿವಸ ಸಾಯಂಕಾಲ ೬ ಘಂಟೆಯ ಒಳಗಾಗಿ ಮಾಡಿಸಬೇಕು. ೫ ವರ್ಷದ ಮೇಲಿನ ಹುಡುಗರಿಗೆ ಪೂರಾ ಚಾರ್ಜು. ಎಲ್ಲರಿಗೂ ಸಭ್ಯ ರೀತಿಯಿಂದ ವರ್ತಿಸುವ ಬಗ್ಗೆ ಪ್ರಾರ್ಥನೆ.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

ವಿಷಮ ವಿವಾಹ, ಕದೀರದಾಸ, ಶಂಸವಧ, ಪ್ರತಿವಂದಕ್ಕೆ ರೂ. ೧.

ಒಡೆಯರು.

ಸದಾಶಿವರಾವ ಗರುಡ

ಕರ್ನಾಟಕ ನಾಟಕಾಲಂಕಾರ; ಅಭಿನಯ ಚೋಸರಿ.

ಸಿರಿಗನ್ನಡಂ ಗೆಲ್ಗೆ !

ಪತೀವಶೀಕರಣ!
ಪತೀವಶೀಕರಣ!
ಪತೀವಶೀಕರಣ!

ಹೆಚ್ಚಿನ ಸಂಗತಿಗಳಿಗಾಗಿ ಮುಂದಿನ ವಾರದಲ್ಲಿ ಈ ಸ್ಥಳವನ್ನು ನಿರೀಕ್ಷಿಸಬೇಕಾಗಿ ರಂಗಭೂಮಿಯ ಭಕ್ತಾತರಾದ ರಸಿಕರಲ್ಲಿ ವಿನ್ನವಿದೆ.

ಇದೋ ನೋಡಿ

ಜಾಹೀರಾತ ಕೊಡತಕ್ಕವರೇ?

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ತಾನಾಗಿಯೇಬಂದ ಈ ಪತ್ರವನ್ನು ಓದಿರಿ ಆ ಮೇಲೆ ಯಾವಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದೆಂಬುದನ್ನು ನೀವೇ ನಿಶ್ಚಯಿಸಿರಿ.

ಕುಲಕರ್ಣಿ ಬ್ರದರ್ಸ ಮೋಟಾರ ಡ್ರಾಯಿಂಗ ಇನ್ ಸ್ಟಿಟೂಶನ್ ಲಾಯ್ ಶನಿವಾರ ಪೇಟೆ ಪುಣೆ ಶಹರ

ತಾರೀಖು ೩೦ ಜುಲೈ

ರಾ॥ ರಾ॥ ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟೆ ಇವರಿಗೆ— ವಿ ಎ. ನಾನು ನಿಮಗೆ ಮುದ್ದಾಂ ಪತ್ರ ಬರೆಯಲು ಮುದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾವ ನಮ್ಮ ಜಾಹೀರಾತಿನ ಪರಿಣಾಮವು ಒಳ್ಳೇ ಜನ್ಮಾಗಿ ಆಗಿದೆಂಬ ದು ನಮಗೆ ಕಂಡುಬರುತ್ತಿದೆ ಒದ್ದರಿಂದ ನಮ್ಮ ಹೊಬಲಿನ ಸಣ್ಣ ಜಾಹೀರಾತಿನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ. ಅದರ ಬೆಲೆ ಏನಾಗುವದು ಅದನ್ನು ತಿಳಿಸಬೇಕು. ಕೊಡುವೆನು.

ಜಿ. ಎಚ್. ಕುಲಕರ್ಣಿ, ಮ್ಯಾನೇಜರ.

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭಕೊಂದಿರಿ. ಕಡವೇಕೆ ಈ ದಿನವೆ ಪತ್ರಬರೆಯಿರಿ

—ವ್ಯವಸ್ಥಾಪಕ.

S.I.N.&CO.
BENARES CITY.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾ ಪ್ರಧವಾದ ರೇಶ್ಮೀ ಮ್ಹಾಲುಗಳನ್ನು ಕೋಡುವವರಿಗೆ ವ್ಹಿ ಪಿ ಮೂಲಕ ಕಳುಹಿಸಲ್ಪಡುವದು. ಬಿಳೇ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದಮೊಳಗಿಳ ಅಗಲಿಮೊಳ ೩, ಥಾನು ೧ಕ್ಕೆ ರೂ. ೦ ರಿಂದ ೫೦ ಜರಿ ಶೀರೆಗಳು ೧೬ ಗಜ ಮೊಳ ಉದ್ದ ೧ಕ್ಕೆ ರೂ. ೨ ರಿಂದ ೫೦ ರವರೆಗೆ ಬುಟ್ಟಿದಾರ್ ಬನಾರ್ಸ್ ಸೀರೆ ೬-೧೫ ಉದ್ದ ಸೊಳ ೭ ೧ಕ್ಕೆ ರೂ. ೫ ರಿಂದ ೩೧ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ ೧೦ ರಿಂದ ೫೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರವರೆಗೆ ಜರೀದ್ದು ಪಟ್ಟೆ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೫೦ ರವರೆಗೆ ಸಾದಾ ಬಂಗಾಳ ರೇಶ್ಮೆ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ವಟಿಕದ ಗ್ಲಾಲರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ ಕ್ಕೆ ಆಣೆ ೮ರಿಂದ ರೂಪಾಯಿ 1½ ರವರೆಗೆ ಜಗನ್ನಾಧಚಾಗಂಟಿ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದಮ್ಹಾ ಎಗಳ ಕೆಟಲಾಗವನ್ನಾಂ

ವಿಳಾಸ—ತಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

ಪ್ರಾಣಿದಯೆ.

ಸಚಿತ್ರ ಮಾಸಪತ್ರಿಕೆ.

ಚಕ್ಕಪೇಟೆ. ಬೆಂಗಳೂರು

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ಪ್ರಾಣಿದಯಾ ಸಂಬಂಧವಾದ ಲೇಖಗಳಿಂದ ಸೇಜುರಿಸಿ ಕರ್ನಾಟಕಮಾತೆಯ ಸೇವೆಮಾಡುವ ಮುಖ್ಯೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯು, "ಇದು ಒಂದೇ."

ಸಮಸ್ತ ಕನ್ನಡಿಗರ ರಂಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 3/- ರೂ ಪಾಯಿಗಳನ್ನು ಕೊಡುವವರನ್ನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನ್ನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿಸಂಚಿಕೆಯಲ್ಲಿಯೂ ಆಮಹನೀಯರ ಹೆಸರುಗಳು ಪ್ರಕಟಿಸಲ್ಪಡುವವು

ಲಘುಕಾವ್ಯಮಾಲಾ.

ಸಂಪಾದಕ— ಶ್ರೀ ಎನ್. ವ್ಹಿ. ಕುಲಕರ್ಣಿ ಬಿ. ಎ. ಗದಗ. ಈ ಮಾಲೆಯ ನಾಲ್ಕನೆಯ ಪುಷ್ಪವಾದ "ಹುಣ್ಣಿಮೆಂಬ" ಎಂಬುದೊಂದೇ ಹೊಸ ವರುಷದ ಮೊದಲನೆಯ ಪುಷ್ಪವು ವರ್ಷಕ್ಕೆ ಒಟ್ಟು ಆರು ಪುಷ್ಪಗಳು ವಾರ್ಷಿಕರಿಗರ್ಪಿಸಲ್ಪಡುವವು ಬಿಳ್ಳನುಕ್ಕಳಿಗೂ ನುಡಿಳೆಯರಿಗೂ ಸುವಿಭವಾಗಿ ತಿಳಿಯಬೇಕಾದರೆ ಇದೊಂದೇ ಕಾವ್ಯಮಾಲೆಯು. ವರ್ಷಕ್ಕೆ ವರ್ಗಣಿ ಕೇವಲ ೦—೮—೦ ಮಾತ್ರ.

ಈ ಮಾಲೆಯ ಮೊದಲಿನ ಮೂರು ಪುಷ್ಪಗಳು ಮೂರಣಿ ಬೆಲೆ(ಟು) ಕಳುಹಿಸಿದರೆ ದೊರಕುವವು!

ಶುದ್ಧವಾದ ಹಿಮಾಲಯದ

ಜೇನತುಪ್ಪ!

ನಮ್ಮಲ್ಲಿ ಶುದ್ಧ ಹಾಗೂ ಮಿಶ್ರಿತವಲ್ಲದಜೇನತ್ತುಪ್ಪವು ಗ್ಯಾರಂಟಿ ಪತ್ರ ಸಹಿತವಾಗಿ ದೊಡ್ಡ ಪ್ರಮಾಣದಿಂದ ಅಗ್ಗವಾಗಿ ದೊರಕುವದು. ವ್ಯಾಪಾರಸ್ಥರು ತರೆಮಾಡಬೇಕು, ಪತ್ರವ್ಯವಹಾರವನ್ನು ಇಂಗ್ಲಿಷ ಅಥವಾ ಹಿಂದಿಯಲ್ಲಿ ಮಾಡಬೇಕು

ವಿಳಾಸ— ಪಂಡಿತ ಘನಶ್ಯಾಮ ಪಾಂಡೆ
/o ಲಾಲಾರಾಮಶರಣಪ್ರಸಾದ ಕಿಸನಸಹಾಯ
ನಜೀಬಾಬಾದ. (ಜಿಲ್ಲಾ ಬಿಜನೂರ).

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ

ನಾವು ಮುಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರನ್ನು ಕರೆಸಿದ್ದೇವೆ. ಮುಂಬೈ, ಮದರಾಸು, ಮಂಗಳೂರು, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್‌ಲೆದರ, ಹಾಫ್‌ಲೆದರ ಫುಲ್‌ಕೆಲಿಕೋ, ಹಾಫ್‌ಕೆಲಿಕೋ, ಸಿಫ್ಟ್ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಿಸ್ಪಡುತ್ತದೆ. ಲೆದರ ಬೈಂಡಿನ ಸೋರಿ ಎಲ್ಲ ಗೆಯ ಗೋಲ್ಡಗಿಲ್ಟ ಕೆಲಸವೂ ಮಾಡಲ್ಪಡುತ್ತದೆ.

ಪ್ರಯಾಣಿಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರಾಕ್ಸ್ವಲಿಂಗ ಬ್ಯಾಗುಗಳೂ (ಕೈಪೆಟ್ಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತು ಬಿಡ್ಡು ಹಾಕುವಂಥ ಪಾಕೇಟುಗಳೂ, ಲೆದರಿನಿಂದಲೂ, ಬಟ್ಟೆಯಿಂದಲೂ, ಕೃತ್ರಿಮಾಂಜನದಿಂದಲೂ ನಮೂನೆವಾರು ತಯಾರ ಮಾಡಲ್ಪಡುವದು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿರಿಯನ್ನು ಹೊಸದಾಗಿ ಕಂಪನಿಯ ನಮೂನೆಯಲ್ಲಿ ಹೆಚ್ಚು ಸಮಯ ಬಾಳಿಕೆ ಬರುವಂತೆ ತಯಾರುಮಾಡಿ ಚಲೋ ರೀತಿಯಿಂದ ದುರಸ್ತಿ ಮಾಡಲ್ಪಡುವದು.

ಇವೇ, ಕೋರ್ಟು ಮತ್ತು ಕಚೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೊಲಿಯೋಗಳನ್ನೂ, ಫೈಲುಗಳನ್ನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಕರ್ನಾಟಕ ಮಹಿಳಾವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ತಕ್ಕದ್ದಾದ ಹಾಗೂ ಉಪಜೀವನವನ್ನು ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು ಯೋಗ್ಯವಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಸೇರುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭಕೋಣ,

ವ್ಯವಸ್ಥಾಪಕರು, ಕ ಮ ವಿದ್ಯಾಲಯ, ಧಾರವಾಡ

ಟೇಬಲ್ ಟೈಂಪೀಸ್ ಇನಾಮ.

ಈ ನಕ್ಷೆಯಲ್ಲಿ ಕಂಡ್ಯಾಸ್ಟಿಸ್ ಪೇನಾವು ಇಂಗ್ಲಂಡಿನಲ್ಲಿ



ತಯಾರಾದ ದ್ದು ಇದಕ್ಕೆ ೧೪ ಕೆರೆಕೆನ ಭುಂಗಾರದಂಥ ನಿಬ್ಬು ಹಾಕಿದೆ ಈ ಪೇನಾವನ್ನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ಒಂದಕ್ಕೆ ೨-೪-೦

ವಿಳಾಸ- ಪ್ರಿಂಟರ್ ವಾಚ್ ಕಂಪನಿ.

ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟೆ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩॥ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಖಾಸಗಿವ ಸರ್ವೀಸಿನ ಮೋಟಾರ ಮಾಲಕರಿಗೆ ಸೈರಸೋಯ ದೊರೆಯಾಗಬೇಕೆಂದು ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು ತಾ॥ ೧೦ ಸಪ್ಟೆಂಬರ ೧೯೨೩ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯುರ್ಸ, ಟ್ಯೂಬ್ಸ, ಗ್ರೀಸ, ಪೋದಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳೆಲ್ಲ ಯೋಗ್ಯ ದರದಿಂದ ಸಿಗುವವು. ಒಂದು ಪೇಳಿ ವ್ಯಾವಾರಸ್ಥರು ಪಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕರು— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯುರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಂಗ ಮಾಡಿ ಕೊಡುವೆವು

ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಳಕಲ್ಲ ಸರ್ವೀಸ ನಿರಂತರ ನಡೆದಿದೆ

ಸ್ಟ್ಯಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಒಹುಮಾನವಾಗಿ ಪಡೆದ **ಸ್ಟ್ಯಾಂಡರ್ಡ್ ಕಾಫಿಪುಡಿಯು** ಅತ್ಯಂತ ಮನೋಹರವೂ, ರುಚಿಕರವೂ ಇದ್ದು ತರಿಸಿ ಪರೀಕ್ಷಿಸಿ ನೋಡಿ

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೊಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೆ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡಿಗೆ ೧-೪-೦ ಮತ್ತು ೧-೮-೦.

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ನರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇವೆಲ್ಲ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಯೆಂಬ ಆರೋಗ್ಯ ಮಾರ್ಗದರ್ಶನ. ಅನೇಕ ರಹಸ್ಯವಾದ ವಿಷಯಗಳಿವೆ.

ಏಜಂಟರು:—ಜಂಬುಲಿಂಗಪ್ಪ ಜಾಲವಾದಿ.
ಸ್ಟೇಶನರ್ಸ ಬಾಗಲಕೋಟೆ.
ರಾಜವೈದ್ಯ ನಾರಾಯಣಜಿ ಕೇತವಜಿ.
ಖಲ, ಚೀನಾಬಜಾರ್, ಮದ್ರಾಸು

ವರರು ಬೇಕಾಗಿರುವರು!

ವೇಸ್ಯಾ ಪಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಯಿಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತರುಳ್ಳ ತರುಣರು.

ಮೂರು ಬಾಲಕಿಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯರೂ-ಕೆಲ್ಸನ ವರಕ್ಕೆ ಪತ್ರವ್ಯವಹಾರ ಮಾಡಿರಿ.

ಕಾರಿಕ C/o- ಕನ್ನಡಿಗ.

ಮಾಸ) ಸನಾತನ ಧರ್ಮ ಸಂಜೀವಿನೀ (ಪತ್ರಿಕೆ

ಧರ್ಮಾಭಿವಾಸಿಗಳೇ! ನಿಮಗೆ ನಮ್ಮ ಧರ್ಮವು ಉಳಿಯಬೇಕೆಂಬ ಅಭಿಲಾಷೆಯಿದೆಯೋ ಹಾಗಾದರೆ ಧರ್ಮಧ್ವಜವನ್ನು ಎತ್ತಿ ಹಿಡಿದು ಹಿಂದೂಸಮಾಜದ ದುಃಸ್ಥಿತಿಯನ್ನೂ ಧರ್ಮಕ್ಕೆ ಕಲವು ಆಧುನಿಕ ಮಿಥ್ಯಾಪನೆಗಳಿಂದುಟಾಗುತ್ತಿರುವ ಅಘಾತಗಳನ್ನು ನಿರ್ಭಯವಾಗಿ ಪ್ರತಿಪಾದಿಸುವ ಶಾಸ್ತ್ರಮರ್ಮಗಳನ್ನು ತಿಳಿಸುವ ವಿದ್ವಾಂಸರ ಲೇಖನಗಳಿಂದ ತುಂಬಿತುಳುಕಾಡುತ್ತ ಅನ್ವಾನವ್ಯಾಖ್ಯಾನ ಪಂಡಿತ್ ಎಂ ಕೇ ಶ್ರೀನಿವಾಸ ರಾಘವಾಚಾರ್ಯರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಈ ಪತ್ರಿಕೆಗೆ ಚಂದಾದಾರರಾಗಿರಿಯೆಂದು ಎಷ್ಟು ಈಗಲೇ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿ ಕೊಳ್ಳಿರಿ-

ವಾರ್ಷಿಕ ಚಂದಾ ರೂ 2- 4 ಮಾತ್ರ

ಸಂಪಾದಕ – ಸನಾತನ ಧರ್ಮ ಸಂಜೀವಿನೀ
(ಕೊಪನುಜಾಂಬಾ ಅಗ್ರಹಾರ) ಮೈಸೂರು

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ } ೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೯೦೦೦ ಯಾರ್ಡ ಕೈನೂಲು

ಪರಸ್ಥಳದವರಿಗೆ } ಮನಿಯಾರ್ಡರದಿಂದ ೧-೧೩-೦
ವಿ ಪಿ. ಯಿಂದ ೨-೧-೦
ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು

ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ- } ಸ್ಥಳದವರಿಗೆ ೨-೦-೦
ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦
, ವಿ. ಪಿ ಯಿಂದ ೩-೧-೦

ಸರಕಾರ, ಮುನಸೀ ವಾಲಿಟಿ, ಲೊಕಲ್ ಬೋರ್ಡ ಇತ್ಯಾದಿ } ಸ್ಥಳದವರಿಗೆ ೪-೦-೦
ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦
ವಿ ಪಿ ಯಿಂದ ೫-೧-

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ರನೆ ಧರ್ಮಾರ್ಥವಾಗಿಯಾಗಲೀ, ವರ್ಷವ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —**ವ್ಯವಸ್ಥಾಪಕ**

ಅಚ್ಚಾಗಿದೆ! ತರಿಸಿರಿ

ವಾಸುದೇವನ

ಕಾಸ್ಮುಭಗಳು.

೧. ಇಂದಿರಾ ೨-೮-೦
(ಸಚಿತ್ರ ಸಾಮಾಜಿಕ ಕಾದಂಬರಿ)

೨. ನೀಳ್ಕತೆಗಳು ಭಾಗ ೧ ೧-೪-೦
(ಪ್ರಕೃತಿಬಲ ಬಿಳ್ಗೀ ಬಕ್ಕೆ, ಮಲ್ಲೀತಿಯು ನಲ್ಲಿಯರು, ಪ್ರೇಮವಿಜಯಗಳೆಂಬ ನಾಲ್ಕು ಕಥೆಗಳು:—

ಪಕಂತೆಯಾಮಿನಿ ಸ್ವಪ್ನಜಲರುತ್ತಾರೆ ನಾಟಕ, ಮತ್ತು ಯದು ಮಹಾರಾಜದ ಪ್ರತಿಗಳೆಲ್ಲವೂ ತೀರಿಹೋಗಿವೆ.

ಅಚ್ಚಿನಲ್ಲಿದ್ದ

ಪತಿವಶೀಕರಣ ನಾಟಿಕೆ

(ಅಲಿವ್ವರ ಗೊಲ್ಡ ಸ್ಮಿತ್‌ನ ಶೀ-ಸ್ಟೂಪ್ಸ್‌ಟು ಕಾಂಕ್ವರ್‌ದ ಅನುವಾದವೆ.)

ಫೆಬ್ರುವಾರಿ ತಿಂಗಳ ಕೊನೆಗೆ ಹೊರಬೀಳುವದು. ಬೇಕಾಗಿದ್ದವರು ಕೂಡಲೇ ತಮ್ಮ ಹೆಸರು ನೋಂದಾಯಿಸಬೇಕು.

ಸಪ್ಪಣಿ, ರಾ, ಕೆರೂರ.
ಬಾಗಲಕೋಟೆ (ಜಿ| ವಿಜಾಪೂರ).

For Ladies' and Gents' Insurance

in

The Bharat Insurance

Company, Ltd.

and for

Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgical Instruments and Drugs
(6) His Master's Voice Phones, and Records
(7) Cycles, Stoves and Gas Lights

and

(8) Up-to-date Books

Apply to:—

B. S. Tantry. B. A.,

BAGALKOT.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೬ ಸಯ್ಯದ ಅಲ್ಲಿ ಅಸಗರ ಬಲ್‌ಗ್ರಾಮಿ ಸುಪರೆಂಟಿಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೆರ್ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ. ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೫೬೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಬೆಲ್ಲಾ ವಿಜಾಪುರ. ರೂ ೧೦೦೦

ಬಿ. ಸ್. ಆರಾಧ್ಯ
ಚೀಫ ಏಜಂಟ ಹಬಳ್ಳಿ (ಮುಂಬಯಿ ಇಲಾಖಾ.)

ಉಬ್ಬಸ ಸಂಹಾರಿ

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಶುರುವಾದರೆ ಸೌಖ್ಯಪಡಿಸುವುದು ಬಹುಕಷ್ಟ. ಇದು ಹೆಚ್ಚಾಗಿ ತಂದೆತಾಯಿಗಳಿಂದ ಮಕ್ಕಳಿಗೆ ಬರುವುದುಸಹಜ. ಶುರುವಾದಾಗ ಬಹಳ ಭಯಂಕರವಾಗಿ ಕಾಡಿಸುವುದು. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟ್ಲುಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು. ಯೆದೆಯಲ್ಲಿ ಬೆಳ್ಳುಳ್ಳಿಗಾದಂತೆ ಗೊಯಿ ಗೊಯಿ ಯೆಂಬಶಬ್ದವು ಕೇಳಿಸುವುದು. ಹಾಸಿಗೆಯಮೇಲೆ ಮೈಚಾಚಿಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು. ನಮ್ಮ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವದು. ಸಂದೇಹವೇ ಇಲ್ಲ. ಅನುಪಾನಕ್ರಮ ಕನ್ನಡದಲ್ಲಿ ಔಷಧದಕೂಡೆ ಕಳುಹಿಸಲ್ಪಡುವದು.

ಬಾಟ್ಲಿ ೧ಕ್ಕೆ ರೂ ೨-೮-೦ ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣನ್ ಬ್ರದರ್ಸ್ ಪೋಸ್ಟ ಬಾಕ್ಸ. ನಂ, ೧೬೬. ಮದ್ರಾಸು.

ಕಿರ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಬುರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಬಹಳ. ಇದ ನಮ್ಮ ನೇಗಿಲು ನಂ ೧೦೦ ನಮೂದಂತೆ ಮಿಕ್ಕ ಉಪಯೋಗಕ್ಕೂ ಬರುವದು. ರಚನೆಃ— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯುವಂತೆ 'ಚಿಲಿಂಗ ಪ್ರೊಸೆಸ್ಸಿಂದ' ಗಟ್ಟಿಮುಟ್ಟು ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಸುತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತದೆ. ಎತ್ತು ಯುವ ಶಕ್ತಿಃ— ೬ ರಿಂದ ೮ ಎತ್ತುಗಳು ಬೇಕು. ಸಾಲಿನ ಆಳಗಲಃ— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. ತೂಕಃ—ಸುಮಾರು ೨೦೦ ಪೌಂಡು ಸವಿಸ್ತರ ಸೂಚನೆಯುಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೫೫ ರೂಪಾಯಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

ಲಿಟ್ಲರ ಓರಿಯಂಟ್ಲ ಬಾಮ.

ನೋವು ಬಾಧೆಗಳ ನಿವಾರಣಾರ್ಥ



೪೨ ವರ್ಷಗಳಿಂದ ಜಗತ್ತಿನ ತುಂಬ ಪ್ರಖ್ಯಾತಿಯನ್ನು ಪಡೆದ ಉಪಾಯ ವೆಂದರೆ ಇದೆ.

ಹಿಂದುಸ್ಥಾನದ ಅದ್ಭುತವಾದ
ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬೇಕಾಗಿದ್ದರೆ, ಇದನ್ನೇ ಉಪ ಯೋಗಿಸಿರಿಃ—

ತಲೆಶೂಲಿ, ಸಂಧಿವಾತ, ಎಲ್ಲ ತರದ ಕಸ, ನರ ತೊಡಕು, ಹರಿವಾತ, ಟೊಂಕನೋವು, ಅರ್ಧಾಂಗವಾಯು ಉಳುಕು ವಳದದ್ದು

ಸ್ವಲ್ಪೇ ಮುಲಾಮಿನಿಂದ ಬಹಳೇ ಗುಣ. ಉರುವು ಇಲ್ಲವೇಯಿಲ್ಲ. ಗುಳ್ಳೆ ಗಳೂ ಏಳುವದಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಿಯೇ ಹಿಂದೀಯರಿಂದ ತಯಾರಾದದ್ದು.

ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ!

ಈ ದಿವಸವೆ!
ಒಂದು ಬಾಟ್ಲಿ ಕೊಳ್ಳಿ!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಜಾಹೀರ ನೋಟೀಸ.

ಮೆ॥ ಕಲೇಕ್ಟರ ಸಾ॥ ಬಾ॥ ಜಿಲ್ಲಾ ವಿಜಾಪೂರ ಇವರ ಕಡೆಯಿಂದಃ—

ಯಾವತ್ತಿ ಜನರಿಗೆ ತಿಳಿಯಪಡಿಸುವದರಲ್ಲಿ ಬರುತ್ತದಲ್ಲಾ.

ತಾ॥ ೧-೪-೧೯೨೮ ರಿಂದ ೩೧-೩-೧೯೨೯ ಮಾರ್ಚಿಕ್ಕೆ ಮುಗಿಯುವ ಒಂದು ವರ್ಷದ ಮುದತೀ ಮಟ್ಟಿಗೆ ವಿಜಾಪೂರ ಜಿಲ್ಲೆಯೊಳಗಿನ ಲಗತಿನ ಯಾದಿಯಲ್ಲಿ ನಮೂದ ಪಡಿಸಿದ ಯಾವತ್ತೂ ಸರಕಾರಿ (ಪ್ರೊವ್ಹಿನಸಿಯಲ್) ರಸ್ತೆಗಳ ಮೇಲಿನ ಟೋಲ ನಾಕೆಗಳಲ್ಲಿ ಟೋಲ ವಸೂಲ ಮಾಡುವ ಹಕ್ಕನ್ನು ತಾ॥ ೨೨-೨-೧೯೨೮ ಬುಧವಾರ ದಿವಸ ಮೆ॥ ಕಲೇಕ್ಟರ ಸಾ॥ ಬಾ॥ ರವರ ಸಮಕ್ಷ ಮಧ್ಯಾನ್ನ ೧೨ ಘಂಟಿಕ್ಕೆ ದರ್ಬಾರ ಹಾಲಿನಲ್ಲಿ ಉಘಡ ಲಿಲಾವ ಮಾಡುವವರಲ್ಲಿ ಬರುವದು. ಟೋಲಿನ ದರಗಳು ಲಿಲಾವಿನ ವೇಳ್ಯೆಯಲ್ಲಿ ಹೇಳುವದರಲ್ಲಿ ಬರುವವು. ದರಗಳು ಹೋದ ವರ್ಷದಂತೆನೇ ಇರುತ್ತವೆ.

೨ ಸವಾಲಿನಲ್ಲಿ ಜೋಡುವವರು ಬೇಡತಕ್ಕ ರಕಮಿಗೆ ಲಾಯಖು ಇದ್ದ ಬಗ್ಗೆ ಮಾಮಲೇದಾರ ಸಾ॥ ಅಗರ ಮಹಾಲಕರಿ ಸಾ॥ ರವರ ಸಹಿನಿಶಿ ಸರ್ಟಿಫಿಕೀಟು ಛಾಪಿ ನಮೂನೆಯಲ್ಲಿ ತರತಕ್ಕದ್ದು.

೩ ಸವಾಲು ಬಂದಾದ ಕೂಡ್ಲೆ ಸವಾಲಿನ ಒಂದು ನಾಲ್ಕಾಂಶ ರಕಮು ತಾತ್ಕಾಲ ಜಮಾ ಮಾಡಿ ಪಾವತಿ ತಕ್ಕೊಂಡು ಉಳಿದ ಮೂರು ನಾಲ್ಕಾಂಶ ಸವಾಲಿನ ರಕಮನ್ನು ಕರಾರದ ಪ್ರಕಾರಾ ೩ ಸವನಾದ ಹಪ್ತೇ ಬಂದಿಗಳಿಂದ ಕೊಡಬೇಕು. ಬಾಬು ಸುಪರ್ದಿ ಪಡಕೊಳ್ಳುವ ಪೂರ್ವದಲ್ಲಿ ತಾಲೂಕಿನ ಮಾಮಲೇದಾರ ಸಾ॥ ರ ಮುಂದೆ ಅಗರ ಮಹಾಲಕರಿ ಸಾ॥ ರ ಮುಂದೆ ಪಟ್ಟಿ ಬರಕೊಡತಕ್ಕದ್ದು.

೪ ಸವಾಲ ಮಂಜೂರ ಮಾಡುವದು ಅಗರ ಬಿಡುವದು ಮೆ॥ ಕಲೇಕ್ಟರ ಸಾ॥ ಬಾ॥ ರವರ ಆಧೀನದಲ್ಲಿರುವದು.

೫ ಹೆಚ್ಚಿನ ಕರಾರ ವಗೈರೆ ಲಿಲಾವಿನ ವೇಳ್ಯೆಕ್ಕೆ ಓದಿ ಹೇಳುವ ತರೀಯಾದಿಯಲ್ಲಿ ಕೊಡುವದರಲ್ಲಿ ಬರುವದು.

೬ ಮತ್ತೇನಾದರೂ ಮಾಹಿತಿ ಬೇಕಾದಲ್ಲಿ ಮೆ॥ ಕಲೇಕ್ಟರ ಸಾ॥ ರವರ ಆಫೀಸದಲ್ಲಿ ಪಡಕೊಳ್ಳಬಹುದು.

ವಿಜಾಪೂರ
ತಾ॥ ೨೭—೧—೧೯೨೮

ಪ್ಹಿ. ಎಚ್. ನಾಯಿಕ
ಕಲೇಕ್ಟರ ಆಫ್ ವಿಜಾಪೂರ.

ವಿಜಾಪೂರ ಜಿಲ್ಲೆಯೊಳಗಿನ ಟೋಲ ನಾಕೆಗಳ ಹೆಸರು ವಯಾವ ಸರಕಾರಿ ರಸ್ತೆಗಳ ಮೇಲೆ ಅವು ಇರುವವು ಅವುಗಳ ಹೆಸರು-

ಶೇಜ ನಂಬರ	ರಸ್ತೆದ ಹೆಸರು	ನಾಕೇಗಳ ಜಾಗಾ
೧	ಸೊಲಾಪೂರ ಹುಬ್ಬಳ್ಳಿ-ರಸ್ತೆ	ತಿಡಗುಂದಿ ಹತ್ತರ-
೨	ಸದರ	ರೇಲ್ವೆ ಲೆನ್ ಹತ್ತರಾ ೬ಳ ನೇ ಮೈಲಗ
೩		ಕೊಲ್ಹಾರ ತಾಜವೇದ ಹತ್ತರಾ.
೪		ಕೆರೂರ ಸಮೀಪದಲ್ಲಿ ಉತ್ತರ ಬಾಜ ೧ ಕ್ಕೆ ಒಂದು ಎರಡಾಂಶ ಮೈಲಧಲ್ಲಿ
೫	ವಿಜಾಪೂರ ಕಾಗವಾಡ ರಸ್ತೆ	ತೊರವಿ-ಹತ್ತರಾ ೫೬ ನೇ ಮೈಲಿಗೆ
೬		ಹೊನವಾಡ
೭	[illegible] ರಸ್ತೆ	ರೆಲ್ವೆ ಕ್ರಾಸಿಂಗ ದಾಟಿ ಮತ್ತು ಮು ನಸಿನಾಲ್ಬಿ ಹದ್ದಿ ದಾಟಿ ಪೋಸ್ಟ ಆ ಫೀಸದಿಂದ ೩ ಮೈಲು ದಾಟಿ.
೮		ಹಿಪ್ಪರಿಗಿ ಕನ್ನೊಳ್ಳಿ ನಡುವೆ
೯	ವಿಜಾಪೂರ ಬಾಗೇವಾಡಿ ರಸ್ತೆ	ಮನಗೂಳಿ ಅಗಸಿ ದಾಟಿ
೧೦		ಬಾಗೇವಾಡಿ.
೧೧	ಕೊಲ್ಹಾರ ತಾಳೀಕೋಟ ರಸ್ತೆ	ತೆಲಗಿ
೧೨		ಬಳಗಾನೂರ
೧೩	ಮುದ್ದೇಬಿಹಾಳ ಚಿಮ್ಮಲಗಿ ರಸ್ತೆ	ಜಾಲಾಪೂರ ಹಳ್ಳದ ಹತ್ತರ
೧೪	ಬೆಳಗಾಂವ ಹುನಗುಂದ ರಸ್ತೆ	ಗದ್ದನಕೇರಿ ಕಡೆಗೆ ಮೈಲು ಅಗಿ
೧೫	ಬೆಳಗಾಂವ ಹುನಗುಂದ ರಸ್ತೆ	ತಿರೂರ ಹತ್ತರಾ
೧೬		ರನ್ನಸಗಿ ಹತ್ತರಾ ಮೈಲು ೧೦೯
೧೭	ಹಾಳೆ ಬದಾಮಿ ರಸ್ತೆ	ಬನಶಂಕರೀ ಹತ್ತರಾ (ರಾಮದುರ್ಗ ಟರ್ನಿಂಗ ಪ ಜೊಳಚ ಗುಡ್ಡದ ನಡುವೆ)

ಟೀಪು:— ಲಿಲಾವಿನ ವೇಳ್ಯಕ್ಕೆ ಶರ್ತಿನ ಯಾದಿ ಓದಿ ಹೇಳುವದರಲ್ಲಿ ಬರುವದು. ನಾಕ ಇಡುವ ಸ್ಥಳಗಳಲ್ಲಿ ಹಿಜ್ಜು ಕಡಿಮೆ ಮಾಡುವದಾದರೆ ಲಿಲಾವಿನ ವೇಳ್ಯಯಲ್ಲಿ ಕ|| ಸಾ|| ಬಾ|| ರವರು ಹೇಳುವರು. ಆ ಹೇಳಿದ ಸ್ಥಳದಲ್ಲಿ ನಾಕೆ ಇಡಬೇಕಾಗುವದು ಪೋಟ ನಾಕೆ ಇಡುವ ಸ್ಥಳಗಳನ್ನು ಸಹ ಆಗೆಯೇ ಹೇಳುವದರಲ್ಲಿ ಬರುವದು.

ವಿಜಾಪೂರ,

ತಾ|| ೨೭—೧—೧೯೨೮.

ವ್ಹಿ. ಎಚ್. ನಾಯಿಕ-
ಕಲೇಕ್ಟರ ಅಫ ವಿಜಾಪೂರ.

ರ. ನಂ ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡ ಪತ್ರಿಕೆ.

(ಇದರಲ್ಲಿ ಕನ್ನಡ ನವಜೀವನವು ಸನಾವಿಷ್ಕವಾಗಿದೆ)

ಯತ್ರ ಗತಾಸ್ತತ್ರ ದುಃಖಂ । ಯತ್ರಾತ್ಮವಶಂ ತತ್ರ ಸುಖಂ ॥ — ಸಾಮ

ಸಂಪಾದಕರು— ಮಂಗಳವೇಢೇ ರಾಜೀರಾಯರ ಮುಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಮಾಘ ಶುದ್ಧ ೧೫ ಶಕೆ ೧೮೪೯ ತಾ॥ ೫ ಫೆಬ್ರವರಿ ೧೯೨೮. | ಸಂಚಿಕೆ ೪೨

Date 5—2—1928.

ಕನ್ನಡ ಬಂಧುಗಳೇ ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ವಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವುಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸಿಬಿಸಿಯುಳಿಯುವದಿಲ್ಲ.ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದುಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ !

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಶಿಲ ಶನಿವಾರ ಸೇಠ ಲ ಮಿಡ್‌ಬ್ರಿಜ್ಜದ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮಾಡಿರಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ್ತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕಃ—ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಮಯೂರ ಶಿಖಾ

ದುರ್ಲಭವಾದ ವನಸ್ಪತಿಯು. ೨೦ ತೊಲೆಗೆ ೧೦ ರೂ ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಅವರೂಪವಾದ ವನಸ್ಪತಿಗಳು ದೊರಕುವವು

ವೈದ್ಯಃ—ವಾದಿರಾಜ ಜಹಗೀರದಾರ ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!

ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ವಿದ್ಯಾರಣ್ಯ, ರಾಮಾನುಜ, ಒಕ್ಕರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತೂ ಬೀರ, ಗೊಲ್ಲತಿ, ಮಾನ ಗಾಂಧಿ ಮುಂತಾದ ಶತ ವಿಭೂತಿಗಳ ಅತ್ಯುತ್ತಮವಾದ ಬಿತ್ತಿ ಪತ್ರಿಕೆಯ ಹಾಗೂ ಒಳ್ಳೆಯ ಅಲಂಕಾರವಾಗಿ ಕಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relief Pictures) ತಾವು ಸಿದ್ಧ ಪಡಿಸಿದ್ದೇವೆ. ಪ್ರತಿಯೊಂದು ಕೋಣೆಗೂ ಇವು ನಿಜವಾಗಿಯೂ ಅಲಂಕಾರಗಳೇ ಸರಿ. ಅವರವರ ಮನೆ, ಪಾಠಶಾಲೆಗಳನ್ನೂ, ಪಾಣಿಪಾತ್ರೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗಿವೆ. ಅಲ್ಲದೇ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಜ್ಜೆನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಒತೆದು ಕೊಳ್ಳಿ!

ದಿ ಇಂಡಿಯನ್ ಜ್ಯಾವೆಲರಿ ಮಾರ್ಟ್ ನಗರತ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ ! ಡಾಕ್ಟರ ಜಿ. ಬೀ. ಯವರ ಸುಲಭ ಕ್ರಯ!!

ಸುಗಂಧ ನಶ್ಯದ ಪುಡಿ.

Registerd Trads mark.

ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟಿ. ಸಾವಿರಾರು ವಂದಿಗಳು ಇದನ್ನು ಉಪಯೋಗಿಸಿ ಸಾವಿರ ಂತಗಳಾಗಿ, ಯೋಗ್ಯ ತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿಸಿಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರು ಬೆಟ್ಟ ಸಾಧಾರಣ ನಶ್ಯದ ಸಂಗಡ ಸುಗಂಧ ಈ ನಶ್ಯದ ಪುಡಿಯಲ್ಲಿ ಒಂದು ಚಿಮುಟಿಕೆಯಷ್ಟನ್ನು ವಿಸ್ತರಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಬಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ ೪ ಆಣೆ. ಡಜನ್ ಗಿರ ಕ್ರಯ ರೂ ೨—೮—೦, ವ್ಹಿ. ಪಿ. ಚಾರ್ಜು ೪ ಆಣೆ.

ವಿಳಾಸ:— ಗುರುಬಸವ ಅ್ಯಂಡ್ ಕಂಪೆನಿ, ಲಿಮಿಟೆಡ್,

ಪೋ. ಬಾ. ನಂ. ೧, ಪಾರ್ಕ್‌ಟೌನು, ಮದರಾಸು.

ದಯವಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆದಿರಿ.



ಬಾಗಲಕೋಟೆ- ಕನ್ನಡಿಗ ಮಾಘ ಶುದ್ಧ ೧೫ ಶಕೆ ೧೮೪೯

ಸಂಪಾದಕರ ಭೂಮಿ

ಓಂ

ಕನ್ನ ಮನಸಿನ ಮೇಣವಾಡಿ ಕಟ್ಟುವೆನಾನು ।
ನಿನ್ನ ವಿಕಸವವಾಡಿದಂಥ ನುಳ್ಳಿ ದೊಮ್ಮೆ।
ಚಿನ್ನದಾದರು ಚಿನ್ನ ಮೇಣಬಸ್ತಿಯ ನೊಂದು ಚಿನ್ನಯಾಕಾಶದಲಿ ।
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಚಿನ್ನಪ್ರಾಣವು ನಿನ್ನ ಗಂಧವನು ವೀರಬಹ ಗಂಧವಹವೆಂದು ತಿಳಿಯಿ
—ಅಂದಿಕಾ ತನಯ ದತ್ತ

ಹಿಂದುಸ್ಥಾನ ಈಗಿನ ಸ್ಥಿತಿಯು ಹತಾಶನಾದ ಶಿರ್ಜುನನ ಸ್ಥಿತಿಯಂತಾಗಿದೆ ಹಿಂದುಸ್ಥಾನಕ್ಕೆ ಅತಿಶಯ ನಾಗಿ ಮೋಹವುಂಟಾಗಿ ತನ್ನ ಅರಿವೇ ತನಗೆ ಇಲ್ಲದಂತಾಗಿದೆ; ತನ್ನ ಧರ್ಮವನ್ನು ಮರೆತುಬಿಟ್ಟಿದೆ! ತನ್ನ ಧ್ಯೇಯವು ಅದೆಯೊ ಇಲ್ಲವೊ ಎಂಬ ಸಂಶಯವು ಕೂಡ ಬಂದಿದೆ !! ಆದರೆ ಈ ಮೋ ಹವು ಎಷ್ಟು ಗಂಭೀರವಾಗಿ ವ್ಯಾಪಿಸಿದ್ದರೂ ಜನರು ಜೀವಿಸಹಜೀ ವಿದ್ದಾರೆ! ಇದೊಂದು ಸುಲಕ್ಷಣ. ಈ ಹತ್ತು ವರ್ಷಗಳಲ್ಲಿ ಜನರ ವಿಚಾರಗಳಲ್ಲಿ ಮಹದತಕ ಉಂಟಾಗಿದೆ. ನಮ್ಮ ಧ್ಯೇಯ ವಾದ ಸ್ವರಾಜ್ಯದ ಪ್ರಕಾಶವು ಎಲ್ಲರ ಹೃದಯದಲ್ಲಿ ಬೆಳಗುತ್ತಿದೆ. ನಮಗೆ ಸ್ವರಾಜ್ಯ ಸಿಗಬೇಕಾದರೆ ನಮ್ಮ ಸಾಮರ್ಥ್ಯದಿಂದ ಸಿಗುವ ದೇ ಹೊರ್ತು ಅದುಅನ್ಯರು ಕೂಡತಕ್ಕಂಥ ವಸ್ತುವಲ್ಲೆಂಬದು ಎಲ್ಲಿ ನೋಡಿದರೂ ಎಲ್ಲರ ತಲೆಯಲ್ಲಿಯೂ ಬರಹತ್ತಿದೆ. ೧೦ ವರ್ಷ ಗಳ ಹಿಂದೆ, ಮಾಂಟೆಗ್ಯೂ ಸಾಹೇಬರು, ಹಿಂದುಸ್ಥಾನವನ್ನು ಸ್ವ ರಾಜ್ಯಕ್ಕೆ ಪಾತ್ರ ಮಾಡುವೆವೆಂದೂ, ಸ್ವರಾಜ್ಯದ ಮೊದಲನೆಯ ಹಪ್ತೆಯನ್ನು ಕೊಡುವೆವೆಂದೂ, ಸಾರುತ್ತಲೇ ಹಿಂದುಸ್ಥಾನದ ಅಸಂ ಖ್ಯಾತವಾದ ಪಕ್ಷಗಳು ಲಕ್ಷಾವಧಿ ರೂಪಾಯಿಗಳನ್ನು ನೀರಿನಂತೆ ಚಲ್ಲಿ ಇಂಗ್ಲಂಡಕ್ಕೆ ಹೋಗಿ, ತಮ್ಮ ತಮ್ಮ ವಿಚಾರಗಳನ್ನು ಸಾಹೇ ಬ ಜನರಿಗೆ (ಇಂಗ್ಲಂಡದಲ್ಲಿ ಪ್ರತಿಯೊಬ್ಬರು ಸಾಹೇಬರೆ ಅಲ್ಲವೆ!) ತಿಳಿಸಿದರು! ತಮ್ಮಷ್ಟಕ್ಕೆ ತಾವೇ ಧನ್ಯವಾದಗಳನ್ನು ಮಾಡಿಕೊಂಡರು! ಹಿಂದುಸ್ಥಾನಕ್ಕೆ ಮಾಂಟೆಗ್ಯೂ ಸಾಹೇಬರು ಬರಲು, ಸ್ವ ರಾಜ್ಯವನ್ನು ಕೊಡಿರಿ ಎಂದು ಬೇಡಿಕೊಳ್ಳಲು ಎಲ್ಲ ಜನರು ಉಬ್ಬ ಸದಿಂದ ಹೋಟರು! ಅವರಿಗೆಂಥ ವಿಜೃಂಭಣೆಯ ಸ್ವಾಗತ! ಅಹಹ! ಎಲ್ಲೆಲ್ಲಿಯೂ ಉತ್ಸವ! ಎಲ್ಲೆಲ್ಲಿಯೂ ಅಬ್ಬರ! ಅವರ ಮುಂದೆ ಸಾಕ್ಷಿ ಕೊಡಲು ನಾ ಮುಂದೆ ನೀ ಮುಂದೆ ಎಂದು ಮುಖಂಡರು ಹೋಗಿದ್ದರು! ಈ ಆಳರಸರ ತಂತ್ರಗಳನ್ನು ಚನ್ನಾಗಿ ತಿಳಿದು ಕೊಂಡ ಲೋಕಮಾನ್ಯ ಟಿಳಕರಂಥವರೂ ಸಹ ಸಾಕ್ಷಿಗಾಗಿ ಹೋಗುವಂಥ ಪರಿಸ್ಥಿತಿಯು ಆಗಿನ ಕಾಲದಲ್ಲಿ ಬಂದಿದ್ದರಿಂದ ಅವರು ನಿರ್ವಾಹವಿಲ್ಲದೆ ಸಹಕಾರವನ್ನು ಮಾಡಲೇ ಬೇಕಾಯಿತು! ಮಹಾತ್ಮಾ ಗಾಂಧಿಯವರಿಗೆ ಆಗ್ಗೆ ಸಂಪೂರ್ಣ ಮೋಹ! ಇತ್ತ ಆಳರಸರು ಬ್ರಾಹ್ಮಣ ಬ್ರಾಹ್ಮಣೇತರವೆಂಬ ಹೊಸ ಭೂತವನ್ನು ಎಬ್ಬಿಸಿದರು! ಇದ್ದು ಬಿದ್ದದ್ದು ಕೂಡ ಅಸ್ತವ್ಯಸವಾಯಿತು. ಇ ದನ್ನು ಸಹ ಜನರು ಅರಿಯದಾದರು! ಇಷ್ಟು ಮೋಹ! ಎಂಥ ಸಜ್ಜನರ ಸರಕಾರ! ಈ ಸರಕಾರವೇ ನಮ್ಮ ತಾಯಿ ತಂದೆ! ಅ ವರ ಧರ್ಮವೇ ನಮ್ಮ ಧರ್ಮ! ಅವರ ಸಂಸ್ಕೃತಿಯೇ ನಮ್ಮ ಸಂಸ್ಕೃ ತಿ! ಅವರ ಆನಂದವೇ ನಮ್ಮ ಆನಂದ! ಅವರ ದುಃಖವೇ ನಮ್ಮ ದುಃಖ! ಎಂದು ಜನರು ನೌಕರಶಾಹಿಯನ್ನು ಹಾಡಹರಿಸಹತ್ತಿ ದರು! ಆದರೆ ಕಾಲಚಕ್ರವು ನಿಲ್ಲುವಂಥಾದಲ್ಲ! ತಿರುಗುತ್ತಲೇ ಇರುವದು! ಈ ಹತ್ತು ವರ್ಷಗಳ ಅವಧಿಯಲ್ಲಿ ಹಿಂದುಸ್ಥಾನದ ಒಳಗೂ ಹೊರಗೂ ಆದ ಹೆಜ್ಜೆ ಕಡಮೆಗಳನ್ನು ನೋಡಲು, ಆ ಶ್ಯಂತ ಆಶ್ಚರ್ಯವಾಗುತ್ತದೆ! ಲೋಕಮಾನ್ಯರ ಮರಿಯಾದರೂ ಮಹಾತ್ಮರೂ ತಮ್ಮ ವಿಚಾರಗಳನ್ನು ಬದಲು ಮಾಡಿಕೊಂಡು ಮಾ-ಬಾಪ ಸರಕಾರಕ್ಕೆ ಸೈತಾನೀ ಸರಕಾರವೆಂದು ಹೊಸ ನಾಮ ಕರಣ ಮಾಡಿದರು. ಅಸಹಕಾರವು ಪ್ರಾರಂಭವಾಯಿತು! ಎಲ್ಲಿ ನೋಡಿದರೂ ಸರಕಾರಕ್ಕೆ ವಿರೋಧ! ೫೦ ಸಾವಿರ ಜನರೂ ಸಂ ತೋಷದಿಂದ ತುರಂಗ ಸೇರಿದರು! ರಾಷ್ಟ್ರ ಕಾರ್ಯದಲ್ಲಿ ಯೂನಿ ಯನ್ ಜಾಕದ ಸ್ಥಾನವನ್ನು ರಾಟೆಯ ಸ್ವರಾಜ್ಯಧ್ವಜವು ಆಕ್ರ ಮಿಸಿತು! ಈಗಂತೂ ಇಂಗ್ಲಂಡವು ಹಿಂದುಸ್ಥಾನದ ಅಹಿತವನ್ನೇ ಮಾಡುತ್ತಿರುವದೆಂಬುದು ಎಲ್ಲರಿಗೂ ತಿಳಿಯಹತ್ತಿತು! ಸರಕಾರ ದಲ್ಲಿ ಎಲ್ಲರಿಗೂ ಅವಿಶ್ವಾಸ! ಮಾಂಟೆಗ್ಯೂ ಸಾಹೇಬರಂತೆ ಸರ್ ಸಾಯಮನ್ ಸಾಹೇಬರನ್ನು ಈಗ್ಗೆ ಇಂಗ್ಲಂಡವು ಹಿಂದುಸ್ಥಾನಕ್ಕೆ ಕಳಿಸಿದೆ! ಆದರೆ ಈಗ್ಗೆ ಆ ತರದ ಹುಜ್ಜು, ಉಬ್ಬು, ವಿಜೃಂಭಣೆ ಗಳಿಲ್ಲ! ಉಗ್ರಪಕ್ಷ, ಕಾಂಗ್ರೆಸ ಪಕ್ಷ, ಪ್ರಾಗತಿಕರ ಪಕ್ಷ ಮುಸಲ್ಮಾನರ ಸಂಘ ಬ್ರಾಹ್ಮಣೇತರರ 'ಜಸ್ಟೀಸ್' ಸಭೆ ಹೀಗೆ ಎಲ್ಲ ಪಕ್ಷದವರೂ ಬಹಿಷ್ಕಾರ ಹಾಕಿದ್ದರೆ! ಸಾಯಮನ್ ಸಾಹೇ ಬರು ಭರತಖಂಡಕ್ಕೆ ಒಂದ ದಿನ ಎಲ್ಲ ಕಡೆಗೆ ಹರತಾಳವೇ ಪರ ತಾಳ! ಅವರ ಮುಂದೆ ಸಾಕ್ಷಿ ಕೊಡಲಿಕ್ಕೆ ಯಾರೂ ಹೋಗಲಿಕ್ಕೆ ಸಿದ್ಧರಿಲ್ಲ! ಅವರಾಗಿಯೇ ನಮ್ಮನ್ನು ಮಾತಾಡಿಸಿದರೂ ಸಹ ನಾ ವು ಮಾತಾಡಕೂಡದೆಂದು ಎಲ್ಲ ಮುಂದಾಳುಗಳೂ ನಿಶ್ಚಯಿಸಿ ದ್ದಾರೆ! ಸಾಯಮನ್ ಸಾಹೇಬರು ಕೌನ್ಸಿಲ್ಲುಗಳಿಗೆ ಬಂದರೆ ಜನರು ಕೌನ್ಸಿಲ್ಲುಗಳನ್ನು ಬಿಟ್ಟು ಬರುವರು! ಸಾಯಮನ್ ಸಾಹೇಬರಿಗೆ ಬರಬೇಡಿರೆಂದು ಹಿಂದುಸ್ಥಾನವು ಒಮ್ಮನಸ್ಸಿನಿಂದ ಸಾರಿದರೂ ಅ ವರು ಸರಕಾರದ ಹಸ್ತಕರಾದ್ದರಿಂದ ನಮ್ಮ ಮತವನ್ನು ಲೆಕ್ಕಿಸ ದೇ ಬಂದೇ ಬಿಟ್ಟಿದ್ದಾರೆ! "ಮಾಡಿದ್ದುಣ್ಣೋ ವ ಹಾರಾಯಾ ಎಂಬಂತೆ ತಮ್ಮ ಫಲಭೋಗವನ್ನು ತಾವೇ ಉಣ್ಣುವರು! ಹಿಂದು ಸ್ಥಾನದ ಕಲ್ಯಾಣಕ್ಕಾಗಿ ವರ್ಷಕ್ಕೆ ೫೦,೦೦೦ ಪೌಂಡು ಉತ್ಪನ್ನವು ಳ್ಳ ವಕೀಲಿಯನ್ನು ಬಿಟ್ಟು ಬಂದಿರುವರಂತೆ! ಅಬ್ಬಬ್ಬ ಎಂಥ ಸ್ವಾ ರ್ಥತ್ಯಾಗವಿದು! ಈಗ ವಕೀಲಿ ಬಿಟ್ಟು ನಾಳೆ ಲಾರ್ಡರಾಗುವವರ ಹಂಚಿಕೆಯ ಸ್ವಾರ್ಥತ್ಯಾಗವಿದು! ಇನ್ನು ಯಾವ ಹಂಬಲವೂ ಇ ರದೇ ಕೇವಲ ಪರೋಪಕಾರ ಬುದ್ಧಿಯಿಂದ ಬಂದಿರುವರೆಂದ ಕಲ್ಪಿ ಸಿದರೂ, ಸರಕಾರದವರ ಹಸ್ತಕರಾಗಿ ಬಂದಿರುವದರಿಂದ ತಾವು ಹಿಂದುಸ್ಥಾನಕ್ಕೆ ಎಷ್ಟು ಹಾನಿ ಮಾಡುತ್ತಿರುವೆವೆಂಬ ಎಚ್ಚರಿಕೆಯೇ ಅವರಿಗಿಲ್ಲವೆಂದನ್ನಬೇಕಾಗುವದು. ಹಿಂದುಸ್ಥಾನಕ್ಕೆ ವ್ಯಕ್ತಿಶಃ ಅವರ ಮೇಲೆ ದ್ವೇಷವಿರಲಿಕ್ಕಿಲ್ಲ! ಆದರೆ ಹಿಂದಕ್ಕೆ ಇಂಗ್ಲಿಷ ಪಾ ರ್ಲಮೆಂಟದವರು ಇಜಿಪ್ತ ದೇಶಕ್ಕೆ ಮಿಲ್ನರ ಸಾಹೇಬರ ಕಮಿಶನ ವನ್ನು ಕಳಿಸಲು ಇಜಿಪ್ತದ ಜನವು ಕಠೋರವಾದ ಬಹಿಷ್ಕಾರವನ್ನು

ಯೇಕೆ ಹಾಕಿದರೆಂಬುದನ್ನು ಸೈಮನ್ ಸಾಹೇಬರು ಮರೆಯಲಾಗದು. ಇಜಿಪ್ತುದವರು ಸ್ವರಾಜ್ಯ ಸಂಪಾದಿಸಿದಂತೆ ನಾವೂ ಮಾಡಲೇ ಬೇಕೆಂಬುದನ್ನು ಭರತಖಂಡವು ಲಕ್ಷದಲ್ಲಿಟ್ಟುಕೊಳ್ಳಬೇಕು. ಗ್ರೀಕ್ ಐರಿಷ್ ಸ್ವಾತಂತ್ರ್ಯದ ಹೊತ್ತಿನ ಸ್ಥಿತಿಯೂ ಬಹಳೇ ಬದಲಿಸಿದೆ! ಏಶಿಯಾ ಖಂಡದ ಸಣ್ಣ ಸಣ್ಣ ರಾಷ್ಟ್ರಗಳು ಸ್ವತಂತ್ರವಾಗಿ ಬಿಟ್ಟಿವೆ! ಚೀನವು ಸಹ ಸ್ವತಂತ್ರವಾದಂತಾಗಿದೆ! ಏಶಿಯಾ ಖಂಡದಲ್ಲಿ ಹಿಂದುಸ್ಥಾನವು ಒಂದೇ ಪರತಂತ್ರವಾಗಿ ಉಳಿಯಲು ಶಕ್ಯವಿಲ್ಲ! ಪರತಂತ್ರವಿರುವದಾದರೆ ಸಾಧ್ಯವದಿಂದ ಪರತಂತ್ರರಾಷ್ಟ್ರಗಳಿಗೆ ಭಯ! ಯಾಕಂದರೆ ಇಂಗ್ಲೀಷರು ತಮ್ಮ ವರ್ಚಸ್ಸನ್ನು ಬೆಳಿಸಬೇಕಾದರೆ ಹಿಂದುಸ್ಥಾನದ ದುಡ್ಡು ಮತ್ತು ಸೈನ್ಯದ ಉಪಯೋಗ ಮಾಡುವರು! ನಾವು ನಿಶ್ಯಸ್ತ್ರರಾದರೂ ಇನ್ನೂ ಎರಡು ಈಶಸ್ತ್ರಗಳು ನಮ್ಮಲ್ಲುಂಟು! ಇಂಗ್ಲೀಷರ ಸಾಮಾನುಗಳಿಗೆ ಬಹಿಷ್ಕಾರ, ಮತ್ತು ಪ್ರಬಲವಾದ ಐಕ್ಯದಿಂದ ಸರಕಾರದ ಧೋರಣಕ್ಕೆ ವಿರೋಧ! ಇವೆರಡೇ ಶಸ್ತ್ರಗಳು ನಮ್ಮಲ್ಲಿವೆ! ಅವನ್ನೇ ನಾವು ಉಪಯೋಗಿಸಿದರೆ ವಿಜಯಶ್ರೀಯು ನಮಗೆ ಮಾಲೆ ಹಾಕದೇ ಇರಳು.

ಇದೇನು ದುಂದುಗಾರಿಕೆಯೇ ಅಥವಾ ಮೋಸಗಾರಿಕೆಯೋ?

ಬಾಗಲಕೋಟೆಯ ನಗರ ಪಿತಾಮಹರೇ ಹೇಳಲಿ!

೮-೯ ವರ್ಷಗಳ ಕೆಳಗೆ ಬಾಗಲಕೋಟೆಯ ನಗರ ಸಭೆಯವರು ಬಾಗಲಕೋಟೆಗೆ 'ಟಾವುನ ಪ್ಲಾನಿಂಗ ಆಕ್ಟ' ಹಚ್ಚಬೇಕೆಂದು ನಿರ್ಣಯಿಸಿದರು. ಮತ್ತು ಅವಕ್ಕನುಸಾರವಾಗಿ ಮುಂಬಯಿ ಸರಕಾರದ 'ಕನ್ಸಲ್ಟಿಂಗ ಸರ್ವೆ ಮೆಂಬರ ಆ್ಯಂಡ ಅರ್ಬಿಟ್ರೇಟರು' ಟಾವುನ ಪ್ಲಾನಿಂಗದ ಯೋಜನೆಯನ್ನೇರ್ಪಡಿಸಿದರು.

ಯೋಜನೆಯು ಅಸ್ತಿತ್ವದಲ್ಲಿ ಬರುವಕಾಲಕ್ಕೆ ದೇಶದೊಳಗೆ ವ್ಯಾಪಾರವು ಹೆಚ್ಚುತ್ತಲಿದ್ದು ಪಟ್ಟಣವು ತೀವ್ರ ವೇಗದಿಂದ ಬೆಳೆಯುತ್ತಿತ್ತು; ಮತ್ತು ಹಬ್ಬುತ್ತಿತ್ತು. ಹಾಗೂ ಮಿಕ್ಕ ಸ್ಥಳಗಳಲ್ಲಿಯಂತೆ ಬಾಗಲಕೋಟೆಯಲ್ಲಿ ಭೂಮಿಯ ಬೆಲೆಯು ಬಹಳೇ ಹೆಚ್ಚಾಗಿತ್ತು,

ಆದರೆ ಮಿಕ್ಕ ಸ್ಥಳಗಳಲ್ಲಿಯಂತೆ ಭಾಗಲಕೋಟೆಯಲ್ಲಿಯೂ ಯುದ್ಧದ ಪಶ್ಚಾತ್ ಇಕ್ಕಟ್ಟಿನ ಆರ್ಥಿಕ ಪರಿಸ್ಥಿತಿಯ ಮೂಲಕಹಾಗೂ ಆಗಾಗ್ಗೆ ಸಂಪೂರ್ಣಪಾಣಿ ಅಥವಾ ಅಂಶತಃ ಬಿದ್ದ ಕ್ಷಾಮದ ಮೂಲಕ, ವ್ಯಾಪಾರವು ಕಟ್ಟಾಯಿತು. ಇದರಿಂದ ಪೇಟೆಯಲ್ಲಿ ದುಡ್ಡಿನ ಕೊರತೆಯೇ ಹೆಚ್ಚಾಗಿ ಪಟ್ಟಣ ವಿಸ್ತಾರದ ಲವಲವಿಕೆಯು ಅಸ್ತಂಗತವಾಯಿತು.

ಯುದ್ಧದ ಪೂರ್ವದಲ್ಲಿದ್ದ ವ್ಯಾಪಾರದ ಪರಿಸ್ಥಿತಿಯನ್ನು ಲಕ್ಷಕ್ಕೆ ತಂದು ಟಾವುನ ಪ್ಲಾನಿಂಗದ ಅಧಿಕಾರಿಗಳು ಯೋಜನೆಗಳನ್ನು ಮಾಡಿದರು. ಈ ತರದ ಆಶಾವಾದದಿಂದ "ಪ್ಲಾಟ್ಸ"ಗಳ ಬೆಲೆಯನ್ನು ಹೆಚ್ಚಾಗಿ ಕಟ್ಟಿದರು. ಅದರ ಬದಲಾದ ಪರಿಸ್ಥಿತಿಗನುಸಾರವಾಗಿ ಬದಲಾವಣೆಯನ್ನು ಮಾಡಿರುವದಿಲ್ಲ ಪರಿಸ್ಥಿತಿಯು ಬಹಳ ಬಿಟ್ಟಿದ್ದು ಆಶಾವಾದವು ಮೂಲವಾಗಿರುತ್ತದೆ,

'ಟಾವುನ ಪ್ಲಾನಿಂಗ'ನ ಯೋಜನೆಯ ಪ್ರಕಾರ ಧಾನ್ಯದ ಮಾರ್ಕೇಟ ಹಾಗು ಮಿಕ್ಕ ವ್ಯಾಪಾರಕ್ಕಾಗಿ ಹೆಚ್ಚಾಗಿ ಭೂಮಿಯು ಕಾದಿಡಲ್ಪಟ್ಟಿದ್ದು ಮನೆಗಳ ಸಲುವಾಗಿ ಸ್ವಲ್ಪೇ ಇಡಲ್ಪಟ್ಟಿದೆ.

ಆದರೆ ಸ್ಥಳಿಕ ವ್ಯಾಪಾರಸ್ಥರು ಪಟ್ಟಣದಲ್ಲಿ ಮೊದಲೆ ಬೆಲೆಯುಳ್ಳ ಕಟ್ಟಡಗಳನ್ನು ಕಟ್ಟಿಸಿದ್ದರಿಂದಲೂ ಯಾವ ಬಗೆಯ ಅದಲು ಬದಲನ್ನೂ ಮಾಡಲು ಮನಸಿಲ್ಲದ ಸ್ವಭಾವದವರಾಗಿದ್ದರಿಂದಲೂ ಸ್ಥಳಾಂತರ ಮಾಡಿ ಕಟ್ಟಡಗಳಲ್ಲಿ ಧನವ್ಯಯಮಾಡಲು ಮತ್ತು ಕಷ್ಟ ಸಹಿಸಲು ಸಿದ್ಧರಿರುವದಿಲ್ಲ. ಸರಕಾರದಿಂದ ಸಾಲತೆತ್ತಿ ನಗರ ಸಭೆಯವರು ಯೋಜನೆಯ ಪ್ರಕಾರ ಬೀದಿಗಳನ್ನೇರ್ಪಡಿಸಬಹುದು. ಆದರೆ ಸ್ಥಳಾಂತರ ಮಾಡಲು ವ್ಯಾಪಾರಸ್ಥರನ್ನು ಒಲಾತ್ಕರಿಸಲಾರರು, ಇದಲ್ಲದೆ, ವಿಸ್ತಾರಕ್ಕಾಗಿ ಗೊತ್ತು ಪಡಿಸಿದ ಸ್ಥಳವು ಎತ್ತರವಾಗಿದ್ದರಿಂದ, ನೀರಿನ ತೊಂದರೆಯೂ ಆಗುವದು. ನೀರಿಗಾಗಿ ೯೦ ಫೂಟು ಆಳವಾಗಿ ಭಾವಿಗಳನ್ನಗಿಯಬೇಕಾಗುವದು. ಈ ಯೋಜನೆಯಲ್ಲಿ ಸಮಾವಿಷ್ಟಪಡಿಸಿದ ಭೂಮಿಗು ಯಜಮಾನರು ಇಮ್ಮಡಿ ತೊಂದರೆ ಗಳಿಗಿದಿರಾಗಬೇಕಾಗುವದು, ಮತ್ತು ಈ ಯೋಜನೆಯ ಅಭಿವೃದ್ಧ್ಯರ್ಥ ಹೆಚ್ಚು ಪಣ ಕೂಡಬೇಕಾಗತ್ತದೆ! ಹೆಚ್ಚು ಹಣ ತೆತ್ತಿ ನೀರಿನ ಸೌಕರ್ಯವಿಲ್ಲದೆ ಪ್ಲಾಟುಗಳನ್ನು ಕೊಳ್ಳುವ ಗಿರಾಕಿಗಳೂ ದೊರೆಯುವದಿಲ್ಲ. ಭೂವಿ.ಗಳ ಬೆಲೆಗಳನ್ನು ಗೊತ್ತು ಪಡಿಸುವದರಲ್ಲಿ ಅಧಿಕಾರಿಗಳು ಚಿಕ್ಕ ಪಟ್ಟಣವಾದ ಬಾಗಲಕೋಟೆಯ ಪರಿಸ್ಥಿತಿಯನ್ನು ಅಲಕ್ಷಿಸಿ ಮುಂಬಯಿಯೆಂಥ ವ್ಯಾಪಾರದ ದೊಡ್ಡ ದೊಡ್ಡ ಕೇಂದ್ರಗಳಿಗೆ ಸಲ್ಲುವಂಥ ಯೋಜನೆಯನ್ನು ಮಾಡಿರುವರು; ಆದರೆ ಮೇಲಾಣಿಸಿದ ಕಾರಣಗಳ ಮೂಲಕ ಈ ಯೋಜನೆಯು ಫಲಕರಿಯಾಗದು. ಕಾನೂನ ಪ್ರಕಾರ ಎಲ್ಲಕ್ಕೂ ಹೆಚ್ಚು ಸಹಾಯಾರ್ಥ ಹಣವೆಂದರೆ (contribution) ನೂರಕ್ಕೆ ೫೦ ಇದೆ! ಆರ್ಬಿಟ್ರೇಟರು ನೂರಕ್ಕೆ ೬೨ ರಂತೆ ಅಂದರೆ ಹೆಚ್ಚಿನ ದರದ ಪ್ರಕಾರ ಬಾಗಲಕೋಟೆಗೆ ಅಸಹ್ಯವಾಗುವಂಥ ಭಾರವನ್ನು ಕೇರಿರುವರು!

ನಗರ ಸಭೆಯವರು ಬೀದಿಗಳನ್ನು ಮಾಡಿದ ಕೂಡಲೆ ಹೆಚ್ಚು ಕರಕೊಡಬೇಕಾಗುವದು. ಮುಂದೆ ಯೋಜನೆಯು ಯಶಸ್ವಿಯಾದ ಪಕ್ಷದಲ್ಲಿ ಪ್ರತಿಫಲವಿಲ್ಲದೆ ಹೆಚ್ಚು ವೆಚ್ಚದ ಹೊಣೆಯನ್ನು ಹೊರಬೇಕಾಗುವದು! ಇದೆಲ್ಲಿಯ ನ್ಯಾಯ?

ವಿಜಾಪುರದಂಥ ಜಿಲ್ಲೆಯ ಸ್ಥಳದಲ್ಲಿ ಸಹ ಕಾಟನ ಮಾರ್ಕೇಟಿನ ಸ್ಥಳಾಂತರ ಮಾಡಲು ಪಟ್ಟ ಪ್ರಯತ್ನವು ನಿಷ್ಫಲವಾಯಿತು!! ಇದರಂತೆ ವಿಜಾಪುರದಲ್ಲಿ ಸ್ಥಾಪಿಸಿದ ಹೊಸ ಜವಳಿ ಪೇಟೆಯು ಮುಕ್ಕುರಿಸಬೇಕೆಂದನ್ನತ್ತುದೆ! ಧಾನ್ಯದ ವ್ಯಾಪಾರಕ್ಕಾಗಿ ಅಷ್ಟು ಪ್ರಸಿದ್ಧವಿಲ್ಲದ ಮತ್ತು ಜಿಲ್ಲೆಯ ಸ್ಥಳವಿಲ್ಲದ ಬಾಗಲಕೋಟೆಯ ಹಾಡಾದರು ಬೇರೆ ಏನಾಗಲವದು?

ಬಾಗಲಕೋಟೆಯಂಥ ಸಾಮಾನ್ಯ ಸ್ಥಳದಲ್ಲಿ "ಟಾವುನ ಪ್ಲಾನಿಂಗ" ಕಾನೂನವನ್ನು ಅಮಲಿನಲ್ಲಿ ತಂದದ್ದೇ ಮೊದಲು ದೊಡ್ಡ ತಪ್ಪು! ಅದರಲ್ಲಿ ಜನರ ಸಮ್ಮತಿ ಪಡೆಯದೆ, ಅವರ ಹಿತಾಹಿತವನ್ನು ಅವರ ಕೂಡ ಸಹಕಾರ ಮಾಡಿ ಆಲೋಚಿಸದೆ, ಭವಿಷ್ಯತ್ಕಾಲದ ರಮ್ಯವಾದ ಸ್ವಕಪೋಲಕಲ್ಪಿತ ಭೂಮಿಗಳ ಬೆಲೆಗಳ ಆಶೆಯನ್ನು ಭೂಮಿಗಳ ಮಾಲೀಕರಿಗೆ ತೋರಿಸಿ, ಸದ್ಯಕ್ಕೆ ಹೆಚ್ಚು ಸಹಾಯಕ ಹಣವನ್ನು (contribution.) ಕೊಡಲು ಒತ್ತಾಯ ಪಡಿಸುವದೇನೋ ದುಂದುಗಾರಿಕೆಯೋ? ಮೋಸಗಾರಿಕೆಯೋ? ಇದಲ್ಲದೆ, ಸಹಾಯಕ ಹಣದ ಮೇಲೆ ಸಾಲದ ಹಣದಂತೆ ಬಡ್ಡೀ ತೆತ್ತಬೇಕಂತೆ! ವಾಹವ್ವಾ! ಒಳ್ಳೇ ನ್ಯಾಯವಿದು! ನಗರ ಸಭೆಯು ಹೀಗೆ ಜನರ ಕಲ್ಯಾಣಮಾಡುತ್ತ, ಜನರಿಗೆ ಇಲ್ಲದ ಆಶೆ ತೋರಿಸಿ, ಅವರಿಗೆ ಕಷ್ಟಕ್ಕೆ ಗುರಿಮಾಡುತ್ತ ಹೋಗುವದು ಸಮಂಜಸವೋ? ನಗರ ಸಭೆಯವರು ಆ ಭೂಮಿಗಳನ್ನು ಯೋಗ್ಯ ಬೆಲೆಗಳಿಗೆ ತೆಗೆದುಕೊಂಡು ಜನರನ್ನು ತೊಂದರೆಯಿಂದ ಮುಕ್ತಮಾಡಬೇಕು. ಇನ್ನು ಸರಕಾರಕ್ಕೆ ನಮ್ಮ ಸೂಚನೆಯೇನೆಂದರೆ, 'ಟಾವುನ ಪ್ಲಾನಿಂಗ' ಕಾನೂನದ ಳಿ ನೇ ಕಲಮಿನ ಪ್ರಕಾರ ಈ ಯೋಜನೆಯ ಪ್ರತಿ ವಿಚಾರ ಮಾಡಬೇಕು. ಜನರಾದರು ಇದು ವ್ಯಕ್ತಿ ಪ್ರಶ್ನೆಯೆಂದು ತಿಳಿಯದೇ ಹೆಚ್ಚು ತೀವ್ರವಾಗಿ ವಿರೋಧಿಸಬೇಕು!

ಕರ್ನಾಟಕ ರಾಷ್ಟ್ರ

(ಮೈಸೂರು ಮಹಾರಾಜಾಸ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಕನ್ನಡ ನಾಡನ್ನೆಲ್ಲಾ ಒಂದೇ ಆಡಳಿತದಲ್ಲಿರುವಂತೆ ಒಟ್ಟುಗೂಡಿಸುವದಕ್ಕಾಗಿ ಚರ್ಚೆಗೆ ತಂದ ಮಸೂದೆ)

ಪೀಠಿಕೆ.

ಈಗ ನಾನಾ ಆಡಳಿತಗಳಿಗೆ ಒಳಪಟ್ಟು ಹೋಗಿರುವ ಕನ್ನಡಿಗರೆಲ್ಲಿ ಐಕ್ಯಮತ್ಯವನ್ನುಂಟು ಮಾಡುವದಕ್ಕೂ,

ಇತರ ಭಾಷೆಗಳು ಪ್ರಬಲವಾದ ಅಧಿಪತ್ಯಗಳಲ್ಲಿ ವಾಸವಾಗಿರುವ ಕನ್ನಡಿಗರು ಆಯಾ ಸರ್ಕಾರದ ನಿಯಮಗಳಿಗೊಳಪಟ್ಟು ವ್ಯವಹಾರಗಳನ್ನು ನಡಿಸಬೇಕಾಗಿರುವದರಿಂದ ಕನ್ನಡಿಗರಿಗುಂಟಾಗಿರುವ ಅನೇಕ ತೊಂದರೆಗಳನ್ನು ತಪ್ಪಿಸುವದಕ್ಕೂ,

ಇತರ ದ್ರಾವಿಡಭಾಷೆಗಳವರು ತಮ್ಮ ತಮ್ಮ ಯೋಗಕ್ಷೇಮದಲ್ಲಿ ದೃಷ್ಟಿಯಿಟ್ಟು, ತಮಗಾಗಿ ಬೇರೆ ಬೇರೆ ರಾಷ್ಟ್ರಗಳನ್ನು ಉಂಟುಮಾಡಿಕೊಳ್ಳಲು ಮಾಡುತ್ತಿರುವ ಪ್ರಬಲ ಪ್ರಯತ್ನಗಳಿಂದ ಕನ್ನಡಿಗರಿಗುಂಟಾಗುವ ಅಸಹಾಯತೆಯನ್ನು ತಪ್ಪಿಸುವದಕ್ಕೂ,

ಕನ್ನಡನಾಡಿನವರಿಗೇ ವಿಶೇಷವಾಗಿ ಬೇಕಾದ ತಿಳಿವಳಿಕೆಯನ್ನು ಜನರಲ್ಲಿ ಹೆಚ್ಚಿಸಿ ಅಭ್ಯುದ್ಧಿಪಡಿಸುವದಕ್ಕೂ,

ಕರ್ನಾಟಕ ಆರ್ಥಿಕ, ಇತ್ಯಾದಿ ಸಕಲ ವಿಧವಾದ ಅಭಿವೃದ್ಧಿಗೂ, ಕನ್ನಡಿಗರು ಪ್ರಯತ್ನಿಸುತ್ತಿರುವ ಎಲ್ಲಾ ಭಾಗಗಳನ್ನು ಒಂದೇ ಆಡಳಿತಕ್ಕೆ ಒಳಪಡಿಸುವದು ಅತ್ಯವಶ್ಯವಾದುದರಿಂದ,

ಇಲ್ಲಿ ಸಭೆಸೇರಿರುವ ಮೈಸೂರ ಮಹಾರಾಜರವರ ಕಾಲೇಜಿನ ಕರ್ನಾಟಕ ಸಂಘದ ಸದಸ್ಯರಿಂದ ಈ ರೀತಿ ವಿಧಾಯಕವಾಗಲಿ.

೧ ಹೆಸರು ಮತ್ತು ವ್ಯಾಪನೆ.

೫. ಈ ಮಸೂದೆಗೆ 'ಕರ್ನಾಟಕ ರಾಷ್ಟ್ರೀಯ ಏಕೀಕರಣ ಮಸೂದೆ' ಎಂಬ ಹೆಸರಿರತಕ್ಕದ್ದು.

೩. ಇದರ ವ್ಯಾಪನೆಯು ಕನ್ನಡ ನಾಡಿಗೆಲ್ಲಾ ಇರತಕ್ಕದ್ದು.

೧. ಇದು ವಿಭವ ಸಂವತ್ಸರದ ಯುಗಾದಿ ಹಬ್ಬದಿಂದ ಪ್ರಚಾರಕ್ಕೆ ಬರತಕ್ಕದ್ದು.

೨. ಸಂಜ್ಞೆಗಳು.

೫. ಕನ್ನಡನಾಡೆಂದರೆ ಕನ್ನಡ ಭಾಷೆಯನ್ನೇ ಮಾತನಾಡುವವರಿ ಜನಸಂಖ್ಯೆಯು ಹೆಚ್ಚಾಗಿರುವ ದಕ್ಷಿಣ ಇಂಡಿಯಾದ ಹೊಂದಿಕೆಯಾಗಿರುವ ಭಾಗಗಳು (ಜಿಲ್ಲೆಗಳು) ಎಂದರೆ– ಒಟ್ಟು ಮೈಸೂರು ದೇಶವೂ ಕೊಡಗು ಪ್ರಾಂತವೂ ಇದರ ಎಲ್ಲೆಗಳಲ್ಲಿರುವ ಬೊಂಬಾಯಿ ಅಧಿಪತ್ಯದ ಉತ್ತರ ಕನ್ನಡ, ಧಾರವಾಡ, ವಿಜಾಪುರ, ಬೆಳಗಾವ, ಜಿಲ್ಲೆಗಳೂ ಸಾತಾರಾ ಜಿಲ್ಲೆಯ ಭಾಗವೂ ಮದರಾಸಾಧಿಪತ್ಯದ ಆನಂತಪುರ, ಬಳ್ಳಾರಿ, ಕೊಯಮುತ್ತೂರು, ಸೇಲಂ, ನೀಲಗಿರಿ, ದಕ್ಷಿಣ ಕನ್ನಡ ಜಿಲ್ಲೆಗಳೂ ಹೈದರಾಬಾದಿಗೆ ಸೇರಿದ ರಾಯಚೂರು, ಕಲ್ಬುರ್ಗ, ಬಿದರೆ ಜಿಲ್ಲೆಗಳೂ ಮತ್ತು ಕೊಲ್ಲಾಪುರು, ಮುಧೋಳ್, ಜಮಖಂಡಿ, ಸೊಂಡೂರು, ಸಾಂಗ್ಲಿ ಮುಂತಾದ ಸಣ್ಣ ಸಂಸ್ಥಾನಗಳೂ ಕನ್ನಡನಾಡಿನಲ್ಲಿ ಸೇರುವವು

೩. ಸಾಮ್ರಾಜ್ಯ ಸರ್ಕಾರವೆಂದರೆ ಜಾರ್ಜ ಚಕ್ರವರ್ತಿ ಸಾರ್ವಭೌಮರ ಬ್ರಿಟಿಷ್ ಇಂಡಿಯಾದ ಸರ್ಕಾರ.

೩. ನಿಬಂಧನೆಗಳು.

೫. (ಅ) ಕನ್ನಡನಾಡೆಲ್ಲವು "ಕರ್ನಾಟಕ ರಾಷ್ಟ್ರ" ವೆಂಬ ಹೆಸರಿನಿಂದ ಒಂದೇ ಆಡಳಿತಕ್ಕೆ ಒಳಪಟ್ಟ ದೇಶವಾಗಿರತಕ್ಕದ್ದು. ಈ ಸರ್ಕಾರವು ಈಗಿನ ಮೈಸೂರು ಸರ್ಕಾರದ ದರ್ಜೆಯನ್ನು ಹೊಂದಿರತಕ್ಕದ್ದು.

(ಆ) ಈ ರಾಷ್ಟ್ರಕ್ಕೆ ಮೈಸೂರು ರಾಜಧಾನಿಯಾಗಿರತಕ್ಕದ್ದು. ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಯೋಗ್ಯವಾದ ಒಂದು ಸ್ಥಳವನ್ನು ದ್ವಿತೀಯ ರಾಜಧಾನಿಯನ್ನಾಗಿ ಮಾಡತಕ್ಕದ್ದು.

೩. (ಅ) ಮೈಸೂರಿನ ಮಹಾರಾಜರೂ ಅವರ ವಂಶಸ್ಥರೂ ಇನ್ನು ಮುಂದೆ "ಕರ್ನಾಟಕದ ಮಹಾರಾಜ" ರೆಂಬ ಹೆಸರಿನಿಂದ ಈ ಕರ್ನಾಟಕ ರಾಷ್ಟ್ರಕ್ಕೆ ಸಾಂಕುಶ ಪ್ರಭುಗಳಾಗಿರತಕ್ಕದ್ದು.

೪. ಈ ಕಾನೂನಿನ ದೆಸೆಯಿಂದ ರಾಜ್ಯಾದಿಗಳನ್ನು ಕಳೆದುಕೊಳ್ಳುವವನಿಗೆ ವೇತನರೂಪದಲ್ಲಿ ಪರಿಹಾರ ದ್ರವ್ಯವನ್ನು ಕೊಡತಕ್ಕದ್ದು

೫. (ಅ) ಈ ಕರ್ನಾಟಕ ರಾಷ್ಟ್ರವು ಮಹಾರಾಜರಿಂದ ಕೂಡಿ ಪ್ರಜಾಪ್ರಭುತ್ವಕ್ಕೆ ಒಳಗಾಗಿರುತಕ್ಕದ್ದು.

(ಆ) ಸೈನ್ಯದ ಜಾತಿಯಲ್ಲಿಯೂ ಅನ್ಯದೇಶಗಳೊಡನೆ ವಾಡ ಬೇಕಾಗುವ ವ್ಯವಹಾರ, ರಾಜ್ಯತಂತ್ರಗಳಲ್ಲಿಯೂ ಈ ರಾಷ್ಟ್ರವು ಚಕ್ರವರ್ತಿ ಸಾರ್ವಭೌಮರ ಇಂಡಿಯದ ಸಾಮ್ರಾಜ್ಯ ಸರ್ಕಾರಕ್ಕೆ ಅಧೀನವಾಗಿರತಕ್ಕದ್ದು.

(ಇ) ಈ ರಾಷ್ಟ್ರವು ಸಾಮ್ರಾಜ್ಯ ಸರ್ಕಾರಕ್ಕೆ ಈಗ ಮೈಸೂರು ಸರಕಾರದವರು ಸಲ್ಲಿಸುವ ಇಪ್ಪತ್ತು ನಾಲ್ಕೈವರೆ ಲಕ್ಷ ರೂಪಾಯಿಗಳ ಪೊಗದಿಯನ್ನು ಸಲ್ಲಿಸತಕ್ಕದ್ದು.

೪. (ಅ) ಕನಾಟಕದೆಲ್ಲಿರುವ ಎಲ್ಲಾ ರೈಲುಮಾರ್ಗಗಳೂ ರಾಷ್ಟ್ರ ಸರ್ಕಾರದ ಆಡಳಿತಕ್ಕೆ ಸೇರತಕ್ಕದ್ದು.

(ಆ) ಕರ್ನಾಟಕದ ಮುಖ್ಯ ಕೇಂದ್ರಸ್ಥಾನಗಳಿಂದ ಕೊಡಗು ಮಂಗಳೂರು ಮುಂತಾದ ಎಲ್ಲಾ ಪ್ರಾಂತ್ಯಗಳಿಗೂ ರೈಲುಹಾಕುವ ಪ್ರಯತ್ನವನ್ನು ಕೂಡಲೆ ಮಾಡತಕ್ಕದ್ದು.

೫. (ಅ) ಮೈಸೂರು ವಿಶ್ವವಿದ್ಯಾನಿಲಯವು ಕರ್ನಾಟಕ ವಿಶ್ವವಿದ್ಯಾನಿಲಯವಾಗತಕ್ಕದ್ದು.

(ಆ) ಉತ್ತರ ಕರ್ನಾಟಕದಲ್ಲಿ ಈ ವಿಶ್ವವಿದ್ಯಾನಿಲಯದ ಒಂದು ಕೇಂದ್ರವನ್ನು ಏರ್ಪಡಿಸತಕ್ಕದ್ದು.

(ಇ) ಈ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಶಾಸ್ತ್ರಗಳನ್ನೂ ಕನ್ನಡದಲ್ಲಿಯೇ ಬೋಧಿಸತಕ್ಕದ್ದು.

(ಈ) ಇಂಗ್ಲೀಷ್ ಭಾಷೆಯು ಒತ್ತಾಯವಾದ ದ್ವಿತೀಯ ಭಾಷೆಯಾಗಿರತಕ್ಕದ್ದು

೬ (ಅ) ಈ ಕರ್ನಾಟಕ ರಾಷ್ಟ್ರಸರಕಾರದ ಎಲ್ಲಾ ಪತ್ರವ್ಯವಹಾರಗಳೂ ಜಾಹೀರಾತುಗಳೂ ಕನ್ನಡದಲ್ಲಿಯೇ ನಡೆಯತಕ್ಕದ್ದು.

(ಆ) ನ್ಯಾಯಸ್ಥಾನಗಳಲ್ಲೆಲ್ಲಾ ಕನ್ನಡವನ್ನೇ ಉಪಯೋಗಿಸತಕ್ಕದ್ದು.

೪ ಉದ್ದೇಶ ಮತ್ತು ಪ್ರಯೋಜನ

ಇಂಡಿಯಾ ಸರ್ಕಾರದವರೂ ಭರತಖಂಡದ ರಾಷ್ಟ್ರೀಯ ಸಭೆಯವರೂ ಪ್ರಜಾಪ್ರಮುಖರೂ ನಮ್ಮ ದೇಶವನ್ನು ಭಾಷೆಗಳಿಗನುಸಾರವಾಗಿ ವಿಂಗಡಿಸಬೇಕೆಂದು ನಿಶ್ಚಯಿಸಿರುವಂತೆ ಕನ್ನಡಿಗರು ವಾಸವಾಗಿರುವ ಎಲ್ಲಾ ಭಾಗಗಳನ್ನೂ ಒಂದೇ ಸರ್ಕಾರದ ಆಡಳಿತಕ್ಕೆ ಒಳಪಡಿಸುವದು ಅತ್ಯಾವಶ್ಯಕ. ಇದರಿಂದ ಕನ್ನಡಿಗರ ಮೇಲ್ಮೆಯನ್ನು ಭದ್ರಪಡಿಸಿದಂತಾಗುವದು. ಕನ್ನಡದೇಶದ ವಿದ್ಯಾಭ್ಯಾಸಕ್ರಮವನ್ನು ಅಭಿವೃದ್ಧಿಪಡಿಸುವದಕ್ಕೂ ಕನ್ನಡಿಗರ ಸಂಸ್ಕೃತಿಯನ್ನು ಬೆಳೆಯುವದಕ್ಕೂ ಸಾಮಾಜಿಕ, ರಾಜಕೀಯ ವ್ಯವಹಾರಗಳಲ್ಲಿ ಕನ್ನಡಿಗರಿಗೆ ಹೆಚ್ಚು ಪ್ರಾಶಸ್ತ್ಯವು ದೊರೆಯುವಂತೆ ಮಾಡುವದಕ್ಕೂ ನ್ಯಾಯಸ್ಥಾನಗಳೇ ಮೊದಲಾದ ರಾಜಕೀಯ ಸಂಸ್ಥೆಗಳಲ್ಲಿ ವಿದೇಶ ಭಾಷೆಯ ಪ್ರಾಮುಖ್ಯತೆಯಿಂದ ತೊಂದರೆ ಪಡುತ್ತಿರುವ ರೈತಾದಿ ಜನಗಳಿಗೆ ಕ್ಷೇಮವನ್ನುಂಟು ಮಾಡುವದಕ್ಕೂ ಕರ್ನಾಟಕ ಏಕೀಕರಣವು ಬಹಳ ಸಹಾಯಕಾರಿಯಾಗಿದೆ. ಈಗಿನಂತೆ ಕನ್ನಡ ರಾಷ್ಟ್ರವು ಒಡೆದು ಹೋಗಿರುವದು ಒಪ್ಪುವ ಮಾತೂ ಕನ್ನಡ ದೇಶಕ್ಕೆ ಅಭಿವೃದ್ಧಿಯುಂಟಾಗಲಾರದು. ಆದುದರಿಂದ ಪ್ರತಿಯೊಬ್ಬ ಕನ್ನಡಿಗನೂ ಈ ವಿಷಯವನ್ನು ಚೆನ್ನಾಗಿ ಆಲೋಚಿಸಿ ಕರ್ನಾಟಕ ರಾಷ್ಟ್ರವು ಉನ್ನತಸ್ಥಿತಿಗೆ ಬರುವ ಮಾರ್ಗವನ್ನು ಹಿಡಿಯಬೇಕಾಗಿ ಕೋರಿದೆ.

—ವಿಶ್ವಕರ್ನಾಟಕ.

ವಾಙ್ಮಯ ಪರಿಚಯ.

ಸ್ತೋತ್ರಾಣಿ— ನೆಲೆವಾಡ ಮಹಾಧಿಪತಿಗಳಾದ ಶ್ರೀ. ಕದಂಬಾನಂದ ಸ್ವಾಮಿಂಹ ಭಾರತೀ ಸ್ವಾಮಿಗಳವರಿಂದ ರಚಿತವಾದ

ಪ್ರಥಮ ಭಾಗ ದ್ವಿತೀಯ ಭಾಗಗಳೆಂಬ ಎರಡು ಚಿಕ್ಕ ಪುಸ್ತಕಗಳು. ಇವುಗಳಲ್ಲಿ ಅನೇಕ ದೇವ ದೇವಿಯರ ಸ್ತೋತ್ರಗಳಿದ್ದು, ಶ್ರೀ ಶಂಕರಾಚಾರ್ಯರೆ ಮೊದಲಾದ ಕೆಲವು ಆಚಾರ್ಯರೆ ಸ್ತೋತ್ರಗಳಾದರೂ ಇರುವವು. ಇವು ಸರಳವಾದ ಸರಣಿಯಲ್ಲಿ ಲಲಿತಪದಪ್ರಯೋಗಗಳಿಂದಲೂ, ಮನೋಹರ ಪ್ರಾಸಗಳಿಂದಲೂ, ಅತಿಶಯ ಸುಂದರವಾಗಿವೆ ಅದರೆ ಪ್ರಾಸ, ಮತ್ತು ಛಂಡೋನಿರ್ಬಂಧಕ್ಕಾಗಿ ಕೆಲವು ಗೌಣವದ ಪ್ರಯೋಗಗಳೂ ಹೆಚ್ಚಿನ ಅವ್ಯಯಗಳೂ ಒಂದೆರಡುಕಡೆಗೆ ದೊರೆಯುವವು. ಅದರೂ ಸುಂದರಭಾಗದಿಂದ ಅವು ಅಷ್ಟು ರಸವಿಘಾತಕವಾಗಿ ತೋರುವದಿಲ್ಲ. ಶ್ರೀ. ಸ್ವಾಮಿಗಳವರು ಭಜಕರಿಗೆ ಸುಖರವಾಗಿ ಇವನ್ನು ಮುಡಿಸಿಕೊಟ್ಟದ್ದು ಅಭಿನಂದನೀಯವಾಗಿರುವದು. ಮುದ್ರಣವಾದರೂ ಸುಂದರವಾಗಿದೆ. ಮೊದಲನೇ ಭಾಗದ ಬೆಲೆ ೬ ಅ. ಎರಡನೇ ಭಾಗದ್ದು ೮ ಅಣೆ

ಸ್ವೀಕಾರ.

(೧) ಕ್ಯಾಲೆಂಡರುಗಳು. ಮದ್ರಾಸದ ಸುಪ್ರಸಿದ್ಧ ನಕ್ಷತ್ರದ ಪರ್ತಕರಾದ ಶ್ರೀ. ಗುರುಬಸವ ಅಯ್ಯಂಡ ಕಂಪನಿಯವರು ೨ ಕ್ಯಾಲೆಂಡರುಗಳನ್ನು ನಮಗೆ ಕಳಿಸಿರುವರು. ಶ್ರೀ ರಾಧಾ ಕೃಷ್ಣರ ಭಾವಚಿತ್ರವು ಅತ್ಯಂತ ಮನೋಹರವಾಗಿದೆ, ಕೃಷ್ಣನ ಬಾಲಭಾವವು ವೃದ್ಧರನ್ನು ಕೂಡ ಮೋಹಕಗೊಳಿಸುವಂತಿದೆ. ಸೃಷ್ಟಿ ಶೋಭೆಯು ಸಹ ಬಹು ಅಂದವಾಗಿ ಚಿತ್ರಿಸಲ್ಪಟ್ಟಿದೆ. ಇನ್ನೊಂದು ಕ್ಯಾಲೆಂಡರು ತಾರೀಖುಗಳನ್ನು ದೊಡ್ಡ ಅಕ್ಷರಗಳಲ್ಲಿ ಒಡಗೊಂಡಿದೆ. ಗುರುಬಸವ ಕಂಪನಿಯವರ ಸುಪ್ರಸಿದ್ಧವಾದ ನಕ್ಷತ್ರವನ್ನು ಕೊಂಡುಕೊಳ್ಳುವ ಗ್ರಾಹಕರಿಗೆ ಇವು ಉಚಿತವಾಗಿ ದೊರೆಯುವವು

(೨) ಮನೋಹರವಾದ ಕಥೆ.

(೩) ಅಜಾಮಿಳೋಪಾಖ್ಯಾನ. ಶ್ರೀ ಗಣೇಶ ಸೂರ್ಯನಾರಾಯಣಭಟ್ಟ ಕೆಕ್ಕಾರ

ಇವುಗಳ ವಿಮರ್ಶೆಯು ಯಥಾವಕಾಶವಾಗಿ ಪ್ರಕಟವಾಗುವದು

(೪) ಶ್ರೀ. ಮಹಾಲಿಂಗೋದ್ಭವ ಚಿತ್ರಮಾಲೆ. ವಿಷ್ಣು ವಿನ ಎಲ್ಲ ಅವತಾರದ ಚಿತ್ರಗಳು ಮಾರಾಟಕ್ಕೆ ಸಿದ್ಧವಾಗಿದ್ದರೂ, ಶಿವನ ಚಿತ್ರಗಳು ಮಾತ್ರ ಪೇಟೆಯಲ್ಲಿರದ್ದರಿಂದ ೧೨ ವರ್ಷಗಳವರೆಗೆ ಬಹು ಪರಿಶ್ರಮಮಾಡಿ, ಪಂಡಿತ ಭೂಷಣ ಶ್ರೀ. ಬಹ್ಮಾನಂದ ಕೃಷ್ಣ ಮೂರ್ತಾಚಾರ್ಯರು (೫೪- ಎಲ್ ಫಣಸವಾಡಿ. ಪ್ರತೀ-- ಚಾಳ, ಮುಂಬೈ ನಂ- ೨) ಈ ಚಿತ್ರಪಟವನ್ನು ಸಿದ್ಧಗೊಳಿಸಿದ್ದಾರೆ. ಒಂದೇ ಪಟದಲ್ಲಿ ಶಿವನ ೬೪ ಅವತಾರಗಳೆಲ್ಲವೂ ಮೋಹಕವಾಗಿ ಮುದ್ರಿಸಲ್ಪಟ್ಟಿವೆ. ಇದರ ಬೆಲೆ ನಾಲ್ಕು ಆಣೆ ಮಾತ್ರ! ಶ್ರೀಮಾನ್ ಮೈಸೂರ ಮಹಾರಾಜರು ಇವರಿಗೆ ಆಶ್ರಯವಿತ್ತಿರುವರಂತೆ. ಈಗ್ಗೆ ನಮಗೆ ಕಳುಹಿಸಿದ ಒಂದೇ ಪಟದಲ್ಲಿ ಎಲ್ಲ ೬೪ ಅವತಾರಗಳೂ ಮುದ್ರಿತವಾಗಿದ್ದರಿಂದ ಚಿತ್ರಗಳು ತೀರ ಚಿಕ್ಕವಾಗಿವೆ. ದೊಡ್ಡ ಚಿತ್ರಗಳನ್ನು ಪ್ರತ್ಯೇಕವಾಗಿಯೂ ಮುದ್ರಿಸುವದೊಳ್ಳೇದು.

ಪತ್ರವ್ಯವಹಾರ

* ಹುಬ್ಬಳ್ಳಿಯ ಭಾರತ ಗಿರಣಿಯ ಸ್ಪಿನಿಂಗ ಮಾಸ್ಟರರು ಹೊಸದಾಗಿ ಬಂದಿರುವರೆಂದೂ, ಇವರ ಆಡಳಿತೆಯು ಸರಿಯಾಗಿಲ್ಲವೆಂದೂ, ಇವರಿಗೆ ಕನ್ನಡ ಭಾಷೆಯು ಬರುವದಿಲ್ಲವಾದ್ದರಿಂದ, ಕೆಲವು ಕಿಡಿಗೇಡಿಗಳು ಅವರಿಗೆ ಕೇವಲ ಕನ್ನಡವನ್ನಾಡುವ ಕೂಲಿಕಾರರ ವರ್ತನದ ಬಗ್ಗೆ ಇಲ್ಲದ ಸಲ್ಲದ ದೂರು ಹೇಳಿ, ತಮ್ಮ ಬೇಳೆ ಬೇಯಿಸಿಕೊಳ್ಳುವರೆಂದೂ ಓರ್ವರು ಬರೆದು ತಿಳಿಸುತ್ತಾರೆ. ಆದರೆ ಕೂಲಿಕಾರರ ಸಹಿಯೊಂದಿಗೆ ಈ ತಕರಾರು ನಮ್ಮೆಡೆಗೆ ಬಾರದ ಹೊರ್ತು ನಾವದನ್ನು ಪ್ರಕಟಿಸಲಾರೆವು. ಆದರೂ ಮಿಲ್ಲಿನ ವ್ಯವಸ್ಥಾಪಕರು ಸ್ಪಿನಿಂಗ ಮಾಸ್ಟರನ ನಡತೆಯ ಬಗ್ಗೆ ಯೋಗ್ಯ ವಿಚಾರಣೆ ಮಾಡಬೇಕಾಗಿ ಸೂಚಿಸುತ್ತೇವೆ.

೩೮ ನೇ ಸಂಚಿಕೆಯಲ್ಲಿ ಪ್ರಕಟವಾದ ಕೂಟ ಪ್ರಶ್ನೆಯ ಉತ್ತರವು.

ಮೂ	ಧ	ವ
ಧ	ನ್ನ	ನ
ಪ	ನ	ಜ

ಮತ್ತು ಅದನ್ನು ಬಿಡಿಸಿದವರ ಹೆಸರುಗಳು.

(೧) ಗ. ಮಂ. ಶಟ್ಟಿ ಅಲೂರ ಹಾನಗಲ್ಲ. (೨) ಪ್ಯಾ. ಅ. ಹೆರಕಲ್ಲ, ಹೆ. ಪೂ. ಮುಳವಾಡ. (೩) ಗ. ಹೀ. ಮುನವಳ್ಳಿ, ಕಲಘಟಗಿ (೪) ಕೆ. ಡಿ. ಖುದಾನಪೂರೆ, ವಿಜಾಪೂರ. (೫) ವಿನಾಯಕ ಬಾಗಲಕೋಟೆ.

ಇನಾಮು ಪಡೆದವರ ಹೆಸರು.

ವ್ಯಾಸಾಚಾರ್ಯ ಅನಂತಾಚಾರ್ಯ ಹೆರಕಲ್ಲ.

ಹೆಡ್ ಮಾಸ್ತರೆ ಮುಳವಾಡ.

೪೦ ನೇ ಸಂಚಿಕೆಯಲ್ಲಿ ಪ್ರಕಟವಾದ ಒಡಪುಗಳ ಉತ್ತರಗಳು.

ಮಂಡೋದರಿ, (ಮಂಗ, ಡೋಲಾ, ದಶರಥ ರಿಕ್ತ.)

೨

ಗ	ಜ	ರ	ಪು
ಜ	ಜ	ರಾ	ರಂ
ಪ	ರಾ	ಜ	ದ
ತಿ	ಪ	ತಿ	ರ

೩ ಕೃಷ್ಣ- ಕಂಸ, ಸ್ಮರಹರ ಇತ್ಯಾದಿ.

೪ ಕರವೀರ.

ಮತ್ತು ಅವುಗಳನ್ನು ಬಿಡಿಸಿದವರ ಹೆಸರುಗಳು.

(೧) ವ್ಯಾ ಅ. ಹೆರಕಲ್ಲ, ಹೆ. ಪೂ. ಮುಳವಾಡ, ೧-೩-೪-೫ (೨) ಕೆ. ಕೆ. ನಾಡಿಗ, ಸವದತ್ತಿ. ೧-೨-೩-೪. (೩) ಕೃ. ಹೆ. ಹಡಗಲಿ, ಬಾಗಲಕೋಟೆ. ೧ ೪ ೪. (೪) ಕೆ. ಡಿ. ಖುದಾನಪೂರೆ ವಿಜಾಪೂರ. ೨. (೫) ಎಚ್. ಕೆ. ಕೆರೂರ ವಿಜಾಪೂರ. ೨.

* ಒಡಪು. *

(೧) ಮೂರಕ್ಕೆರಡರಳ್ಳಿ ನಾನು ಎಲ್ಲ ಪ್ರಾಣಿಗಳ ಸಂತಾನಕ್ಕೂ ಮೂಲಕಾರಣನು. ಮತ್ತಿ ಹಿಂದೂ ಜನರು ನನ್ನ ಸ್ಮಾರಕವನ್ನು ಪ್ರತಿ ವರ್ಷ ಒಳ್ಳೆ ವಿಜೃಂಭಣೆಯಿಂದ ನೆರವೇರಿಸುತ್ತಾರೆ. ಆದರೆ ನನ್ನ ಹುಟ್ಟುಹತ್ತಿ ಅದರ ಅತಿರೇಕವಾದ ಮೂನವರು ಅಧೋಗತಿಗೀಡಾಗುವರು. ಮತ್ತು ನಾನು ಎಲ್ಲರಿಗೂ ಬೇಕಾದವನು. ನನ್ನ ಪ್ರಥಮಾಕ್ಷರವನ್ನು ಛೇದಿಸಿದರೆ, ಕೃಷಿಕಲರಿಗೆ ಮುಖ್ಯ ಜೀವಾಳವಾಗುತ್ತೇನೆ. ದ್ವಿತೀಯಾಕ್ಷರವನ್ನು ಲೋಪಮಾಡಿದರೆ, ಮಾನವರಲ್ಲಿರತಕ್ಕ ಅತಿವೇಗವನ್ನುವಾಗುವೆನು. ಇನ್ನು ತೃತೀಯಾಕ್ಷರವನ್ನು ತೆಗೆದುಹಾಕಿರೆ ಪಕ್ಷಿಗಳಲ್ಲಿಕೆ ಒಂದು ಆಗುವೆನು. ಹಾಗಾದರೆ ನಾನು ಯಾರು?

ಜ. ಅ. ಪಡನೂರ. ಹುಬ್ಬಳ್ಳಿ.

(೨)

೧	೨	೩	೪
೫	೬	೭	೮
೯	೧೦	೧೧	೧೨
೧೩	೧೪	೧೫	೧೬

ಕೆಳಗೆ ವಿವರಿಸುವ ಎಲ್ಲ ಶಬ್ದಗಳು ಕನ್ನಡ ಅಥವಾ ತದ್ಭವವಾಗಿರಬೇಕು. ಸಂಸ್ಕೃತ ಇಲ್ಲವೆ ಅನ್ಯದೇಶ್ಯ ವಿರಬಾರದು.

(ಅ) ೧- ೨- ೩- ೪ — ಬಂಗಾರದ ಹೆಸರು. ಅ ಧನದ ಹೆಸರು.

(ಬ) ೫- ೬- ೭- ೮— ಕವಿಯಲ್ಲಿರತಕ್ಕ ಅಭರಣ.

(ಕ) ೯- ೧೦-೧೧-೧೨— ಮುಚ್ಚಳದ ಒಂದು ಪಾತ್ರೆ.

(ಡ) ೧೩-೧೪-೧೫-೧೬— ಹೆಚ್ಚಾದ ದಾನ.

(ಇ) ೧- ೬- ೧೧-೧೬— ಒಂದು ದೇಶದಲ್ಲಿ ವಾಸಿಸುವವ

(ಫ) ೧ -೫ -೯ -೧೩— ಈ ನಾಲ್ಕು ಅಕ್ಷರಗಳು ಒಂ ಅಕ್ಷರವಾಗಿರಬೇಕು.

" ಅನಂತ ಸುತ "

ಬಹದ್ದೂರ ಬಾಗಲಕೋಟೆಯು!

ಕರ್ನಾಟಕಕ್ಕೆ ಆದರ್ಶವಾಯಿತು!!

ಮುನಸೀಪಾಲ್ಟಿಯು ಬಂದಾಗಿತ್ತು !!!
ಶಾಲೆಗಳೂ ಬಂದಾಗಿದ್ದವು !!!!
ಊರಲ್ಲೆಲ್ಲ ಸಂಪೂರ್ಣ ಹರ್ತಾಳವು ! ಪೋಲೀಸರ ನಿರಾಶೆಯು!

——ಲಡಾಯಿ——

ಸೇತಾ॥ ನಿನ ರಾಷ್ಟ್ರದ ಆಶ್ಚರ್ಯಮಂತೆ ಬಾಗಲಕೋಟೆಯಲ್ಲಿ ಸಂಪೂರ್ಣವಾದ ಹರ್ತಾಳವಾಗಿದ್ದಿತು ! ಊರಲ್ಲಿಯ ಅಂಗಡಿಗಳೆಲ್ಲವೂ ಬಂದಾಗಿದ್ದವು. ವ್ಯವಹಾರವು ಸಾಯಂಕಾಲ ೫ ಗಂಟೆಯವರೆಗೆ ಬಂದಾಗಿದ್ದಿತು! ಬ್ರಾಹ್ಮಣ, ವೀರಶೈವ, ಈತೇವಾಡಿ, ವೈಶ್ಯ, ಮಾರವಾಡಿ, ಭಾಟೀ ಮೊದಲಾದ ಎಲ್ಲ ಜಾತೀಯರ ಅಂಗಡಿಗಳೂ ಬಂದಾಗಿದ್ದುದು ಬಾಗಲಕೋಟೆಯ ಇತಿಹಾಸದಲ್ಲಿ ಇದೇ ಮೊದಲನೇಯದು! ಪರಸ್ಪರ ಜಾತಿಗಳಲ್ಲಿ ಇಂಥ ಏಕ್ಯ ಭಾವವು ಬಾಗಲಕೋಟೆಯಲ್ಲಿ ಈ ಪರೆಗಿರಲಿಲ್ಲ! ಆದ್ದರಿಂದ ಆದಿನ ಬಾಗಲಕೋಟೆಯ ನಾಗರಿಕರು ತೋರಿಸಿದ ಏಕ್ಯವೂ, ರಾಷ್ಟ್ರಪ್ರೇಮವೂ ಪಟ್ಟಣದ ಕೀರ್ತಿಯು ಎಲ್ಲ ಕಡೆಗೂ ಹಬ್ಬಬೇಕೆಂಬ ಸದಭಿಮಾನವೂ ವರ್ಣಿಸತಕ್ಕವುಗಳೇ ಸರಿ ! ಮುನಸೀಪಾಲ್ಟಿಯು ಆ ದಿನ ಬಂದಿಡಬೇಕಾಗಿಯೂ, ಸ್ಕೂಲಬೋರ್ಡಿನ ವತಿಯಲ್ಲಿದ್ದ ಪ್ರಾಥಮಿಕ ಶಾಲೆಗಳಿಗೂ ರಜೆಯಿರಬೇಕಾಗಿಯೂ ಸರ್ವಾನುಮತದಿಂದ ಆ ಆ ಸಂಸ್ಥೆಗಳಲ್ಲಿ ಠರಾವುಗಳಾದುದು ಸಾಮಾನ್ಯ ಕೆಲಸವಲ್ಲ ! ಈ ಸಂಸ್ಥೆಗಳ ಸಭಿಕರ ರಾಷ್ಟ್ರಪ್ರೇಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ! ಕರ್ನಾಟಕದ ಯಾವ ಯಾವ ಮುನಸೀಪಾಲ್ಟಿ ಹಾಗೂ ಸ್ಕೂಲ ಬೋರ್ಡುಗಳಲ್ಲಿ ಈ ಬಗೆಯ ಠರಾವುಗಳಾಗಿವೆಯೋ ನಾವು ಸಂಪೂರ್ಣವಾಗಿ ಅರಿಯೆವಾದರೂ, ಕರ್ನಾಟಕಕ್ಕೆ ಬಾಗಲಕೋಟೆಯು ಈ ವಿಷಯದಲ್ಲಿ ಆದರ್ಶವಾಗಿದೆಂಬುದನ್ನು ಮಾತ್ರ ಎದೆ ತಟ್ಟಿ ಹೇಳಬಲ್ಲೆವು. ಯಾಕಂದರೆ ಬ್ರಾಹ್ಮಣ-ಬ್ರಾಹ್ಮಣೇತರ, ಹಿಂದೂ-ಮುಸಲ್ಮಾನ ಮತಭೇದಗಳನ್ನು ಎಲ್ಲರೂ ಮರೆತು ರಾಷ್ಟ್ರಸೇವೆಗಾಗಿ ಒಮ್ಮನಸ್ಸಿನಿಂದ ಟೊಂಕಕಟ್ಟಿದ್ದನ್ನು ಕರ್ನಾಟಕದ ಎಲ್ಲ ಪಟ್ಟಣಗಳೂ ಜನ್ನಾಗಿ ನೋಡಿ ಬುದ್ಧಿ ಕಲಿಯುವಂತಿದೆ !

ಅಂಗಡಿಗಳು ಶುಕ್ರವಾರ ಬೆಳಿಗ್ಗೆ ಬಂದಾಗಿರುವದನ್ನು ಕಂಡು ಪೋಲಿಸರು ತಮ್ಮ ಕಾರ್ಯ ದಕ್ಷತೆಯನ್ನು ತೋರಿಸಲು ಹಾತೊರೆದು ಬಂದರು ! ಸ್ವತಃ ಇನ್ಸ್‌ಪೇಕ್ಟರರು ಸಹ ಊರಲ್ಲಿ ತಿರುಗಾಡಿದರು ! ಬಂದು ಮಾಡಿದ ಅಂಗಡಿಗಳ ಹೆಸರುಗಳನ್ನು ಬರೆದುಕೊಂಡರು ! ನೀವೇಕೆ ಅಂಗಡಿಗಳನ್ನು ಬಂದು ಮಾಡಿರುವಿರೆಂದು ಹಲವರಿಗೆ ಕೇಳಿಯೂ ನೋಡಿದರು ! ಆದರೆ ಧಿಟ್ಟತನದಿಂದ ಎಲ್ಲರೂ ಸೈಮನ್ ಕಮೀಶನದ ಬಗ್ಗೆ ಹರ್ತಾಳಕ್ಕಾಗಿ ಬಂದು ಮಾಡಿರುವೆವೆಂದು ಸ್ಪಷ್ಟವಾಗಿ ಹೇಳಲು ಪೋಲಿಸರು ಹಿಂತಿರುಗಿಹೋದರು !

ಗುರುವಾರ ರಾತ್ರಿ ದೊಡ್ಡ ಮಳೆಯಾಗಿ, ಶುಕ್ರವಾರ ದಿನ ಬೆಳಗಿನಿಂದ ಮೋಡವಿದ್ದು, ೮ ಗಂಟೆಯಿಂದ ಮತ್ತೆ ಮಳೆ ಪ್ರಾರಂಭವಾಗಿ ಸಾಯಂಕಾಲದ ವರೆಗೂ ಮಳೆ ಸುರಿಯಿತು. ಜನರಿಗೆ ಬೇಕಾದುದನ್ನು ಜನಾರ್ದನನು ಒದಗಿಸಿಕೊಡುವನೆನ್ನುವಂತೆ, ಸೈಮನ್ ಸಾಹೇಬರಿಗೆ ಮಂಗಳಾರುತಿ ಮಾಡುವ ಬಹಿಷ್ಕಾರವು ನಡೆದಾಗ ದುರ್ದಿನದ ಸಂಪೂರ್ಣತೆಯನ್ನು ಮೇಘರಾಜನು ತಂದುಕೊಟ್ಟು, ಸೈಮನ್‌ರಿಗೆ ತನ್ನ ತಿರಸ್ಕಾರವನ್ನೂ ವ್ಯಕ್ತಗೊಳಿಸಿದನು ! ಮಳೆಯು ಹತ್ತಿದ್ದರಿಂದ ಮೆರವಣಿಗೆಗೆ ಮಾತ್ರ ಕೊಂದರೆಯಾಯಿತು. ಮಂಜಾನೆ ಮೆರವಣಿಗಾಗಿ ಬಂದ ಜನರು ತಮ್ಮ ತಮ್ಮ ಮನೆಗೆ ಹೋಗಬೇಕಾಯಿತು. ಕಡೆಗೆ ೪ ಗಂಟೆಗೆ ಚಿಕ್ಕ ಮೆರವಣಿಗೆಯೊಂದು ಕಾಂಗ್ರೆಸ್ಸ ಕಮೀಟಿಯಿಂದ ಹೊರಟು ಪೇಟೆಯಲ್ಲಿ ಮಾತ್ರ ಹಾಯ್ದು ಶಿವಾನಂದ ನಾಟಕ ಶಾಲೆಗೆ ತಲುಪಿತು. ಕರೀ ನಿಶಾನೆಗಳೊಂದಿಗೆ ಸ್ವಯಂ ಸೇವಕರೂ ಕಟ್ಟಣಿಗರೂ ಹೊರಬಿದ್ದರು. ಇಲ್ಲಿಯ ತರುಣ ವಕೀಲರಾದ ಶ್ರೀ ಭೆಬ್ಬೀ ಶ್ರೀನಿವಾಸರಾಯರೂ ಅವರ ಕಲಾಪ್ರೇಮೀ ಮಿತ್ರರೂ ಕೂಡಿ ಬಹು ಅಂದವಾದ ವಿನೋದಪರ ಚಿತ್ರಗಳನ್ನು (Car-toons) ತೆಗೆದಿದ್ದರು. ಸೈಮನ್ ಕಮೀಶನ್ನಕ್ಕೆ ಭಾರತೀಯರು ಕೊಟ್ಟ ಅಪಮಾನ, ತೋರಿಸಿದ ತಿರಸ್ಕಾರ, ಇವುಗಳಿಂದ ಸಾಹೇಬರು ಗಾಬರಿಗೊಂಡದ್ದು, ಇವೇ ಮೊದಲಾದ ಪ್ರಸಂಗಗಳು ಮನರಂಜನೆಯಾಗುವಂತೆ ಜನ್ನಾಗಿ ಚಿತ್ರಿಸಲ್ಪಟ್ಟಿದ್ದವು. ಈ ಚಿತ್ರಗಳು ದೊಡ್ಡವಾಗಿದ್ದವು. ಅವನ್ನು ರಟ್ಟಿಗೆ ಅಂಟಿಸಿ ಸ್ವಯಂಸೇವಕರು ತಮ್ಮ ಕೊರಳು ಬೆನ್ನುಗಳಿಗೆ ಅವನ್ನು ಜೋತು ಹಾಕಿಕೊಂಡು ನಡೆದುದನ್ನು ಜನಗಳು ಬಹು ವಿಸ್ಮಯದಿಂದಲೂ, ಆನಂದದಿಂದಲೂ ನೋಡಿದರು !

ಶಿವಾನಂದ ನಾಟಕಶಾಲೆಯ ಸಭೆಗೆ ಇಲ್ಲಿಯ ಸುಪ್ರಸಿದ್ಧ ವರ್ತಕರೂ, ಮುಂದಾಳುಗಳೂ, ರಾಷ್ಟ್ರಪ್ರೇಮಿಗಳೂ ಆದ ಶ್ರೀ. ಶಂಕ್ರಪ್ಪಾ ಅಣ್ಣಾ ಸಕ್ರಿಯವರು ಅಧ್ಯಕ್ಷರಾಗಿದ್ದರು. ಶ್ರೀ. ಕೆರಸೂರ, ನರಗುಂದ ಹಾಗೂ ಧಾರವಾಡ ವಕೀಲರುಗಳ ಭಾಷಣಗಳಾದವು. ಕಮೀಶನ್ ನ ಇತಿಹಾಸ, ಬರ್ಕನ್ನ ಹೆಡ್ಡರ ಔದ್ದತ್ಯ, ಆದರಿಂದ ಸ್ವಯಂ ನಿರ್ಣಯತತ್ವಕ್ಕೆ ಬಂದ ಕಳಂಕ, ಭಾರತೀಯರಲ್ಲಿ ಇದರಿಂದುಂಟಾದ ತೀಕ್ಷ್ಣವಾದ ಕ್ಷೋಭೆಗಳನ್ನು ಎಲ್ಲರು ವಿವಿಧವಾಗಿ ತಿಳಿಸಿ ಹೇಳಿದರು. ಭೂಲೋಕದಲ್ಲಿ ಪ್ರತಿಷ್ಠೆಗೆ ಬಂದ ರಾಜನನ್ನು ಕೆಡಿಸುವದಕ್ಕಾಗಿ ಇಂದ್ರನು ಯಾವಾಗಲೂ ತನ್ನ ಅಪ್ಸರೆಯರನ್ನು ತೊಡಕಿಸುವಂತೆ, ಕುಮಾರ ಮೇಯೋ ಳಂಥವಳನ್ನು ಸರಕಾರದವರು ನಿರ್ಮಿಸಿದ್ದಾರೆಂಬದನ್ನು ಶ್ರೀ. ಧಾರವಾಡ ವಕೀಲರು ವಿನೋದಪರವಾಗಿ ಹೇಳಿದರು.

ಬಾಗಲಕೋಟೆಯಲ್ಲಿ ಈ ಬಗೆಯಿಂದ ಅತ್ಯಂತ ಯಶಸ್ವಿಯಾದ ಕಾರ್ಯಕ್ರಮವು ಜರುಗಲು ಇಲ್ಲಿಯ ಸುಪ್ರಸಿದ್ಧ ವ್ಯಾಪಾರಿಗಳೂ, ಎಲ್ಲ ಜನರ ಆದರಣೆಗೆ ಒಳಗಾದವರೂ ಆದ ಶ್ರೀ ವೀರ

ಶೆಟ್ಟಿ ಗುರುಸಂಗಪ್ಪನವರೂ, ಎಂದಿನಿಂದ ರಾಷ್ಟ್ರಕಾರ್ಯದಲ್ಲಿ ತೊಡಗಿಕೊಂಡಿದ್ದ ಶ್ರೀ. ಧಾರವಾಡ ಹಾಗೂ ಕಿರಸೂರ ವಕೀಲರೂ ಕಾರಣರು. ಇವರಿಗೆ ಬಾಗಲಕೋಟೆಯವರವತಿಯಿಂದ ನಾವು ಧನ್ಯವಾದಗಳನ್ನರ್ಪಿಸುತ್ತೇನೆ. ಮತ್ತು ಊರಲ್ಲಿಯ ಶರಣ ಹಾಗೂ ಹಳೇ ವಕೀಲರು ಮೇಲಿನ ವಕೀಲ ದ್ವಯರ ಕಿತ್ತೆಯನ್ನೆ ತೀಡಬೇಕೆಂದು ಸೂಚಿಸುತ್ತೇವೆ. ವಕೀಲರು ಹೀಗೆ ಮಾಡದೇ, ಬಹಿಷ್ಕಾರದ ದಿನ ಸಭ ಕೋರ್ಟಿಗೆ ಹೋದಂತೆ (ಆ ದಿನ ಕೆಲ ವಕೀಲರು ಮಾತ್ರ ಕೋರ್ಟಿಗೆ ಹೋಗಿರಲಿಲ್ಲ;) ಮುಂದೆ ಯಾದರೂ ಅಜರಿಸಿ, ರಾಷ್ಟ್ರದ ಹಿತವನ್ನು ದುರ್ಲಕ್ಷಿಸಿದರೆ, ಜನತೆಯ ಕೊಪಕ್ಕೆ ಪಾತ್ರರಾಗುವರೆಂಬುದನ್ನು ಮರೆಯಬಾರದು.

ವಿಜಾಪುರದಲ್ಲಿ ಹರತಾಳವು

ಶುಕ್ರವಾರ ೩ನೇ ತಾರೀಖಿನ ಪ್ರಚಂಡ ಸಭೆಯು.

[ನಮ್ಮ ಸ್ವಂತ ಸುದ್ದಿಗಾರರಿಂದ ತಾ॥ ೩-೨-೨೪]

ರಾಷ್ಟ್ರವ್ಯಾಪಿಯಾದ ಆಜ್ಞೆಯ ಪ್ರಕಾರ ಇವತ್ತಿನ ದಿನವು ಇಲ್ಲಿ ಸರ್ವಾಂಗ ಪರಿಪೂರ್ಣವಾಗಿ ಪಾಲಿಸಲ್ಪಟ್ಟಿತು. ರಾ. ಸಾ. ಹಳಕಟ್ಟಿ ಹಾಗು ದೇ. ಭ. ಶ್ರೀನಿವಾಸರಾವ ಕೌಜಲಗಿ ಇವರ ಸಹಿಗಳಿಂದ ಪ್ರಕಟಿಸಲ್ಪಟ್ಟು ಹಂಚಲಾಗಿದ್ದ ಸಾವಿರಾರು ಬಿನ್ನಪ ಪತ್ರಗಳನ್ನೋದಿ ಎಲ್ಲ ಜನರಲ್ಲಿ ಹರತಾಳವೇ ಚರ್ಚೆಯ ವಿಷಯವಾಗಿತ್ತು. ಇದಕ್ಕೆ ದೇಶಭಕ್ತರೂ ಅವರ ಸಹಾಯಕರಾದ ಬೇರೆ ಮುಖಂಡರೂ ಪ್ರತ್ಯಕ್ಷ ಬಿನ್ನಹದಿಂದ ಪುಟ ಕೊಟ್ಟ ಮೂಲಕ ಇಂದಿನ ಹರತಾಳವು ನಿರವವಾದವಾಗಿ ಸಾಧ್ಯವಾಯಿತು. ಸರಕಾರದ ಬಿರುದು ಬಿಲ್ಲೆಗಾರರೂ ಬಿಟ್ಟೇ ಕೆಲಸಗಳನ್ನು ಕೈಕೊಂಡವರೂ ಕೂಡ ತಮ್ಮ ತಮ್ಮ ಅಂಗಳಗಳನ್ನು ಮುಚ್ಚಿ ಸಹಯಮನ್ ಕಮಿಶನದ ಆಗಮನದಿಂದ ರಾಷ್ಟ್ರಕ್ಕೆ ಅಪಮಾನವನ್ನು ನಿಷೇಧಿಸುವದರಲ್ಲಿ ಹಿಂಜರಿಯಲಿಲ್ಲ ಮುಖ್ಯವಾಗಿ ತಲಬುಗಾರ ಮಂದಿಗೆ ಬೆಳಗಿನಿಂದ ಸಂಜೆಯ ವರೆಗೆ ಚಾ ಕಾಫೀ ಉಸ್ಪಿಟ್ಟ್ಯಾಗಲಿ ಹುಟ್ಟಾ ಸಿಗರೇಟಾಗಲಿ ದೊರೆಯಲಿಲ್ಲ ಬೆಳಗಿನಲ್ಲಿ ತೋಟಿಗರ ಕಾಯಿಪಲ್ಲೆ ಸಿಗಲಿಲ್ಲ. ಇಷ್ಟರಿಂದಲೇ ವಿಜಾಪುರದ ಹರತಾಳವು ಎಷ್ಟುಮಟ್ಟಿಗೆ ಸಿದ್ಧಿಗೆ ಹೋಯಿತೆಂಬುದು ಸ್ಪಷ್ಟವಾಗುವದು.

ಸಂಜೆಯ ೫॥ ಗಂಟೆಗೆ ಛತ್ರಿಯವರ ಥಿಯೇಟರಿನಲ್ಲಿ ಸಾರ್ವಜನಿಕ ಸಭೆಯಿತ್ತು. ಮುನ್ನಾರಾತ್ರಿಯಿಂದ ಒಂದೇ ಸವನೆ ಮಳೆ ಹತ್ತಿದ ಮೂಲಕ ೬ಕ್ಕೆ ಸಭೆಯ ಕೆಲಸಕ್ಕೆ ಆರಂಭವಾಯಿತು. ಸುಶಿಕ್ಷಿತ ನಾಗರಿಕರ ಸಮುದಾಯದಿಂದ ಥೇಟರವು ತುಂಬಿ ತುಳುಕುತ್ತಿತ್ತು; ಅನೇಕ ಸ್ತ್ರೀಯರೂ ಸಭೆಗೆ ಬಂದಿದ್ದರು. ಶ್ರೀ. ಪಾಂಡುರಂಗರಾವ ದೇಸಾಯಿ ವಕೀಲರು ಅಧ್ಯಕ್ಷರಾಗಿದ್ದರು ಧಾರವಾಡದ ಶ್ರಿ. ಮುದನೇಡಕರ ಕೃಷ್ಣರಾಯರು ಇಂದಿನ ಸಭೆಗಾಗಿಯೇ ಬಂದಂತೆ ತೋರಿತು. ಮೊದಲು ಇವರ ಭಾಷಣವಾಯಿತು. ಸಾಯಮನ್ ಕಮಿಶನದ ಅಪ್ರಯೋಜಕತನವನ್ನು ಇವರು ಜನ್ಯಾಗಿ ವಿವರಿಸಿ ನಮ್ಮೊಂದವರನ್ನು ನೆಟ್ಟಗೆಬ್ಬಿಸಿದರೆಂದು ಹೇಳಬಹುದು. ಬಳಿಕ ರಾ. ಬ. ಕೆಂಭಾವೀ ರಾಘವೇಂದ್ರರಾಯರು ಕಾಶಿಯ ಸರ್ವಪಕ್ಷದ ಮುಖಂಡರಿಂದ ಗೊತ್ತಾದ ತೀರಾವುಗಳನ್ನು ಸಭೆಯ ಮುಂದೆ ಮಂಡಿಸಿದರು. ಇದಕ್ಕೆ ವರ್ತಕರ ಸಂಘದ ಪರವಾಗಿ ಶ್ರೀ ರಾಮರಾವ ಜೋಶಿಯವರು ಬೆಂಬಲ ಕೊಟ್ಟರು. ಬಳಿಕ ಶ್ರೀ ಕೊಪ್ಪ ವಕೀಲರೂ ಶ್ರೀ ವಿಠೋಬಾನಾಯಿಕರವರೂ ಆದನ್ನು ಸಮರ್ಥಿಸಿದರು. ಆ ಮೇಲೆ ದೇ, ಭ. ಶ್ರೀನಿವಾಸರಾಯರು ಹರತಾಳವನ್ನು ಯಶಸ್ವಿಯಾಗಿ ಮಾಡಿದ ಬಗ್ಗೆ ನಾಗರಿಕರ ಅಭಿನಂದನ ಮಾಡಿ ಶ್ರೀ. ಪೂ. ಶಂಭುಲಿಂಗ ಸ್ವಾಮಿಗಳವರು ಸಭೆಗೆ ಕಳಿಸಿದ ಶುಭಾಶೀರ್ವಾದಗಳನ್ನು ನಿವೇದಿಸಿ, ಒಂದು ತಾಸಿನ ವರೆಗೆ ಒಬ್ಬೇ ಹುರಿಗೊಳಿಸುವಂತೆ ಭಾಷಣ ಮಾಡಿ ತರಾವಿಗೆ ಸಮ್ಮತಿ ಕೊಡಲು ಸಭೆಗೆ ಬಿನ್ನಯಿಸಿದರು. ಅಧ್ಯಕ್ಷರು ಸಮಾರೋಪ ಮಾಡುವಾಗ್ಯೆ ಶ್ರೀ ಕೌಜಲಗಿಯವರು ತಮಗೆ ಕೊಟ್ಟ 'ಶಾಂತ ವಿಚಾರಾದವರೆ'ಂಬ ವಿಶೇಷ ರೂಪವನ್ನೇ ಅನುಲಕ್ಷಿಸಿ "ನನ್ನಂಥ ಶಾಂತ ವಿಚಾರದವನ ತಲೆಯೂ ಈ ಕಮೀಶನ್ನಿನ ಮೂಲಕ ತಿರುಗಿ ಹೋದಂತಾಗಿದೆ. ಆಂದಬಳಿಕ ಇದರಿಂದ ರಾಷ್ಟ್ರಕ್ಕೆ ಎಂಥ ಅಪಮಾನದ ಧಕ್ಕೆ ಕೂತಿರುವದೆಂಬುದನ್ನು ಮನತಂದು ತರಾವಿಗೆ ಒಪ್ಪಿಗೆ ಕೊಡಿರೆಂದು" ಹೇಳಿದರು. ಸರ್ವಾನುಮತದ ಚಪ್ಪಳೆಗಳಿಂದ ಅದು ಅಂಗೀಕೃತವಾಯಿತು. ಬಳಿಕ ಬಿನಸಾಲರಿಕ ಅಭಿನಂದನ ಪ್ರದರ್ಶನಗಳಾಗಿ ೧೦ನೆಯ ಗಂಟೆಗೆ ಸಭೆ ಮುಗಿಯಿತು. ಮಳೆ ನಡಿದೇಇದ್ದ ಮೂಲಕ ಜನರು ತೊಯ್ಸಿಗೊಳ್ಳುತ್ತ ಮನೆಗಳಿಗೆ ಹೋದರು. ಹೀಗೆ ೩ನೇ ತಾರೀಖು ಇಲ್ಲಿ ಕೊನೆಗಂಡಿತು.

ಅಲ್ಲಲ್ಲಿಯ ಬಹಿಷ್ಕಾರದ ವಾರ್ತೆ.

ಬಳ್ಳಾರಿಯಲ್ಲಿ ಮುನಸೀಪಾಲ್ಟಿಯ ಕಚೇರಿಯೂ ಶಾಲೆಗಳೂ ಬಂದಾಗಿದ್ದವು.

ಹುನಗುಂದದಲ್ಲಿ ಇಂಗ್ಲೀಷ ಶಾಲೆಯ ವಿದ್ಯಾರ್ಥಿಗಳು ತಮ್ಮ ದೇಶದ ಸ್ವಾಭಿಮಾನವನ್ನು ಸ್ಮರಿಸಿ ಶಾಲೆಗೆ ಹೋಗುವದನ್ನು ಬಿಟ್ಟಿದ್ದರು. ಸಂಜೆಯ ಕಡೆಗೆ ಶ್ರೀ ನಗರೇಶ್ವರ ದೇವಾಲಯದಲ್ಲಿ ಹುನಗುಂದ ನಾಗರಿಕರ ಸಭೆಕೂಡಿ ಶ್ರೀ ಬಸಪ್ಪಾಅಂಣಾ ಕೆಂದೂರ ಅಧ್ಯಕ್ಷತೆಯ ಕೆಳಗೆ ಶ್ರೀ ಈಶ್ವರಪ್ಪಾ ಪವಾಲದಾರ ಇವರು ಭಾಷಣಮಾಡಿರು. ಈ ಕಮೀಶನ್ನವನ್ನು ನಿಷೇಧಿಸಕ್ಕದ್ದೆಂದೂ, ಕೌನ್ಸಿಲ್ಲಗಳಲ್ಲಿಯ ನಮ್ಮ ಪ್ರತಿನಿಧಿಗಳು ಅದಕ್ಕೆ ನೆರವಾಗಬಾರದೆಂದೂ, ಭಾರತೀಯರಾಷ್ಟ್ರದ ಸಂಘಟನೆಯ ವಿಚಾರವು ಭಾರತೀಯರಿಂದೇ ಆಗಕಕ್ಕದ್ದೆಂದೂ ಸರ್ವಾನುಮತದಿಂದ ತರಾವು ಮಾಡಲ್ಪಟ್ಟಿತು.

Model Essays and Dialogue on Recent Subjects

ಇಲ್ಲಿಯ ಬಸವೇಶ್ವರ ಶಾಲೆಯ ಶಿಕ್ಷಕರಾದ ಶ್ರೀ ದೇಶಪಾಂಡೆಯವರು ಬರೆದುದು. ಬೆಲೆ ೦-೪-೦.

ಈತ್ತೀಚೆಗೆ ವಿಶ್ವವಿದ್ಯಾಲಯದ ವಿಷಯವಿನಿಯೋಗದಲ್ಲಿ ಅನೇಕ ಬದಲಾವಣೆಗಳಾಗಿರುವವು. ವಿದ್ಯಾರ್ಥಿಗಳ ಗಿಳಿ ಓದನ್ನು ತಪ್ಪಿಸಿ, ಸಮಕಾಲೀನವಾದ ಮಹತ್ವದ ಸಂಗತಿಗಳ ಬಗ್ಗೆ ಅವರಲ್ಲಿ ಆಸ್ಥೆಯನ್ನು ಹುಟ್ಟಿಸುವದು ಇವುಗಳಲ್ಲಿ ಒಂದಾಗಿಗಿದೆ. ಇದಕ್ಕನುಸರಿಸಿ ಮುಖ್ಯವಾಗಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿಯೂ ಕಾಲೇಜದ ಬೇರೆ ಪರೀಕ್ಷೆಗಳಲ್ಲಿಯೂ ಇಂಥ ವಿಷಯಗಳ ಮೇಲೆ ನಿಬಂಧ ಬರೆಯಲು ಕೇಳುವ ಪ್ರಚಾರವಿದೆ. ನಿಬಂಧಮಾಲೆಗಳೂ ಸಂಭಾಷಣ ಸಂಗ್ರಹಗಳೂ ಹೇರಳವಾಗಿರಲು ಪ್ರಸ್ತುತ ಪುಸ್ತಕ ವೇಕೆ? ಎಂಬ ಪ್ರಶ್ನೆಕ್ಕೆ ಮೇಲಿನ ಮಾಲೆ ಉತ್ತರವಾಗಿದೆ. ಇದರಲ್ಲಿ ಲೇಖಕರು ತುಳಿದ ಹಾದಿಯನ್ನೇ ತುಳಿಯದೆ ಪ್ರಚಲಿತ ವಿಷಯಗಳನ್ನು ನಿಬಂಧ-ಸಂಭಾಷಣೆಗಳಿಗಾಗಿ ಹೇಗೆ ಸಂಪಡಿಸಬೇಕೆಂಬುವದನ್ನು ತೋರಿಸಿರುವರು. ಸಾಯಮನ್-ಕಮಿಶನ್ನ, ಸ್ಕೌಟ್, ಜಂಬೂರಿ, ಮೊದಲಾದ ವಿಷಯಗಳನ್ನು ಪರೀಕ್ಷೆಗಳಲ್ಲಿ ಕ್ಕಳುವ ತೀರ ಸಂಬಂಧವಿದೆ. ಆದ್ದರಿಂದ- ಕಾಲೇಜದ ಮುಖ್ಯವಾಗಿ ಹಾಯಸ್ಕೂಲದ ವಿದ್ಯಾರ್ಥಿಗಳು ಅಲ್ಪ ಬೆಲೆಯ ಈ ಚಿಕ್ಕ ಪುಸ್ತಕವನ್ನು ಅವಶ್ಯವಾಗಿ ಸಂಗ್ರಹಿಸಬೇಕು.

ನಮ್ಮ ಧಾರವಾಡದ ಪತ್ರ.

ಬಳ್ಳಾರಿಯ ಶ್ರೀಯುತರುಗಳಾದ ಟಿ. ಎಂ. ಸದಾಶಿವ ಯ್ಯರವರೂ ಮತ್ತು ಸಂಜುಂಡಯ್ಯನವರೂ ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ಕರ್ನಾಟಕ ಸಂಘದ ಪರವಾಗಿ '' ಕರ್ನಾಟಕ ವಿಶ್ವ ವಿದ್ಯಾಲಯ ''ದ ಮೇಲೆ ಸುಶ್ರಾವ್ಯವಾದ ವ್ಯಾಖ್ಯಾನಗಳನ್ನು ಕೊಟ್ಟರು.

ತಾ॥ ೩೭ ನೇ ದಿವಸ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ಆಲೂರ ವೆಂಕಟರಾಯರ ಅಧ್ಯಕ್ಷತೆಯ ಕೆಳಗೆ '' ವನಿತಾಸೇವಾ ಸಮಾಜ''ವೆಂಬ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ವಿಚಾರಿಸಲು ಇಲ್ಲಿಯ ನಾಗರಿಕರ ಸಭೆಯು ಕೂಡಿತ್ತು. ಸಭೆಯಲ್ಲಿ ವ್ಯಕ್ತಿದ್ವೇಷ, ಶಬ್ದಗಳ ಮೇಲೆ ವಾದವಿವಾದ, ಮೊದಲಾದವುಗಳೇ ಹೆಚ್ಚಾಗಿ ನಡೆದು, ಸಭೆಯ ಅವಶ್ಯಕತೆಯು ಈಗ ಇಲ್ಲವೆಂದು ನಿರ್ಣಯಿಸಿದರು.

ವಿಜಯಶಾಲಿಯಾಗಿ ಹೊರಬಿದ್ದ ನರಿಮನ್ನರನ್ನು ಇಲ್ಲಿಯ ಬಾರ ಅಸೋಸಿಯೇಶನ್ನಿನವರು ತಾ॥ ೩೧ ನೇ ದಿವಸ ಅಭಿನಂದಿಸಿದಂತಾಗಿ ತಿಳಿಯುತ್ತಿದೆ.

ಇಲ್ಲಿಯ ಕರ್ನಾಟಕ ಕಾಲೇಜದ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಮುಂದೆ ಮುಂದೆ ಬೀಳುತ್ತಿದೆ. ಪುಣೆಯ ಕಾಲೇಜದ ಕರ್ನಾಟಕ ಸಂಘವನ್ನು ನೋಡಿ ಇಲ್ಲಿಯವರು ಬುದ್ಧಿ ಗಲಿಯಬಾರದೇ ?

ಈ ಜಿಲ್ಲೆಯಲ್ಲಿಯ ಖಾಸಗೀ ಹಾಯಸ್ಕೂಲಗಳ ಪ್ರಿಲ್ಲಿಮನರಿ ಪರೀಕ್ಷೆಯು ಫೆಬ್ರುವರಿ ೧೫ ನೇ ತಾರೀಖಿಗೆ ಪ್ರಾರಂಭವಾಗುವುದು

ಇಲ್ಲಿಂದ ಇಂಗ್ಲೆಂಡಕ್ಕೆ ರ್ಯಾಂಗಲರ ಪರೀಕ್ಷೆಗೆ ಹೋದ ಪಾವಟೆಯವರು ಇಲ್ಲಿಗೆ ಬಂದಿದ್ದು, ಸನ್ಮಾನಹೊಂದುವಿಕ್ಕಿರುವ ಲಿಂಗಾಯತ ಕಾಲೇಜಕ್ಕೆ ಇವರೇ ಪ್ರಿನ್ಸಿಪಾಲರಾಗುವರು.

ಇಲ್ಲಿಯ ಕರ್ನಾಟಕ ಡಿಬೇಟಿಂಗ ಸೋಸಾಯಿಟಿಯವರು ಇಟ್ಟ ಮೊದಲನೇ ಬಹುಮಾನವು ಶ್ರೀಯುತ ಮುಗಳೀಯವರಿಗೆ '' ಕರ್ನಾಟಕ ವಿಶ್ವವಿದ್ಯಾಲಯ '' ವೆಂಬ ವಿಷಯವನ್ನು ಚನ್ನಾಗಿ ವಿವೇಚಿಸಿ ಹೇಳಿದ್ದಕ್ಕಾಗಿ ದೊರಕಿತೆಂದು ಹೇಳಲು ಸಂತೋಷ ವಾಗುತ್ತದೆ.

ಕರ್ನಾಟಕದಲ್ಲಿ ಬೇರೊಂದು ಮಧ್ಯವರ್ತಿ (Centre) ಸಂಸ್ಥೆಯನ್ನು ತೆಗೆಯುವದು ಈಗ ಶಕ್ಯವಿಲ್ಲವೆಂದೂ, ಕರ್ನಾಟಕದಲ್ಲಿ ಸಂತೋಧಿತವಾಗದೆ ಹಾಗೆಯೇ ಉಳಿದ ಎಲ್ಲ ಶಾಲಾಲಿಪಿಗಳನ್ನು ಇನ್ನು ನಾಲ್ಕು ವರುಷಗಳಲ್ಲಿ ಸಂಶೋಧಿಸಿ, ಸ್ವಚ್ಛಮಾಡುವೆವೆಂದೂ (Wipe off) ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟಿನವರು, ಇಲ್ಲಿಯ ಇತಿಹಾಸ ಮಂಡಳದ ಅಧ್ಯಕ್ಷರಿಗೆ ತಿಳಿಸಿದ್ದಾ ಅವರು ಬರೆದ ಪತ್ರದಲ್ಲಿಯ '' ಸ್ವಚ್ಛಮಾಡುವೆವು Wipe off '' ಎಂಬ ಶಬ್ದಗಳನ್ನು ನೋಡಿದರೆ ಅಂಜಿಕೆಯೇ ಬರುತ್ತದೆ ನಿಜವಾಗಿಯೂ ಇಲ್ಲದಂತೆ ಮಾಡುವರೇ?

ಕಳೆದ ಮಂಗಳವಾರ (೩೧—೧—೩೪) ಮಧ್ವನವಮಿಯಾದರಿಂದ ಇಲ್ಲಿಯ ಶ್ರೀಮನ್ ಮಧ್ವಸಿದ್ಧಾಂತೋತ್ತೇಜಕ ಸಭೆಯು ಮಂದಿರದಲ್ಲಿ ಅಲ್ಲಿಯ ಶಾಲೆಯ ಮುಖ್ಯ ಅಧ್ಯಾಪಕರಾದ ವೇ॥ ಪಾಂಡುರಂಗಿ ಶ್ರೀನಿವಾಸಾಚಾರ್ಯರು ಮಧ್ವರಾಯರ ಜೀವನದ ವಿಷಯವಾಗಿ ಉಪನ್ಯಾಸವನ್ನು ಕೊಟ್ಟರು.

ಗುರುವಾರ ಸಾಯಂಕಾಲಕ್ಕೆ ಶ್ರೀ ಜೋಗ ವಿಶ್ವನಾಥರಾಯರ ಅಧ್ಯಕ್ಷತೆಯ ಕೆಳಗೆ ಸದರ್ನ ಮರಾಠಾ ಬ್ಯಾಂಕಿನ ಆಟ್ಟದ ಮೇಲೆ ಶುಕ್ರವಾರ ಪರತಾಳ ಯಾಕೆ ಪಾಲಿಸಬೇಕು. ಈ ವಿಷಯದ ಮೇಲೆ ವೇ॥ ಶಿದಲಿಂಗಶಾಸ್ತ್ರಿ ಹಾಗು ದೇ॥ ದಿವಾಕರ ಇವರ ಭಾಷಣಗಳಾದವು. ಈ ಸಭೆಯು ಕೇವಲ ವಿದ್ಯಾರ್ಥಿಗಳಿಗಾಗಿಯೇ ಕರೆಯಲ್ಪಟ್ಟಿದ್ದು. ಸಭೆಯಲ್ಲಿ ಸುಮಾರು ೪೦೦ ವಿದ್ಯಾರ್ಥಿಗಳು ಇದ್ದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ವಾರ್ಷಿಕ ಸಭೆಯು.

ಮೊದಲೇ ಸೂಚಿಸಿದಂತೆ ಕ. ವಿ. ವ. ಸಂಘದ ವಾರ್ಷಿಕ ಸಭೆಯು. ಸಂಘದ ಕಟ್ಟಡದಲ್ಲಿ ಮೇ॥ ನಾಯಿಕಸಾಹೇಬರ ಅಧ್ಯಕ್ಷತೆಯಲ್ಲಿ ಆದಿತ್ಯವಾರ ದಿವಸ ಕೊನೆಗಂಡಿತು. ಸಭೆಗೆ ಸೊಲ್ಲಾಪುರದ ಬ್ಯಾ. ಸರದಾರರೂ ವಿಜಾಪುರದ ರಾ॥ ಸಾ॥ ಸರ ನಾಯಿಕರವರೂ ಬಂದಿದ್ದರಿಂದ, ವಿಶೇಷಕಳೆ ಬಂದಿತ್ತು. ಮೊದಲು ಕಾರ್ಯದರ್ಶಿಗಳಾದ ಹಳಕಟ್ಟಿಯವರು ವರದಿಯನ್ನೂ, ಲೆಕ್ಕ ಪತ್ರವನ್ನೂ ಓದಿ ಹೇಳಿದರು. ಬಳಿಕ (೨) ಮತ ಬಸವನಾಳರವರು ಸಂಘದ ಕಟ್ಟಡವನ್ನು ಜೂನತಿಂಗಳದೊಳಗಾಗಿ ಕಟ್ಟಿಸಲು ಪ್ರಾರಂಭಿಸಬೇಕಾದುದರಿಂದ, ಆರ್ಬನ ಬ್ಯಾಂಕಿನಲ್ಲಿ ಸಾಲತೆಗೆದು ಸರಕಾರದವರಿಂದ ಗ್ರಾಂಟಿನ ಹಣ ಬಂದು ನಂತರ ಸಾಲವನ್ನು ಮುಟ್ಟಿಸಬೇಕೆಂದೂ ಸರಕಾರದವರು ಈಗ ಕೊಡಲಿಚ್ಛಿಸಿರುವ ೩೦೦೦ ರೂಪಾಯಿಗಳು ಸಾಲುವದಿಲ್ಲವಾದುದರಿಂದ, ೫೦೦೦ ರು. ಗಳನ್ನು ಕೊಡಲು ಕೇಳಿಕೊಳ್ಳಬೇಕೆಂದೂ ಮತ್ತು ಪುಸ್ತಕಗಳಿಗಾಗಿ ಕೊಡುತ್ತಿರುವ ಗ್ರಾಂಟನ್ನು ೫೦೦ ರು. ಗಳಿಂದ ಹೆಚ್ಚಿಸಲು ಕೇಳಿಕೊಳ್ಳಬೇಕೆಂದೂ ಸಭಿಕರನ್ನು ಕೇಳಿಕೊಂಡರು. ಎಲ್ಲ ಸಭಿಕರು ಕರತಾಡನೆಗಳಿಂದ ತಮ್ಮ ಸಮ್ಮತಿಯನ್ನು ಕೂಟ್ಟರು.— ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ತುಂಡು ತುಂಡಾದ ಕರ್ನಾಟಕದ ಏಕೀಕರಣದ ವಿಷಯಗಳನ್ನು ಪ್ರಾಂತಿಕ ಮತ್ತು ವರಿಷ್ಠ ಮಂಡಳಗಳ ಮುಂದೆ ಮಂಡಿಸಲು ಒಂದು ಮಂಡಳವನ್ನು ಕಳಿಸಬೇಕೆಂದೂ, ಆ ಮಂಡಳಕ್ಕೆ ಮೇ॥ ನಾಯಿಕರವರು ಅಧ್ಯಕ್ಷರಾಗಿಯೂ, ಶ್ರೀ ಹುಲಕೋಟಿಯವರು ಉಪಾಧ್ಯಕ್ಷರಾಗಿಯೂ, ಬ್ಯಾ. ಸರದಾರ, ಸರನಾಯಿಕ, ಮತ್ತು ಕಟ್ಟೀಮನಿ ಇವರು ಸಭಾಸದರಾಗಿಯೂ ಆರಿಸಲ್ಪಡಬೇಕೆಂಬುದಾಗಿ ಸಭಿಕರನ್ನು ಕೇಳಿಕೊಂಡರು. ಶ್ರೀಯುತ ಕರಮರಕರವರು ಈ ಮಂಡಳದಲ್ಲಿ ಶ್ರೀಮಂತರುಗಳಾದ ಕಂಬಳಿ ಮತ್ತು ಜೋಗ ಇವರುಗಳನ್ನಾದಿಸೂ ಸೇರಿಸಬೇಕೆಂದೂ ಸೂಚಿಸಿದರು. ಬಳಿಕ ಕಬ್ಬೂರ ಮಧ್ವರಾಯರು, ಈ ವಿಷಯಗಳ ಸಂಬಂಧವಾಗಿ ಈಗ ಯತ್ನಿಸುತ್ತಿರುವ ಮಂಡಳಗಳ ಸಹಕಾರ್ಯವನ್ನು ಸಂಪಾದಿಸಿ ಈ ಮಂಡಳದವರು ಕೆಲಸ ಮಾಡಬೇಕೆಂಬುದಾಗಿ ಸೂಚಿಸಿದರು ಮೂಲ ಮಸೂದೆಯನ್ನು ಮಂಡಿಸಿದ ಬಸವನಾಳರವರು ಇದರಂತೆ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಇಂಗ್ಲಿಷ ಭಾಷೆಯಲ್ಲಿದ್ದ ಠರಾವನ್ನು ಓದಿ ತೋರಿಸಿದರು. ಗದಿಗೆಯ್ಯ ಹೊನ್ನಾಪೂರಮಠರವರು ಠರಾವಿನ ಭಾಷೆಯು ಇಂಗ್ಲಿಷದಲ್ಲಿರತಕ್ಕದ್ದಿದ್ದಿಲ್ಲವೆಂಬುದಾಗಿ ಆಲ್ಲಿಯೇ ಅಂದು ತೋರಿಸಿದರು. ಸಭೆಯಲ್ಲಿ ಭಾದಶಕರ ಮಂಡಳದ ಮುಂದೆ ಸಾಕ್ಷಿಯನ್ನು ನುಡಿಯಲು, ವಿದ್ಯಾವರ್ಧಕ ಸಂಘದಿಂದ ಒಂದು ಮಂಡಳವನ್ನು ಕಳಿಸಬೇಕೆಂಬ ಆಶಯದ ಮಸೂದೆಯು ಬರುವ

ದಿದೆಯೆಂದು ಊರಲ್ಲಿ ದಟ್ಟ ವಾರ್ತೆ ಇದ್ದುದರಿಂದ, ಅಸಹಕಾರಿಗ ಳೆಲ್ಲರೂ ಸಭೆಗೆ ಬಂದಿದ್ದರು. ಆದರೆ ಆ ಮಸೂದೆಯೇ ಸಭೆಯ ಮುಂದೆ ಬರದ್ದರಿಂದ ಎಲ್ಲರೂ ಶಾಂತ ರೀತಿಯಿಂದ ಕೊನೆಗಂಡಿತು. ಕಟ್ಟಕಡೆಗೆ ಮೆ| ನಾಯಕಂವರು, ಚಿದಂಬರಯ್ಯನವರಿಗೆ ''ಅನು ಭವಾನ್ವಿತ''ವನ್ನು ಪರಿಶೋಧಿಸಿ ಬರೆದದ್ದಕ್ಕಾಗಿ ೧೨೦ ರು. ಗಳನ್ನೂ, ರಾ| ನಾರಾಯಣ ಶರ್ಮಾರವರಿಗೆ ''ಭಾರತೀಯ ಇತಿ ಹಾಸ''ಕ್ಕಾಗಿ ೭೦ ರು; ಗಳನ್ನೂ, ಕರ್ಮವೀರ ದಿವಾಕರರಿಗೆ ''ಉಪನಿಷತ್ಪ್ರಕಾಶ''ಗಳಿಗಾಗಿ ೪೦ ರು. ಗಳನ್ನೂ, ಶ್ರೀಯುತರು ಗಳಾದ ಪೂಜಾರಿ, ಶಬರದ, ಪಾಣ್ಯಸುಂದರಶಾಸ್ತ್ರಿ, ಹೆಗಡೆ, ವೆ. ತಿ. ಕುಲಕರ್ಣಿ, ಕೌಜಲಗಿ, ಭಾರದ್ವಾಜ ಮೊದಲಾದವರಿಗೆ ಇನಾಮುಗಳನ್ನು ಕೊಟ್ಟದ್ದಲ್ಲದೆ, ರಾ॥ ಹಾರನಹಳ್ಳಿ ಅನಂತರಾ ಯರಿಗೆ ''ದ್ವೇಷಭಾಂಡಾರ''ವನ್ನು ಬರೆದುದಕ್ಕಾಗಿಯೂ ೨೦ ರು ಗಳ ಬಹುಮಾನವನ್ನು ಕೊಟ್ಟರು. ಅಂತೂ ಶ್ರೀ ಹಾರನಹಳ್ಳಿ ಯವರ ಈ ಅಪ್ರತಿಮ ಗ್ರಂಥವು ಸಂಘದಿಂದಲೂ ಗೌರವಿಸಲ್ಪ ಟ್ಟಿತು!! ಸಂತೋಷ!!! ಬಳಿಕ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಕೆಲವು ಹುಡುಗರಿಗೂ ಬಹುಮಾನಗಳನ್ನು ಕೊಟ್ಟರು. ಈ ಸಲವಾದರೂ ಮೇ॥ ನಾಯಿಕರವರೇ ಅಧ್ಯಕ್ಷರಾಗಿರಿಸಲ್ಪಟ್ಟರು. ಶ್ರೀಮಂತ ಹುಲಕೋಟಿಯವರು ಉಪಾಧ್ಯಕ್ಷರಾಗಿಯೂ, ಆರಿ ಸಲ್ಪಟ್ಟರು. ಅಭಾರ ಮನ್ನಿಸುವದಾದ ಮೇಲೆ ಸಭೆಯ ಕಾರ್ಯವು ಸಮಾಪ್ತಿ ಹೊಂದಿತು

ಮೈಸೂರೂ ಭಟ್ಕಳ ಬಂದರವೂ.

ಮೈಸೂರು ಸರಕಾರವು ಭಟ್ಕಳ ಬಂದರವನ್ನು ದೊರಕಿಸುವ ಹಾಗು ಮಾಡಿದ ಪ್ರಯತ್ನವು ಪ್ರಕಾಶಕ್ಕೆ ಬರತೊಡಗಿದೆ. ಮದ್ರಾಸ ದ ಹಿಂದೂ ಪ್ರಕೆಯ ಬೆಂಗಳೂರು ಸುದ್ದಿಗಾರನು ಸರಕಾರದ ದಾಖಲೆಗಳ ಆಧಾರದಿಂದ ಈ ವಿಚಾರವನ್ನು ಹೊರಗೆಡವಿದ್ದಾನೆ ಅದರಿಂದ ಈವರೆಗೆ ಕತ್ತಲೆಯಲ್ಲಿದ್ದ ಮಹತ್ವದ ಮುದ್ದೆಗಳು ಬೆಳಿಗೆ ಬಂದಿವೆ. ಮೈಸೂರಿಗೆ ಭಟ್ಕಳವೇ ಪಶ್ಚಿಮ ದಂಡೆಯಲ್ಲಿ ಉಪಯುಕ್ತವಾದ ಉತ್ತಮವಾದ ಹಾಗೂ ತೀರ ಸಮೀಪದ ಬಂದರೆ ವೆಂದು ನಿರ್ಧಾರವಾಗಿದೆ. ಮೈಸೂರು ಗಡಿಯಿಂದ ಭಟ್ಕಳ ಬಂದ ರಕ್ಕೆ ಹದಿನಾಲ್ಕೇನೈಲು ಅಂತರ. ಭಟ್ಕಳವು ಮುಂಬೈ ಮದ್ರಾಸ ಮೈಸೂರುಗಳ ಗಡಿಯಮೇಲಿದೆ. ಮದ್ರಾಸ್ ಪೋರ್ಟ ಟ್ರಸ್ಟಿನ ಚೆಯರಮನ್ನರಾದ ಸರ್. ಫ್ರಾನ್ಸಿಸ್ ಸ್ಪ್ರಿಂಗ್ ರಂತಹ ತಜ್ಞರು ತಿ ಕೂಲಂಕುಶವಾಗಿ ಶೋಧಿಸಿ ಭಟ್ಕಳವು ಉಪಯುಕ್ತವಾದ ಬಂದರ ವಾಗುವುದೆಂದು ಅಭಿಪ್ರಾಯಪಟ್ಟಿರುವರು. ಅದರಂತೆಯೇ ಮುಂಬೈ ಪೋರ್ಟ್‌ಟ್ರಸ್ಟಿನ ಚೆಯರಮನ್ನರೂ ಡೆಪ್ಯುಟೀ ಚೀಫ ಇಂಜನಿಯರ ರೂ ಈ ಯೋಜನೆಯ ಶಕ್ಯತೆಯನ್ನು ಸಮರ್ಥಿಸಿರುವರು. ಈ ಎಲ್ಲ ಶೋಧಗಳಿಂದ ಭಟ್ಕಳ ಬಂದರಕ್ಕೆ ಅತಿಶಯವಾದ ಅನುಕೂ ಲತೆಯುಂಟೆಂಬುದು ವ್ಯಕ್ತವಾಗಿದೆ. ಲಂಡನ್ನಿನ ಸುಪ್ರಸಿದ್ಧ ಬಂ ದರ ತಜ್ಞರೊಬ್ಬರು ಅಲ್ಪವ್ಯಯದಿಂದ ಈ ಬಂದರವನ್ನು ಕಟ್ಟುವದು ವ್ಯವಹಾರ್ಯವಾಗಿರುವುದೆಂದು ಅಭಿಪ್ರಾಯಪಟ್ಟಿದ್ದಾರೆ. ಮೈಸೂ ರು ಸರಕಾರಕ್ಕೆ ಭಟ್ಕಳ ಬಂದರದ ಯೋಜನೆಯನ್ನು ಪೂರೈಸಲು ಈ ಕೆಳಗಣ ಒಡಂಬಡಿಕೆಯು ಅವಶ್ಯವಾಗಿದೆ. (೧) ಮೈಸೂರಿನ ಗಡಿಯ ಮೇಲಿರ ವ ಕೊಗಾರು ಎಂಬಲ್ಲಿಂದ ಭಟ್ಕಳ ಬಂದರದ ವರೆಗೆ ರೈಲು ಮಾರ್ಗವನ್ನು ಹಾಕುವುದಕ್ಕೆ ಬೇಕಾದ ಪ್ರದೇಶ ವನ್ನೂ ಬಂದರದ ಕಟ್ಟೋಣಕ್ಕೆ ೨ ಚೌರಸ ಮೈಲು ಪ್ರದೇಶ ವನ್ನೂ ೯೯ ವರ್ಷಗಳವರೆಗೆ ಗೇಣಿಗೆ ಕೊಡಬೇಕೆಂದು ಮೈಸೂರು ಸರಕಾರದಿಂದ ಬೇಡಿಕೆಯಿದೆ. ಮತ್ತು ಈ ಪ್ರದೇಶದ ಮೇಲಿನ ಪೋಲಿಸ ಅಧಿಕಾರವು ತನ್ನ ಸ್ವಾಧೀನದಲ್ಲಿರಬೇಕೆಂದೂ ಮೈಸೂರು ಸರಕಾರದ ಬೇಡಿಕೆಯಿದೆ. ಕಬ್ಬಂ ಉತ್ಪನ್ನ ದ ವಿಷಯದಲ್ಲಿ ಸಮಂ ಜಸವಾದ ಬೇಕಾದ ವ್ಯವಸ್ಥೆಮಾಡಿದರೂ ಆದಕ್ಕೆ ಸರಕಾರದ ಸಮ್ಮತಿಯದೆ. ಬಂದರದ ಮೇಲಿನ ರಾಜಕೀಯ ಅಂಕೆಯು ಬ್ರಿಟಿಷ ಸರಕಾರದ್ದೆಂಬ ವಿಷಯದಲ್ಲಿ ಮೈಸೂರು ಸರಕಾರದ ವಾದವಿಲ್ಲ. ಈಗ ಮುಂಬೈ ಸರಕಾರಕ್ಕೂ ಮೈಸೂರ ಸರಕಾರಕ್ಕೂ ಇರುವ ವಾದವೆಂದರೆ ಪೋಲೀಸ ಅಧಿಕಾರದ ವಿಷಯದಲ್ಲಿ. ಮುಂಬೈ ಸರ ಕಾರವು ಅದನ್ನು ಮೈಸೂರು ಸರಕಾರಕ್ಕೆ ಒಪ್ಪಿಸಲು ಸಮ್ಮತಿಸುವು ದಿಲ್ಲ. ಅದರಿಂದ ಇದೊಂದೇ ಈಗ ಮೈಸೂರು ಸರಕಾರದ ಭಟ್ಕಳ ಬಂದರದ ಯೋಜನೆಗೆ ಮುಖ್ಯ ವಿಘ್ನವಾಗಿರುವುದಾಗಿ ವ್ಯಕ್ತವಾಗು ತ್ತಿದೆ. ಮೈಸೂರ ಸರಕಾರದ ಬೇಡಿಕೆಯು ಸಮಂಜಸವಾದುದೆಂ ದೂ ಆದಕ್ಕೆ ಮುಂಬೈ ಸರಕಾರವು ಒಪ್ಪಿಗೆಕೊಡುವುದು ಅವಶ್ಯ ವೆಂದೂ ತಿಳಿಯುತ್ತೇನೆ ಹಾಗೂ ಬ್ರಿಟಿಷ ಕರ್ನಾಟಕದ ಲೋಕ ಮತವು ಮೈಸೂರು ಸರಕಾರದ ಬೇಡಿಕೆಗೆ ಸಂಪೂರ್ಣವಾಗಿ ಬೆಂಬ ಲಕೊಡದೆ ಇರಲಿಕ್ಕಿಲ್ಲವೆಂದು ನಂಬುತ್ತೇನೆ —ಕರ್ನಾಟಕ ಭೂಷಣ.

ನವ್ಯ ಬೆಳಗಾಂವಿಯ ಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ಬೆಳಗಾವಿ (೩-೨ ೩೮) ಮುಂಜಾನೆಯಿಂದ ಮುಗಿಲಲ್ಲಿ ಮೋಡ ಮುಸುಕಿ ಮಳೆ ಹನಿಗಳು ಉದುರಿದವು. ಈ ಹೊತ್ತಿನ ದಿವಸ ೧॥ ಇಂಚು ಮಳೆಯಾಗಿದೆ ಇಲ್ಲಿಯ ಮತ್ತು ಶಹಾಪುರ ನಾಗರಿಕರಿಂದ ಹರ್ತಾಳವು ಆಚರಿಸಲ್ಪಟ್ಟಿತ್ತು ೪-೩೦ ಘಂಟೆಗೆ ಸಭೆ ಆವೆ ಎಂದು ಜಾಹೀರ ಮಾಡಿತ್ತು ಆದರೆ ಮೆ॥ ಫಡಕೆಯವರು ಬಂದೇ ಸಭೆ ಸುರಿ ಯುತ್ತಿದ್ದರಿಂದ, ಭೆಂಡಿ ಬಾಜಾರ (ದಿಗರ್ಜದಲ್ಲಿ) ಯ ಸಭೆಯ ಸ್ಥಳವನ್ನು ತಗೆದು ವಾರುತಿಗುಡಿಯಲ್ಲಿ ಇಡಬೇಕಾ ಯಿತು. ಸಭೆಗೆ ೬-೩೦ ಘಂಟೆ ಆಯಿತು ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ಪಂಡಿತ ರಾಯಪ್ಪಾ ಚಿಕ್ಕೋಡಿಯವರು, ಸ್ವೀಕಾರ ಮಾಡಿದ್ದರು ಸಭೆಯಲ್ಲಿ ಶ್ರೀ ಪುರಾಣಿಕ, ಶ್ರೀ ಶಾಮರಾವ ದೇಸಾಯಿ ನೋಡೋಪಂತ ಮರಾಠಿ, ವಕೀಲ, ಶ್ರೀ ನಗರಕರ ವಕೀಲ, ಖಾತಬುದ್ದೀನ ಸಾಹೇಬ, ಮತ್ತು ನಾ॥ ಬೆಳಗಿ ಮುಂತಾದವರು ೨೦೦೦ ಜನರ ಮುಂದೆ ಭಾಷಣ ಮಾಡಿದರು. ನಡುನಡುವೆ. ಕನ್ನಡ ಮತ್ತು ಮರಾಠಿ ಮಾತಾ ಡಿರಿಯೆಂದು ಜನರು ಕೂಗುತ್ತಿದ್ದರು. ಅಧ್ಯಕ್ಷರಂತೂ ಶುದ್ಧ ಕನ್ನಡ ಮಾತಾಡುವವರೆ, ನಾ॥ ಬೆಳಗಿಯವರು ಕನ್ನಡ ಮಾತಾಡುತ್ತಾರೆ ಎಲ್ಲರು ಕೇಳಿರಿ ಎಂದು ಅಧ್ಯಕ್ಷರು ಹೇಳಿದರು ಆದರಂತೆ ಕನ್ನಡ, ಮರಾಠಿ, ಹಿಂದಿ, ಉರ್ದು, ಹೀಗೆ ಭಾಷಣ ಆಯಿತು ಸಭೆಗೆ ರಾ॥ ಬಾ॥ ಅಂಗಡಿ ಯವರು ಬಾರದ್ದಕ್ಕಾಗಿ ಮತ್ತು ತಮ್ಮ ಮತವನ್ನು ಪ್ರಕಟ ಮಾಡ ದ್ದಕ್ಕಾಗಿ ನಾರಾರೆ ವಕೀಲರು ಖೇದ ವ್ಯಕ್ತಪಡಿಸಿದರು. ನಾ॥ ಬೆಳಗಿ ಯವರು ನಾನು ಈ ಹೊತ್ತಿನ ದಿವಸ ಕಚೇರಿಗೆ ಹೋಗಿದ್ದೆ. (೩-೨-೩೮) ದಿವಸ ಸಭೆಯಲ್ಲಿ ಮಾತಾಡಿದರು. ಆದಕ್ಕೆ ನನಗೆ ಈಹೊತ್ತಿನ ದಿವಸ ಜೊರಕಿದ ರೂಪಾಯಿ ಪೈಕಿ ೨೦ ರೂಪಾಯಿ ನನ್ನ ಕಡೆಯಿಂದ ತಪ್ಪಾ ಗಿದೆ. ಈ ರುಪಾಯಿಗಳನ್ನು ಖಾದಿಗೆ ಅಗಲಿ ಅಥವಾ ಕಾಂಗ್ರೇಸ ಕಛೇರಿಗೆ ಅಗಲಿ ಸಹಾಯಕೊಡುತ್ತೇನೆ. ಎಂದು ಹೇಳಿ ೨೦ ರೂ. ಕೊಟ್ಟರು.

ತಾ॥ ೧-೩-೩೮ ದಿವಸ ಮುನಸಿಪಾಲಿಟಿಯಲ್ಲಿ ಜನರಲ್ ಮೀ ಟಿಂಗು ಕೂಡಿ ತಾ॥ ೩-೩-೩೮ ದಿವಸ ಮುನಸೀಪಾಲಿಟೀ ಆಫೀಸು ಬಂದು ಇಡಬೇಕೆಂದು ಶ್ರೀ. ಜೀವಣರಾವ ಯಾಳಗಿಯವರು ಗೊತ್ತು ವಳಿಯನ್ನು ತಂದರು ಅದಕ್ಕೆ ಮಿ॥ ಪೋತದಾರ ವಕೀಲರು ಅಮೋದನ ಕೊಟ್ಟರು. ಈ ಠರಾವು ಬರುವ ಪೂರ್ವದಲ್ಲಿ ಅಂದರೆ (೨ ಮಿನಿಟಿನಲ್ಲಿ) ರಾ॥ ಬಾ॥ ಅನಿಗೋಳಿ ಮತ್ತು ದೇಸಾಯಿ ಚಡಚಿಯವರು ಸ್ಥಳವನ್ನು ಬಿಟ್ಟು ಮನೆಗಡೆಗೆ ನಡೆದರು, ಉಳಿದ ಮೆಂಬರರು ಮತವನ್ನು ಕೊಟ್ಟರು. ಅದರಂತೆ ಕಾಯಾಗಿ ನಿನ್ನಿನ ದಿವಸ ಕಚೇರಿಯು ಮುಚ್ಚಲ್ಪಟ್ಟಿತ್ತು.

ಜಾಹೀರ ನೋಟೀಸ.

ಮೆ॥ ಕಲೇಕ್ಟರ ಸಾ॥ ಬಾ॥ ಜಿಲ್ಲಾ ವಿಜಾಪೂರ ಇವರ ಕಡೆಯಿಂದಃ—

ಯಾವತ್ತೂ ಜನರಿಗೆ ತಿಳಿಯಪಡಿಸುವದರಲ್ಲಿ ಬರುತ್ತದಲ್ಲಾ.

ತಾ॥ ೧-೪-೧೯೨೮ ರಿಂದ ೩೧-೩-೧೯೨೯ ಮಾರ್ಚಿಕ್ಕೆ ಮುಗಿಯುವ ಒಂದು ವರ್ಷದ ಮುದತೀ ಮಟ್ಟಿಗೆ ವಿಜಾಪೂರ ಜಿಲ್ಲೆಯೊಳಗಿನ ಲಗತಿನ ಯಾದಿಯಲ್ಲಿ ನಮೂದ ಪಡಿಸಿದ ಯಾವತ್ತೂ ಸರಕಾರಿ (ಪ್ರೊವ್ಹಿನಸಿಯಲ್) ರಸ್ತೆಗಳ ಮೇಲಿನ ಟೋಲ ನಾಕೆಗಳಲ್ಲಿ ಟೋಲ ವಸೂಲ ಮಾಡುವ ಹಕ್ಕನ್ನು ತಾ॥ ೨೨-೩-೧೯೨೮ ಬುಧವಾರ ದಿವಸ ಮೆ॥ ಕಲೇಕ್ಟರ ಸಾ॥ ಬಾ॥ ರವರ ಸಮಕ್ಷ ಮಧ್ಯಾನ್ಹ ೧೨ ಘಂಟಿಕ್ಕೆ ದರ್ಬಾರ ಹಾಲಿನಲ್ಲಿ ಉಘಡ ಲಿಲಾವ ಮಾಡುವದರಲ್ಲಿ ಬರುವದು. ಟೋಲಿನ ದರಗಳು ಲಿಲಾವಿನ ವೇಳೆಯಲ್ಲಿ ಹೇಳುವದರಲ್ಲಿ ಬರುವವು. ದರಗಳು ಹೋದ ವರ್ಷದಂತೆನೇ ಇರುತ್ತವೆ.

೨ ಸವಾಲಿನಲ್ಲಿ ಬೇಡುವವರು ಬೇಡತಕ್ಕ ರಕಮಿಗೆ ಲಾಯಖ ಇದ್ದ ಬಗ್ಗೆ ಮಾಮಲೇದಾರ ಸಾ॥ ಅಗರ ಮಹಾಲಕರಿ ಸಾ॥ ರವರ ಸಹಿನಿಶಿ ಸರ್ಟಿಫಿಕೀಟು ಛಾಪಿ ನಮೂನೆಯಲ್ಲಿ ತರತಕ್ಕದ್ದು.

೩ ಸವಾಲು ಬಂದಾದ ಕೂಡ್ಲೆ ಸವಾಲಿನ ಒಂದು ನಾಲ್ಕಾಂಶ ರಕಮು ತಾತ್ಕಾಲ ಜಮೂ ಮಾಡಿ ಪಾವತಿ ತಕ್ಕೊಂಡು ಉಳಿದ ಮೂರು ನಾಲ್ಕಾಂಶ ಸವಾಲಿನ ರಕಮನ್ನು ಕರಾರದ ಪ್ರಕಾರಾ ೩ ಸವನಾದ ಹಪ್ತೇ ಬಂದಿಗಳಿಂದ ಕೊಡಬೇಕು. ಬಾಬು ಸುಪರ್ದಿ ಪಡಕೊಳ್ಳುವ ಪೂರ್ವದಲ್ಲಿ ತಾಲೂಕಿನ ಮಾಮಲೇದಾರ ಸಾ॥ ರ ಮುಂದೆ ಅಗರ ಮಹಾಲಕರಿ ಸಾ॥ ರ ಮುಂದೆ ಪಟ್ಟಿ ಬರಕೊಡತಕ್ಕದ್ದು.

೪ ಸವಾಲ ಮಂಜೂರ ಮಾಡುವದು ಅಗರ ಬಿಡುವದು ಮೆ॥ ಕಲೇಕ್ಟರ ಸಾ॥ ಬಾ॥ ರವರ ಆಧೀನದಲ್ಲಿರುವದು.

೫ ಹೆಚ್ಚಿನ ಕರಾರ ವಗೈರೆ ಲಿಲಾವಿನ ವೇಳ್ಕೆಕ್ಕೆ ಓದಿ ಜೇಳುವ ಶರ್ತಿಯಾದಿಯಲ್ಲಿ ಕೊಡುವದರಲ್ಲಿ ಒರುವದು.

೬ ಮತ್ತೇನಾದರೂ ಮಾಹಿತಿ ಬೇಕಾದಲ್ಲಿ ಮೆ॥ ಕಲೇಕ್ಟರ ಸಾ॥ ರವರ ಆಫೀಸದಲ್ಲಿ ಪಡಕೊಳ್ಳಬಹುದು.

ವಿಜಾಪೂರ
ತಾ॥ ೨೭—೧—೧೯೨೮

ಪ್ಹಿ. ಎಚ್. ನಾಯಿಕ
ಕಲೇಕ್ಟರ ಆಫ್ ವಿಜಾಪೂರ.

ವರರು ಬೇಕಾಗಿರುವರು!

ವೇಸ್ಯಾ ಪಂಗಡದಲ್ಲಿ ವಿವಾಹಕ್ಕೆ ಸಿದ್ಧರಾಗಿರುವ, ವಿದ್ಯಾವಂತರೂ, ಯೋಗ್ಯ ಜೀವನ ನಡೆಯಿಸುತ್ತಿದ್ದು ಕುಟುಂಬ ನಿರ್ವಾಹಕ್ಕೆ ಶಕ್ತಿಯುಳ್ಳ ತರುಣರು.

ಮೂರು ಬಾಲಕಿಯರ ವಯಸ್ಸು ೧೪-೧೬ II. III. VI Form ತನಕ ಓದಿದವರು. ಗುಣವತಿಯರೂ ರೂಪವತಿಯರು-ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.

ಕೌಶಿಕ C/o- ಕನ್ನಡಿಗ.

ಕರ್ನಾಟಕ ಮಹಿಳಾವಿದ್ಯಾಲಯ ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾಗಿ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟ್ರಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರವದಕ್ಕೆ ಶಕ್ತವಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದೆ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಸ್ಥಳದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಅಣವಾಲ ಮೊದಲಾದ ಜಿಲ್ಲೆಗಳಲ್ಲಿಂದ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭೆಕೋಣಿ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ವಿಜಾಪೂರ ಜಿಲ್ಲೆಯೊಳಗಿನ ಟೋಲ ನಾಕೆಗಳ ಹೆಸರು ವ ಯಾವ ಸರಕಾರಿ ರಸ್ತೆಗಳ ಮೇಲೆ ಅವು ಇರುವವು ಅವುಗಳ ಹೆಸರು-

ನೇಜ ನಂಬರ	ರಸ್ತೆದ ಹೆಸರು	ನಾಕೇಗಳ ಜಾಗಾ
೧	ಸೊಲಾಪೂರ ಹುಬ್ಬಳ್ಳಿ ರಸ್ತೆ	ತಿಡಗುಂದಿ ಹತ್ತರ-
೩	ಸದರ	ರೇಲ್ವೆ ಲೆನ ಹತ್ತರಾ ೪ ಳನೇ ಮೈಲಿಗೆ
೩	,,	ಕೊಲ್ಹಾರ ಕಾಜವೇದ ಹತ್ತರಾ.
೪	,,	ಕೆರೂರ ಸಮೀಪದಲ್ಲಿ ಉತ್ತರ ಬಾಜು ೧ ಕ್ಕೆ ಒಂದು ಎರಡಾಂಕ ಮೈಲದಲ್ಲಿ
೫	ವಿಜಾಪೂರ ಕಾಗವಾಡ ರಸ್ತೆ	ತೊರವಿ ಹತ್ತರಾ ೫೬ ನೇ ಮೈಲಿಗೆ
೬	,,	ಹೊನವಾಡ.
೭	ವಿಜಾಪೂರ ಶಿಂದಗಿ ರಸ್ತೆ	ರೆಲ್ವೆ ಕ್ರಾಸಿಂಗ ದಾಟಿ ಮತ್ತು ಮುನಸಿಪಾಲ್ಟಿ ಹದ್ದಿ ದಾಟಿ ಪೋಸ್ಟ ಆಫೀಸದಿಂದ ೩ ಮೈಲು ದಾಟಿ.
೮	,,	ಹಿಪ್ಪರಿಗಿ ಕನ್ನೊಳ್ಳಿ ನಡುನೆ.
೯	ವಿಜಾಪೂರ ಬಾಗೇವಾಡಿ ರಸ್ತೆ	ಮನಗೂಳಿ ಅಗಸಿ ದಾಟಿ
೧೦	,,	ಬಾಗೇವಾಡಿ.
೧೧	ಕೊಲ್ಹಾರ ತಾಳೀಕೋಟಿ ರಸ್ತೆ	ತೆಲಗಿ
೧೨	,,	ಬಳಗಾನೂರ
೧೩	ಮುದ್ದೇಬಿಹಾಳ ಚಿಮ್ಮಲಗಿ ರಸ್ತೆ	ಜಾಲಾಪೂರ ಹಳ್ಳದ ಹತ್ತರ
೧೪	ಬೆಳಗಾಂವ ಹುನಗುಂದ ರಸ್ತೆ	ಗದ್ದನಕೇರಿ ಕಡೆಗೆ ಮೈಲು ೮೧/೨
೧೫	ಬೆಳಗಾಂವ ಹುನಗುಂದ ರಸ್ತೆ	ತಿರೂರ ಹತ್ತರಾ
೧೬		ರಕ್ಕಸಗಿ ಹತ್ತರಾ ಮೈಲು ೧೧/೨ ಕ್ಕೆ
೧೭	ಸಾಳೆ ಒಡಾಮಿ ರಸ್ತೆ	ಬನಶಂಕರೀ ಹತ್ತರಾ (ರಾಮದುರ್ಗ ಟರ್ನಿಂಗ ನ ಜೊಳಜ ಗುಡ್ಡದ ನಡುವೆ)

ಟೀಪು— ಲಿಲಾವಿನ ವೇಳ್ಯಕ್ಕೆ ಶರ್ತಿನ ಯಾದಿ ಓದಿ ಹೇಳುವದರಲ್ಲಿ ಬರುವದು. ನಾಕೆ ಇಡುವ ಸ್ಥಳಗಳಲ್ಲಿ ಹೆಚ್ಚು ಕಡಿಮೆ ಮಾಡುವಹಾದರೆ ಲಿಲಾವಿನ ವೇಳ್ಯಯಲ್ಲಿ ಕ॥ ಸಾ॥ ಬಾ॥ ರವರು ಹೇಳುವರು. ಆ ಹೇಳಿವ ಸ್ಥಳದಲ್ಲಿ ನಾಕೆ ಇಡಬೇಕಾಗುವದು. ಪೋಟ ನಾಕೆ ಇಡುವ ಸ್ಥಳಗಳನ್ನು ಸಹ ಆಗೆಯೇ ಹೇಳುವದರಲ್ಲಿ ಬರುವದು.

ವಿಜಾಪೂರ,
ತಾ॥ ೨೭—೧—೧೯೦೫.

ವ್ಹಿ. ಎಚ್. ನಾಯಿಕ.
ಕಲೇಕ್ಟರೆ ಆಫ ವಿಜಾಪೂರ.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ಮ್ಹಾಲುಗಳನ್ನು ಕೋಡುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದ ಮೊಳ ೧೪ ಅಗಲಿಮೊಳ ೩, ಧಾನು ೧ಕ್ಕೆ ೧೫ ರಿಂದ ೫೦ ಜರಿ ಶೀರೆಗಳು ೧೬ ೧೮ ಮೊಳ ಉದ್ದ ೧ಕ್ಕೆ ರೂ. ೨ ರಿಂದ ೫೦ ರವರೆಗೆ. ಬುಟ್ಟೆದಾರ್ ಬನಾರಸ್ ಶೀರೆ ೧೬-೧೮ ಉದ್ದ ಮೊಳ ೭ ೧ಕ್ಕೆ ರೂ ೫ ರಿಂದ ೫೧ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧ಕ್ಕೆ ರೂ. ೧೦ ರಿಂದ ೫೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮೆ ಜರೀದುಪ್ಪಟಿ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೫೦ ರವರೆಗೆ ಸಾದಾ ಬಂಗಾಳಿ ರೇಶ್ಮೆ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ ಕ್ಕೆ ರೂ. ೭ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರ ವರೆಗೆ ಸುದರ್ಶನ ೧ ಕ್ಕೆ ಆಣೆ ೮ರಿಂದ ರೂಸಾಯಿ 1½ ರವರೆಗೆ ಜಗನ್ನಾಥಜಾಗಂಟಿ ೧ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ಬೇರೆ ಬೇಕಾದವ್ಹಾ ಎಗಳ ಕೆಟಲಾಗ ಇನಾಂ

ನಿಳಾಸಃ-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಂಬಾ ಕಾಶಿ ಬನಾರಸ್

ಟೇಬಲ್ ಟೈಂಪೀಸ್ ಇನಾಂ.

ಈ ನಕ್ಷೆಯಲ್ಲಿ ಕಂಡ ಪೌನ್‌ಟೆನ್ ಪೇನಾವು ಇಂಗ್ಲಂಡಿನಲ್ಲಿ

ತಯಾರಾದ ದ್ದು ಇದಕ್ಕೆ ೧೪ ಕೆರೆಕಿನ ಭುಗಾರದಂಥ ನಿಬ್ಬು ಹಾಕಿದೆ. ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ಕ್ಕೆ ೨-೪-೦

ವಿಳಾಸಃ- ಪೀಟರ್ ವಾಚ್ ಕಂಪನಿ
ಪೋ॥ ಬಾಕ್ಸ ನಂ. ೨೭, ಮದರಾಸು

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ :—

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸದರಸ್ಥ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಯೆಂಬ ಆರೋಗ್ಯ ಮಾರ್ಗದರ್ಶನ. ಅನೇಕ ರಹಸ್ಯವಾದ ವಿಷಯಗಳಿವೆ.

ಏಜಂಟರುಃ—ಜಂಬುಲಿಂಗಪ್ಪಾ ಜಾಲವಾದಿ.
ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
೪೮, ಚೀನಾಬಜಾರ್, ಮದ್ರಾಸು

JUST THE BOOK FOR S. L. C. CONDIDATES.

MODEL ESSAYS AND DIALOGUE.

ON

Recent Subjects

FOR

High-School Students.

BY

B. R. Deshpande B A. Honours

Teacher Basweshar High—Schotl BAGALKOT.

Apply to the anthor for copies. } { Price Four Annas,

Due discount allowed on whole-sale orders. } { Every Retail order must be accompanied by five Anna Stamps

ಬಾಗಲಕೋಟಿ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟಿಯಿಂದ ೩॥ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಲೆಯಲ್ಲಿಯು ಮತ್ತು ಸುತ್ತು ಮುತ್ತಲಿನ ಪಾಸಗಿ ವ ಸರ್ವೀಸಿನ ಮೋಟಾರ ಮಾಲಕರಿಗೆ ಗೈರಸೋಯು ದೂರವಾಗಬೇಕೆಂದು ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು ತಾ॥ ೧೦ ಸಪ್ಟೆಂಬರ ೧೯೨೨ನೇ ಇಸ್ವಿಯಿಂದ ಬಾಗಲಕೋಟಿಯಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳು ಸ್ವಯೋಗ್ಯ ದರದಿಂದ್ಹ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷವು ಅಥವಾ ಪತ್ರದ್ವಾರದಿಂದ,

ಚಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದ ದಿಂದ ವ್ಹಲ್ಕನಾಯಝಿಂಗ ಮಾಡಿ ಕೊಡುವೆವು

ಬಾಗಲಕೋಟಿ-ಬೆಳಗಾವಿ, ಬಾಗಲಕೋಟಿ-ಇಲಕಲ್ಲ ಸರ್ವೀಸ ೧ ಎಪಾಪ್ರಕಾರ ನಡೆದಿದೆ

ಬೇಕಾಗಿದ್ದಾರೆ.

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂ ಅರನ್ಸದ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೊಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ

WANTED.

Agents, Travelling Agents and Chief Agents. Men with experience of Insurance work. capable of bringing business, required. ash security. Salary according to qualifications.

Apply to:— Mr S Rabboov B. A., F. S. S. (Lond) Asst. Manager (on deputation) General Assurance Society Ltd 44, Linggi Chetty street, Madras.

ಅತ್ಯಲ್ಪವಿವೆ! ಉಚಿತ
ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ ಪೊಕೆಟ್ ವೊಚ್ ೧೯ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳೇ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ ೧೪ ಕೆರೆಟ್ ರೋಲ್ಡ್‌ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಾ ಬರೆ ರೂಪಾಯಿಗೆ

ಕ್ಯಾಶ್ಟನ್ ವಾಚ್ ಕಂ. ಪಿ. ಬಿ. ೧೨೬ ಮದ್ರಾಸ

ಶ್ರೀ ಪತ್ತರಾಜ ಸಮರ್ಥ
ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ
ಗದಗ ಶ್ರೀದತ್ತಾತ್ರೇಯ ನಾಟಕ
ಮಂಡಳಿಯವರು
ಬಾಗಲಕೋಟೆ ಶಿವಾನಂದ ಥಿಯೇಟರಿನಲ್ಲಿ
ಸೋಮವಾರ ತಾ॥ ೬—೨—೨೮
ಸಂಪೂರ್ಣ
ಕೃಷ್ಣಲೀಲಾ.
ಬುಧವಾರ ತಾ॥ ೮—೨—೨೮
ವತ್ಸಲಾಹರಣ.
ಶನಿವಾರ ತಾ॥ ೧೧—೨—೨೮
ಸುದಾಮದೇವ.
ಎಂಬ ನಾಟಕಗಳನ್ನು ಆಡುವರು ಈ ಪ್ರಯೋಗಗಳಲ್ಲಿ ಟ್ರಾನ್ಸ್ ಫರ ಸೀನ ಸೀನರಿಗಳು ತೋರಿಸಲ್ಪಡುವವು.

* ಟಿಕೀಟಿನ ದರಗಳು. *

ಖುರ್ಚಿ ರೂ. ೩—೦—೦; ೨—೦—೦; ೧—೮—೦; ೧—೦—೦
ಮಹಡಿ ೦—೮—೦; ನೆಲಾ ೦—೬—೦
ಕುಲಿನ ಸ್ತ್ರಿಯರಿಗೆ ೦—೬—೦ ವೆಶ್ಯರಿಗೆ ೦—೧೨—೦

ಸೂಚನೆ— ಖುರ್ಚಿ ೧ ಕ್ಕೆ ೨ ಆಣೆ ಹೆಚ್ಚಿಗೆ ಕೊಟ್ಟಲ್ಲಿ ರಿಝರ್ವ ಮಾಡಲಾದೀತು. ರಿಝರ್ವ ಮಾಡಿಸತಕ್ಕವರು ನಾಟಕದ ದಿವಸ ಸಾಯಂಕಾಲ ೬ ಘಂಟೆಯ ಒಳಗಾಗಿ ಮಾಡಿಸಬೇಕು. ೫ ವರ್ಷದ ಮೇಲಿನ ಹುಡುಗರಿಗೆ ಪೂರಾ ಚಾರ್ಜು ಎಲ್ಲರಿಗೂ ಸಭ್ಯ ರೀತಿಯಿಂದ ವರ್ತಿಸುವ ಬಗ್ಗೆ ಪ್ರಾರ್ಥನೆ.

ನಮ್ಮಲ್ಲಿ ದೊರೆಯುವ ಪುಸ್ತಕಗಳು.
ವಿಷವು ವಿವಾಹ, ಕಲೀರದಾಸ, ಕಂಸವಧ ಪ್ರತಿವಂದಕ್ಕೆ ರೂ. ೧.

ಒಡೆಯರು.
ಸದಾಶಿವರಾವ ಗರುಡ
ಕರ್ನಾಟಕ ನಾಟಕಾಲಂಕಾರ; ಅಭಿನಯ ಕೇಸರಿ.

WANTED.

The Akhil Bharateeya Charakha Sangha (All Inhia Spinners association) requires immediately the services of an experienced competent qualified auditor and accountant for the audit accounts work of the Karnatak Branch. The accounts being in English, Kanarese and Marathi, knowledge of all these languages will add to the qualifications.

Pay according to qualifications.

Qualified persons are requested ta apply stating terms and qualifications.

Belgaum. } Gangadh r Balkrishana Deshpande.
15 th Jan 28 } Agent Akhil Bharateeya Charkha Sangh. Karnatak.

For Ladies' and Gents' Insurance

in

The Bharat Insurance

Company, Ltd.

and for

Wholesale Supply of :—

(1) Automobiles
(2) Sporting Materials
(3) High-Class Tea and Coffee
(4) Cigars and Cigarettes
(5) Surgica Instruments and Drugs
(6) His Master's Voice Phones, and Records
(7) Cycles, Stoves and Gas Lights

and

8) Up-to-date Books

Apply to:—

B. S. Tantry. B A.,
BAGALKOT.

ಅಚ್ಚಾಗಿವೆ! ತರಿಸಿರಿ!

ವಾಸುದೇವನ

ಕೌಸ್ತುಭಗಳು.

೧. ಇಂದಿರಾ. ೨-೮-೦

(ಸಚಿತ್ರ ಸಾಮಾಜಿಕ ಕಾದಂಬರಿ)

೨. ನೀಳ್ಗತೆಗಳು ಭಾಗ ೧ ೧-೪-೦

(ಪ್ರಕೃತಿಬಲ ಬೆಳ್ಳಿಚುಕ್ಕಿ, ಮಲ್ಲೇಶಿಯ ಸಸ್ಸಿಯರು, ಪ್ರೇಮ ವಿಜಯಗಳೆಂಬ ನಾಲ್ಕು ಕಥೆಗಳು.—

ವಸಂತಯಾಮಿನಿ ಸ್ವಪ್ನಚಮತ್ಕಾರ ನಾಟಕ, ಮತ್ತು ಯದು ಮಹಾರಾಜನ ಪ್ರತಿಗಳಿಲ್ಲವೂ ತೀರಿಹೋಗಿವೆ

ಅಚ್ಚಿನಲ್ಲಿದ್ದ

ಪತಿವಶೀಕರಣ ನಾಟಕ

(ಅಳಿಯರ ಗೊಲ್ಲ ಸ್ಕಂದನ ಶೀಘ್ರಾಶುಕವಿಯ ಅದ್ಭುತವಾದವು.)

ಫೆಬ್ರುವಾರಿ ತಿಂಗಳ ಕೊನೆಗೆ ಹೊರಬೀಳುವದು. ಬೇಕಾಗಿದ್ದವರು ಕೂಡಲೇ ತಮ್ಮ ಹೆಸರು ನೋಂದಾಯಿಸಬೇಕು.

ಸ್ವಾಮಿ, ರಾ, ಕೆರೂರ.
ಬಾಗಲಕೋಟೆ (ಜಿ| ವಿಜಾಪುರ)

ಗಿ ಏಶಿಯಾಟಿಕ್ ಗೌರ್ನಮೆಂಟಿ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೩ ನೇ ಇಪ್ಪಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟಿಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸರ್ಪ್ರಾಯಸ್ಸರಿಗೆ ಒಟ್ಟಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ ೨೭೫೬ ಸಬ್ಮೈದ ಶಿಕ್ಷಿ ಅಸಗರ ವಿಲ್ಗ್ರಾಮಿ ಸುವರ್ಣಪಿಂಪಂಟ್ ಸೆಕ್ರೆಟರಿಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨)ಎಲ್. ಬಿ. ಸಿ. ನಂ. ೧೯೭೨ ನಾರಾಯಣ ವಿಸ್ಸ ಲೋಣಕರ ಕೆರ್ ಆಫ್ ಡಿ. ಈ. ಪುರಾಣಿಕ ೧೦೭ ಸಿಪಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಸಿಸೋಕಿ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕಾರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೫೦೭೭ ಕೇ. ಜಿ. ಫರ್ನಾಂಡೋ ವ್ಯಾಪಾರಸ್ಥ. ಬ್ರುಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜೆ. ಚವರೆ. ಅಶಿಸ್ಟಂಟ ಸ್ಟೇರನ್ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಸ್. ಆರಾಧ್ಯ
ಜೀಫ ವಿಜಂಟ ಹುಬ್ಳಿ (ಮುಂಬಯಿ ಇಲಾಖಾ.)

ಸ್ವಾಂಡರ್ಡ್ ಕಾಫಿಪುಡಿ.

ಅಖಿಲಭಾರತ ಸಕಲ ಕಲಾವಸ್ತು ಪ್ರದರ್ಶನದಲ್ಲಿ ರಜತ ಪದಕವನ್ನೂ, ಸರ್ಟಿಫಿಕೇಟುಗಳನ್ನು ಒಮ್ಮಾನವಾಗಿ ಪಡೆದ ಸ್ವಾಂಡರ್ಡ ಕಾಫಿಪುಡಿಯು ಅತ್ಯಂತ ಮನೋಹರವೂ, ರುಚಿಕರವೂ ಆದದ್ದು ತರಿಸಿ ಪರೀಕ್ಷಿಸಿ ನೋಡಿ

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೊಕದೆ ತಯಾರಾಗುತ್ತದೆ. ಆರೋಗ್ಯವೂ ಒಳ್ಳೆ ರುಚಿಕರವೂ ಆದದ್ದು.

ಕಾಲ್ಲು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

ಪೌಂಡ ೧ಕ್ಕೆ ೧-೪-೦ ಮತ್ತು ೧-೮-೦.

ದಿ ಸ್ವಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಒಹಳ. ಇದ ನಮ್ಮ ನೇಗಿಲು ನಂ ೧೦೦ ನೆಯದಂತೆ ಮಿಕ್ಕ ಉಪಯೋಗಕ್ಕೂ ಬರುವದು. **ರಚನೆಃ**— ಇದರ ಕುಳಗಳು ಹಾ ಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟಿ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಸುತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತದೆ. **ಎತ್ತುಗಳ ಶಕ್ತಿಃ**— ೬ ರಿಂದ ೮ ಎತ್ತುಗಳು ಬೇಕು **ಸಾಲಿನ ಆಳಗಲಃ**— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕಃ**—ಸಂಸಾರಿ ೨೦೦ ಪೌಂಡು ಸಪಸ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೩೩ ರೂಪಾಯಿ

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ ಸಾತಾರಾ.

Little's Oriental Balm.

ನೋವುಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, ಈ ಹೆಸರನ್ನು ಲಕ್ಷದಲ್ಲಿ ಇಡಿರಿ.

ಕೆಳಗಿನ ವ್ಯಾಧಿಗಳ್ಗೆ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ, ನರ ತೊಡಕು, ಹರಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ಬಳದದ್ದು)

೪೨ ವರ್ಷಗಳಿಂದ ಈ ಔಷಧವು ಜಗಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣಕಾರುವದು—ಒಂದೇ ಕಣದಿಂದ ಅದ್ಭುತ ಗುಣವು!

ಉರಿಯುವದಿಲ್ಲ ಅಥವಾ ಗುಳ್ಳಿ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮತ್ತು ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕನ್ನಡ ಜಯ

ಜಯಕನ್ನಡಂಗೆ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯಥಾ ಪರಶಾಂ ಕ್ಷತ್ರಂ । ಯಥಾತ್ಮನಶ್ಚ ಕ್ಷಯಂ ॥ — ಮನು

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ವಿವಾರ ನಿತಿ ಮಘ ಬಹು.೪ ಶಕೆ ೧೮೪೯ ಕ್ರಿ ಶ. ೧೨-೨-೧೯೨೮ | ಸಂಚಿಕೆ ೪೩.

Date 12--2--1928

ಕನ್ನಡ ಬಂಧುಗಳೇ ಈ ಸಂಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ವಿಚಾರವು ನಾವಿರಿಸಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮಳ್ಳಿ ಜೋಡಿಸುವದು ಅವುಗಳೊಳಗಿನ ಕಟ್ಟು ಪಟ್ಟು ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತ ಪರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದ್ದಾಗಿದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದದ್ದಕ್ಕೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪು ! ಹೆಚ್ಚಿನ ವಾಹಿತಿಗಾಗಿ ತಿಂಪ್ರವೆ ಬರೆದ ಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆ ಕೃಷಿಕರ್ ವರ್ಕಶಾಪ ಎಲ ಶನಿವಾರ ಪೇರ ಲಾಯಿಡ್ ಬ್ರಿಜ್ಜಿದ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಅಚ್ಚುಹಾಕಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮಾಡುವಂಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಕೊಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ

ವ್ಯವಸ್ಥಾಪಕ:—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಮಯೂರ ಸಿಖಾ

ದುರ್ಲಭವಾದ ವನಸ್ಪತಿಯು. ಪಂ ತೊಳೆ ರೋಗಿಗಳಿಗೂ, ವ್ಯಾವಾರಸ್ಥರಿಗೂ, ಅನೇಕ ಅವಶ್ಯವಾದ ವನಸ್ಪತಿಗಳು ದೊರಕುವವು

ವೈದ್ಯ:—ವಾದಿರಾಜ ಜಹಗೀರದಾರ
ಮು. ಇಲಕಲ್ಲ (ವಿಜಾಪೂರ)

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!!



ಶ್ರೀಕೃಷ್ಣ, ಶ್ರೀರಾಮ, ಮಹಾಲಕ್ಷ್ಮಿ, ಸರಸ್ವತಿ ಇವೇ ಮೊದಲಾದ ದೇವರುಗಳ, ಬುದ್ಧದೇವ, ನಾಯಕ, ಶಂಕರ, ಮಧ್ವ, ರಾಮಾನುಜಾ, ಒಸರಂಥ ಧರ್ಮಸ್ಥಾಪಕರ ರಾಜರು ಮಹಾರಾಜರುಗಳ ಮತ್ತೂ ತಿಲಕ, ಗೋಖಲೆ, ದಾದಾ ಗಾಂಧೀಯವರಂತಹ ವಿಭೂತಿಗಳ ಅತ್ಯುತ್ತಮವಾಗಿ ಒತ್ತಿ ತೆಗೆದ ಹಾಗೂ ಒಳ್ಳೇ ಲಲಿತವಾಗಿ ಕಟ್ಟು ಹಾಕಿದ ಶುದ್ಧ ಬೆಳ್ಳಿಯ ಎದ್ದು ಕಾಣುವ ಚಿತ್ರಗಳನ್ನು (Relieg Pictures) ನಾವು ಸಿದ್ಧ ಪಡಿಸಿದ್ದೇವೆ. ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾಗಿಯೂ ಅಲಂಕಾರವೇ ಸರಿ. ಅದರಂತೆಯೇ ದೇವರ ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ತಕ್ಕ ವಸ್ತುಗಳಾಗಿವೆ. ಅಲ್ಲದೆ, ಶುದ್ಧವಾದ ಬೆಳ್ಳಿಯಿಂದ ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ಮೂರ್ತಿಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆಲೆಪಟ್ಟಿಗಾಗಿಯೂ ಬರೆದುಕೊಳ್ಳಿ!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಸುಲಭ ಕ್ರಯ !

ಡಾಕ್ಟರ ಜಿ. ಬೀ. ಯವರ

ಸುಲಭ ಕ್ರಯ!!

ಸುಗಂಧ ನಶ್ಯದ ಪುಡಿ.

Registered Trads mark.

ವಿಜಾಪೂರ ಜಿಲ್ಲಾ ಸ್ಕೂಲ ಬೋರ್ಡದ ಬಗ್ಗೆ ದಿನೇ ದಿನೇ ಹೆಚ್ಚು ಹೆಚ್ಚು ಗೊಂದಲವು ಏಳುತ್ತಲಿದೆ. ಅಧಿಕಾರವು ಪ್ರಾಪ್ತವಾದಾಗಿಂದ ಅದನ್ನು ಸದ್ವಿಚಾರದಿಂದಲೂ, ಸಾರ್ವಜನಿಕ ಕಳವಳದಿಂದಲೂ ವಿನಿಯೋಗಿಸುವದು ಉತ್ತಮರ ಲಕ್ಷಣವು ಸೊಲ್ಲಾಪುರ ಜಿಲ್ಲಾ ಲೋಕಲ್ ಬೋರ್ಡು ತನ್ನ ಅಸ್ತವ್ಯಸ್ತತೆಯ ಪರಮಾವಧಿಯಿಂದ ಲುಪ್ತ ಹೊಂದಿತು. ಬೆಳಗಾವಿಯ ಬೋರ್ಡು ಹೈಕೋರ್ಟಿನ ಕಟ್ಟಿಯನ್ನು ಹತ್ತಿತು. ಧಾರವಾಡದ ಬೋರ್ಡಿನ ಬಗ್ಗೆ ಬೊಬ್ಬಿ, ನಡದೇಯಿದೆ! ವಿಜಾಪುರದ ಸ್ಕೂಲ ಬೋರ್ಡು ಅದು ತನ್ನ ತಪ್ಪು ಗ್ರಹಿಕೆಯನ್ನು ಎಷ್ಟು ಬೇಗನೇ ತಿದ್ದಿಕೊಳ್ಳುವದೋ ಅಷ್ಟು ಗುಣವಾಗುವದು ಅಧಿಕಾರದ ಮದವು ಮನುಷ್ಯನಿಗೆ ಸಮಂಜಸವಲ್ಲ. ಅದರ ದರ್ಪದಿಂದ ತನ್ನ ದೊಷಗಳು ಸಹ ಒಮ್ಮೆಲೇ ಮನುಷ್ಯನಿಗೆ ಕಾಣುವದೂ ಇಲ್ಲ. ಅದರೆ ಕೊಂಚ ಶಾಂತತನದಿಂದ, ದೇವರನ್ನು ಸ್ಮರಿಸಿ, ಆತ್ಮನಿರೀಕ್ಷಣ ಮಾಡಿಕೊಂಡರೆ ಮನುಷ್ಯನಿಗೆ ಮನುಷ್ಯತ್ವದ ಅರಿವು ಬಾರದೇ ಇರದು ಇಷ್ಟು ದಿನಗಳ ವರೆಗೆ ಬ್ರಾಹ್ಮಣ ಬ್ರಾಹ್ಮಣೇತರವೆಂಬ ಭೇದ ಭಾವವೆ ಗಾಳಿಯೇ ಎಲ್ಲ ಕಡೆಗೂ ಹಬ್ಬಿತ್ತು ಅದರೆ ಈಗ್ಗೆ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭಾವನೆಯು ಹೋಗಿ, ವಿಜಾಪೂರ ಸ್ಕೂಲ ಬೋರ್ಡನಲ್ಲಿ ಲಿಂಗಾಯತ ಲಿಂಗಾಯತೇತರವೆಂಬ ಭೇದವೂ ಉದ್ಭವವಾಗಿದೆ ಇದರಿಂದ ಲಿಂಗಾಯತ ಸಮಾಜಕ್ಕೆ ಧಕ್ಕೆ ತಗಲದೇ ಇರದು ಆದುದರಿಂದ ಕೇವಲ ನ್ಯಾಯದೇವತೆಯನ್ನು ಸ್ಮರಿಸಿದ್ದೂ ಕಡೆಗೆ ತನ್ನ ಸ್ವಜಾತಿಯ ಉದ್ಧಾರದ ದೃಷ್ಟಿಯಿಂದಲಾದರೂ, ಜಿಲ್ಲಾ ಸ್ಕೂಲ ಬೋರ್ಡು ತನ್ನ ಕಾರ್ಯವನ್ನು ಚೊಕ್ಕಟವಾಗಿ ನಡಿಸಿಕೊಂಡು ಹೋಗುವದು ಭೂಷಣವು

ವಿಜಯವು ನಮ್ಮದೇ

ಅಸೆಂಬ್ಲಿಯಲ್ಲಿ ಲೋಕಮತದ ಜಯಜಯಕಾರ!

ಸೈಮನ್ ಸಾಹೇಬರಿಗೆ ಮಂಗಳಾರತಿಯು!!

ಹಿಂದುಸ್ಥಾನದ ಇತಿಹಾಸದಲ್ಲಿ ಫೇಬ್ರುವರಿ ತಿಂಗಳವು ಚಿರಸ್ಮರಣೀಯವಾಗುವದರಲ್ಲಿ ಸಂದೇಹವಿಲ್ಲ! ಸಾಯುವಾನ ಸಪ್ತಕವು ಹಿಂದುಸ್ಥಾನದಲ್ಲಿ ಕಾಲಿಟ್ಟ-ಕೂಡಲೇ ಎಲ್ಲಿ ನೋಡಿದಲ್ಲಿ ಹರ್ತಾಳವೇ ಹರ್ತಾಳ! ದಿಲ್ಲಿಗೆ ಹೋದರು; ವೈಸರಾಯರನ್ನು ಕಂಡರು; ಮೊದಲೇ ಪೂತಾತಿಕೊಂಡಂತೆ ತಾವು ಬಂದ ಪ್ರಯೋಜನವನ್ನೂ ತಿಳಿಸಿದರು! ಸರ ಶಂಕರನ್ ನಾಯರರು ಮತ್ತು ಬೇರೆ ಜನರು ಇವರಿಗೆ ಸಹಾಯ ಮಾಡುತ್ತೇನೆಂದು ಧಾವಿಸಿ ಬಂದರು! ಲಾರ್ಡ ಸಿಂಹರಂತೂ (ಇವರು ಹಿಂದುಸ್ಥಾನದವರೇ ಲಕ್ಷವಿಲ್ಲರಲಿ!) ಇಂಗ್ಲಂಡ ಬಿಟ್ಟು ಓಡಿ ಬಂದು, ಹಿಂದುಸ್ಥಾನದ ವಿರುದ್ಧವಾಗಿ ಗರ್ಜಿಸಿದ್ದು ಆಯಿತು! ಇಷ್ಟು ಮಂದಿಯನ್ನು ಬಿಟ್ಟರೆ ಎಲ್ಲ ಪಕ್ಷಪಂಥರೂ ಒಮ್ಮನಸ್ಸಿನಿಂದ ಈ ಸಾಯುವಾನ್ ಸಪ್ತಕಕ್ಕೆ ಸಂಪೂರ್ಣವಾಗಿ ಬಹಿಷ್ಕಾರ ಹಾಕಿದ್ದಾರೆ. ಈಗ್ಗೆ ಹಿಂದುಸ್ಥಾನದಲ್ಲಿ ಎರಡೇ ಪಕ್ಷಗಳಿರುತ್ತವೆ. ಒಂದು ಸರಕಾರದ್ದು ಮತ್ತೊಂದು ಜನರದು ಇವೆರಡು ಪಕ್ಷಗಳಲ್ಲಿ ಬಲಾಬಲಗಳನ್ನು ವಿಚಾರ ಮಾಡಲು ಮನಸ್ಸಿಗೆ ದುಃಖವೂ ಆನಂದವೂ ಒಮ್ಮೆಲೇ ಉಂಟಾಗುತ್ತವೆ. ಇಂಥ ಸಂಯೋಗವು ಹಿಂದೆ ಎಂದೂ ಉಂಟಾಗಿದ್ದಿಲ್ಲ. ಅರು ತಿಂಗಳ ಹಿಂದೆ ನೋಡಿದರೆ ಜನತಾಪಕ್ಷವು ಅನೇಕ ಅಭಿಪ್ರಾಯಗಳಿಂದ ಭಿನ್ನ ಭಿನ್ನವಾಗಿತ್ತು! ಸರಕಾರವೂ, ಅದರ ಹಸ್ತಕರಾದ 'ಫ್ರೀಮೆನ್ಸ್-ಇಂಡಿಯನ' ಪತ್ರಗಳೂ, ಹಿಂದು ಮುಸಲ್ಮಾನರಲ್ಲಿ ಕಡುತರವಾದ ಒಡಕು ಹುಟ್ಟಿಸಿದ್ದರೂ ಸಹ ರಾಷ್ಟ್ರಕ್ಕೆ ಸರಕಾರದಿಂದ ಅಪಮಾನ ಹಾಗೂ ಕೇಡು ಉಂಟಾಗುವ ಸಮಯದಲ್ಲಿ ಹಿಂದೂ-ಮುಸಲ್ಮಾನರು ಒಕ್ಕಟ್ಟಿನಿಂದ ಸರಕಾರದ ವಿರುದ್ಧ ನಿಂತಿದಾರೆ! ರಾಷ್ಟ್ರದಲ್ಲಿ ಬೆಂಬಲವಿಲ್ಲದ ಹಾಗೂ ಅಪಮ್ಯತೆಯ ಕೆಲವು ಮುಸಲ್ಮಾನ ವ್ಯಕ್ತಿಗಳು ಸರಕಾರದ ಬಾಲ ಬಡಿಯುತ್ತಿದ್ದರೂ, ಮುಸಲ್ಮಾನರ ಪ್ರಚಂಡಮತವು ಲೋಕಪಕ್ಷಕ್ಕೆ ಬಂದು ಸೇರಿದೆ! ಸರಕಾರವು ಅಸ್ಪೃಶ್ಯರ ಅಕಾಂಕ್ಷೆಗಳಿಗೆ ಮಾನ ಕೊಡುವಂತೆ ಪಟಿಸಿ ಹಿಂದೂ ಜನರಲ್ಲಿಯೇ ಒಡಕನ್ನು ಹುಟ್ಟಿಸಲು ಪ್ರಯತ್ನ ಮಾಡಿದರೂ! ಅದರೇನು ?

ನಮ್ಮ ದುಃಖಾಶ್ರುಗಳ ವಾಸ್ತವಿಕ ಪರಿಸ್ಥಿತಿಯನ್ನು ಭವಿಷ್ಯತ್ಕಾಲವೆಯು ಇತಿಹಾಸವನ್ನು ಬರೆಯಲು, ಯತ್ನಿಸುತ್ತಿರುವ ಸಾಯುವಾನ ಸಪ್ತಕವು ಸಂಪೂರ್ಣವಾಗಿ ನಿರಾಶವಾಗುವ ಪ್ರಸಂಗ ಬಂದಿದೆ! ಈ ಸಪ್ತಕದ ಜಯಕ್ಕಾಗಿ 'ಆಂಗ್ಲೋ ಇಂಡಿಯನ' ಪತ್ರಕಾರರು ನಮ್ಮ ಭವಿಷ್ಯಾರಕ್ಕೆ ಮೊದಲು ಮೊದಲು ತಮ್ಮತ್ತನ್ನೇ ಕೊಡಲಿಲ್ಲ. ಬಹಿಷ್ಕಾರವು ಯಶಸ್ವಿಯಾಗಲಿಲ್ಲೆಂದು ಸಹ ಸಾರಿದರು! ಬಹಿಷ್ಕಾರವು ಪೂರ್ಣರ ಮೂತೆಂದು ಕೂಗಿದರು! ಆದರೆ ಬಹಿಷ್ಕಾರದ ಟೀನೆಯು ಅವರಿಗೆ ಈಗ ತಗಲಹತ್ತಿದೆ. ಲೆಜಿಸ್ಲೇಟಿವ್ವ ಅಸೆಂಬ್ಲಿಯು ಅಧ್ಯಕ್ಷರಾದ ಪಟೇಲರು ಸಹ ಲೋಕನಿಯುಕ್ತ ಪ್ರತಿನಿಧಿಗಳ ಧೋರಣಕ್ಕೆ ಸಮ್ಮತಿಸಿ, ಸಾಯುವುನ್ ಸಪ್ತಕಕ್ಕೆ ಲೆಜಿಸ್ಲೇಟಿವ್ವ ಅಸೆಂಬ್ಲಿಯಲ್ಲಿ ಬರೆಗೊಡದ್ದರಿಂದ ಆ ಪತ್ರಗಳು ಗಾಬರಿಗೊಂಡವು!

ಇನ್ನು, ಸರಕಾರಕ್ಕೂ ಲೋಕಮತಕ್ಕೂ ಈಗಿನ ದಿನಗಳಲ್ಲಿ ಯುದ್ಧಭೂಮಿಯೆಂದರೆ ಲೆಜಿಸ್ಲೆಟಿವ್ವ 'ಅಸೆಂಬ್ಲಿ'ಯು. ಯಾಕಂದರೆ, ಸಾಯುವುನ್ ಸಪ್ತಕಕ್ಕೆ ಸಹಾಯಕವಾದ ಒಂದು ಸಪ್ತಕವನ್ನು ಹಿಂದು ಸ್ಥಾನದ ಪ್ರತಿನಿಧಿಗಳಲ್ಲಿ ಅರಿಸುವ ಕೆಲಸವಿರುವದು. ಬಹುಮತವು ಲೋಕನಿಯುಕ್ತ ಸಭಾಸದರು ಬಹಿಷ್ಕಾರವನ್ನು ಅವಲಂಬಿಸಿರುವದರಿಂದ ಸಹಾಯಕ ಉರಮಂಡಲವನ್ನು ನಿಯಮಿಸಕೂಡದೆಂದೂ ಸೈಮನ್ನರಿಗೆ ಯಾವ ರೀತಿಯಿಂದಲಾದರೂ ಸಹಾಯ ಮಾಡಬಾರದೆಂದೂ ಗೊತ್ತುವಳಿಯನ್ನು ತಂದರು.

ಈಗ್ಗೆ ಕೂಡಿದ ಲೆಜಿಸ್ಲೇಟಿವ್ವ ಅಸೆಂಬ್ಲಿಯು ಬಹಳೇ ಪ್ರೇಕ್ಷಣೀಯವಾಗಿದೆ. ಲೋಕಮತದ ಪ್ರತಿನಿಧಿಗಳೂ ಬಂದಿದ್ದಾರೆ. ಪ್ರೇಕ್ಷಕ ವರ್ಗದ ಸಲುವಾಗಿ ಮಾಡಿದ ಸ್ಥಳವೂ ತುಂಬಿ ಹೋಗಿದೆ ದಿಟ್ಟಾಟಿ ಮೈಸೂರರೂ, ತೇಜ ಬಹಾದ್ದೂರ ಸಪ್ರು, ಸರೋಜಿನಿ ನಾಯಿಡೂ, ಜವಾಹಿರಲಾಲ ನೇಹರೂ ಮುಂತಾದ ಪ್ರಮುಖರೂ ಪ್ರೇಕ್ಷಕರಾಗಿದ್ದಾರೆ. ಅಮೇರಿಕಾ, ಜರ್ಮನಿ, ಆಸ್ಟ್ರಿಯಾ ಮುಂತಾದ ದೇಶಗಳ ಪ್ರಸಿದ್ಧ ವರ್ತಮಾನ ಪತ್ರಗಳ ಸುದ್ದಿಗಾರರೂ ಆತುರರಾಗಿ ನೋಡಲು ಕೂತಿದ್ದಾರೆ!

ಲಾಲಾ ಲಜಪತ್ಪರಾಯರು ಸಾಯುವುನ್ ಮೊದಲದಲ್ಲಿ ಅಸೆಂಬ್ಲಿಯು ವಿಶ್ವಾಸವಿಲ್ಲೆಂಬ ಠರಾವನ್ನು ಬಹು ಗಂಭೀರವಾಗಿಯೂ ಸಕಾರಣವಾಗಿಯೂ ಮಂಡಿಸಿದ್ದರು ಶ್ರೀನಿವಾಸ ಅಯ್ಯಂಗಾರ, ಜಿನ್ನಾ ಮುಂತಾದ ಮುಖಂಡರೆ ಸಶ್ಚಿರ್ದಾಯಕವಾದ ಭಾಷಣಗಳಾದವು. ಸರ್ ಝುಲ್ಫಿಕರ್ ಹಯಾತರು ಈ ಗೊತ್ತುವಳಿಯ ವಿರುದ್ಧ ಉಪಸೂಚನೆಯನ್ನು ತಂದರು! ಕ್ರಿರಾರ್ ಎಂಬ ಸರಕಾರೀ ಸಭಾಸದರು ಅದನ್ನು ಸಮರ್ಥಿಸಿದರು. ಸರಕಾರವು ತನ್ನಂತೆಯಾಗುವ ಹಾಗೆ ಮತಗಳನ್ನೂ ಕೂಡಿಸಲು ಬಹು ಪ್ರಯತ್ನಪಡೆಯಿತು! ರಾಷ್ಟ್ರ ಪಕ್ಷದವರು ತಮಗೆ ಜಯ ಸಿಗಬೇಕೆಂದು ತನ್ನು ಯಾವ ಮತಗಳೂ ಒಡೆಯದಂತೆ ಪ್ರಯತ್ನ ಮಾಡಿದರು. ಕರಾಚಿಯ ಹರಚಂದರಾಯ ವಿಶನದಾಸ ಎಂಬ ಪ್ರತಿನಿಧಿಗಳು ಬೇನೆಯಿಂದ ಹಾಸಿಗೆ ಹಿಡಿದಿದ್ದರೂ ಸರಕಾರವನ್ನು ಸೋಲಿಸುವ ಸಲುವಾಗಿ ದಿಲ್ಲಿಗೆ ಕೋಗಲು, ಬೇನೆಯು ಹೆಚ್ಚಾಗಿ ಮರಣ ಹೊಂದಿದರು! ರಾಷ್ಟ್ರಹಿತಕ್ಕಾಗಿ ತಮ್ಮ ಪ್ರಾಣವನ್ನು ಈ ಪ್ರಕಾರವಾಗಿ ಅರ್ಪಿಸುವ ಪ್ರತಿನಿಧಿಗಳು ನಮ್ಮಲ್ಲಿರುವ ವರೆಗೆ ನಮಗೆ ಅಪಜಯವು ಎಂತು ? ೬೮ ಮತಗಳ ವಿರುದ್ಧ ೬೨ ಮತಗಳಿಂದ ಲಾಲಾ ಲಜಪತರಾಯರು ತಂದ ಠರಾವು ಅಸೆಂಬ್ಲಿಯಲ್ಲಿ ಸ್ವೀಕೃತವಾಯಿತು !!!

ಹಿಂದುಸ್ಥಾನಕ್ಕೆ ಬೇಡಾದ ಸಾಯುವುನ್ ಸಪ್ತಕದ ಈ ಸ್ಥಿತಿಯನ್ನು ಕಂಡು ಇಂಗ್ಲಂಡವು ಉರಿದೇಳಹತ್ತಿದೆ! ಈ ಸಪ್ತಕವನ್ನು ಅಧ್ಯಕ್ಷತೆಯಿಂದ ಕಳಿಸಿದ ಲಾರ್ಡ ಬರ್ಕನಹೆಡ್ ಸಾಹೇಬರು ನಮ್ಮನ್ನು ಬೆದರಿಸ ಬಂದಿದ್ದಾರೆ ಸಪ್ತಕದ ಹೇಳಿಕೆಯ ಪ್ರಕಾರ ನಡಕೊಳ್ಳದಿದ್ದರೆ ಲೋಕನಿಯುಕ್ತರ ಸಹಾಯಕ ಮಂಡಳದ ಹಾದಿ ನೋಡದೆ ಸಾಯುವುನ್ ಸಾಹೇಬರು ತಮ್ಮ ಕಾರ್ಯವನ್ನು ಪ್ರಾರಂಭ ಮಾಡುವರೆಂದೂ, ಲೋಕನಿಯುಕ್ತ ಪ್ರತಿನಿಧಿಗಳಿಗೆ ತನ್ನು ಪರಿಸ್ಥಿತಿಯ ಅರಿಕೆ ಇಲ್ಲೆಂದೂ, ಬೆದರಿಸಿಬಿಟ್ಟಿದ್ದಾರೆ! ಆದರೆ ಇಂಥ ಬೆದರಿಕೆಗಳಿಗೆ ಲಂಚುವನ್ನೆ ದಿವಸಗಳು ಹೋದವು! ಯಾವಾಗಲೂ ಸರಕಾರಕ್ಕೆ ಸಹಾಯಕವಾದ ಬೋರೀಬಂದರದ ಒಡಗುಲೊಜ್ಜಿಯು ಕೂಡ (ಮುಂಬಯಿ ಟಾಯಿಮ್ಸ್ ಪತ್ರಿಕೆ!) ಹಿಂದುಸ್ಥಾನದ ಪರಿಸ್ಥಿತಿಯ ವಿಷಯವಾಗಿ ಬರ್ಕನ್ ಹೆಡ್ಡರ ಹೆಡ್ಡತನದ ಮಾತ್ರ ಇನ್ನೂ ಹೋಗಿಲ್ಲವೆಂದು ಬರೆದಿರುವಳು!

ಕನ್ನಡಿಗರೂ ದಿಲ್ಲಿಯ ಸಭೆಯೂ

ದಿಲ್ಲಿಯ ಅಖಿಲ ಪಕ್ಷದ ಸಭೆಯ ಸಭಾ ಸದರಿಗೆ—

ಮಹಾಶಯರೇ

ಹಿಂದುಸ್ಥಾನದ ಭಾವೀರಾಜ್ಯ ಪದ್ಧತಿಗಾಗಿ ಒಂದು ಮುಸೂದೆಯನ್ನು ಸಿದ್ಧ ಪಡಿಸಲು ಹಿಂದುಸ್ಥಾನದ ಎಲ್ಲಾ ರಾಜಕೀಯ ಪ್ರತಿನಿಧಿಗಳು ಒಂದೆಡೆಯಲ್ಲಿ ಕೂಡಲು ನಿರ್ಣಯಿಸಿದ್ದು ಅನಂದದ ಸಂಗತಿಯು, ಈ ಅಖಿಲೋದ್ಯೋಗ ಮುಸೂದೆಯು ದೇಶದ ಭವಿಷ್ಯವೃತ್ತಿಯನ್ನು ನಿರ್ಮಿಸುವವರಲ್ಲಿ ಭವಿಷ್ಯತ್ಕಾಲದಲ್ಲಿ ಒಳ್ಳೇ ಸಾಹಾಯವನ್ನುಂಟು ಮಾಡುವವರಲ್ಲಿ ಸಂದೇಹವಿಲ್ಲಾ. ಆದ್ದರಿಂದ ನಾವು ವಿಜ್ಞಾಪಿಸಿಕೊಳ್ಳುವದೇನಂದರೆ ಭಾಷಾನಾವರ ಪ್ರಾಂತರಚನೆಯು ತತ್ವದಂತೆ ಯಾಕಂದರೆ ಈ ತತ್ವದ ಬಗ್ಗೆ ಈ ಪ್ರಾಂತದ ಜನರು ಬಹಳೇ ಕುತೂಹಲ ವುಳ್ಳವರಾಗಿರುವರು.

ಈ ತತ್ವವು ಸರಕಾರದಿಂದಲೂ ಜನತೆಯು ನಂದಿಗೆಯುಳ್ಳ ಪ್ರತಿನಿಧಿಗಳಿಂದಲೂ ಕೂಡಿಯೇ ಒಪ್ಪಲ್ಪಟ್ಟಿದೆ. ೧೯೧೯ನೇ ಇಸ್ವಿಯ ಹಿಂದುಸ್ತಾನ ಸರಕಾರದ ಕಾಯಿದೆಯು (೫೨ ಅ) ಕಲಮದಲ್ಲಿ ನಿರ್ದಿಷ್ಟವಾಗಿ ಒಪ್ಪಿರುವದು ಸರಕಾರೀ ತನ್ನ ಸ್ವಕೀಯ ಕಾರಣಗಳಿಗಾಗಿ ಈ ತತ್ವವನ್ನು ಪರಿಣಾಮದಲ್ಲಿ ತರಲಿಕ್ಕೆ ಯಾವ ಮುಂದಿನ ಹೆಜ್ಜೆಗಳನ್ನು ಇಡದಿರುವದು ಅಶ್ಚರ್ಯ ವಾದದ್ದಲ್ಲ.

ಕರ್ನಾಟಕದ ಜನರು.

ತಮ್ಮ ನಿರ್ಮಾಲವಾದ ಮತ್ತು ನಿಶ್ಚಿತವಾದ ಇಚ್ಛೆಗಳನ್ನು ಸ್ಪಷ್ಟ ಪಡಿಸಲು ಎಂದೂ ಹಿಂದುಳಿದಿಲ್ಲ ೧೯೦೭ ರಿಂದ ತಮ್ಮ ಪ್ರಾಂತವಿಭಾಗಕ್ಕಾಗಿ ಜಾತೊರಿಯುತ್ತಿರುವರು. ೧೯೧೯ ರಲ್ಲಿ ಸಂಯುಕ್ತವಾದ ಪ್ರತ್ಯೇಕ ಕರ್ನಾಟಕ ಪ್ರಾಂತವನ್ನು ನೆರವೇರಿಸಬೇಕೆಂದು ಕರ್ನಾಟಕದ ಸಭೆಯು ಸ್ಥಾಪಿಸಲ್ಪಟ್ಟಿತ್ತು. ಅದಕ್ಕೆ ಬೇರೆ ಕಾಂಗ್ರೆಸ್ ಸರಕಾರ್ಯವೂ ಜೊತೆಯಲ್ಲಿರಬೇಕೆಂದು ಇತ್ತು ೧೯೨೦ ಮೇ ತಿಂಗಳ ಮೊದಲನೇ ಅಖಿಲ ಕರ್ನಾಟಕ ರಾಜಕೀಯ ಸಭೆಯು ಪ್ರಖ್ಯಾತ ಮುತ್ಸದ್ದಿಗಳಾದ ಮಿ. ಪ್ಲಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕೂಡಿದಾಗ ಒಂದು ಬೇರೆ ನಿರ್ಣಯವನ್ನು ವಿಭಕ್ತ ಪ್ರಾಂತದ ಸಲುವಾಗಿ ಮಾಡಿಕೊಂಡಿತು ಈ ವಿಷಯದ ಬಗ್ಗೆ ಜನರ ಕುತೂಹಲವು ಎಷ್ಟು ತೀಕ್ಷ್ಣವಾಗಿತ್ತೆಂಬುದು ಇಷ್ಟು ರಾಜಕೀಯ ವಿಷಯದಲ್ಲಿ ಹಿಂದುಳಿದ ಪ್ರಾಂತವು ತನ್ನ ೩೦ ಪ್ರತಿನಿಧಿಗಳನ್ನು ನೆನಪಿನಲ್ಲಡಕಿಕ್ಕೆ ನಾಗಪೂರ ಕಾಂಗ್ರೆಸ್ಸಿಗೆ ಕಳಿಸಿ ಏಳವತದಿಂದ ತನ್ನ ಬೇಡಿಕೆಯನ್ನು ಇಟ್ಟದ್ದೇ ಸಾಕ್ಷಿಯಾಗಿದೆ ಇದು ನಿಜವಾಗಿ ಕರ್ನಾಟಕದ ಜನರಿಗೆ ಸುವಜ್ಞಾಗಕ್ಷರದಿಂದ ಬರೆದ ದಿವಸ ವಾಗಿದೆ. ಯಾಕೆಂದರೆ ಆ ಹೊತ್ತು ಕಾಂಗರೆಸ್ಸು ಬರೇ ತತ್ವ ವನ್ನಷ್ಟೇ ಒಪ್ಪಲಿಲ್ಲ ಈ ಪ್ರಾಂತಕ್ಕಾಗಿ ಒಂದು ಕಾಂಗರೆಸ್ ಸರಕಲ್ಲವನ್ನು ಮಾಡಿಕೊಟ್ಟಿತ್ತು.

ಅಂದಿನಿಂದ ಕರ್ನಾಟಕದ ವಿಧಾಯಕ ಶಕ್ತಿಗಳು ಪ್ರತಿಯೊಂದು ಕ್ಷೇತ್ರದಲ್ಲಿ ತೋರಿಸಲ್ಪಡುತ್ತಿರುವವು. ೧೯೨೦-೨೨ ರ ದೊಡ್ಡವಾದ ರಾಷ್ಟ್ರೀಯ ಕಲಹದಲ್ಲಿ ಕನ್ನಡಿಗರು ತಮ್ಮ ಪಾಲಲ್ಲಿ ಬಂದಕಾಯಕವನ್ನು ಉತ್ತಮ ರೀತಿಯಿಂದ ಜರುಗಿಸಿದರೆಂಬುದನ್ನು ತಾವು ಇನ್ನೂ ಮರೆತಿರಲಿಕ್ಕಿಲ್ಲ. ಹಲವು ವಿಧದ ಶೈಕ್ಷಣೀಕ, ಸಾಮಾಜಿಕ, ಸಾಹಿತ್ಯ ವಿಷಯಕ ಚಲವಲನಗಳು ಜನರಲ್ಲಿ ಹುಟ್ಟಿದ ಚೈತನ್ಯಕ್ಕೆ ಸ್ಪಷ್ಟವಾಗಿವೆ.

ಕರ್ನಾಟಕವು ಈ ವೇರೆಗೆ ಈಗ ವಿಭಾಗಿಸಲ್ಪಟ್ಟಿರುವದು ಮುಂಬೈ ಇಲಾಖೆಯಲ್ಲಿ ಧಾರವಾಡ ದೇಶಗಾಂವ, ವಿಜಾಪೂರ, ಕಾರವಾರ ಜಿಲ್ಲೆಗಳು ಮದರಾಸ ಪ್ರಾಂತದ ಜಿಲ್ಲೆಗಳಿಗೆ ಜೋಡಿಸಲ್ಪಟ್ಟಿವೆ. ಮುಂಬೈ ಇಲಾಖೆಯಲ್ಲಿ ಬಳ್ಳಾರಿ ಅನಂತಪೂರ ಜಿಲ್ಲೆಗಳು ಆಂಧ್ರರೊಡನೆ ಸಂಬಂಧಿಸಲ್ಪಟ್ಟಿವೆ. ತೀರ್ಥಹಳ್ಳಿ ಕೊಯಮತ್ತೂರ, ನೀಲಗಿರಿ, ಜಿಲ್ಲೆಗಳು ತಮಿಳರ ಕೂಡ ಕಟ್ಟಲ್ಪಟ್ಟಿರುವವು ಮುಂಗಳೂರ ಜಿಲ್ಲೆಯು ಇದೇ ಇಲಾಖೆಯಲ್ಲಿ ತಮಿಳ ಕೇರಳಗಳ ನಡುವೆ ಸಿಕ್ಕಿರುವದು ಕರ್ನಾಟಕವು ಸ್ವತಂತ್ರ ರಾಜಕೀಯ ವಿಭಾಗವಾಗುವಷ್ಟು ದೊಡ್ಡದಿಲ್ಲದಿದ್ದರೂ ಅದು ಸ್ವತಂತ್ರ ಪ್ರಾಂತವಾಗಿ ಮಾಡಲ್ಪಟ್ಟರಾಜವದು ಇದರಿಂದ ಒಂದು ಸಂಸ್ಕೃತಿಯು ಜನರು ಹೇಗೆ ಅಸಾಧಾರಣವಾಗಿ ವಿಧಾನಿಸಲ್ಪಟ್ಟಿರುವದೆಂದೂ ಹಾಗೂ ತನ್ನ ವಿಕಾಸಕ್ಕಾಗಿ.

ಮೇಲೆ ತೋರಿಸಲ್ಪಟ್ಟ ಜಿಲ್ಲೆಗಳೆಲ್ಲ ಒತ್ತಟ್ಟಿಗೆ ಕೂಡಿಸಲ್ಪಟ್ಟರೆ ಅದರ ಕ್ಷೇತ್ರವು ೧೫೬೦೫ ಇಷ್ಟು ಚಾರಸ ಎಕರೆ ಆಗುವದು ಸುಮಾರು ಜನಸಂಖ್ಯೆ ೮೫೦೨೭೦ ಆಗುವದು. ವಾರ್ಷಿಕ ಉತ್ಪನ್ನವು ೩೦ ಕೋಟಿ ಇರುವದು.

ಮೇಲೆ ತೋರಿಸಲ್ಪಟ್ಟ ಸಂಗತಿಗಳನ್ನೆಲ್ಲ ಸೂಕ್ಷ್ಮವಾಗಿ ವಿಚಾರಿಸಿದಲ್ಲಿ (ಜನಸಂಖ್ಯೆ ಕ್ಷೇತ್ರ ಉತ್ಪನ್ನ) ಕರ್ನಾಟಕವು ಒಂದು ಸ್ವತಂತ್ರ ರಾಜಕೀಯ ಅಧಿಕತೆಯು ವಿಭಾಗವಾಗಿ ಮಾಡಲ್ಪಡುವದು ಯೋಗ್ಯವಾಗಿರುವದೆಂಬು ತೋರುಬರುವದು. ನಾವು ಮೇಲೆ ಹೇಳಿದಂತೆ ಕಾಂಗ್ರೆಸ್‌ವು ಮಾಡತಕ್ಕದ್ದನ್ನು ಮಾಡಿರುವದು ಆಲ್, ಇಂಡಿಯಾ ಕಾಂಗ್ರೆಸ್ ಕಮೀಟಿಯು ಪೋತರಪ್ಪ ಮುಂಬೈಯಿಯಲ್ಲಿ ಕೂಡಿದಾಗ ನಿಂಧದ ಪ್ರಶ್ನೆಯನ್ನು ವಿಚಾರಿಸುವಾಗ ಒಂದು ನಿರ್ಣಯವನ್ನು ಮಾಡಿರುವದು ಆಂಧ್ರ ನಿಂಧ, ಕರ್ನಾಟಕ ವ್ಯಕ್ತಿಗಳನ್ನು ವಿಂಗಡಿಸುವಾಗ.

ಡಾ ಅನಿಬಿಸೆಂಟರೂ, ಮಿ. ವಿಜಯ ರಾಘವಾಚಾರ್ಯರೂ ಮಿ. ಎ ರಂಗಸ್ವಾಮಿ ಅಯ್ಯಂಗಾರರೂ ಈಗ ಈ ತತ್ವವನ್ನು ಅಂದರೆಭಾಷಾವಾರ ಪ್ರಾಂತರಚನೆಯನ್ನು ಒಪ್ಪಿರವರು.

ದಿಲ್ಲಿಯಲ್ಲಿ ಕೂಡುವ ಮುಂದಾಳುಗಳ ಮುಂದೆ ಈ ಮುಸೂದೆಯನ್ನು ಮುಂದಿಸುವದಕ್ಕಾಗಿ ನಾವು ಧೀರ್ಘವಾದ ಹೇಳಿಕೆಯನ್ನು ಜೋಡಬೇಕಾಗಿದೆ,

ಈ ನ್ಯಾಯವಾದ ಮತ್ತು ಸ್ವಾಭಾವಿಕವಾದ ಬೇಡಿಕೆಯು, ಕಪ್ಪೆಚ್ಚಿರ ಒಪ್ಪಿಗೆಯನ್ನು ಪಡೆದುಬರುವುದಿಂದ ಹಿಂದುಸ್ತಾನದ ಸಂಘಟನೆಯನ್ನು ಸೇರಿಸಲ್ಪಡುವದೆಂದೂ ನಂಬುವ ಕರ್ನಾಟಕ ಪ್ರಾಂತ ವಾಗುವಂತೆ ಕಡೆಯ ಫಲವು ದೊರೆಯುವೆಂದೂ ನಾವು ಆಶಿಸುತ್ತೇವೆ.

ಶ್ರೀನಿವಾಸರಾವ ಕೌಜಲಗಿ
ಕರ್ನಾಟಕ ಪ್ರಾಂತವ

ಧಾರವಾಡ ರಾಷ್ಟ್ರೀಯ ಮಂಡಲದ ಉಪಾಧ್ಯಕ್ಷರು
೬-೨-೨೮ ಪಿ. ಆರ್. ಚಕ್ಕೂಡಿ ಎಮ್ ಎಲ್, ಸಿ,
ಕರ್ನಾಟಕ ಏಕೀಕರಣ ಸಭೆಯ ಅಧ್ಯಕ್ಷರು.

ಶಂಖಧ್ವನಿ

(ನಮ್ಮ ಪ್ರತಿನಿಧಿಯಿಂದ)

ಅಮೀನಗಡವು ದನಗಳ ವ್ಯಾಪಾರದ ಪ್ರಸಿದ್ಧ ಸ್ಥಲವೆಂಬುದು ಸಕಲರೂ ಅರಿತ ಸಂಗತಿ ಇಲ್ಲಿ ಶನಿವಾರ ಸಂತೆಯದಿನ ಅನೇಕ ದನಗಳ ವ್ಯವಹಾರವು ಜರಗುವದು ಇಲ್ಲಿ ಮಾರಲು ಬಂದ ಪ್ರತಿದನಕ್ಕೂ ಅರ್ಧ ಆಣೆ ದನಪಟ್ಟಿಯನ್ನು ಕೊಡತಕ್ಕದ್ದೆಂದು ನಮ್ಮದಯಾಳು ಸರಕಾರವು ಕಟ್ಟಳೆ ಮಾಡಿದೆಯಂತೆ! ಆ ಪ್ರಕಾರ ಅರ್ಧ ಆಣೆ ಯಂತೆ ವಸೂಲ ಮಾಡಿಕೊಂಡರೂ ಸೌಕರ್ಯವೇನೂ ಮಾಡಿರುವದಿಲ್ಲ. ಒಂದು ಮೇಳೆ ನೆಲಬಾಡಿಗೆ ಗಾಗಿ ರೊಕ್ಕ ಎಬ್ಬಿಸುತಾರೆನ್ನಬೇಕೆ! ಅಲ್ಲಿ ಸರಕಾರದ ಸ್ಥಲವೇ ಇಲ್ಲ. ರೈಲ್ವೆ ಮಾರ್ಗ ಒಂದು ಬದೆ. ಅದು ಲೋಕಲ್ ಬೋರ್ಡಿನದು. ಇನ್ನು ಸ್ಥಲದ ಸ್ವಚ್ಛತೆಗಾಗಿ ಏನು ಏರ್ಪಾಡು ಮಾಡಿಹುವರೋ? ಹಾಗೂಕಾರಣಲ್ಲೊಲ್ಲದು ಸಾವಿರಾರು ದನಗಳು ನಿಂತಿರುವ ಆ ಸ್ಥಲದ ಸ್ವಚ್ಛತೆಗಾಗಿ ಒಬ್ಬ ಒಕ್ಕಲಿಗನಿಗೆ ನಿಯಮಿಸಿ ಅತನು ಅನಂದದಿಂದ ಆಸ್ಥಲವನ್ನು ಹಸನಮಾಡಿ ಸಮೃದ್ಧಿಯಾಗಿ ಗೊಬ್ಬರವನ್ನು ಕೂಡ ಹಾಕಬಲ್ಲನು. ಆದರೆ ಜನರ ಹಿತನೋಡುವವರು! ಇದೊಂದು

ಳಿದು ಇನ್ನೊಂದು ಅತಿ ಹೇಯವಾದ ಕೃತಿಯುಪ್ರತಿಸಂತೆಗೂ ಇಲ್ಲಿ ಜರುಗುವದು ಅದು

ಪೋಲೀಸರ ಹಾವಳಿ

ಇಲ್ಲಿ ದಿನಗಳ ವ್ಯಾಪಾರಕ್ಕೆ ಪ್ರಮುಖ್ಯವಾಗಿ ಒಕ್ಕಲಿಗರೇಹೆಚ್ಚು ಪ್ರಮಾಣದಿಂದ ಒರವರು ಇವರಲ್ಲಿ ಓದು ಬಾಹ ಬಲ್ಲಂಥವರ ಸಂಖ್ಯೆಯು ಬಹು ಕಡಿಮೆ ಪ್ರತಿ ಒಂದು ದಿನಕ್ಕೊಂದೆಂದ ಚೀಟಿಗಳನ್ನು ವಾಹಾರಕ್ಕರು ತುಂಬಿರುವರು ವ್ಯವಹಾರವು ಆದ ಕೂಡಲೇ ಪೋಲೀಸರು ಬಂದು "ಚೀಟಿ ತೋರಿಸಿ" ಎಂದು ಎನ್ನುತಿನಿಂದ ಕೇಳುವರು! ಆಗ್ಗೆ ಈ ಚೀಟಿಯು ಎತ್ತಿನದಲ್ಲಿ! ಇದರಲ್ಲಿ ಇದ್ದಗುರ್ತುಗಳು ಈ ಜನಾವರಕ್ಕೆ ಕೂಡುವದಿಲ್ಲ ಮತ್ತು ಅಂತಾಗಿ ಏನಾದರೊಂದು ನೆವ ತೆಗೆದು ಪ್ರತಿ ಒಂದು ದಿನವ್ಯಾಪಾರಕ್ಕೂ ನಾಲ್ಕು ಆಣೆ ರೊಕ್ಕ ಕಸಿಯುವ ಸಂಪ್ರದಾಯವು. ಕೆಲವರು ಈ ವ್ಯವಹಾರವಾದ ಕೂಡಲೇ ಚೀಟಿ ನೋಡುವುದನ್ನು ತಾವಾಗಿಯೇ ಕೈಯ್ಯಲ್ಲಿ ಕೊಟ್ಟು ಬಿಡುವರು. ಕೆಲವರು ಹೇಟಿಯನ್ನು ಬಿಟ್ಟು ಕೆಲ ದೂರ ಹೋಗಿ ಕೊಡಹೊರೊಳ್ಳುವ ವ್ಯವಹಾರವನ್ನು ಜರಗಿಸುವರು ಈ ತರಹದ ಜನರಿಗೊಳ್ಳು, ಸುವ್ಯವಸ್ಥಿತರೀತಿಯಿಂದ ರಾಜ್ಯವಾಳುವ ರಾಜಕಾರಣ ಕರ್ತೃಗಳಾದ ಬ್ರಿಟಿಶರ ಆಡಳಿತದಲ್ಲಿಯಿಂಥೇಕೆ? ಸುವ್ಯವಸ್ಥೆಯು! ಹೀಗೆಯೋ?

"ಸ್ತ್ರೀಯರು ಮತ್ತು ಸ್ಟೇಜು".

ಮಾಘ ಶುದ್ಧ ೭ "ಕನ್ನಡಿಗ" ದಲ್ಲಿ "ಗಂಡಸರ ಪರದವರು" ಎಂಬ ಲೇಖನದ ಲೇಖಕನು ಪ್ರಕಟವಾಗಿದೆ

'ಗಂಡಸರು ಪರದವರು' ವಿಷಯವನ್ನು ಅವಹಾರ್ಯರಾಗಿ ಪ್ರದರ್ಶಿಸುವ, ಉತ್ಸಾಹವಲ್ಲಿ ಉಕ್ಕಿ ಕುಣಿದಾಡುವ ರೂಪಕ್ಕೆ ಹೊರಳಿಬಿಟ್ಟಿರಿ 'ಸ್ಟೇಜ್' ನ ಮೇಲೆ ಕೆಲವು ಲಾವಕಟ್ಟು ಪಾತ್ರಗಳನ್ನು ಅನುಸರಿಸಿಕೊಂಡಿಸಿಕ್ಕೆ ಅಂಗಸಿಯರಿಗೆ ಯೋಗ್ಯತೆ ಇಲ್ಲವೆಂದು ಊಹಿಸಿಕೊಂಡು, ಸ್ತ್ರೀಯರು ಸ್ತ್ರೀಪಾತ್ರಗಳಿಗೆ ಸ್ವಾಭಾವಿಕವಾಗಿ ಅರ್ಹರಲ್ಲವೆಂಬಲೂ ನಾಟಕಕ್ಕೆ ವನಿತೆಯರ ಅವಶ್ಯಕತೆ ಇಲ್ಲವೆಂತಲೂ ಅಭಿಪ್ರಾಯ ಪಟ್ಟಿದ್ದರೆ ನಿಮ್ಮ ಅಭಿನಯ ಕಲೆಯನ್ನು ಕಲಿಯದೆ ತಮ್ಮ ಸೈಜ ಗುಣಗಳಿಂದಲೇ ಸ್ತ್ರೀ ಪಾತ್ರಗಳಿಗೆ ಅರ್ಹರೆಂದು ನಮ್ಮ ಅಭಿಪ್ರಾಯವಲ್ಲ ಆದರೆ, ಒಂದು "ವಿನೋದಾವಳಿ" ಯ ಅನುಭವದಿಂದ (ಅದೂ ವಿಚಾರವಾಗಿ ಸುಳ್ಳು ಒಕೆದಿವುದು ಅಲ್ಲದೆ) ಸ್ತ್ರೀಯರಿಗೆ ಅಭಿನಯ ಕಲೆ ಕಲಿಯಲು ಯೋಗ್ಯತೆಇಲ್ಲವೆಂದು ಹೇಳುವದು ಶುದ್ಧ ಕಪ್ಪ 'ಅರ್ಧನಾರೀಶ್ವರ'ರೇ ಸ್ತ್ರೀ ಪಾತ್ರಗಳಲ್ಲಿ ನಮ್ಮ ಅಭಿನಯ ಆಬ್ಯಾಸ ಮಾಡಿರುವಾಗಪೂರ್ತಿ ನಾರಿಯರು ಕತೆಯ ಲಾವಕೆಗೆ ಸರಿಯರು ಕಷ್ಟ ಪ್ರಸೋತದಿಂದ ರಂಗಸ್ಥಳಕ್ಕೆ ಬಂದೆವೆಂದಾಗಲೂ, ಇಂದಿನ ಪ್ರೇಕ್ಷಕರ ಸೋಟಕರ ಕಣ್ಣಿಗೆ ಬೀಳದಿದ್ದ ಒಂದು ಅಗೋಚರ ಜ್ಯೋತಿಯನ್ನು ತರದಿದ್ದರೂ, "ಅರ್ಧನಾರೀಶ್ವರ" ರ "ಪಾರ್ವತಿಯಿಂದ ಸ್ತ್ರೀಪಾತ್ರಗಳ ಅಭಿನಯ ಕಲೆಗೆ ಉಂಟಾಗಿರುವ ಭಂಗವನ್ನು ಹೋಗಲಾಡಿಸಿ ಬಿಟ್ಟಿರು. ರಂಗಸ್ಥಳದಲ್ಲಿ "ಗಂಡು ಹೆಂಗಸರು" ಅಪಾತ್ರ ನಿಲ್ಲುವದು. ವನಿತೆಯರು ರಂಗಸ್ಥಳವನ್ನು ಏರಿದರೆ "ಗಂಡು ಹೆಂಗಸರ" ಗುಂಪಿಗೆ ಪೂರ್ತಿ ಪುರುಷತ್ವ ವೈಭವ ಮಾಡಿದಂತಾಗುವದಿಲ್ಲವೆ? "ಕಲಾಕಟ್ಟು ಪಾಡುಗಳನ್ನೂ ಅಘಾತವಾಗದಂತೆ" ಅನುಸರಿಸುವದೊಂಥೇ ನಾಟಕದ ಉದ್ದೇಶವಾಗದೆ "ಅರ್ಧ ನಾರೀಶ್ವರರು" ಪೂರ್ತಿ ಈಶ್ವರರಾಗಿ ಸ್ತ್ರೀಪಾತ್ರಗಳ ಅಭಿನಯ ಮಾಡಬಾರದೇಕೆ? ಅರ್ಧನಾರಿಗುರಾಗಲು ಇಚ್ಛೆಯಿಲ್ಲದಿರುವದರಿಂದ ಸ್ತ್ರೀಯರು ನಾಟಕಕ್ಕೆ ಅತ್ಯವಶ್ಯವೆಂದು ಹೇಳಿದ್ದರೂ ಅನುಮೋದಿಸಲೆರೆಂದು ಹೇಳಬಹುದು.

ರಾಧಾತನಯ.

ಕನ್ನಡ ಭಾಷೆ

(ಕನ್ನಡ ಕನ್ನಡಿಗನಿಂದ)

ನಮ್ಮ ದೇಶ ಕನ್ನಡ ನಾಡುತೆ! ಹಾಗನ್ನುವಾಗ ನಮ್ಮ ಜನರಿಗೆ ಒಲುಮೆಯೆ? ಇವರ ಹೆಮ್ಮೆ ಮೇಲ್ಮೆ ಎಲ್ಲಾ ಮಾತಿನಲ್ಲಾಗುವದು. ನಾವು ಕನ್ನಡಿಗರು ಬಹಳ ದೊಡ್ಡವರು ಬಹಳ ಒಳ್ಳೆಯವರು ಎಂಬ ಒಂದು ಮಾತನ್ನು ಇಂಗ್ಲೀಷಿನಲ್ಲಿ ಅನ್ನುವರು ಕನ್ನಡ ಬಾವುಟ ಮತ್ತು ಇನ್ನೂ ಇಂಗ್ಲೀಷಿನಲ್ಲೆ ಆಗುತದೆ. ಕನ್ನಡ ತಿರ ಕನ್ನು (ಸ್ಟ್ರೀಟ್) ಕನ್ನಡದಲ್ಲಿ ತೋರಿಸಲು ಆಗುವದಿಲ್ಲವಂತೆ ಇಂಗ್ಲೀಷಿನಲ್ಲಿ ಹೇಳಿದರೆ ತಿರುಳು ಸ್ವಾರಸ್ಯವಾಗುವದಂತೆ ಬೇಷ! ಭಲಾ! ಇಂಗ್ಲೀಷ್ ಕನ್ನಡಿಗರೆ!

ಇಂಗ್ಲೀಷ್ ಕನ್ನಡಿಗರು ಒರೆ ಧಳಕಿನವರು. ಮೊಸಕ್ಕಾಗಿ ಜಂಬಕ್ಕಾಗಿ, ಇತರರನ್ನು ಮಂಕು ಮಾಡುವುದಕ್ಕಾಗಿ, ಕನ್ನಡಿಗರೆಂದು ಹೆಳಿಕೊಳ್ಳುತ್ತಾ ಎಲ್ಲಾ ಕೆಲಸವನ್ನು ಮಾತಿನ್ನೂ ಇಂಗ್ಲೀಷಿನಲ್ಲಿ ನಡೆಸುತ್ತಿರುವರೆಂದು ಈ ರೀತಿಗೆ ಕನ್ನಡಕನ್ನಡಿಗರಿಗೆ (ಹಳ್ಳಿ ಮುಕ್ಕಗಳಿಗೆ) ತಿಳಿಯುತ್ತಾ ಇರಲಿ ಇಂಗ್ಲೀಷ್ ಕನ್ನಡಿಗರೇ ಜೋಕಾಲಿ! ಕನ್ನಡ ಕನ್ನಡಿಗರು ಬಗ್ಗ ಕಣ್ಣು ಬಿಟ್ಟು ಇದಾರೆ. ನಿಮ್ಮ ಮೋಸ ಧಳಕು ಬಯಲಾಗುವ ಎಲ್ಲಾ ಹೊರಗಾಗಿ ಮಾಡುತ್ತಾರೆ.

ನಮ್ಮ ಸರಕಾರದ ಲೆಕ್ಕಾರ್ಡುಗಳು ಕನ್ನಡದಲ್ಲಿ ಸ್ವಾರಂಭವಾಗಿ ಕೊನೆಗೆ ಇಂಗ್ಲೀಷಾಗಿ ಕೊಡೆಗಾಣುತ್ತವೆ. ನಮ್ಮ ಕನ್ನಡದ ಫಿರ್ಯಾದು ಸುದ್ದಿಯಲ್ಲ ಏನೇನೊ ಆಗಿಬಿಡುತ್ತ ನಿಮ್ಮ ಇಂಗ್ಲೀಷು ಅದಮೇಲೆ ಸಾಕ್ಷಿ ಕಾಸುಕೊಟ್ಟ ಅದನ್ನ ಕನ್ನಡ ಮಾಡಿಕೋಬೇಕು ನಮ್ಮ ಕಾಸು ನಿಮಗೆ ಬಹಳ ರುಚಿ. ಮುಂಜೆ ಕನ್ನಡ ಇದ್ದದ್ದನ್ನು ಇಂಗ್ಲೀಷು ಮಾಡಲು ನೀವು ಕಾಸು ಕೇಳ್ತೀರಿ ನಿಮ್ಮ ಇಂಗ್ಲೀಷನ್ನು ಕನ್ನಡ ಮಾಡಿಕೊಳ್ಳಲು ನಾವು ಕಾಸು ಕೊಡಬೇಬಿಕು, ಕನ್ನಡ ಬಿಟ್ಟ ಬೇಲೆ ನಿಮ್ಮ ಬುದ್ಧಿ ಹ್ಯಾಗೆ ತಿರುಗಿತೆ? ನೀವು ಏನೇನು ಬರಕೊಂಡಿರೊ ಭಗವಂತನೇ ಒಲ್ಲ. ನಮಗೆ ತಿಳಿಯುವಂತೆ ನಮ್ಮನ್ನು ಇಂಗ್ಲೀಷಿನಲ್ಲಿ ಬೈಯ್ಯತ್ತೀರೋ ಏನೋ!

ಕೋರ್ಟಿಗೆ ನಾವು ಒಂದರೆ ಅಲ್ಲಾ ನಮಗೆ ಮೋಸ. ಕನ್ನಡದಲ್ಲಿ ಪ್ರಾರಂಭ; ಕೊನೆ ಮುಟ್ಟುವದು ಇಂಗ್ಲೀಷು. ನಮ್ಮ ಸಾಕ್ಷಿಗಳಿಗೆ ಏನೇನು ಪ್ರಶ್ನೆ ಹಾಕಿದರೂ ಏನೇನು ಬಿಟ್ಟರೂ ಇದೆಲ್ಲಾ ನಮಗೆ ಹಂಗೂ ಹಿಂಗೂ ತಿಳಿಯುತ್ತೆ ನಿವು ಹೇಳಿದ್ದನ್ನು ಕನ್ನಡದಲ್ಲಿ ಬರೆಯಿಕೊಳ್ಳಕೆ ಗುಮಾಸ್ತರು ಏನು ಒದ್ದೋತಾರೊ ದೇವರೇ ಬಲ್ಲ. ಅವರು ಓದೂ ಶಾಸ್ತ್ರ ಮಾಡೋದು, ನಮ್ಮ್ಯಾರ ಪೂರ್ವಜರು ಮೇಲೆ ಅಮ್ಮ ಬಂದ ಕಾಲದಲ್ಲಿ ಓಡಿಹೋಗುವ ಹಾಗೂ ಗಡಬಡಲಾಗಿಬಿಡಿ, ಅಥವಾ ಪಿಶಿಪಿಶಿಗುಟ್ಟುವ ಹಾಗೆಯೊ ಆಯ್ತೆ. ನಾವು ಕನ್ನಡಿಗರು, ಸಾಕ್ಷಿಗಳು ಮಧ್ಯೆ ಮಾತಾಡೋಣಾಂದರೆ ಏನೇನೊ ಸಾಕ್ಷಿಗಳು ನಯವಾಗಿ ಮಾತಾಡಿದರೂ ಇಂಗ್ಲೀಷು ಜಬರದಸ್ತು ಹಾರಿಹೋಗುತ್ತೆ. ನಮ್ಮ ಮರುಳು ಮಾಡುವ ಆ

ಯಾರಪ್ಪದೀರೆ ಅವರಬಹಳ ಘಟ್ಟಗರು. ಅವರ ಏನೊ ಜಬರದಸ್ತು ಮಾಡಿಕೊಂಡು ಇಂಗ್ಲೀಷಿನಲ್ಲಿ ಮಟಮಟಗುಟ್ಟುವರು.

ಫಾಷೆ ಬರದು ನಮಗೆ. ಏನು ಹೇಳಿದರೂ ತಡಕೊಂಡುಹೊಯ್ತದೆ. ನಮ್ಮ ಪರ ಹೇಳ್ತಾರೊ, ಯಾರ ಪರ ಹೇಳ್ತಾರೊ, ಯಾವದು ಬಿಡ್ತಾರೊ ಯಾವದು ಹೇಳ್ತಾರೊ ದೇವರೆ ಒಲ್ಲ. ಜಜ್ಜಿಯಪ್ಪನು ಭಗವಂತ ಶಿವಯಂತೆ ಇರುತ್ತಾನೆ. ಜಡ್ಜ್ಮೆಂಟು ಏನ್ ಬರದವ್ನೆ ಅಂತ ನೋಡೋಕೆ ಶಾಯರ ಗುಮಾಸ್ತರಿಗೆ ಕಾಸು. ಹಂಗೂ ಕಾಸೂ ಹಿಂಗೂ ಕಾಸೂ ನಾವು ಹುಟ್ಟಿರುವುದು ದಂಡ ರವುದಕ್ಕೆ! ಬಳ್ಳಿಗರ ಪತ್ರಿಕೆ

ಕರ್ನಾಟಕದ

ಏಕೀಕರಣವು

(೪೧ನೇ ಸಂಚಿಕೆಯಿಂದ ಮುಂದೆಸಾಗಿದ್ದು)

ವಂಗಭಂಗದಿಂದ ಈ ಭಾಷಾನ್ವಯ ಪ್ರಾಂತರಚನೆಯ ಕಲ್ಪನೆಯು ಸರ್ವಸಾಮಾನ್ಯರಿಗೆಲ್ಲ ಗೊತ್ತಾದುದಾಯಿತು ಆದರೆ ವಂಗಭಂಗವು ಈ ವಿಚಾರವನ್ನು ಮಾತ್ರ ಜನರಲ್ಲಿ ಹರಡಿತೇ ಹೊರತು ಅದರಿಂದ ಅನ್ಯಪ್ರಾಂತಗಳಲ್ಲಿ ಪ್ರತ್ಯಕ್ಷವಾದ ಜಳವಳವು ಪ್ರಾರಂಭವಾಗಲಿಲ್ಲ. ೧೯೧೧ ನೇ ಇಸ್ವಿಯಲ್ಲಿ ಯಾವಾಗ್ಗೆ ಇಭಾಗ್ಯವಾದ ಬಂಗಾಲವು ಒಂದು ಪ್ರಾಂತವಾಗಿ ಮಾಡಲ್ಪಟ್ಟಿತೋ, ಆಗ್ಗೆ ಮಾತ್ರ ಅನ್ಯಪ್ರಾಂತಗಳಲ್ಲಿ ಜಳವಳಿಯು ಪ್ರಾರಂಭವಾಯಿತು. ಪಂಚಮ ಜಾರ್ಜ್ ಬಾದಶಹರು ೧೯೧೧ ರಲ್ಲಿ ಪಟ್ಟಕ್ಕೆ ಕುಳಿತಾಗ್ಗೆ ಇಭಾಗ್ಯವಾಗಿದ್ದ ಬಂಗಾಲವನ್ನು ಒಂದುಮಾಡಿದ ಒಗ್ಗೆ ಪ್ರಕಟಮಾಡಿದರು. ಈ ನಿರ್ಣಯಕ್ಕೆ ಬರುವ ಮೊದಲು ಹಿಂದುಸ್ಥಾನ ಸರಕಾರವು ಮಂಡಿಸಿದ ವಿಧಾನಗಳೆಲ್ಲ ಅತ್ಯಂತ ಮಹತ್ವದವಾಗಿವೆ. ಆಗ್ಗೆ ಲಾರ್ಡ ಹಾರ್ಡಿಂಜರೇ ವಾಯಿಸರಾಯರಾಗಿದ್ದರು. ಅವರು ಬರೆದ ಸಮರ್ಥನಪರವಾದ ವಿಧಾನಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆವು.

ಬಿಹಾರ ಪ್ರಾಂತವನ್ನು ವಿಂಗಡಿಸುವಾಗ್ಗೆ ತಮ್ಮ ರಿಪೋರ್ಟಿನ ೧೯ ನೇ ಪ್ಯಾರಾದಲ್ಲಿ ಲಾರ್ಡ ಹಾರ್ಡಿಂಜರು ಹೀಗೆ ಬರೆದಿರುವರು:—

" We are satisfied that it is in the highest degree desirable to give the Hindi-speaking people, now included within the province of Bengal, a separate administration. These people have hither-to been un-equally yoked with the Bengalees & have never, therefore, had a fair opportunity for development."

(ಬಂಗಾಲ ಪ್ರಾಂತದಲ್ಲಿ ಸೇರಿಸಲ್ಪಟ್ಟ ಹಿಂದೀ- ಭಾಷೆಯನ್ನಾಡುವ ಜನರಿಗೆ (ಅಂದರೆ ಬಿಹಾರದವರಿಗೆ) ಸ್ವತಂತ್ರ ಪ್ರಾಂತವನ್ನು ಕೊಡುವದು ಅತ್ಯಂತ ಅಗತ್ಯವಾಗಿದೆಂಬುದನ್ನು ನಾವು ಮನಗಂಡಿದ್ದೇವೆ. ಇಷ್ಟು ದಿನಗಳವರೆಗೆ ಈ ಜನರನ್ನು ಬಂಗಾಲೀ ಜನರ ಸಂಗಡ ಅಡಳಿತದ ರಥಕ್ಕೆ ಹೂಡಿದ್ದು ಇಜ್ಜೋಡಿಯಾಗಿದೆ ಆದುದರಿಂದ ಇವರ ಉತ್ಕರ್ಷಕ್ಕೆ ಕಿಂಚಿತ್ತಾದರೂ ಅವಕಾಶ ವಿಲ್ಲ

" ಇಷ್ಟುದಿನಗಳವರೆಗೆ ಈ ಜನರನ್ನು ಬಂಗಾಲೀ ಜನರ ಸಂಗಡ ಅಡಳಿತದ ರಥಕ್ಕೆ ಹೂಡಿದ್ದು ಇಜ್ಜೋಡಿಯಾಗಿದೆ; ಆದುದರಿಂದ ಇವರ ಉತ್ಕರ್ಷಕ್ಕೆ ಕಿಂಚಿತ್ತಾದರೂ ಅವಕಾಶವಿಲ್ಲದಾಗಿದೆ" ಎಂಬ ವಾಕ್ಯವು ಕನ್ನಡಿಗರಿಗೆ ಅತ್ಯಂತ ಮಹತ್ವವಾದುದು. ಯಾಕಂದರೆ ಬಿಹಾರಿ ಜನರು ಕೇವಲ ಬಂಗಾಲಿ ಜನರ ಸಂಗಡ ಗುದ್ದಾಡಬೇಕಾಗಿತ್ತು. ಹೀಗೆ ಒಂದೇ ಪ್ರಾಂತದವರ ಸಂಗಡ ಗುದ್ದಾಡುವಾಗ್ಗೆ ಬಿಹಾರಿಯವರ ಉತ್ಕರ್ಷಕ್ಕೆ ಎನೂ ಅವಕಾಶವಿಲ್ಲದಿದ್ದರೆ, ಒಂದೆಡೆ ಮರಾಟಿಗರು, ಮತ್ತೊಂದೆಡೆ ಆಂಧ್ರರು, ಮೊಗದೊಂದೆಡೆ ತಮಿಳರು ಹೀಗೆ ಬಲಾಢ್ಯರಾದ ಮೂವರ ಒತ್ತಳಿಕೆಯಲ್ಲಿ ಸಿಕ್ಕು ತಲೆತಲೆ ಕುಕ್ಕಿಸಿಕೊಂಡು ನಿಸ್ತೇಜರಾಗಿ ಬಿದ್ದುಕೊಂಡಿರುವ ಕನ್ನಡಿಗರ ಪ್ರಗತಿಗೆ ಎಷ್ಟೊಂದು ಅತಂಕವಾಗಿರುವದೆಂಬದನ್ನು ಕನ್ನಡಿಗರೆಲ್ಲ ಚನ್ನಾಗಿ ಅರಿತುಕೊಳ್ಳಬೇಕು; ಹೀಗೆ ಅರಿತುಕೊಂಡು, ಬಿಹಾರಿ ಜನರು ತಮ್ಮ ಜಳವಳದಿಂದ ಲಾರ್ಡ ಹಾರ್ಡಿಂಜರು ಸಹ ಅವರ ಪಕ್ಷವನ್ನು ಎತ್ತಿಹಿಡಿಯುವಹಾಗೆ ವೈಸರಾಯರನ್ನು ಒತ್ತಾಯಪಡಿಸಿದಂತೆ, ಕನ್ನಡಿಗರೂ ಮಾಡತಕ್ಕದ್ದು. ಈ ಬಗ್ಗೆ ಯಾವ ಮಾರ್ಗವನ್ನು ಕನ್ನಡಿಗರು ಅನುಸರಿಸಬೇಕೆಂಬುದನ್ನು ವಿಚಾರಿಸುವ ಅವಶ್ಯಕತೆಯೇ ಇಲ್ಲ. ಯಾಕಂದರೆ ಲಾರ್ಡ ಹಾರ್ಡಿಂಜರು ತಾವೇ ಹೀಗೆ ಮುಂದಿನ ವಾಕ್ಯದಲ್ಲಿ ನುಡಿದಿರುವರು:—

" There has, more-over, been a very marked awakening in Behar in recent years & a strong belief has grown up among the Beharees that Behar will never develop until it is dissociated from Bengal."

(" ಬಂಗಾಲೀ ಪ್ರಾಂತದಿಂದ ತಮ್ಮ ಪ್ರಾಂತವು ಪ್ರತ್ಯೇಕವಾಗದ ಹೊರ್ತು ತಮ್ಮ ಉತ್ಕರ್ಷಕ್ಕೆ ಮಾರ್ಗವೇ ಇಲ್ಲವೆಂಬದಾಗಿ ಬಿಹಾರಿ ಜನರು ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ; ಮತ್ತೂ ಹೆಚ್ಚಿನ ಸಂಗತಿಯೆಂದರೆ ಈ ಬಗ್ಗೆ ಬಿಹಾರಿ ಜನರಲ್ಲಿ ಇತ್ತೀಚ್ಚಿಗಾಗಿ ಒಳ್ಳೆ ಜಾಗ್ರತಿಯೂ ಉತ್ಪನ್ನವಾಗಿದೆ. ")

ಲಾರ್ಡ ಹಾರ್ಡಿಂಜರ ಈ ವಿಧಾನವನ್ನು ಕನ್ನಡಿಗರು ಚನ್ನಾಗಿ ಓದಿ, ಓದಿ, ಅದರಲ್ಲಿದ್ದ ಮಹತ್ವವನ್ನು ಅರಿತುಕೊಳ್ಳಬೇಕು. ಹೇಗೆ ತಮ್ಮ ಜಳವಳದಿಂದ ಬಿಹಾರಿ ಜನರು ಸರಕಾರದಲ್ಲಿ ಪರಿಣಾಮವನ್ನುಂಟುಮಾಡಿ, ಸ್ವತಃ ಲಾರ್ಡ ಹಾರ್ಡಿಂಜರೇ ತಮ್ಮ ಪಕ್ಷವನ್ನು ವಹಿಸುವಂತೆ ಮಾಡಿದರೋ ಹಾಗೆ ಕನ್ನಡಿಗರೂ ಮಾಡತಕ್ಕದ್ದು. ನಮ್ಮ ಕರ್ನಾಟಕ ಏಕೀಕರಣ ಜಳವಳವು ರಭಸದಿಂದ ಸಾಗಿದರೆ ಮಾತ್ರ ನಮ್ಮ ಕಾರ್ಯವು ಸಾಧಿಸಬಹುದು; ಇಲ್ಲವಾದರೆ ಈಗ್ಗೆ ಬರೀ ಮಾತಿನಲ್ಲಿ ಏಕೀಕರಣ ವಿದ್ದಂತೆ ಕಾಯಂವಾಗಿ ಅಲ್ಲಿಯೇ ಅದು ಇರಬೇಕಾಗುವದು.

ಲಾರ್ಡ ಹಾರ್ಡಿಂಜರು ಇಭಾಗ್ಯವಾಗಿದ್ದ ಬಂಗಾಲವನ್ನು ಒಂದುಗೂಡಿಸಿದ್ದನ್ನೂ ಬಿಹಾರಕ್ಕೆ ಪ್ರತ್ಯೇಕವಾದ ಪ್ರಾಂತವನ್ನು ಏರ್ಪಡಿಸಿಕೊಟ್ಟದ್ದನ್ನೂ, ಪ್ರತ್ಯಕ್ಷವಾಗಿ ನೋಡಿ, ಪ್ರೇರಿತರಾಗಿ, ತಾವೂ ಪ್ರಯತ್ನಿಸಿದರೆ ತಮಗಾದರೂ ಪ್ರತ್ಯೇಕ ಪ್ರಾಂತವು ದೊರೆಯಲೇ ಬೇಕೆಂಬದನ್ನು ಅರಿತುಹಿಡಿದು, ಆಂಧ್ರರು ೧೯೧೩ ರಲ್ಲಿ ತಮ್ಮ ಜಳವಳಿಯನ್ನು ಸುಸಂಘಟಿತವಾಗಿ ಸಾಗಿಸಿದರು. ೧೯೧೩ರಲ್ಲಿ ಬಾಪಟ್ಲಾ ಎಂಬಲ್ಲಿ ನಾಸುದಾರ ಬಿ. ಎನ್. ಶರ್ಮಾ ಇವರ ಅಧ್ಯಕ್ಷತೆಯಲ್ಲಿ ಮೊದಲನೇ ಆಂಧ್ರ ಪರಿಷತ್ತು ಸೇರಿತು.

ಆಗ್ಗೆ ಆಂಧ್ರರು ತೋರಿದ ಉತ್ಸಾಹ, ಕಾರ್ಯ ಪ್ರವೃತಿಯಲ್ಲಿಯ ಆಸ್ಥೆ, ಪ್ರಾಂತಿಕ ಏಕೀಕರಣಕ್ಕಾಗಿ ಜನರಲ್ಲುಂಟಾದ ಜಾಗ್ರತಿಗಳು ಅವರ್ಣನೀಯವಾಗಿದ್ದವು ಇದೇ ಅಪೂರ್ವವಾದ ಉತ್ಸಾಹವೂ, ಕಾರ್ಯ ತತ್ಪರತೆಯೂ ಈವಿಷಯದಬಗ್ಗೆ ಜಾಗ್ರತಿಯೂಆಂಧ್ರ ದೇಶದಲ್ಲಿ ೧೯೨೦ರ ವರೆಗೆಅವ್ಯಾಹತ ವಾಗಿ ನಡೆಯಿತು ಆಂಧ್ರ ಪರಿಷತ್ತುಹೆಚ್ಚೆಚ್ಚ ಮಹತ್ವದ್ದಾಗಿ ಬೆಳೆಯಲಾರಂಭಿಸಿತು! ಅಖಂಡ ದೇಶದಲ್ಲೆಲ್ಲ ಪ್ರತ್ಯೇಕ ಪ್ರಾಂತದ ಕೂಗಾಹಬಲವೇ ಎದ್ದಿತ್ತು! ಪ್ರಾಂತಿಕಪರಿಷತ್ತು ಪ್ರತಿ ವರುಷವೂ ಜರುಗಹತ್ತಿತು!ಜಿಲ್ಲಾ ಪರಿಷತ್ತುಗಳೂ ಅಲ್ಲಲ್ಲಿ ಚಿಗಿತವು ಸಾರ್ವಜನಿಕ ಸಭೆ ವ್ಯಾಖ್ಯಾನಗಳಿಗಂತೂ ಮಿತಿಯೇ ಇರಲಿಲ್ಲ! ದೇಶಭಾಷೆಯ ಪತ್ರಿಕೆಗಳನ್ನು ಈ ವಿಷಯವೇ ಮುತ್ತಿಬಿಟ್ಟಿತು! ಇಂಗ್ಲೀಷ ಪತ್ರಿಕೆಗಳಲ್ಲಿ ಸಹ ಈ ವಿಷಯಕವಾದ ಲೇಖಗಳ ಸರಿಮಳೆಯಾಗಲಾರಂಭಿಸಿತು! ಆಂಧ್ರ ಸಭಾಸದರೊಬ್ಬರು ೧೯೧೯ ರಲ್ಲಿ ದಿಲ್ಲಿಯ "ಇಂಪೀರಿಯಲ್ ಕೌನ್ಸಿಲ್"ದಲ್ಲಿ ಈ ಬಗ್ಗೆ ಒಂದು ಠರಾವನ್ನು ಸಹ ತಂದರು! ಆದರೆ ಆಗ್ಗೆ ಈ ವಿಷಯಕ್ಕೆ ಸ್ಥಳಕಾಲಂಡಗಳಿಯ ಪ್ರಾಗತಿಕ ಪಕ್ಷದ ಮುಖಂಡರಲ್ಲಿ ಮತೈಕ್ಯವಿರದ್ದರಿಂದಲೂ, ಅವರೇ ಈ ಕೌನ್ಸಿಲ್ಲದಲ್ಲಿ ಹೆಚ್ಚಾಗಿದ್ದದರಿಂದಲೂ, ಈ ಠರಾವು ಅಲ್ಲಿ ಸ್ವೀಕೃತವಾಗಲಿಲ್ಲ ೧೯೧೯ ರಲ್ಲಿಯೇ ಆಂಧ್ರರು ಕಾಂಗ್ರೆಸ್ಸದಲ್ಲಿ ಈ ವಿಷಯವನ್ನು ಹೊರಡಿಸಿ ತಮಗೆ ಪ್ರತ್ಯೇಕವಾದ ಪ್ರಾಂತಿಕ ಕಾಂಗ್ರೆಸ ಕಮಿಟಿಯನ್ನು ಸಂಪಾದಿಸಿಕೊಂಡರು!ಹೀಗೆ ನೆರೆಹೊರೆಯವರಾದ ಆಂಧ್ರರಲ್ಲಿ ಈ ವಿಷಯವಾಗಿ ನಡೆದ ಜಳವಳದ ಗಾಳಿಯು ಕನ್ನಡಿಗರಿಗೆ ತಗಲದೇ ಬಿಡಲಿಲ್ಲ (ಮುಂದಿನಾಗುವದು.)

ನಮ್ಮ ಬೆಳಗಾಂವಿಯ ಪತ್ರವು.

ಬೆಳಗಾಂವಿಯಲ್ಲಿ ಪ್ಲೇಗು ಕಡಿಮೆಯಾಗಿದೆ. ಶಹಾಪುರವಲ್ಲಿ ಹೋದ ವಾರದಿಂದ ಪ್ಲೇಗು ಹೆಚ್ಚಾಗಿದೆ ಖಾನಾಪುರ (ಬೆಳಗಾಂವಿ) ದಲ್ಲಿ ಯಾದರೂ ಪ್ಲೇಗು ಬೆಳೆಯುತ್ತದೆ.

ತಾ॥ ೧೧-೨-೨೮ ದಿವಸ ಸಂಜೆಯ ಮೇಲ ಬಂಡಿಯಿಂದ ಲೀಗ ಆಫ್ 'ನೇಶನ್ಸ್'ನ ಆರೋಗ್ಯ ಮಂಡಲದವರು ೧೪ ಜನರು ಬಂದು ವ್ಹೇಕ್ಸನ್ನ ಡಿಪೊ, ಹಿಂದಲ ಜೈಲ, ಮತ್ತು ಸಿವ್ಹಿಲ್ ಹಾಸ್ಪಿಟಲ್ ಗಳಿಗೆಭೆಟ್ಟಿ ಕೊಟ್ಟು ತಾ॥ ೧೨-೨ ೨೮ ದಿವಸ ಪುಣೆಯಕಡೆಗೆ ತೆರಳಿದರು.

ಇದರಂತೆ ಲಿಂಗಾಯತ ಕಾಲೇಜ ಕಮಿಶನ್ನವು ಇದೇದಿವಸ ಬಂದು ಹೋಯಿತು.

ಬೆಳಗಾಂವಿ ಸುದರ್ಶನ ಜರಕಾಲಯದಿಂದ ಕೆಳಗೆ ಕೊಟ್ಟ ಪ್ರಕಾರ ಖಾದಿಯ ವಿಕ್ರಿ ಮತ್ತು ಖರೀದಿ ಜರಾಗಿದೆ.

ವಿಕ್ರಿ.	ಖರೀದಿ
ಅಕ್ಟೋಬರ ೨೩೧೧-೧೨-೦	೧೧೧೩-೯-೯
ನವಂಬರ ೨೪೧೬-೨-೦	೧೪೭೯-೮-೯
ಡಿಸೆಂಬರ ೨೭೩೮-೧೩-೦	೧೪೪೧-೭-೩
ಜನೇವಾರಿ ೨೯೩೧-೪-೯	೨೦೭೪ ೪ ೦

ಇಲ್ಲಿಯ ಶ್ರೀ. ಹಣಮಂತರಾವ ದೇಸಾ[illegible] ಪ್ಲೇಗ ದಶೆಯಿಂದ ೫ ಮೈಲಿನ ಮೇಲೆ (ಮಚಗಾವ ಬಳಿ ರಂದವಾಡ.)ದಲ್ಲಿ, ಇರುತ್ತಿದ್ದರು. ಹೋದವಾರ ಸರ ವಸಿ ಕಳವು ಆಗಿ ೧೪ ಸಾವಿರ ರೂಪಾಯಿ ವಸ್ತುಗಳು ಹೋಗಿವೆ. ಪೋಲೀಸರತಪಾಸುನಡಿದಿದೆ.

ಶ್ರೀಮಂತ ಮಾಯಿಸಾಹೇಬ ಬಾಬಾಜಿ [ದೋಡ್ಡ ಕುಂದವಾಡ] ಇವರು ಮುಕ್ಕಾಮು ಬೆಳಗಾಂವಿ ಯಿಂದ ೩ ಮೈಲದಲ್ಲಿ ಇರುವ ಅನೀಗೋಳಸಂಸ್ಥಾನ ಪೈಕಿ ಊರಲ್ಲಿ ಒಂದು ವಾರ ಇದ್ದು, ಅನಿಗೋಳ ಮತ್ತು ಉಜಗಾಂವ ತಾಲೂಕದಲ್ಲಿ ಬಾಯಸ್ಕೂಟ ದ ಜಾವಳಿಯು ಪ್ರಾರಂಭ ಮಾಡಬೇಕೆಂದು ಅನಿಗೋಳದಲ್ಲಿ ಒಂದು ದೊಡ್ಡ ಗೆಳ್ಳ ಹಾವುಸ ಕಟ್ಟಿಸಬೇಕೆಂದು ಕಮ್ಮ ವಿಚಾರ ಪ್ರಕಟನಾದರು.

ಸಾಂಗಲಿ ಸಂಸ್ಥಾನದ ಪ್ರಜಾ ಪರಿಷತ್ತುಮಾರ್ಚ ತಿಂಗಳಲ್ಲಿ ತೇರದಾಳವಲ್ಲಿ ಕೂಡುವದೆಂದು ತಿಳಿಯುತ್ತದೆ.

ಇಲ್ಲಿಯ ಲಿಂಗಾಯತ ಕಾಲೇಜಕ್ಕೆ ಕೋಲ್ಹಾಪುರದ ಶ್ರೆಷ್ಟಿಯಂಬವರು ೧೫೦೦೦ ರೂಪಾಯಿ ಕೊಟ್ಟರು

ತಾ॥ ೨೩-೨-೨೮ ದಿನಸ ಕೈ॰ ರಾಮ ಗಣೇಶ ಗಡಕರಿ ಇವರಪುಣ್ಯತಿಥಿರು ಪರವಾಗಿ ಮಿಶನ್ ಹೈಸ್ಕೂಲದಲ್ಲಿ ಪ್ರೊ. ಭಾವೆ ಇವರ ಉಪನ್ಯಾಸ ವಾಯಿತು. ಮತ್ತು ರಾತ್ರಿಯಲ್ಲಿ ನಾಟಕ ಪ್ರಯೋಗವನ್ನು ವಿದ್ಯಾರ್ಥಿಗಳು ಮಾಡಿತೋರಿಸಿದರು. ಮುಂಬಯಿ ಸರಕಾರದ ದಿವಾಣ ನಾ॥ ಗುಲಾಮ ಹುಸೇನ ಹಿದಾಯತುಲ್ಲಾ ಇವರು ತಾ॥ ೪-೩-೨೮ ದಿವಸ ಇಲ್ಲಿಗೆ ಬರುವರು. ಆ ಕಾಲಕ್ಕೆ ಡಿ॥ ಲೊ॥ ಬೋಡಿನವರು ಮಾನಪತ್ರ ಕೊಡುವರು. ಕರವೀರ ಪೇಟೆಯ ದಿವಾಣರಾದ ರಾ॥ ಬ॥ ಲಠ್ಠೆಯವರುರಾಜೀನಾಮೆ ಕೊಡುವವರು ಇದ್ದು ಲಠ್ಠೆಯವರ ಸ್ಥಳದಲ್ಲಿ ಒಬ್ಬಯು ರೋಪಿಯನ ದಿವಾಣರನ್ನು ನೆಲ್ರಾಸ ತ್ತಾರೆಂದು ಪ್ರಕಟ ವಾಗಿದೆ.

ಮಾಚ್ಯಯ ಪರಿಚಯ.

ಮೊನ್ನೆ ಜರುಗಿದ ಎಂಟನೆಯ ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಪರಿಷತ್ತು.— ಅಧ್ಯಕ್ಷರ ಭಾಷಣದ ಮೇಲಿಂದಲೂ ಅಲ್ಲಿ ಸಾಸಾದನಿರ್ಣಯಗಳ ಮೇಲಿಂದಲೂ ನೋಡಲಾಗಿ- ಯಲ್ಲರೀತಿಯಿಂದಲೂ ಒಳ್ಳೇ ಮಹತ್ವದ್ದಾಗಿರುವದೆಂದು ಕಂಡು ಬರುವದು.

'ಈಗ ನಮ್ಮ ಜನಾಂಗದ ಜೀವನ ಸಂಗ್ರಾಮದಲ್ಲಿ ಅವರವರ ಏಳಿಗೆಯನ್ನು ಸಾಧಿಸಿ ಕೊಳ್ಳುವ ಉದ್ದೇಶದಿಂದ' ಜಾತಿ ಮತಾಂತರಗಳನ್ನೊಳಗೊಂಡ ಅನೇಕ ಪರಿಷತ್ತುಗಳಲ್ಲಿ ಇದು ಒಂದಾಗಿದೆಯಂದೂ- ಸಾಂಘಿಕ ಪ್ರಯತ್ನದ ಶಿಕ್ಷಣಕ್ಕಾಗಿ ಯಾದರೂ- ಇಂಥ ಪರಿಷತ್ತುಗಳ ಅವಶ್ಯಕತೆಯನ್ನು ಅಧ್ಯಕ್ಷರು ತೋರಿಸಿರುವರು- ವರುಷಕ್ಕೊಮ್ಮೆ ತಾತ್ಕಾಲಿಕ ವಾಗಿ ಕೋರಿಯಡಗುವ ಪರಿಷತ್ತುಗಳು ನಿರರ್ಥಕವೆಂದೂ- ಜನವಲಯವನ್ನು ಮುಟ್ಟಲಾರದಿರುವಕೇಂದ್ರ ವನ್ನೂ ತಾಲೂಕನ್ನೂ ಈ ಕೆಲಸದಲ್ಲಿ ಹಜ್ಜದೆ ಗ್ರಾಮ ಸಮೂಹವನ್ನು ಕೇಂದ್ರವಾಗಿಟ್ಟುಕೊಂಡು ಕಲಸ ಮಾಡಬೇಕೆಂದು ಅಧ್ಯಕ್ಷರ ಸೂಚನೆಯು. ಇದಕ್ಕೆ ಅನುರೂಪವಾಗಿ ಗ್ರಾಮಕಮೀಟಿಗಳನ್ನು ಸ್ಥಾಪಿಸುವ ಬಗ್ಗೆ ಒಂದೂ ಕಮಿಟಿಯೂ ಸ್ಥಾಪಿತ ವಾಗಿದೆ. ಪರಿಷತ್ತಿನ ಪ್ರಚಾರಕ್ಕಾಗಿ ಅದರ ಅಂಗನಾದ ಮಾಸಪತ್ರಿಕೆಯೊಂದನ್ನು ಹೊರಡಿಸುವದೂ ಗೊತ್ತಾಗಿದೆ.

ಸಮಾಜ್ಞೇಯವಾದ ದ್ರಾವಿಡ ಬ್ರಾಹ್ಮಣವರ್ಗದ ಐಹಿಕ ವ ತ್ಕಾ ಪಾರತ್ರಿಕ ಏಳಿಗೆಯನ್ನು ಸಾಧಿಸುವದೇ ಈ ಪರಿಷತ್ತಿನ ಉದ್ದೇಶ ವಾಗಿದೆ ಇದು ಅಷ್ಟು ಸುಲಭ ಸಾಧ್ಯವಲ್ಲವೆಂಬದನ್ನು ಮರೆಯಕೂಡದು. ಮತ ಮತಾಂತರಗಳಿಂದ ಹರಿದು ಹೋದ ಬ್ರಾಹ್ಮಣ ಸಮಾಜವು ಏಕಮುಖವಾಗಿಲ್ಲ. ಧರ್ಮದ ಮಾತ

ಹೊಗಿರಲಿ ಒಟ್ಟು ಸಮಾಜಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ಯಾದರೂ ಕೂಡಿ ನಡೆಸುವಷ್ಟು ಐಕ್ಯತೆ ನಮ್ಮಲ್ಲಿ ಬೇಕು.

ಇದುವರೆಗೆ ವಿದ್ಯೆಯ ಪೆಸರಿನಿಂದ ನಾವು ಕಲಿಯುತ್ತಿರುವ ಗಿಳಿಓದನ್ನು ಒಂದು ಮಾಡಲೇಬೇಕು. ಅದರಿಂದ ನಮ್ಮ ಧರ್ಮಕ್ಕೂ ಸಂಸ್ಕೃತಿಗೂ ಹಾನಿಯಾಗಿರುವದು ಮೇಲಾಗಿ ಯಾವ ನಾಕರುಯ ಆಶಯದಿಂದ ಇಂಥ ಜೊಳ್ಳು ವಿದ್ಯೆಯನ್ನು ಕೈಕೊಳ್ಳುವೆನೊ ಅವುಗಳನ್ನಾದರೂ ಸರಕಾರದವರು ದುರ್ಲಭವಾಗಿ ಮಾಡಿರುವ ದೊಂದು ಉದಾಕಾರವೇ ಸರಿ ಇದರಿಂದ ನಮ್ಮ ಬಾಹ್ಮಣ ಸಮಾಜದ ನಿಜವಾದ ಸ್ಥಿತಿಗತಿಯು ಆದಿವು ನಮಗೆ ಮಾಡಿಕೊಟ್ಟಂತಾಗುವದು.

ಹುನಗುಂದ ತಾಲೂಕ ಓಲೇಕಾರರ ಸಭೆ.

ತಾ.೫ನು ೧೬-೨-೭೮ನೇ ದಿವಸ ಹುನಗುಂದ ತಾಲೂಕದ ವಾಲೀಕಾರ ಜನರ ಸಭೆಯಲ್ಲಿ ಮಂಜೂರಮಾಡಿದ ಠರಾವುಗಳು.

೧. ಪುರಾತನದಿಂದ ನಡೆಯುಬಂದ ನಮ್ಮ ವಾಲೀಕಾರಕಿ ಜಮೀನುಗಳಮೇಲೆ ಪಂಜಮತಿ ಕಿಮ್ಮತ್ತು ತರಾಯಿಸಬೇಕೆಂತಲೂ,ಮತ್ತು ಆ ತರಾಯಿಸಿದ ಪಂಜಮತಿ ಕಿಮ್ಮತ್ತು ನೀವು ಕೊಡದಿದ್ದರೆ ನಮ್ಮ ಜಮೀನುಗಳನ್ನು ನಮ್ಮ ಕಡಿಂದ ಕಸಿದು ಎರಡನೇಯವರಿಗೆ ಕೊಡಬೇಕೆಂತಲೂ ಸರಕಾರದವರು ನಡಿಸಿರುವ ಯೋಜನೆಯನ್ನು ಈ ಸಭೆಯು ಸಂಪೂರ್ಣ ನಿಷೇಧಿಸುತ್ತದೆ–

(೨) ವಾಲೀಕಾರಕಿಯ ಜಮೀನುಗಳು ನಮ್ಮ ಪೂರ್ವಜರು ಪ್ರಾಚೀನ ಕಾಲದಲ್ಲಿ ಸರಕಾರಕ್ಕೆ ಮಾಡಿದ ಮಹತ್ವದ ಕೆಲಸಕ್ಕಾಗಿ ನಮ್ಮ ವಂಶಕ್ಕೆ ಇನಾಮು ಕೊಡಲ್ಪಟ್ಟಿವೆ. ಅವುಗಳನ್ನು ನಾವು ಮಾಲ್ಕಿಹಕ್ಕಿನಿಂದ ನಮ್ಮ ಪೂರ್ವಜರ ಕಾಲದಿಂದ ವಹಿವಾಟ ಮಾಡುತ್ತ ಬಂದಿದ್ದೇವೆ. ಇಲ್ಲಿಯವರೆಗೆ ನಾವು ಇಮಾನಿಯಿಂದ ಸರಕಾರದ ಚಾಕರಿ ಮಾಡುತ್ತ ಬಂದಿದ್ದೇವೆ. ಕಳೆದ ಯುದ್ಧ ಪ್ರಸಂಗದಲ್ಲಿ ನಾವು ಸರಕಾರಕ್ಕೆ ರಿಕ್ರೂಟಕೊಟ್ಟು, ಇತರ ಬಗೆಯಿಂದ ನಮ್ಮ ರಾಜನಿಷ್ಠೆಯನ್ನು ವ್ಯಕ್ತಮಾಡಿದ್ದೇವೆ. ಭರವಸಕಾರಕೊಟ್ಟರೆ ನಿಮ್ಮ ಜಮೀನುಗಳನ್ನು ನಿನಗೆ ನಿರಂತರ ನಡಿಸುತ್ತೇವೆಂದು ಸರಕಾರದವರು ನಮ್ಮ ಕಡಿಂದ ಕಬಲಾಯತಿ ತಗೊಂಡಿದ್ದಾರೆ ಮತ್ತು ಆಪ್ರಕಾರಾನಾವು ಇಲ್ಲಿಯವರೆಗೆ ಭರಸಕಾರ ಸಹ ಕೊಡುತ್ತಾ ಬಂದಿರುತ್ತೇವೆ. ನಮ್ಮ ಈ ಜಮೀನುಗಳು ನಮ್ಮ ಸರ್ವಸ್ವವು ಇರುತ್ತವೆ. ಹೀಗಿರುವದರಿಂದ ಪಂಜಮತಿಕಿಮ್ಮತ್ತು ಕೊಡಲಿಕ್ಕೂ ಆಥವಾ ಜಮೀನುಗಳನ್ನು ಬಿಡಲಿಕ್ಕೂನಮ್ಮ ವಪ್ಪಿಗೆಯಿರುವದಿಲ್ಲ. ಸರಕಾರದವರು ನಮ್ಮ ಜಮೀನುಗಳ ಮೇಲೆ ಪಂಜಮತಿ ಕಿಮ್ಮತ್ತು ಹೇರುವದು ಆಥವಾ ಅವುಗಳನ್ನು ನಮ್ಮವರ ಬಿಡಿಸಿ ಯಾರಿಗೋ ಯಾರಿಗೋ ಕೊಡುವದು ಕಾಯದೆಕ್ಕೂ ನ್ಯಾಯಕ್ಕೂ ವ್ಯವಹಾರನೀತಿಗೂ ವಿರುದ್ಧವಾವದ್ದೆಂದು ಈ ಸಭೆಯ ಅಭಿಪ್ರಾಯ ಪಡುತ್ತದೆ ಮತ್ತು ಹೀಗೆ ಮಾಡಬಾರದೆಂದು ನಾವೆಲ್ಲರು ಸರಕಾರಕ್ಕೆ ವಿಜ್ಞಾಪನೆ ಮಾಡಿಕೊಳ್ಳುತ್ತೇವೆ.

(೩) ನಮ್ಮವಾಲೀಕಾರಕೀಯ ಜಮಿನುಗಳಮೇಲೆ ಬಂದಿದ್ದಸ ಈ ಸಂಘಟನದಿಂದ ನಮ್ಮ ಪುರಾತನರ ಹಕ್ಕನ್ನು ಕಾಯದೆಸೀರ ಮಾರ್ಗದಿಂದ ರಕ್ಷಣ ಮಾಡಿಕೊಳ್ಳಲಿಕ್ಕೆ ಈ ಸಭೆಯು ಹುನಗುಂದ ತಾಲೂಕದ ವಾಲೀಕಾರ ಸಂಘವನ್ನು ನೇಮಿಸುತ್ತದೆ. ಇವತ್ತಿನದಿವಸ ಕೆಲವು ವಾಲೀಕಾರರು ತಮ್ಮ ಅಡಜಣಿಮೂಲಕ ಸಭೆಗೆ ಬಂದಿಲ್ಲ ಆದರೆ ಆಂಥಜನರು ಈ ಸಂಘಕ್ಕೆ ಮೇಂಬರಾಗಲಿಕ್ಕೆ ಇಚ್ಛೆಸಿದರೆ ಅವರನ್ನು ಸಂಘದ ಮೇಂಬರಾಗಿ ಮಾಡಿಕೊಳ್ಳಲಿಕ್ಕೆ ಮ್ಯಾನಜಿಂಗ ಕಮೀಟಿಯು ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿದೆ.

(೪) ಸಂಘದ ತರ್ಫಿನಿಂದ ಕೆಲಸಮಾಡಲಿಕ್ಕೆ ಮೆಂಬರರ ಒಂದು ಮ್ಯಾನಜಿಂಗ ಕಮೀಟಿ ನೇಮಿಸಲ್ಪಟ್ಟಿರುತ್ತದೆ.

(೫) ಸರಕಾರಕ್ಕೆ ಅರ್ಜಿ ವಗೈರೆಮಾಡಲಿಕ್ಕೆ ದಿವಾಣಿ ಕೋರ್ಟನಲ್ಲಿ ದಾವಾನಡಿಸುವ ಪ್ರಸಂಗಬಿದ್ದಲ್ಲಿ ದಾವಾದಾಖಲಮಾಡಿ ಕೆಲಸನಡಿಸಲಿಕ್ಕೆ ಸಾರಾಂಶ ನಮ್ಮ ಜಮೀನುಗಳಹಕ್ಕು ರಕ್ಷಣೆಗಾಗಿ ಎಲ್ಲಬಗೆಯಿಂದ ಕಾಯದೇಶೀರ ಕೆಲಸನಡಿಸಲಿಕ್ಕೆ ನಮ್ಮ ಸಂಘದ ಅಧ್ಯಕ್ಷ ಪು॥ ನಾರಾಯಣ ರಾಮಚಂದ್ರ ಆಮೀನಗಡ ಇವರಿಗೆ ಈ ಸಭೆಯು ಸಂಪೂರ್ಣ ಅಧಿಕಾರ ಕೊಟ್ಟಿರುತ್ತದೆ.

(೬) ಇವತ್ತಿನದಿವಸದ ಸಭೆಯ ಅಧ್ಯಕ್ಷರು ಸಂಜರು ಅದರಾವಿನ ನಕಲು ಮೇ॥ ಮಾಮಲೇದಾರ ವ ಪ್ರಾಂತಸಾಹೇಬ ಕಲೇಕ್ಟರ ಸಾಹೇಬರ ಕಡಿಗೆ ಕಳಿಸಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ.

ನಮ್ಮ ಧಾರವಾಡದ ಪತ್ರವು.

ಒಂದು ಕಾಲಕ್ಕೆ ಇಲ್ಲಿಯ ನಗರಸಭೆಯ ಸಭಾಸದರಾದ ಚಂದ್ರಗೌಡಾ ಪಾಟೀಲ, ಚೀಫಆಫೀಸರರಾದ ಜನನಗೌಡಾ. ಹಾಗು ಇಬ್ಬರು ಕಾರಕೂನರು ಇವರಮೇಲೆ ಕೆಲವೊಂದು ಜನನ ಮರಣ ಲೆಕ್ಕಗಳಲ್ಲಿ ಹೆಜ್ಜೆ ಕಡಿಮೆ ಮಾಡಿದ ಆರೋಪಿನ ಮೇಲೆ ಸೆಶೆನ್ಸ ಕೋರ್ಟಿಗೆ ಹಾಕಲ್ಪಟ್ಟ ಕಟ್ಟಿಯ ವಿಚಾರಣೆಯು ಫೆಬ್ರವರಿ ಸಾಹೇಬರ ಎದುರಿಗೆ ಇವೇ ತಾರೀಖಿನ ವರೆಗೆ ನಡೆದು ಎಲ್ಲರೂ ನಿರ್ದೋಷಿಗಳೆಂದು ಗುರುವಾರ ಬಿಡಲ್ಪಟ್ಟರು.

ಹೊಸ ಅರಿಸುವಿಕೆಯಲ್ಲಿ ಬಂದ ಇಲ್ಲಿಯ ನಗರಸ್ಥಿಕೆಯ ಕೆಲವು ಸಭಾಸದರು ಕಳೆದ ಶನಿವಾರ ಸಾಯಂಕಾಲಕ್ಕೆ ಶ್ರೀ ದೇಸಾಯಿ ಹನುಮಂತರಾಯರ ಮನೆಯಲ್ಲಿ ಕಲೆತು ನಗರ ಸಭೆಯ ಸ್ವತಂತ್ರ ಪಕ್ಷವೊಂದನ್ನು ಸ್ಥಾಪಿಸಿದರು. ಯಾವಜಾತಿ ಧರ್ಮ ಇತ್ಯಾದಿ ಅಭಿಮಾನಗಳನ್ನು ತಾಳದೆ ಕೇವಲ ನಗರ ಹಿತದ ಕ್ಷೇಮವನ್ನೇ ಲಕ್ಷಕೊಟ್ಟು ಕೆಲಸಮಾಡುವದೇ ಈ ಪಕ್ಷದ ಮುಖ್ಯ ಉದ್ದೇಶವು.

ಭಗವದ್ಭಕ್ತ ಶ್ರೀ ರಾಮದಾಸರ ಪುಣ್ಯತಿಥಿಯ ನಿಮಿತ್ತವಾಗಿ ೭-೮ ದಿನ ಭಜನೆ, ಸ್ವವಚನ ಮುಂತಾದವುಗಳು ಆದವು. ನಿನ್ನೆ ಪಲ್ಲಕ್ಕಿಯ ಮೆರವಣಿಗೆಯಾಯಿತು. ಮತ್ತು ಸುಮಾರು ೬೦೦೦ ಜನರ ಭೋಜನವಾಯಿತು.

ಮಂಗಳವಾರ ಪೇಟೆಯಲ್ಲಿಯು ಶ್ರೀ ಲಕ್ಷ್ಮೀ ನಾರಾಯಣ ಮಂದಿರದಲ್ಲಿ ಈಜಲ ಕರಂಜಿಯ ವಿನಾಯಕ ಮಹಾರಾಜರ ಸುಶ್ರಾವ್ಯವಾದ ಕೀರ್ತನಗಳು ದಿನಾಲು ಸಾಯಂಕಾಲದಲ್ಲಿ ನಡೆದಿರುತ್ತವೆ

"ತೋಳಬಂಕಲೇ ತೋಳಬಂತು"

ವಾಚಕರೇ ನೀವು ಈ ಪ-ತನ್ನು ಓದಿ ನುರೆತಿರ ಬಹುದಲ್ಲವೇ! ಇಗೋ ನೋಡಿ! ಇದೆ ಂದು ಸೂತನ ಒಕ್ಕಲಿಗರ ಹಿತವನ್ನು ಬಯಸುವ ನಮ್ಮ ಸರಕಾ ಳ "ಕಲಕ್ಟರ್ಲಿ ರಂಟೆಗಳನ್ನು ಕರಸಿ ಇಟ್ಟಿದ್ದೇವೆ ಬೇಕಾದಂಥ ಬಾಡಿಗೆಗಾರಿಲಿ, ಕೊಡಾರಾಲಿ ಒಯ್ಯಬಹುದೆಂದು "ಹಳ್ಳಿಗಳಲ್ಲಿ ಡಂಗುರ ಜಡಿಸಿದರು. ಕೂಡಲೇ ಆನೇಕ ಜನರು ಚಕ್ಕಡಿಗಳನ್ನು ಕಟ್ಟಿಕೊಂಡು ತರಪೋಗಲು ಅಲ್ಲೇನಿದೆ! ಕೋಳ ಬಂತೇ! ಹೇಗದೆ ಮೋಜು!! "ಸುದರ್ಶನ"

ಸ್ವೀಕಾರ.

[೧] ಪ್ರಸನ್ನ ವೆಂಕಟರ ಭಾಗವತ ದಶಮಸ್ಕಂದ[ಪೂರ್ವಾರ್ಧ]

[೨] ಮತ್ತೂ ಪ್ರಸನ್ನ ವೆಂಕಟರ ಕೀರ್ತನೆಗಳು ಬೆಲೆ ೩ ಈ ಎರಡೂ ಗ್ರಂಥಗಳು ಧಾರವಾಡದ ಕರ್ಮವೀರ ಪುಸ್ತಕಾಲಯದಿಂದ ಪ್ರಕಟವಾಗಿವೆ. ಶ್ರೀ ಕೌಜಲಗಿ ಒಂಡೇರಾಯರು ಇವುಗಳ ಸಂವಾದಕರು.

[೩] ಅಧ್ಯಾತ್ಮಗೀತಾವಳಿ ಬೆಲೆ ೩. [೪] ಸಂಹಿತೋಪನಿಷತ್ತು [೫] ಈ ಮೂರು ಪುಸ್ತಕಗಳು ಬೆಂಗಳೂರ ಅಧ್ಯಾತ್ಮ ಗ್ರಂಥಾವಳಿಯ ಶ್ರೀ ಸುಬ್ಬರಾಯರಿಂದ ಪ್ರಕಟಿಸಲ್ಪಟ್ಟಿವೆ.

ಇವುಗಳ ವಿಮರ್ಶೆಯು ಬೇಗನೇ ಪ್ರಕಸಲ್ಪಡುವದು.

[೬] ಶ್ರೀಕ್ಷೇತ್ರ ಕಾತಿಯಲ್ಲಿದ್ದ ಕನ್ನಡಿಗರಾದ ಶಿರೋಮಣಿ ನಾರಾಯಣಾಚಾರ್ಯರು ತಮ್ಮ ಈ ವರುಷದ ಹೊಸಕ್ಯಾಟಲಾಗನ್ನು ಕಳಿಸಿದ್ದಾರೆ. ಇದು ಕನ್ನಡದಲ್ಲಿದೆ. ಕ್ಯಾಟಲಾಗೆಂದರೆ ಅರ್ಥಾತ್ ಪುಳ್ಕುಟಿಯಾಗಿ ಎಲ್ಲ ಗಿರಾಕಿಗಳಿಗೂ ದೊರೆಯುವದು. ಈ ಸಲದ ಕ್ಯಾಟಲಾಗಿನಲ್ಲಿ ಒಂದು ವಿಶೇಷವಿರುವದರಿಂದ ಕನ್ನಡಿಗರೆಲ್ಲ ಒಂದು ಪ್ರತಿಯನ್ನು ಇವರಿಂದ ಪಡೆದುಕೊಂಡು ಕಾತಿಯಲ್ಲಿ ದೊರೆಯುವ ಸಾಮಾನುಗಳ ವಿವರವನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳ ಒಹುದಾಗಿದೆ ಈ ಕ್ಯಾಟಲಾಗಿನಲ್ಲಿ ಮೊನ್ನೆ ಮೊನ್ನೆ ಜರುಗಿದ ಉಡಪಿಯ ಪರ್ಯಾಯೋತ್ಸವದ ವೃತ್ತಾಂತವು ಒಳಗೊಂಡಿದೆ. ಇದರಲ್ಲಿ ಉಡಪಿಯ ಶ್ರೀ ಕೃಷ್ಣ, ಮಧ್ವಾಚಾರ್ಯ. ಶ್ರೀ ಮದಾ ದಿರಾಜರು ಮಧ್ವಸರೋವರ ಪರ್ಯಾಯೋತ್ಸವದ ಳ ಚಿತ್ರಗಳು ಹಾಗೂ ಅಷ್ಟಮಠಾಧೀಶರ ಭಾವಪಠಗಳು ಪ್ರಕಟಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಚಿಕ್ಕ ಪುಸ್ತಕವನ್ನು ಎಲ್ಲರೂ ಸಂಗ್ರಹಿಸಿ ಕಾತಿಯಲ್ಲಿದ್ದ ಈ ಕನ್ನಡ ಕಂಪನಿಯವರಿಗೆ ಆಶ್ರಯವನ್ನೀಯಬೆ ಕಾಗಿ ಬಿನ್ನಹವಿದೆ.

ಇಹವೃತ್ತ.

ಬರುವವಾರದಲ್ಲಿ ಬಾಗಲಕೋಟೆಯೊಳಗೆ ನಾಟಕಗಳ ಸುರಿ ಳಿ ವಾಗುವದಿದೆ! ಅದು ಎಷ್ಟರಮಟ್ಟಿಗೆ ಸುಲಿಗೆಯ ಮಳೆಯಾ ಗುವದೋಸೊ ಡಬೇಕು! ನಿನ್ನೆ ದತ್ತಾತ್ರೆಯ ಕಂಪನಿಯ ನಾಟಕ! ಈ ದಿನ ವೀರಾವುದ ಖುಶ ಅದಾ ಇಸ್ಲಾಮಿಯವರ ಉರ್ದು ನಾ ಟಕ! ಸೋಮವಾರ ಬಧವಾರ ಶನಿವಾರ ಯಥಾಪ್ರಕಾರ ದತ್ತಾ ತ್ರೆಯ ಕಂಪನಿಯ ಗೊಕ್ಕುಪಡಿಸಿದ ನಾಟಕಗಳು ನಡೆಯುವವು ಮಂಗಳವಾರ ವಿಜಾಪುರ ಕರ್ನಾಟಕ ನಾಟಕ ಮಂಡಲದವರ "ಸಂ ಧ್ಯಾರಾಗ" ವೆಂಬ ಹೊಸ ನಾಟಕ! ಗುರುವಾರ ಹಾಗೂ ರವಿ ವಾರ ಪೆಂಡಾರಕರ ನಾಟಕ ಪದ್ಯ ಶುಕ್ರವಾರದಲ್ಲಿ ಮತ್ತೊಂದು ಉರ್ದುನಾಟಕ! ಅಂತೂ ಶನಿವಾರ ತಾ॥ ೧೮ ರಿಂದ ಬುಧವಾರ ತಾ॥ ೨೯ ರವರೆಗೆ ಒಂದೇಸವನೇ ೧೧ ನಾಟಕಗಳು ಆಗುವವು! ಇದೊಂದು ನಾಟಕಗಳ ಪರ್ವಣಿ ಆರಿಸುವುದೇ ಕಷ್ಟವಾಗಿದ್ದರೂ ಸೋಡಾ ದವರಿಗೆ ಮಾತ್ರ ಪರ್ವಣಿ ಯಾಗುವದು ಖಂಡಿತ!

ಕಳದವಾರದಲ್ಲಿ ಸಾಂಗಲಿಯ ಶ್ರೀ. ಭಿಡೆ ಎಂಬವರು ಇಲ್ಲಿಗೆ ಒಂದು ಮನೆಯಲ್ಲಿಯೇ ಕಡ್ಡೀ ಪೆಟ್ಟಿಗೆಗಳನ್ನು ಸಿದ್ಧ ಪಡಿಸುವ ಕಾರ್ಯವನ್ನು ಸಪ್ರಯೋಗವಾಗಿ ಮಾಡಿತೋರಿಸಿದರು. ಬೇರೆ ಬೇರೆ ಸ್ಥಳಗಳಲ್ಲಿ ಇವು ನಡೆದವು. ಶಿವಾನಂದ ನಾಟಕ ಗೃಹದಲ್ಲಿ ನಡೆದ ಪ್ರಸಂಗದಲ್ಲಿ ಶ್ರೀ. ಮುದವೇಡಕರ ಕೃಷ್ಣರಾಯರು ಧರಕಖಂಡ ದ ಔದ್ಯೋಗಿಕ ಪರಸ್ಥಿತಿಯ ಬಗ್ಗೆ ಭಾಷಣ ಮಾಡಿದರು ಕರ್ನಾಟಕದಲ್ಲಿಯ ಕಡ್ಡಿಪೆಟ್ಟಿಗೆಗಳ ಇತಿಹಾಸವನ್ನೂ ಹೇಳಿದರು.

ವಿಜಾಪುರದ ಹೆಸರಾದ ಉಮೇಜೂರ ನಟಗು ಮುಂಗಳವಾರ ತಾ॥ ೨೧ ರಲ್ಲಿ ಶಿವಾನಂದ ನಾಟಕ ಶಾಲೆಯಲ್ಲಿ ಸಂಧ್ಯಾರಾಗ ವೆಂಬ ವಿಜಯನಗರದ ಇತಿಹಾಸಕ್ಕೆ ಸಂಬಂಧಪಟ್ಟ ಹೊಸ ಗದ್ಯ ನಾಟಕವನ್ನು ಅಭಿನಯಿಸತಕ್ಕವರಿದ್ದಾರೆ. ಬಾಗಲಕೋಟೆಯ ರಸಿಕ ವೃಂದವು ಇವರ ಲಾಭವನ್ನು ಹೊಂದಬೇಕು.

ನಿನ್ನೆ 'ಲಂಕಾದಹನ' ವನ್ನಾಡಿದಾಗ್ಯೆ ದತ್ತಾತ್ರೆಯ ನಾ ಟಕ ಮಂಡಲಿಗೆ ಅದ ಸಾವಿರ ರೂಪಾಯಿಯ ಉತ್ಪನ್ನವನ್ನು ಸ್ಥ ರಿಸಿದರೆ, ಜನರಲ್ಲಿ ಈ ಬೀಭತ್ಸ ನಾಟಕಗಳಿಗೆ ಎಷ್ಟೊಂದು ಮೋ ಹ ವಿದೆಂಬದು ಸಿದ್ಧ ವಾಗುತ್ತದೆ. ಇಂಥ ಮಹಾ ನಾಟಕಗಳ ರುಚಿ ಇದ್ದವರಿಗೆ ಸೂಕ್ಷ್ಮ ನಾಟಕಗಳ ಬೆಲೆಯೇನ? ದತ್ತಾತ್ರೆ ಯ ಕಂಪನಿಯವರ ವಿಷಮವಿವಾಹ ನಾಟಕವನ್ನು ಮಂಗಳವಾರ ದಿನ ನೋಡಿದ ಸುಶಿಕ್ಷಿತರೆಲ್ಲ ಅನಂದಿತರಾಗಿರುವರೆಂದು ಕೇಳುತ್ತೇ ವೆ. ಅಂತೂ ಬಾಗಲಕೋಟೆಯ ಸುಶಿಕ್ಷಿತರು ಕನ್ನಡ ನಾಟಕಗ ಳ ಗುಣವರ್ಣನೆಮಾಡಿ ದ್ದಂದು ಅಭಿನಂದನದ ಮಾತೇ ಅಲ್ಲವೆ!

ಚಂದ್ರಿಕಾ ಮುದ್ರಣಾಲಯದ ಅಟ್ಟದಲ್ಲಿ ಸೆರೆ ಸಿಂದಿಗಳ ವ್ಯಾಪಾರಿಗಳೊಬ್ಬರು ಇರುವರಷ್ಟೇ? ಇವರು ವದೊಡ್ಡ ಬೀಮಯಲ್ಲಿ ರುವ ತಮ್ಮ ಮನೆಯ ಎದುರಿಗೆ ಸೆರೆ ಸಿಂದಿಗಳ ಪೀಪುಗಳನ್ನೂ ಮೋಟಾರುಗಳನ್ನೂ ಬಿಡುವದರಿಂದ ಇತ್ತೀತ್ತ ದುರ್ಗಂಧವು ಯಾ ವಾಗಲೂ ವಿಶೇಷ ರೀತ್ಯೆಯಲ್ಲಿ ಅಲ್ಲಿ ಪಸರಿಸಿ ಕೊಂಡಿರುತ್ತದೆ. ವ ದಿರಾಭಕ್ತರಾದ ಹಾಡುಕಾರರು ಆನಂದದಿಂದ ಕೂಜ ಅಲ್ಲಿ ನಿಂ ತು ಆ ಸು(?)ವಾಸನೆಯನ್ನು ಹೀರಿಕೊಳ್ಳಬಹುದು! ಅದ ರೆ ಪ್ರತಿಯೊಬ್ಬ ದಾರಿಹೋಕನಿಗೂ ಆದರ ವಾಸನೆಯನ್ನು ಒಲಾಕ್ಟ್ರಾ ರದಿಂದ ಮೂಗಿನಲ್ಲಿ ಸೇರಿಸುಗೊಡುವದು ವಿಹಿತವೆ! ಅಧಿಕಾರಿಗಳಿ ತ್ಯ ಲಕ್ಷ ಕೊಡುವರೋ?

ಇಲ್ಲಿಯ ಕಲ್ಲು ಬಾಗಲಕೋಟೆಯ ರೆಲ್ವೆ ಹಾದಿಯು ಬೇಗನೇ ಪ್ರಾರಂಭವಾಗುವಂತೆ ಈಗಿನ ಬಾಗಲಕೋಟೆಯ ಸ್ಟೇಶನ್ನಿನ ಎರ ಡೂ ಮಗ್ಗಲಿಗೆ ಸ್ಟೇಶನ್ನು ಗಾಡಿಗಳು ಹೋಗಿ ಬರುವ ಸ್ಟೇಶನಿನಂತೆ ನಿಲ್ಲು ವಂತೆ ಹೊಸಸ್ಟೇಶನ್ನಿನ ರಚನೆಯಾಗತಕ್ಕದ್ದಿದೆಯಂತೆ ಅಂದರೆ ಬಾಗಲಕೋಟೆಯವರು ಫೂಲಿನಮೇಲೆ ಹಾಯ್ದು "ಪ್ಯಾಲ್ಗಟ ಫಾರ್ಮನ್ನು" ಕಾಣ ಬೇಕಾಗುವದಲ್ಲವೇ!

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ

ಪೋಷಕರಿಗೆ ವಾ ಕ ರೂ. ಉಪಕಾರಕರ್ತೃಗಳಿಗೆ ವಾ ೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ		೧ ರೂ. ಇಲ್ಲವೇ, ೧೫೫ ನಂಬರಿಗೆ ಕಡಿಮೆ ಯಾಗದಂಥ ೪೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ	೧-೧೫-೦
	ವಿ. ಪಿ. ಯಿಂದ	೨-೧-೦
	ಇಲ್ಲವೇ ೧೫೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು	

ವಾಜನಾಲಯ ಪತ್ರೆ, ಸ್ಥಳದವರಿಗೆ ೨-೦-೦

ಮ್ಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ- ಮನಿಯಾರ್ಡರದಿಂದ ೨-೧೫-೦ , ವಿ. ಪಿ ಯಿಂದ ೩-೧-೦

ಸಂಕಾರ, ಮುನಸೀ ವಾಲಟಿ, ಲೊಕಲ್ ಬೋರ್ಡ ಇತ್ಯಾದಿ | ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪ ೧೫-೦ ವಿ. ಪಿ. ಯಿಂದ ೫-೧-

ಬಿಡಿ ಸಂಚಿಕೆಗೆ ೪ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಪೈಸೆ. ಧರ್ಮಾರ್ಥವಾಗಿಯಾಗಲೀ, ಕರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಪುಕ್ಕಟ! ಪುಕ್ಕಟಿ!! ಪುಕ್ಕಟಿ!!!

ಬಹು ರುಚಿಕರ್ವಾದ ಪುಸ್ತಕ

ವೀರವರ್ಮ ರಾಜಾ

ಮತ್ತು

ಮಾಲಿನಿ.

ಪುಕ್ಕಟಿಯಾಗಿಯೂ ಅಂಚೆವೆಚ್ಚವಿಲ್ಲದೆಯೂ

ಕಳಿಸಲ್ಪಡುವದು.

ಒಂದು ಕಾರ್ಡನ್ನು ಬರೆಯಿರಿ.

ವಿಳಾಸಃ—

ಅತುಲ ನಿಗ್ರಹ ಫಾರ್ಮಸಿ

೨೬, ಬ್ರಾಡವೇ ಮದ್ರಾಸ

ಕರ್ನಾಟಕ ಮಹಿಳಾವಿದ್ಯಾಲಯ ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯೂಲರ ಸ್ಕೂಲಫೈನಲ್ ಮೆಟಿಕ್ ಮುಂತಾದ ಪರೀಕ್ಷೆಗಳಿಗೆ ಕೂಡ್ರವದಕ್ಕೆ ಶಕ್ಯವಾದ ಹಾಗೂ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದ ಕೆಲಸ ಮುಂತಾದ ಕಲೆಗಳ ಶಿಕ್ಷಣವೂ ದೊರೆಯುವದು. ಪರಿಸರದವರಿಗೆ ಅನುಕೂಲವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯೂ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭಿ ಕೋಣ್.
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ.

ಜಾಹೀರಾತಿನ ಸಲುವಾಗಿ

ಜಾಹೀರ ನೋಟೀಸ

ಮೆ॥ ಪ್ರೆಸಿಡೆಂಟ ಸಾ॥ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ವಿಜಾಪೂರ ಇವರ ಕಛೆಯಿಂದ

ಯಾವತ್ತೂ ಜನರಿಗೆ ತಿಳಿಸವದೇನಂದರೆ--

ಸನ್ ೧೮೮೫ ನೇ ಇಸ್ವಿಯ ೩ನೇ ನಂಬರಿನ ಟೋಲ ಆಕ್ಟ ಮತ್ತು ಅದರ ಅನ್ವಯಾ ಆದ ನಿಯಮಗಳು ಇವುಗಳಿಗೆ ಅನುಸರಿಸಿ ಕೆಳಗೆ ಬರೆದ ಲೋಕಲ್ ಬೋರ್ಡ ರಸ್ತೆಗಳ ಮೇಲೆ ತಾರೀಖ ೧-೪-೧೯೨೫ ಇಸ್ವಿಯಿಂದ ತಾರೀಖು ೩೧-೩-೧೯೨೬ ಇಸ್ವಿಯ ವರೆಗೆ ಒಂದು ವರ್ಷದ ಬಗ್ಗೆ ಟೋಲು (ಜಕಾತಿ) ವಸೂಲ ಮಾಡುವ ಹಕ್ಕನ್ನು ತಾರೀಖು ೨೩-೩-೧೯೨೫ ಗುರುವಾರ ದಿವಸ ಹಗಲು ೧೧ ಘಂಟೆಯಿಂದ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಕಛೇರಿಯಲ್ಲಿ (ಜೋರಾಪೂರ ಪೇಟೆಯಲ್ಲಿ ಸಿವ್ಹಿಲ್ ಆಸ್ಪತ್ರೆಯ ಹತ್ತಿರ) ಮೆ॥ ಪ್ರೆಸಿಡೆಂಟ ಸಾ॥ ರ ಸಮಕ್ಷಮ ಪ್ರಸಿದ್ಧ ರೀತಿಯಿಂದ ಲಿಲಾವ ಮಾಡುವದು ಅಲ್ಲಿ ಬರುವದು. ಬೇಡುವ ಇಚ್ಛೆ ಇದ್ದವರು ಆ ವ್ಯಾಳ್ಯಕ್ಕೆ ಹಾಜರ ಇರಬೇಕು. ಲಿಲಾವಿನ ಶರ್ತುಗಳ ಪ್ರತಿಗಳು ಎಲ್ಲ ತಾಲೂಕಾ ಲೋಕಲ್ ಬೋರ್ಡ ಮತ್ತು ಜಿಲ್ಲಾ ಲೋಕಲ್ ಬೋರ್ಡ ಕಛೇರಿಗಳಲ್ಲಿ ಕಛೇರಿ ವ್ಯಾಳ್ಯಕ್ಕೆ ನೋಡಲಿಕ್ಕೆ ಶಿಗುಸವು. ಮತ್ತು ಲಿಲಾವಿನ ವ್ಯಾಳ್ಯಕ್ಕೆ ಓದಿ ಜೇಳಲ್ಪಡುವದು. ಮಾವುಲೇದಾರ ಇಲ್ಲನೆ ಮಹಾಲಕ್ಷ್ಮಿ ಇವರ ಸಹಿ ನಿಶಿ ಲಾಯಲೀ ಸರ್ಟಿಫಿಕೇಟ ತರಪೆ ಇದ್ದವರಿಗೆ ಮತ್ತು ಸರಕಾರಿ ಹಾಗೂ ಲೋಕಲ್ ಬೋರ್ಡ ರಸ್ತೆಗಳ ಟೋಲ ಇಲ್ಲದೆ ಇತರ ಮಕ್ತೆಗಳ ಬಾಬತು ಒಕ್ಕೆ ಇಟ್ಟುಕೊಂಡವರಿಗೆ ಲಿಲಾವಿನಲ್ಲಿ ಬೇಡಲಿಕ್ಕೆ ಪರವಾನೆ ಶಿಗಲಾರದು. ಸರ್ಟಿಫಿಕೇಟುಗಳು ಮಂಜೂರಾದ ಥಾಪಿ ನಮೂದಿರುವಲ್ಲಿ ಇಲಿಕ್ಕೆ ಬೇಕು. ಕಡೆಮ ಸವಾಲ ಮಂಜೂರ ಮಾಡುವದು ಅಗರ ಬಿಡುವದು ಮೆ॥ ಪ್ರೆಸಿಡೆಂಟ ಸಾ॥ ರ ಇಛ್ಛೇನದ್ದು ಇರುವದು.

೨. ಕಡೆಯ ಸವಾಲು ಮಂಜೂರಾದ ಕೂಡಲೆ ಅದರ ಒಂದು ನಾಲ್ಕಾಂಶ ರಕಮನ್ನು ಜಮಾ ಮಾಡಿ ಪಾವತಿ ತಕ್ಕೊಳ್ಳಬೇಕು. ಮತ್ತು ಉಳಿದ ರಕಮನ್ನು ಕರಾರಿನ ಪ್ರಕಾರ ಮೂರು ಸವಲಾದ ಪಿಸ್ತೆಗಳಿಂದ ೧೯೨೫ ಇಸ್ವಿ ಜುಲೈ ವ ಅಕ್ಟೋಬರ ತಿಂಗಳುಗಳ ಮತ್ತು ೧೯೨೬ ಇಸ್ವಿ ಜನವರಿ ತಿಂಗಳ ೧೫ನೇ ತಾರೀಖಿನ ದಿವಸ ಸಂಬಂಧಿಸಿದ ತಾಲೂಕಾ ಲೋಕಲ್ ಬೋರ್ಡ ಅಥವಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಆಫೀಸಿನಲ್ಲಿ ತಪ್ಪದೆ ಜಮಾ ಮಾಡಿ ಪಾವತಿ ತಕ್ಕೊಳ್ಳಕ್ಕದ್ದು. ಪಟ್ಟಿ ಮತ್ತು ಜ್ಞಾಪನ ಪತ್ರಗಳನ್ನು ಬರಕೊಟ್ಟು ಹೊರ್ತು ಬಾಬು ಸುಪರ್ದಿಯನ್ನು ಸ್ವಾಧೀನ ಮಾಡುವದರಲಿ ಬಾರದು.

೩. ಟೋಲಿನ ದರಗಳು ಹೋದ ವರ್ಷದಂತೆಯೇ ಇರುತ್ತವೆ. ಇಚ್ಛೆಯುಳ್ಳವರು ಎಲ್ಲ ಲೋಕಲ್ ಬೋರ್ಡ ಕಛೇರಿಗಳಲ್ಲಿ ನೋಡಿಕೊಳ್ಳಬಹುದು.

೪. ವಿಶೇಷ ಕಾರಣಗಳ ಹೊರ್ತಾಗಿ ಹೊಸ ಪೋಟ ನಾಕೆಗಳನ್ನು ಇಡಲಿಕ್ಕೆ ಮಂಜೂರಿ ದೊರೆಯಲಾರದು.

ಶೇಜ ನಂಬರ	ರಸ್ತೆಯ ಹೆಸರು.	ನಾಕೆಯ ಜಾಗಾ	ಪೋಟ ನಾಕೆಯ ಜಾಗಾ.
೧	ಇಂಡಿ–ಶಿಂದಗಿ	೧ ಲಿಲಾವಿನ ತಾರೀಖಿನಕಿಂತ ಮುಂ ಜೆ ಗೊತ್ತುಪಡಿಸುವದರಲ್ಲಿ ಬರುವದು. ೨ ಆಲಮೇಲದ ಹತ್ತರ ೩ ಸಿಂದಗಿ ಹತ್ತರ.	ನಾದಬುಜ ರೂಖದ ಹತ್ತರ ಮೈಲ ನಂಬರ. $\frac{೧೧}{೩}$ ವ $\frac{೧೧}{೪}$ ಇವುಗಳ ನಡುವೆ.
೨	ಇಂಡಿ–ತಾಂಬಾ	೧ ತಾಂಬೆಯ ಹತ್ತರ	
೩	ಇಂಡಿ–ವಿಜಾಪೂರ	೧ ವಿಜಾಪೂರದ ಹತ್ತರ ೨ ತಡವಲಗಾದ ಹತ್ತರ	೧ ಅಲಿಯಾಬಾದದ ಬದಿಯಲ್ಲಿ ೨ ಲಾಲ ಬಂಗಲೇದ ಸಮೂಪಕ್ಕೆ ಬಡಕ ಅಗ. ಸಿಯ ಹತ್ತರ.
೪	ದೇವರ ಹಿಪ್ಪರಗಿ– –ತಾಳೀಕೋಟ	೧ ದೇವೂರ ಮತ್ತು ಹೊಸೂರ ಹತ್ತರ ೨ ತಾಳೀಕೋಟೆಯ ಹತ್ತರ	೧ ಬೊಮ್ಮನ ಹಳ್ಳಿಯ ಹತ್ತರ
೫	ಹೂವಿನ ಹಿಪ್ಪರಗಿ– –ನಾಲತವಾಡ	೧ ನಾಲತವಾಡದ ಹತ್ತರ	೧ ಮುದ್ದೇಬಿಹಾಳ ಕೆರೆಯ ಮೇಲೆ ೨ನೇ ಫ. ರ್ಲಾಂಗ ಕಲ್ಲಿನ ಹತ್ತರ ೨ ಧವಳಗಿ ರಸ್ತೆಯ ಮೇಲೆ ದನಾಖಾನೆಯ ಹತ್ತರ
೬	ತಾಳೀಕೋಟ–ತಂಗಡಗಿ	೧ ಮುದ್ದೇಬಿಹಾಳ ಹತ್ತಿಗಿರಣಿ ಹತ್ತರ ೨ ತಂಗಡಗಿ ಹತ್ತರ	೧ ತಾಳೀಕೋಟೆಯ ಹತ್ತರ
೭	ಮುಳವಾಡ–ಮಮದಾಪೂರ	೧ ಮುಳವಾಡದ ಸಮೂಪಕ್ಕೆ ೨ನೇ ಮೈಲಿನ ಹತ್ತರ	
೮	ಬೀವೂರ–ಸಂಗಮ	೧ ಮನ್ನೀಕಟ್ಟೆಯ ಹತ್ತರ ೨ ಸಂಗಮದ ಹತ್ತರ	೧ ಧಗವತಿಯ ಹತ್ತರ ೨ ಹಳ್ಳೂರ ಹತ್ತರ ೩ ಬೀವೂರ ಹತ್ತರ
೯	ಬೀಳಗಿ–ಗಲಗಲಿ–ಕೊಣ್ಣೂರ	೧ ಬೀಳಗಿಯ ಹತ್ತರ ೨ ಗಲಗಲಿಯ ಹತ್ತರ	
೧೦	ಕೇರೂರ–ಕಮತಗಿ	೧ ಕಟಗೇರಿ ರೇಲ್ವೆ ಸ್ಟೇಶನದ ಸಮೂ ಪಕ್ಕೆ ಇನಸ್ಪೆಕ್ಟನ್ ಬಂಗಲೆಯ ಹತ್ತರ ೨ ಕಮತಗಿ ಇನಸ್ಪೆಕ್ಟನ್ ಬಂಗಲೆ ಯ ಹತ್ತರ	೧ ಅಗಸರ ಕೊಪ್ಪದ ಹತ್ತರ ೨ ಕೋಟೆಕಲ್ಲ ಹತ್ತರ ೩ ಹರಬೊಳ್ಳಿಯ ಹತ್ತರ
೧೧	ಬದಾಮಿ–ಗುಳೇದಗುಡ್ಡ	೧ ಬದಾಮಿಯ ಹತ್ತರ	೧ ಹಂಸನೂರ ಹತ್ತರ
೧೨	ಬದಾಮಿ–ರಾಮದುರ್ಗ	೧ ಬದಾಮಿಯ ಹತ್ತರ ೨ ಮುದಕವಿಯ ಹತ್ತರ	೧ ರೇಲ್ವೆ ಚಾಕಿಯ ಹತ್ತರ
೧೩	ಧನ್ನೂರ–ಇಲಕಲ್ಲ	೧ ಧನ್ನೂರ ಹತ್ತರ ೨ ಇಲಕಲ್ಲ ಹತ್ತರ	೧ ಹುನಗುಂದ ಹಳ್ಳದ ಹತ್ತರ ೨ ಹುನಗುಂದ ದವಾಖಾನೆಯ ಹತ್ತರ
೧೪	ಹುನಗುಂದ–ನಂದವಾಡಗಿ	೧ ಕೆಸರಭಾವಿಯ ಹತ್ತರ	
೧೫	ಅಮೀನಗಡ–ಗ .ಡೂರ	೧ ಗುಡೂರ ಹತ್ತರ	೧ ಸೂಳೇಭಾವಿಯ ಹತ್ತರ

ವಿಜಾಪೂರ
ತಾ|| ೩–೨ ೧೯೩೮

S T PATIL.
ಪ್ರೆಸಿಡೆಂಟ
ಡಿಸ್ಟ್ರಿಕ್ಟ ಲೋಕಲ್ ಬೋರ್ಡ ವಿಜಾಪೂರ್

ಅತ್ಯಲ್ಪವಿವೆ! ಉಚಿತ

ಕೇವಲ ಉಚಿತ ಕೇವಲ ಉಚಿತ



" ತಾರಾ " ಲೀವರ್ ರಜಿಸ್ಟರ್ಡ್ ಪೊಕೆಟ್ ವೊಚ್ ೧೬ ಕೆರೆಟ್ ರೋಲ್ಡ್ ಗೋಲ್ಡ್‌ನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಿಜಿಸ್ಟರ್ಡ್ ೧೬ ಕೆರೆಟ್ ರೋಲ್ಡ್‌ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿಗಳು

ಕ್ಯಾಪ್ಟನ್ ವಾಚ್ ಕಂ. ಪಿ. ಬಿ. ೨೬೩ ಮದ್ರಾಸ

॥ ಏರಿಗನ್ನಡಂ ಗೆಲ್ಗೆ ॥

ಬಾಗಲಕೋಟೆಯ

ವಾಸುದೇವ ಅಮೇಚೂರ

ನಾಟಕ ಸಭೆಯವರು

ರವಿವಾರ ಪಾರ್ಶ್ವನೇ ತಾ॥ ದಿನ

ಬಾಗಲಕೋಟೆಯ ವಿದ್ಯಾನಂದ ನಾಟಕ ಶಾಲೆಯಲ್ಲಿ

ಕರ್ನಾಟಕ ವಾಚ್ಯಯ ಸಾಮ್ರಾಟ್ ಸ್ವ.

ಕೆರೂರ ವಾಸುದೇವಾಚಾರ್ಯರಿಂದ

ವಿರಚಿತವಾದ

'ಪತಿವಂಚಕ'

(ಅಂಕ ೧-೫)

ಎಂಬ ನಾಟಕವನ್ನು ರಂಗಭೂಮಿಯ ಮೇಲೆ ಆಡುವರು. ಈ ನಾಟಕವು ಸಾಮಾಜಿಕವಿದ್ದು ಹಾಸ್ಯರಸಪ್ರಧಾನವಾಗಿದೆ. ವೈ. ವಾಸುದೇವಾಚಾರ್ಯರ ಪ್ರತಿಭೆ, ಭಾಷಾಸೌಂದರ್ಯ, ನಾಟ್ಯ ರಜನಾ ಚಾತುರ್ಯಾದಿಗಳನ್ನು ಪ್ರತ್ಯಕ್ಷವಾಗಿ ಕಂಡು ಆನಂದ ಪಡೆಯಲಿಚ್ಛೆ ಯುಳ್ಳವರು ಅವಶ್ಯವಾಗಿ ಆದಿನ ನಾಟಕಕ್ಕೆ ಬರತಕ್ಕದ್ದು. ರಾಗೂ ಹಾಸ್ಯರಸದ ಸವಿಯನ್ನು ಸವಿದು ಹಿಗಿ ಹಿರಿ ಹಿಗ್ಗಬೇಕು.

ಸ್ವಹಸ್ತ ಪರಹಸ್ತಗಳಿಂದ ಈ ಅಮೇಚೂರ ಸಭೆಯವರಿಗೆ ಪ್ರೋತ್ಸಾಹಿಸುವ ಸರ್ವಭಾರವು ಬಾಗಲಕೋಟೆಯ ರಸಿಕರ ಮೇಲಿಯೇ ಇದೆಂಬುದನ್ನು ಯಾರೂ ಮರೆಯಬಾರದಾಗಿ ವಿನ್ಮ ಪವಿದೆ.

ತಿಕೀಟಿನ ದರ ಇತ್ಯಾದಿ ವಿಶೇಷ ಸಂಗತಿಗಳನ್ನು ಹಸ್ತ ಪತ್ರಿಕೆಗಳಲ್ಲಿ ಕಂಗೊಳ್ಳಿಸಲಿದೆ.

ಸನ್ಮಾನಿತ ಕಾರ್ಯಕರ್ತರು.

ನೋಟೀಸಿಗೆ ಉತ್ತರ.

ರಾ॥ ರಂಗವ್ವ ಗಂಡ ಯಲ್ಲಪ್ಪಾ ತಮಿನಾಳ ಸಾ॥ ಯರಗೊಪ್ಪ ಸಂ॥ ಬದಾಮಿ ತಾ॥ ಬದಾಮಿ ಇವಳಿಗೆ—

ಕೆಳಗೆ ಸಹಿ ಮಾಡಿದವನ ಕಡೆಂದ ನೋಟೀಸಿಗೆ ಉತ್ತರ ಕೊಡುವದಗಲ್ಲಿ ಒಗುತ್ತದಲ್ಲಾ

ನನಗೆ ನೀನು ಯರ್ಡನೆ ಲಗ್ನದ ಹೆಂಡತಿ ಇರತೀದಿ ನನಗೂಡ ಏನಿಕೆ ದಿನಸ ಸ್ಪಂಜಮಾಡಿ ನನಗೆ ಮೂರು ಮಂದಿ ಮಕ್ಕಳನ್ನು ಹಡದೀದಿ ಆದರೆ ನೀನು ಏಲಿಕಡಿಗೆ ಕೆರಿಯಪ್ಪಾ ಸಾವಾಡೆಪ್ಪಾ ಹಳ್ಳಿ, ಇವನ ಭುಲತಾಪೆಯಿಂದ ಆಜವಾಸ ೨ ವರ್ಷದ ಕೆಳಗೆ ನನ್ನ ಮನಿ ಬಿಟ್ಟು ಹೋಗಿ ಸದರಿಯವನ ಸೋಬತಿಯಲಿ ಇರತೀದಿ. ಇದರಿಂದ ನಮ್ಮ ದೈವಜಾರದವರು ನಿನ್ನನ್ನು ಮತ್ತು ಅವನನ್ನು ಕುಲದಿಂದ ಹೊರಗೆ ತಗದಿಟ್ಟಿದ್ದಾರೆ ಮತ್ತು ಈಗ ನೀನು ಗರ್ಭಿಣಿ ಇದ್ದಂತೆ ಕೇಳತೀನಿ. ನೀನು ಸದರಿ ಕೆರಿಯಪ್ಪನನ್ನು ಉಡಿಕೆ ಮಾಡಿಕೊಳ್ಳುವ ಇರಾದೆಯಿಂದ ಧಾರವಾಡ ' ವಿಜಯ ' ಪತ್ರಿಕೆ ತಾ॥ ೨೮-೧೦-೨೩ನೇ ಪತ್ರಿಕೆಯಲ್ಲಿ ಸುಳ್ಳು ಮತಲಬಿನ ನೋಟೀಸು ಕೊಟ್ಟಿರತೀದಿ ಆದರಲ್ಲಿ ನೀನು ೫೦೦ ರೂಪಾಯಿ ನಿನ್ನ ಮಕ್ಕಳ ಉಜೀವನದ ಸಲುವಾಗಿ ಸಾಲಾ ಮಾಡಿರತೀದಿ ಅಂತಾ ಬರೆದದ್ದು ಅಜೀ ಸುಳ್ಳು, ಅದೆ ನನ್ನ ಅಕ್ಕ ಅಂದರೆ ನಿನ್ನ ತಾಯಿ ಆಸ್ತಿನಿನ್ನ ತಾಬಾದಲ್ಲಿ ಇದ್ದು ಅದರಉತ್ಪನ್ನ ನೀನು ತಗೋತಿದ್ದು ಸಾಲಾ ಮಾಡುವದು ತೀರ ಸುಳ್ಳು, ಅಪೆ. ಜರ ನೀನು ಸಾಲಾಮಾಡೀನಿ ಅಂತಾ ಯಾವದಾದರೂ ಕಾಗದ ಮಾಡಿದ್ದರೆ ನನ್ನನ್ನು ಅಂಜಿಸಿ ಫಾರಿಬತ ತಗೋಬೇಕು ಅಂಬುವ ಇರಾದೆಯಿಂದ ಪೋಳಕ ಮಾಡಿಸಿರಬಹುದು ಅಥವಾ ಸದರಿ ಕೆರಿಯಪ್ಪ ಹಳ್ಳಿ ಇವನಿಗೆ ಕಂಟ್ರಾಕ್ಟ ಕೊಡಿಸುವದರ ಸಲುವಾಗಿ ಮಾಡಿರಬಹುದು ಸದರಿ ಸಾಲಾ ನನಗೆ ಯಾವ ತರದ ಸಂಬಂಧ ಇಲ್ಲ.

ನೀನು ನನ್ನ ಮನಿ ಬಿಟ್ಟು ಹೋಗುವ ಕಾಲಕ್ಕೆ ನನ್ನವ ನಿನ್ನ ಮೇಲೆ ಒಂದು ಜೋಡು ಬಳಿ ಬಂಗಾರದವು ತೂಕ ೬ ತೊಲಿ ಒಂದು ಗೆಜ್ಜೆ ಟೀಕಿ ಬಂಗಾರದ್ದು ತೊಲಿ ೩॥ ಗುಂಡಿನ ಟೀಕಿ ಒಂದು ಬಂಗಾರದ್ದು ತೊಲಿ ೨॥ ಬೆಳ್ಳಿ ವಡ್ಡಾಣ ಒಂದು ತೂಕ ೨೦ ತೊಲಿ ಒಂದು ಜೋಡು ಬೆಳ್ಳಿ ತೋಳಬಂದಿ ತೂಕ ೨೫ ತೊಲಿ ಕಿವಿಯೊಳಗಿನ್ನ ಬಂಗಾರದ ವಾಲಿ ಜೋಡು ಒಂದು ತೂಕ ೨॥ತೊಲಿ ಬಂಗಾರದ ಶ್ರಿಂಗಾರ ಸರಾ ಒಂದು ತೂಕ ೫ ತೊಲಿ ಇಷ್ಟು ದಾಗಿನೆಗಳನ್ನು ವೈದಿರತೀದಿ ಸದರಿ ಯಾವತ್ತು ದಾಗೀನೆಗಳನ್ನು ನೀನು ತಗೊಂಡು ಬಂದು ಈ ನೋಟೀಸ ಮುಟ್ಟಿದ ೮ ದಿವಸದೊಳಗಾಗಿ ನನ್ನ ಮನೆಗೆ ಬರಬೇಕು ಇಲ್ಲದಿದ್ದರೆ ನಿನ್ನ ಮೇಲೆ ಮತ್ತ ಸದರಿ ಕೆರಿಯಪ್ಪ ಹಳ್ಳಿ ಇವನ ಮೇಲೆ ರೀತಿಪ್ರಕಾರ ಯಿಲಾಜ ಮಾಡಲಾಗದೀತು

ನಮ್ಮ ಅಕ್ಕ ಅಂದರೆ ನಿನ್ನ ತಾಯಿ ನಿಂಗವ್ವನು ನಿನ್ನನ್ನು ಯರ್ಡನೇ ಕಡಿಗೆ ಲಗ್ನ ಮಾಡಿಗೊಟ್ಟರೆ ತನ್ನ ಆಸ್ತಿ ಹೊರಗೆ ಹೋಗತದೆ ಅಂತಾ ತಿಳಿದು ನನಗೆ ಮತ್ತು ನನ್ನ ವಂಶದವರಿಗೆ ಸದರಿ ಆಸ್ತಿ ಸಿಗಬೇಕಂತಾ ನಿನ್ನನ್ನು ನನಗೆ ಲಗ್ನ ಮಾಡಿಕೊಟ್ಟಿರತಾಳೆ ಕಾರಣ ಸದರಿ ಆಸ್ತಿ ವಿಲೇವಾಟ ಮಾಡಲಿಕ್ಕೆ ನಿನಗೇನು ಅಧಿಕಾರ ಇಲ್ಲ. ಜರ ನೀನೇನಾದರೂ ಸದರಿ ಆಸ್ತಿ ಸಂಬಂಧ ಲೇಖ ಮಾಡಿದ್ದರೆ ಅದು ರದ್ದು ಬೀರತದೆ.

( ) ಈ ಎಂಬ್ಲೆ ಗುರ್ತ ಯಲ್ಲಪ್ಪಾ ತಂದಿ ಮಾಯವ ತಮಿನಾಳ ಊರಂದು ಅದೆ,

ಬೇಕಾಗಿದ್ದಾರೆ!

ಏಜಂಟರು, ಟ್ರಾವಲಿಂಗ ಏಜಂಟರು, ಹಾಗೂ ಚೀಫ ಏಜಂಟರೂ ಬೇಕಾಗಿದ್ದಾರೆ. ಇನ್ಸೂರನ್ಸದ ಕೆಲಸದ ಅನುಭವವಿದ್ದವರೂ, ಹೊಸ ಹೊಸ ಕೆಲಸವನ್ನು ಹುಟ್ಟಿಸಿ ತೆಗೆದುಕೊಂಡು ಬರುವವರೂ ಬೇಕಾಗಿದ್ದಾರೆ. ನಗದು ಹಣದ ಜಾಮೀನು ಕೂಡತಕ್ಕದ್ದು. ಯೋಗ್ಯತೆಯ ಪ್ರಕಾರ ಪಗಾರ. ಕೆಳಗಿನ ವಿಳಾಸಕ್ಕೆ ಬರೆಯಿರಿ

WANTED.

Agents, Travelling Agents and Chief Agents. Men with experience of Insurance work capable of bringing business, required. ash security. Salary according to qualifications.

Apply to:— Mr S Rabboor B. A., F. S. S. (Lond) Asst Manager (on deputation) General Assurance Society Ltd 44, Linggi Chetty street, Madras.

ನಾದಾರಿ ಅರ್ಜಿಯ ಚಿವಕಶಿಯ ಬ್ಗೆ

ಕ್ರೆಡಿಟರ ಜನರಿಗೆ ನೋಟೀಸು

(ಸೆಕ್ಶನ್ ೧೯)

ವಿಜಾಪೂರ ೧ನೆ ವರ್ಗ ಸಬಜಜ್ಜ ಕೋರ್ಟನಲ್ಲಿ

ಮುಕ್ಕಾಮ ವಿಜಾಪೂರ ಇಲ್ಲಿ

ನಾದಾರಿ ಅರ್ಜಿ ನುಬರ ೪೮ ಸನ್ ೧೯೨೭ ಸ್ಯಕ್ಕಿ

(೧) ಹುಚ್ಚಪ್ಪಯ್ಯಾ ಶಿದಪಿಂಗಯ್ಯಾ ಒಳಯೋಮಠ ವಗೈರೆರು— } ಅರ್ಜಿದಾರರು

ವ್ಸ

(೧) ಸಂಗನಬಸಪ್ಪಾ ಶಿವಬಸಪ್ಪಾ ಸಜ್ಜನ ಸಾ॥ ಮುದ್ದೇಬಿಹಾಳ ವಗೈರೆರು— } ಎದುರಾ ಕರರು.

ಎಲ್ಲ ಕ್ರೆಡಿಟರ ಜನರಿಗೆ ಈ ನೋಟೀಸಿನಿಂದ ತಿಳಿಸುವದೆಂದರೆ ಮೇಲೆ ನಮೂದಮಾಡಿದ ಅರ್ಜಿದಾರರು ಪ್ರಾವಿಡಿನಯಲ್ಲಿ ಇನಸಾಲ್ವನ್ಸಿ ಆಕ್ಟ ಪ್ರಕಾರ ಈ ಕೋರ್ಟಿಗೆ ತಾ॥ ೧೬-೧೧-೧೯೩೦ ರಿಂದ ಮುಂಚೆ ಒರೆದ ಎದುರಾದಾರ ರಿಣಕೋ ಜನರು ವಾದಾರ ಇರುವರೆ ಖಾತರ ಕರಾಯಿಸಬೇಕೆಂತಾ ಅರ್ಜಿಮಾಡಿರುತ್ತಾರೆ. ಸದರ ಅರ್ಜಿ ಮುದ್ದತ ತಾ॥ ೧೩-೩-೧೯೩೧ ಲ ದಿವಸ ಇಟ್ಟಿರುತ್ತದೆ.

V. B. Kaibhavi.

Subjudge F. C. BIJAPUR.

ಶ್ರೀ ದತ್ತರಾಜ ಸಮರ್ಥ

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ

ಗದಗ ಪ್ರಾಡಪತ್ಯಾತ್ರೋಯು ನಾಟಕ ಮಂಡಳಿಯವರು

ಬಾಗಲಕೋಟೆ ತಿವಾನಂದ ಥಿಯೇಟರಿನಲ್ಲಿ

ಸೋಮವಾರ ತಾ॥ ೨೦—೨—೩೮

ಪಾದುಕಾ

ಪರಿಪ್ರಭಿಷೇಕ.

ಬುಧವಾರ ತಾ॥ ೨೨—೨—೩೮

ವಿಷ್ಣುವಿವಾಹ

ಶನಿವಾರ ತಾ॥ ೨೫—೨—೩೮

ಸುಧಾಮದೇವ.

ಎಂಬ ನಾಟಕಗಳನ್ನು ಆಡುವರು. ಈ ಪ್ರಯೋಗಗಳಲ್ಲಿ ಟ್ರಾಫರ ಸೀನ ಸೀನರಿಗಳು ತೋರಿಸಲ್ಪಡುವವು.

* ಟಿಕೀಟಿನ ದರಗಳು. *

ಖುರ್ಚಿ ರೂ ೩—೦—೦; ೨—೦—೦; ೧—೮—೦; ೧—೦—೦

ಮಹಡಿ ೦—೮—೦; ನೆಲಾ ೦—೬—೦

ಕೂಲಿನ ಸ್ತ್ರೀಯರಿಗೆ ೦—೬—೦ ಪಶ್ಯಂಗೆ ೦—೧೨—೦

ಸೂಚನೆ— ಖುರ್ಚಿ ೧ಕ್ಕೆ ೨ ಆಣೆ ಹೆಚ್ಚಿಗೆ ಕೊಟ್ಟು ರಿಝರ್ವ ಮಾಡಿಸಿದೀರಿ ರಿಝರ್ವ ಮಾಡಿಸದಕ್ಕವರು ನಾಟಕ ದಿವಸ ಸಾಯಂಕಾಲ ೬ ಘಂಟೆಯ ಒಳಗಾಗಿ ಮಾಡಿಸಬೇಕು ಶಿಸ್ತಿನ ಮೇಲಿನ ಸದುಗುಣಗೆ ಪೂರಾ ಚಾರ್ಜು ಎಲ್ಲರು ಸಭ್ಯರೀತಿಯಿಂದ ವರ್ತಿಸುವ ಬಗ್ಗೆ ಪ್ರಾರ್ಥನೆ.

ನಮ್ಮಲ್ಲಿ ದೊರೆಯುವ ಪುಸ್ತಕಗಳು.

ವಿಷವು ವಿವಾಹ, ಅವೀರಪಾಂಡ್ಯ, ಶ್ರೀನಂದ, ಪ್ರತಿವಂದಕ್ಕೆ ರೂ ೧

ಒಡೆಯರು.

ಸದಾಶಿವರಾವ ಗರುಡ

ಕರ್ನಾಟಕ ನಾಟಕಾಲಂಕಾರ; ಅಭಿನಯ ಕೌಸ

ಸ್ಪೆಂಡರ್ಡ್ ಕಾಫಿಪುಡಿ.

ಅಖಿಲಭಾರತ ಪಶು ಕೃಷಿಪ್ರದರ್ಶನದಲ್ಲಿ ಶ್ರೇಷ್ಠ ಪದಕವನ್ನು, ಸರ್ಟಿಫಿಕೇಟುಗಳನ್ನು ಬಹುಮಾನವಾಗಿ ಪಡೆದಿರುವ ಕಾಫಿಪುಡಿಯು ಶುದ್ಧಾಂತ ಮನೋಹರವಾದ ರುಚಿಕರವೂ ಇದ್ದು ತಮಗೆ ಪರೀಕ್ಷಿಸಿ ನೋಡಿ.

ಇದು ಉತ್ತಮಜಾತಿಯ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಶೈಸೊಗಯಾಗಿದ್ದು, ಆರೋಗ್ಯವೂ ಒಳ್ಳೆ ರುಚಿಕರವೂ ಇದ್ದು

ನಾಲ್ಕು ಮಂದಿ ಇರುವಂಗೆ ಬೇಕಾಗುವ ಬೇರೆ ಪುಡಿಯು ಅ ಭಾಗದಷ್ಟು ಅಂದರೆ ಕಾಲು ಪೌಂಡಿನಷ್ಟು ಪೊಟ್ಟಣದಲ್ಲಿ ಸಂಕಾ ಯತ್ತದೆ. ಕಾ ಮನೋಹರವಾದ ಎಮಿಮುನ್ನು, ಒಸ್ಸಿಯನ್ನೂ ಕೊಡುತ್ತ ಒಂದುಸಲ ಪರೀಕ್ಷಿಸಿ, ಬೇರೆ ಪುಡಿಗಳ ಆದರ ನಿಮ್ಮ ಮನ ಹೋಗಲಾರದು.

ಪೌಂಡಿಗೆ ೧-೪-೦ ಮತ್ತು ೧-೨-೦.

ದಿ ಸ್ಪೆಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ಬನಾರಸ್ ರೇಶ್ಮೀ ಶೀರೆಗಳು.

ನಮ್ಮಲ್ಲಿ ಉತ್ತಮತರದ ಎಲ್ಲಾವಿಧವಾದ ರೇಶ್ಮೀ ವಸ್ತ್ರಾಲಂಕಾರಗಳನ್ನು ಕೋರುವವರಿಗೆ ವಿ. ಪಿ. ಮೂಲಕ ಕಳುಹಿಸಲ್ಪಡುವದು. ಬೀಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದಮೊಳಕಿಳಿ ಅಗಲಿಮೊಳ ೩. ಧಾನು ೧ಕ್ಕೆ ೧೫ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಶೀರೆ ೧೬ ಗಜ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಶೀರೆ ೧೬ ಗಜ ಉದ್ದ ಮೊಳ ೭ ೧ಕ್ಕೆ ರೂ. ೫ ರಿಂದ ೫೦ ರವರೆಗೆ. ಉಡುವ ವಸ್ತ್ರಗಟ ಉದ್ದ ೬-೮ ಮೊಳ ೧ಕ್ಕೆ ರೂ. ೧೦ ರಿಂದ ೩೦ ರವರೆಗೆ ಜರೀದು ೬-೮ ಮೊಳ ಉದ್ದ ೧ಕ್ಕೆ ರೂ ೧೧ ರಿಂದ ೪೦ ರವರೆಗೆ. ಬಿಳಿ ರೇಶ್ಮೆ ಜರೀದುಪಟ್ಟೀ ಮೊಳ ಉದ್ದ ೧ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳಿ ರೇಶ್ಮೀ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧ಕ್ಕೆ ರೂ. ೬ ರಿಂದ ೧೫ ರವರೆಗೆ ಸ್ಪಟಿಕದ ೧೦೮ ರ ಸರ ೧ಕ್ಕೆ ರೂ. ೧ ರಿಂದ ೧೦ ರವರೆಗೆ ಸುದರ್ಶನ ೧ ಕ್ಕೆ ಆಣಿ ಅರಿಂದ ರೂಪಾಯಿ ೧½ ರವರೆಗೆ ಜಗನ್ನಾಥಜಾಗಂಟೆ ೧ಕ್ಕೆ ರೂ. ೨½ರಿಂದ 15 ರವರೆಗೆ ಮತ್ತು ಬೇರೆ ಬೇಕಾದಮ್ಹಾಂಗಳ ಕೆಟಲಾಗಇನಾಂ

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಬಾಕೆಂಬಾ ಕಾತಿ ಬನಾರಸ್

ಭೂಲೋಕದ ಕಲ್ಪವೃಕ್ಷವು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಸುಜ್ಞರ ಇಷ್ಟಲಿಪ್ಸಾವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಯೆಂಬ ಆರೋಗ್ಯ ಮಾರ್ಗದರ್ಶನ, ಅನೇಕ ರಹಸ್ಯವಾದ ವಿಷಯಗಳಿಗೆ

ವಿಜಂಟರು:—ಜಂಬುಲಿಂಗಪ್ಪ ಜಾಲವಾದಿ.
ಸ್ಪೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಳಲ. ಚೀನಾಬಜಾರ್. ಮುಂಬಾಯಿ

JUST THE BOOK FOR S. L. C. CANDIDATES.

MODEL ESSAYS AND DIALOGUE.

ON

Recent Subjects

FOR

High-School Students.

BY

B. R. Deshpande B A Honours.

Teacher Basweshar High-School BAGALKOT.

Apply to the author for copies. } Price Four Annas.

Due discount allowed on wholesale orders } Every Retail order must be accompanied by five Anna Stamps

ಟೇಬಲ್ ಟೈಂಪೀಸ್ ಇನಾಮು.

ಈ ನಕ್ಕೆಯಲ್ಲಿ ಕಂಡ ಪೌಂಟೆನ್ ಪೇನಾವು ಇಂಗ್ಲಂಡಿನಲ್ಲಿ ತಯಾರಾದ ದ್ದು ಇದಕ್ಕೆ ೧೪ ಕರೆಕಿನ ಭುಗಾರದಂಥ ನಿಬ್ಬು ಹಾಕಿದೆ ಈ ಪೇನಾವಿನಲ್ಲಿ ಬರೆಯುವದರಿಂದ ಅ



ಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧ಕ್ಕೆ ೨-೮-೦

ವಿಳಾಸ- ಪಿಟರ್ ವಾಚ್ ಕಂಪನಿ
ಪೋ॥ ಬಾಕ್ಸ ನಂ. ೨೭, ಮದರಾಸು.

ಬಾಗಲಕೋಟ, ವಿಜಾಪುರ ಮೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೫ ರೂ. ಹಾಸಲು ಮುದ್ದಾಂ ಪಾಡಲಿಚ್ಛಿಸಿ.

ವಿಜಾಪೂರ ಜಿಲ್ಲೆಯಲ್ಲಿಯು ಮತ್ತು ಸುತ್ತು ಮುತ್ತಲಿನ ಹಳ್ಳಿಗಳಿಗೆ ಸರ್ವೀಸ !

ಮೋಟಾರ ಮಾಲೀಕರೆ ನೀವೆಲ್ಲರು ದಯವಿಟ್ಟು ಗಮನಿಸಿರಿ

ಆರ್. ಜಿ. ಚವ್ಹಾಣ ಎಂಡ್ ಸನ್ಸ, ಬೆಳಗಾವ. ಇವರು ತಮ್ಮ

ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸದ ಶಾಖೆಯನ್ನು

ತಾ॥ ೧೦ ಸಪ್ಟೆಂಬರ ೧೯೨೬ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ



ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಶೆವ್ರಲೇಟ, ಒವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಇಲ್, ಪೆಟ್ರೋಲ ಮುಂತಾದ ಸಾಮಾನುಗಳನ್ನು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ,

ಚಾಲಕರು— ವಾರ್. ಜಿ ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಜಿಂಗ ಮಾಡಿ ಕೊಡುವೆವು

☞ ಬಾಗಲಕೋಟೆ-ಬೆಳಗಾವಿ, ಬಾಗಲಕೋಟೆ-ಇಂಚಲ್ಲ ಸರ್ವೀಸ ಏಜಾಪ್ರಕಾರ ನಡೆದಿದೆ

ಕಿರ್ಲೋಸ್ಕರ ನೇಗಿಲು ನಂ ೯

ಉಪಯೋಗಃ— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಮುರಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ಕೊಯ್ಯುವ ಭೂಮಿಗೂ ಇದರ ಉಪಯೋಗ ಒಹಳ. ಇದ ನನ್ನ ನೇಗಿಲು ನಂ ೧೦ ನೆಯದಂತೆ ವಿಕ್ಕ ಉಪಯೋಗಕ್ಕೂ ರುವದು. **ರಚನೆಃ**— ಇದರ ಕುಳಗಳು ಹಾ ಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟಿ ಮಾಡಲ್ಪಟ್ಟಿರುತ್ತವೆ. ಮೇಳಿಗಳು ಹವಣಿ ಸುತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತದೆ. **ಎಳೆಯುವ ಶಕ್ತಿಃ**— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲಃ**— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕಃ**—ಸರಾಸರಿ ೨೦೦ ಪೌಂಡು ಸವಿಸ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. ಬೆಲೆ ೫೫ ರೂಪಾಯಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವುಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, **ಈ ಹೆಸರನ್ನು ಲಕ್ಷದಲ್ಲಿ ಇಡಿರಿ.**

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಹೊಲಿ, ಸಂಧಿವಾತ, ಎಲ್ಲಪರದ ಕಸ. ನರ ತೊಡಕು, ಹರಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ವಳದದ್ದು)

೪೨ ವರ್ಷಗಳಿಂದ ಈ ಔಷಧವು ಜಗಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು--ಒಂದೇ ಕಣದಿಂದ ಅದ್ಭುತ ಗುಣವು ಉಳಿಯುವದಿಲ್ಲ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮತ್ತು ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

Buy a bottle

TO-DAY!

• ಪತ್ರಿಕೆಯು ಮಂಗಳವೇಢೆ ರಾಜೇಪಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ ಬಿ ೧೯೪೭

ವಾ. ಚಂದಾ ೧—೧೩—೦ ಮಾತ್ರ

ಕನ್ನಡ ಪತ್ರಿಕೆ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯಥಾ ಧರಣಿ ಕ್ಷಮಾ । ಯಥಾತ್ಮಶಕ್ತಿ ಸ್ತಥಾ ಕ್ಷಮಾ ।। — ಮನು

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ಭಾನುವಾರ ನಿತಿ ಫಾಲ್ಗುಣ ಶುದ್ಧ ೬ ಶಕೆ ೧೮೪೯ ಕಲಿಯುಗ ೫೦೨೯ ವಿ.ಸಂ.೧೯೮೪ | ಸಂಚಿಕೆ ೪೫

Date 26—2—1928.

ಕನ್ನಡ ಬಂಧುಗಳೇ ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ಪಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯುತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಆವುಗಳೊಳಗಿನ ಕಟ್ಟುನಿಟ್ಟು ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯೇಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸಿವಿಸಿಯುಳಿಯುವದಿಲ್ಲ.ನುರಿತ್ತಕಾರಿಗಾರರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಇಂಡಿಯಾ ಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಿಸಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು. ಬಹಳೇಸುಲಭವಾಗಿದ್ದು, ಮನಸಿಗೆ ಸೊಗಸುವಂತೆ ಮಾಡುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದು-ಕಡೆ ಎಷ್ಟಿಯೂ ಇಷ್ಟು ಕಡಿಮೆ ಫೀಗೆ ಟೂರೆಯಪದಿಲ್ಲಿಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದ ಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಲಲ ಟನಿವಾರ ನೇತ ಲಾಯಿಡ್‌ಬ್ರಿಜ್ಜದ ಹತ್ತಿರ ಪುಣೆ ಶಪರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ನಮೂನೆಗಳನ್ನು ಒ ಒಕೆಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು. ಪಾವತಿ ಮೆಂಬರಾಗಲಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುದ್ದತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ:—ವಿದ್ಯಾರಣ್ಯ ಮುದ್ರಣ ಮಂದಿರ ಬಾಗಲಕೋಟೆ.

ಮಯೂರ ಸಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಲೆ ೧ ರೂ ವೈದ್ಯರಿಗೂ, ವ್ಯಾಪಾರಕ್ಕರಿಗೂ, ಅನೇಕ ಉಪಯೋಗವಾದ ವನಸ್ಪತಿಯು ದೊರಕುವದು.

ವೈದ್ಯ—ವಾದಿರಾಜ ಜಹಗೀರದಾರ ಮು. ಇಲಕಲ್ಲ (ವಿಜಾಪೂರ)

REEL NO

2

CONTINUED
ON
REEL NO 3

KARNATAKA STATE ARCHIVES

SRINIVASA RAO MANGALAVEDE COLLECTION

Old Newspapers

KANNADA NAVAJIVANA
Published from Bagalakote

KANNADIGA
Published from Bagalakote

KANNADIGA
Published from Dharawada

EXPOSURES

850

END